ಕರ್ನಾಟಕ ಸರ್ಕಾರ
Government of karnataka

# ಸಮಗ್ರ

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರ ತರಬೇತಿ ಸಾಹಿತ್ಯ

**(ಪರಿಷ್ಕೃತ ಆವೃತ್ತಿ)**

**2020–21**

**ಸಮಗ್ರ ಶಿಕ್ಷಣ – ಕರ್ನಾಟಕ**

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡ

ನೃಪತುಂಗ ರಸ್ತೆ, ಬೆಂಗಳೂರು – 560 001

Kiran Raghupathi

***(ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರ ತರಬೇತಿ ಸಂಪನ್ಮೂಲ ಸಾಹಿತ್ಯ ಪರಿಷ್ಕರಣೆ)***

ಪರಿಕಲ್ಪನೆ ಮತ್ತು ಮಾರ್ಗದರ್ಶನ

***ಎಸ್ ಆರ್ ಉಮಾಶಂಕರ್, ಭಾ.ಆ.ಸೇ.***
ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬೆಂಗಳೂರು

***ಎಂ ದೀಪಾ, ಭಾ.ಆ.ಸೇ.***
*ರಾಜ್ಯ ಯೋಜನಾ ನಿರ್ದೇಶಕರು*
*ಸಮಗ್ರ ಶಿಕ್ಷಣ – ಕರ್ನಾಟಕ, ಬೆಂಗಳೂರು*

***ವಿ ಅನ್ಬುಕುಮಾರ್, ಭಾ.ಆ.ಸೇ.***
*ಆಯುಕ್ತರು*
*ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು*

***–: ಬೆಂಬಲ ಮತ್ತು ಮಾರ್ಗದರ್ಶನ :–***

- **ಶ್ರೀ ಮಾರುತಿ ಎಂ ಆರ್,** ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು.
- ***ಶ್ರೀ ಗೋಪಾಲಕೃಷ್ಣ ಹೆಚ್ ಎನ್,*** *ನಿರ್ದೇಶಕರು, ಎಸ್ಎಸ್‌ಕೆ, ಬೆಂಗಳೂರು*
- ***ಶ್ರೀಮತಿ ಗಾಯತ್ರಿದೇವಿ ಟಿ ಎನ್,*** ಸಹ ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು
- ***ರತ್ನಯ್ಯ ಕೆ, ಸಹನಿರ್ದೇಶಕರು,*** *ಎಸ್ಎಸ್‌ಕೆ,* ಬೆಂಗಳೂರು
- ***ಶ್ರೀಮತಿ ಸಬೀರುನ್ನೀಸಾ,*** *ಉಪನಿರ್ದೇಶಕರು,* ಡಿಎಸ್ಇಆರ್‌ಟಿ, *ಬೆಂಗಳೂರು*
- **ಶ್ರೀಮತಿ ಸುಜಾತ,** ಹಿರಿಯ ಕಾರ್ಯಕ್ರಮ ಅಧಿಕಾರಿಗಳು, ಎಸ್ಎಸ್‌ಕೆ, ಬೆಂಗಳೂರು

***–: ಪರಿಷ್ಕರಣಾ ತಂಡ :–***

***(2019–20)***

- ***ಡಾ. ನಿರಂಜನಾರಾಧ್ಯ ವಿ ಪಿ,*** ಫೆಲೋ ಹಾಗೂ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರು, ಮಗು ಮತ್ತು ಕಾನೂನು ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು
- ***ಶ್ರೀ ಪಾಲಾಕ್ಷಯ್ಯ,*** ಸಮಾಲೋಚಕರು, ಶಿಕ್ಷಣ ಹಕ್ಕು ಕೋಶ, *ಎಸ್ಎಸ್‌ಕೆ,* ಬೆಂಗಳೂರು
- ***ಶ್ರೀ ವೆಂಕಟರಾಮ ರೆಡ್ಡಿ,*** ಕಾರ್ಯಕ್ರಮಾಧಿಕಾರಿಗಳು (ತರಬೇತಿ ಮತ್ತು ಎಸ್‌ಡಿಎಂಸಿ), *ಎಸ್ಎಸ್‌ಕೆ,* ಬೆಂಗಳೂರು
- ***ಶ್ರೀ ವೇದಮೂರ್ತಿ,*** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು
- ***ಶ್ರೀ ಶ್ರೀಧರ್ ಕೆ ಎ,*** ಹಿರಿಯ ಉಪನ್ಯಾಸಕರು, ಡಯಟ್, ತುಮಕೂರು
- ***ಶ್ರೀ ನಾಗೇಂದ್ರ ಸಿನ್ನೂರ್,*** ಮುಖ್ಯ ಶಿಕ್ಷಕರು, ಮಾತೋಶ್ರೀ ಗುರವ್ವ ಚನ್ನಪ್ಪ ಸಾಹುಕಾರ್ ಸರ್ಕಾರಿ ಪ್ರೌಢಶಾಲೆ, ಬಸನಾಳ, ಚಡಚಣ ವಲಯ, ವಿಜಯಪುರ ಜಿಲ್ಲೆ
- ***ಶ್ರೀ ಸಿದ್ದೇಶಿ ಯು,*** ಉಪನ್ಯಾಸಕರು, ಡಯಟ್, ಕೂಡಿಗೆ, ಮಡಿಕೇರಿ
- ***ಶ್ರೀ ರಾಜಶೇಖರ ಎ ಜಿ,*** ಸಮನ್ವಯಾಧಿಕಾರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ

***–: ಪರಿಷ್ಕರಣಾ ತಂಡ :–***

***(2020–21)***

- ***ಡಾ. ನಿರಂಜನಾರಾಧ್ಯ ವಿ ಪಿ,*** ಫೆಲೋ ಹಾಗೂ ಶಿಕ್ಷಣ ಕಾರ್ಯಕ್ರಮದ ಮುಖ್ಯಸ್ಥರು, ಮಗು ಮತ್ತು ಕಾನೂನು ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು
- ***ಶ್ರೀ ವೆಂಕಟರಾಮ ರೆಡ್ಡಿ,*** ಕಾರ್ಯಕ್ರಮಾಧಿಕಾರಿಗಳು (ತರಬೇತಿ ಮತ್ತು ಎಸ್‌ಡಿಎಂಸಿ), *ಎಸ್ಎಸ್‌ಕೆ,* ಬೆಂಗಳೂರು
- ***ಹರಿಪ್ರಸಾದ್ ಜಿ.ವಿ,*** ಹಿರಿಯ ಉಪನ್ಯಾಸಕರು, ಡಯಟ್ ಶಿವಮೊಗ್ಗ
- ***ರಾಘವೇಂದ್ರ ಟಿ. ಕೆ,*** ಹಿರಿಯ ಉಪನ್ಯಾಸಕರು, ಡಯಟ್, ಕೋಲಾರ
- ***ಶ್ರೀ ವೇದಮೂರ್ತಿ,*** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು

Kiran Raghupathi

- ***ವಿಜಯಲಕ್ಷ್ಮಿ ಎನ್.ಪಿ.,*** ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢ ಶಾಲೆ, ಹುಲಿಕುಂಟೆ, ದೊಡ್ಡಬಳ್ಳಾಪುರ, ಬೆಂ.ಗ್ರಾಮಾಂತರ ಜಿಲ್ಲೆ
- ***ಶೌರೀಶ್,*** ಪ್ರತಿನಿಧಿಗಳು, ಅಜೀಂ ಪ್ರೇಮ್‌ಜಿ ಪೌಂಡೇಶನ್

***–: ಮರು ಪರಿಷ್ಕರಣೆ, ಕಾರ್ಯಕ್ರಮ ಸಂಯೋಜನೆ ಮತ್ತು ನಿರ್ವಹಣೆ :–***

***ಶ್ರೀ ವಿಶ್ವನಾಥ್ ಕೆ ವಿ,*** ಹಿರಿಯ ಸಹಾಯಕ ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು
**ಶ್ರೀ ಮಲ್ಲಿಕಾರ್ಜುನಯ್ಯ,** ಹಿರಿಯ ಕಾರ್ಯಕ್ರಮ ಅಧಿಕಾರಿಗಳು, ಪ್ರಜಾಯತ್ನ

***–: ಮುಖ ಪುಟ ಮತ್ತು ಚಿತ್ರಗಳು :–***

***ಶ್ರೀ ಜಿ. ಎಂ. ಜಂಗಿ.*** ಕಲಾವಿದರು, ಡಿಎಸ್‌ಇಆರ್‌ಟಿ, ಬೆಂಗಳೂರು

Kiran Raghupathi

# ಮುನ್ನುಡಿ

ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದಲ್ಲಿ ಎರಡು ಮಹತ್ವದ ಯೋಜನೆಗಳಾದ 'ಸರ್ವ ಶಿಕ್ಷಣ ಅಭಿಯಾನ' ಮತ್ತು 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ' ಯೋಜನೆಗಳನ್ನು 'ಸಮಗ್ರ ಶಿಕ್ಷಣ – ಕರ್ನಾಟಕ'ದ ಹೆಸರಿನಲ್ಲಿ ಜಾರಿಗೊಳಿಸುತ್ತಿದೆ. *'ಸಮುದಾಯದ ಸಹಭಾಗಿತ್ವದಲ್ಲಿ ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣ'* ಎಂಬ ಘೋಷವಾಕ್ಯದೊಂದಿಗೆ ಈ ಎರಡೂ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದೆ.

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009 ಜಾರಿಯಾದ ನಂತರ ಸಮುದಾಯ ಭಾಗವಹಿಸುವಿಕೆಗೆ ಮತ್ತಷ್ಟು ಕಾನೂನಾತ್ಮಕ ಒತ್ತಾಸೆ ಬಂದಿದ್ದು, ಹೆಚ್ಚಿನ ಕಾನೂನಿನ ಬೆಂಬಲ ಸಿಕ್ಕಿದೆ.

ಸಮುದಾಯದ ಸಬಲೀಕರಣಕ್ಕೆ ಶಿಕ್ಷಣ ಹಕ್ಕು ಕಾಯ್ದೆಯಲ್ಲಿನ ಕಾನೂನಿನ ಅವಕಾಶ ಮತ್ತು ಕರ್ನಾಟಕ ರಾಜ್ಯ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾದರೆ ಎಸ್.ಡಿ.ಎಂ.ಸಿ. ಸದಸ್ಯರಿಗೆ ಹೊಸ ಕಾನೂನಿನ ಮತ್ತು ನಿಯಮಗಳ ಪೂರ್ಣ ಮಾಹಿತಿಯ ಜೊತೆಗೆ ಸಾರ್ವತ್ರೀಕರಣಕ್ಕಾಗಿ ಕಾಲಕಾಲಕ್ಕೆ ಸರ್ಕಾರಗಳು ರೂಪಿಸುವ ಮಹತ್ವಾಕಾಂಕ್ಷೆ ಕಾರ್ಯಕ್ರಮಗಳ ಮಾಹಿತಿಯನ್ನು ಒದಗಿಸಬೇಕಾಗುತ್ತದೆ.

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಸಮುದಾಯದ ಭಾಗವಹಿಸುವಿಕೆಯ ಬಗ್ಗೆ ಸಮಗ್ರ ಚಿತ್ರಣ ನೀಡಿ, ಎರಡೂ ಹಂತದಲ್ಲಿ ಸದಸ್ಯರು ಪರಸ್ಪರ ಸಮನ್ವಯ ಹಾಗೂ ಸಹಕಾರದಿಂದ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಸಿದ್ಧಪಡಿಸಿರುವುದು ಈ 'ಸಮಗ್ರ' ಸಾಹಿತ್ಯದ ವಿಶೇಷತೆಯಾಗಿದೆ. ಈ ಸಾಹಿತ್ಯವು ಎಸ್.ಡಿ.ಎಂ.ಸಿ.ಯ ಎಲ್ಲಾ ಚುನಾಯಿತ, ಪದನಿಮಿತ್ತ ಮತ್ತು ನಾಮನಿರ್ದೇಶಿತ ಸದಸ್ಯರಿಗೆ ಸಮಗ್ರ ಮಾಹಿತಿ ನೀಡುವುದಲ್ಲದೆ, ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಸಂಬಂಧಿಸಿದ ಎಲ್ಲಾ ಶಿಕ್ಷಕರಿಗೂ ಸಂಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಹೊಸದಾಗಿ ಜಾರಿಗೆ ತಂದಿರುವ ಹಲವು ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಒಳಗೊಂಡಿದೆ.

ಈ ನಮ್ಮ ಪ್ರಯತ್ನವು ಕರ್ನಾಟಕ ರಾಜ್ಯದಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಹಾಗೂ ಉಪಯುಕ್ತ ಶಿಕ್ಷಣ ಒದಗಿಸಲು ಹೊಸ ಭೂಮಿಕೆಯನ್ನು ಕಟ್ಟಿಕೊಡುವಲ್ಲಿ ಹಾಗೂ ಪ್ರಮುಖ ಭಾಗೀದಾರರ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಈ ಸಾಹಿತ್ಯವು ಸಹಾಯಕವಾಗಲಿ ಎಂದು ಆಶಿಸುತ್ತೇನೆ.

**ರಾಜ್ಯ ಯೋಜನಾ ನಿರ್ದೇಶಕರು**
**ಸಮಗ್ರ ಶಿಕ್ಷಣ – ಕರ್ನಾಟಕ**
**ಬೆಂಗಳೂರು**

Kiran Raghupathi

# ಪರಿವಿಡಿ


| ಅಧ್ಯಾಯ | ವಿಷಯಸೂಚಿ | ಪುಟ ಸಂಖ್ಯೆ |
|---|---|---|
| | **ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ** | |
| 1 | ರಚನೆ, ಅಧಿಕಾರ ಮತ್ತು ಕರ್ತವ್ಯಗಳು (ಕಿರಿಯ ಮತ್ತು ಹಿರಿಯ ಪ್ರಾ.ಶಾಲೆ) | |
| 2 | ರಚನೆ, ಅಧಿಕಾರ ಮತ್ತು ಕರ್ತವ್ಯಗಳು (ಪ್ರೌಢಶಾಲೆ) | |
| 3 | ಶಾಲಾಭಿವೃದ್ಧಿ ಯೋಜನೆ | |
| 4 | ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಪಾಲುದಾರಿಕೆ | |
| 5 | ಶಾಲೆಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಮತ್ತು ಶಾಲಾಸಿದ್ಧಿ | |
| | **ಶಿಕ್ಷಣದ ಸಾರ್ವತ್ರೀಕರಣ** | |
| 6 | ಪೂರ್ವ ಪ್ರಾಥಮಿಕ ಶಿಕ್ಷಣದ ಮಹತ್ವ, ರೂಪುರೇಷೆಗಳು | |
| 7 | ಪ್ರೋತ್ಸಾಹದಾಯಕ ಕಾರ್ಯಕ್ರಮಗಳು | |
| | **ಕಲಿಕೆ** | |
| 8 | ರಾಷ್ಟ್ರೀಯ ಶಿಕ್ಷಣ ನೀತಿ, 2020 – ಮುನ್ನೋಟ | |
| 9 | ಶಿಕ್ಷಕರ ತರಬೇತಿಗಳು – ಅಗತ್ಯ – ಅನುಪಾಲನೆ | |
| 10 | ಶಾಲೆಗಳಲ್ಲಿ 'ಸಂಭ್ರಮ ಶನಿವಾರ' – ಬ್ಯಾಗ್‌ರಹಿತ ದಿನಾಚರಣೆ | |
| 11 | ನಲಿ–ಕಲಿ ಇಂಗ್ಲಿಷ್ | |
| 12 | ಮಕ್ಕಳ ಕಲಿಕಾ ಫಲಗಳು | |
| 13 | ಸಂವೇದ - ವಿಡಿಯೋ ತರಗತಿಗಳು | |
| 14 | ಸಮನ್ವಯ ಶಿಕ್ಷಣ | |
| 15 | ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ | |
| | **ಸುರಕ್ಷತೆ ಮತ್ತು ಶಿಕ್ಷಣ** | |
| 16 | ನೈಸರ್ಗಿಕ ವಿಪತ್ತುಗಳ ಹಿನ್ನೆಲೆಯಲ್ಲಿ ಶಾಲಾ ಸಿದ್ಧತೆ ಮತ್ತು ಮಕ್ಕಳ ಸುರಕ್ಷತೆ | |
| 17 | ರಸ್ತೆ ಸುರಕ್ಷತೆ | |
| 18 | ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾನೀತಿ | |
| 19 | ಅನುಬಂಧಗಳು | |
| 20 | ತರಬೇತಿ ವಿನ್ಯಾಸ | |


Kiran Raghupathi

# ಅಧ್ಯಾಯ –1

## ಎಸ್.ಡಿ.ಎಂ.ಸಿ.(ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ)ರಚನೆ, ಅಧಿಕಾರ ಮತ್ತು ಕರ್ತವ್ಯಗಳು

## ಎಸ್.ಡಿ.ಎಂ.ಸಿ.ಯ ರಚನೆ ಮತ್ತು ನಿರ್ವಹಿಸಬೇಕಾದ ಪ್ರಕಾರ್ಯಗಳು

## ಸರ್ಕಾರಿ ಮತ್ತು ಅನುದಾನಿತ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು

### ರಚನೆಗೆ ಮೂಲ ತಳಹದಿ ದಸ್ತಾವೇಜುಗಳು

1. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ 2009
2. ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012
3. ಕಾಲ ಕಾಲಕ್ಕೆ ರಾಜ್ಯ ಸರ್ಕಾರ ಹೊರಡಿಸಿದ ಜ್ಞಾಪನ, ಆದೇಶ ಮತ್ತು ಸರ್ಕಾರಿ ಸುತ್ತೋಲೆಗಳು

### ಉದ್ದೇಶಗಳು

### ಈ ಅಧಿವೇಶನದ ನಂತರ ಸದಸ್ಯರು...

1. ಶಿಕ್ಷಣ ಸಾರ್ವತ್ರೀಕರಣದ ಸಂಕ್ಷಿಪ್ತ ಇತಿಹಾಸ ಮತ್ತು ಮಹತ್ವವನ್ನು ಅರಿಯುವರು.
2. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ–2009 (ಶಿಕ್ಷಣ ಹಕ್ಕು ಕಾಯ್ದೆ) ಅನ್ವಯ ಎಸ್‌ಡಿಎಂಸಿ ರಚನೆ ಕುರಿತು ತಿಳಿಯುವರು.
3. ಶಿಕ್ಷಣ ಹಕ್ಕು ಕಾಯ್ದೆ ಮತ್ತು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012ರ ಅನ್ವಯ ಎಸ್.ಡಿ.ಎಂ.ಸಿ.ಯು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಮನನ ಮಾಡಿಕೊಳ್ಳುವರು.
4. ಶಾಲಾ ಹಂತದಲ್ಲಿ ಎಸ್ ಡಿ ಪಿ (ಶಾಲಾಭಿವೃದ್ಧಿ ಯೋಜನೆ)ಯನ್ನು ತಯಾರಿಸಬೇಕಾದ ಮಹತ್ವವನ್ನು ತಿಳಿಯುವರು

### ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಂಕ್ಷಿಪ್ತ ಹಿನ್ನೆಲೆ

ಸ್ವಾತಂತ್ರ್ಯ ಪೂರ್ವದಿಂದಲೂ ಶಾಲಾ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಒತ್ತಾಯಕ್ಕೆ ಮಣಿದ ಅಂದಿನ ಬ್ರಿಟಿಷ್ ಆಡಳಿತವು 1813ರ ಸನ್ನದಿನಲ್ಲಿ ಶಿಕ್ಷಣಕ್ಕಾಗಿ ಪ್ರತೀ ವರ್ಷವೂ ಒಂದು ಲಕ್ಷ ರೂಪಾಯಿಗಳನ್ನು ವ್ಯಯಮಾಡುವಂತೆ ಈಸ್ಟ್ ಇಂಡಿಯಾ ಕಂಪನಿಗೆ ಸೂಚಿಸಿದ್ದನ್ನು ನಾವು ಇಲ್ಲಿ ಸ್ಮರಿಸಬಹುದಾಗಿದೆ.

ಇದೇ ರೀತಿ ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಪ್ರಾಂತ್ಯದಲ್ಲಿಯೂ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ಮೈಸೂರಿನ ಮಹಾರಾಜರು ಇಂತಹುದೇ ಪ್ರಯತ್ನಗಳನ್ನು ನಡೆಸಿದ್ದರೆಂಬುದು ಗಮನಾರ್ಹ. 1854ರ ವುಡ್ಸ್ ಆಯೋಗದ ವರದಿಯನ್ನು ಆಧರಿಸಿ, ಮೈಸೂರುರಾಜ್ಯಕ್ಕೆ ಒಂದು ಶಿಕ್ಷಣ ಯೋಜನೆಯನ್ನು ಅಂದಿನ ನ್ಯಾಯಾಂಗ ಆಯುಕ್ತರು ಸಿದ್ಧಪಡಿಸಿ, 1857ರಲ್ಲಿ ಭಾರತ ಸರ್ಕಾರದ ಅನುಮೋದನೆಯನ್ನು ಪಡೆದಿದ್ದರು. 1866ರಲ್ಲಿ ಶಿಕ್ಷಣ ಇಲಾಖೆಯನ್ನು ಬೇರ್ಪಡಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ವ್ಯಾಪ್ತಿಗೆ ತರುವುದರ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಹೊಸ ಚಾಲನೆ ನೀಡಲಾಯಿತು. ನಾವು ಗಮನಿಸಬೇಕಾದ ವಿಶೇಷ ಅಂಶವೆಂದರೆ, 1911ರಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವೆಂದು ಸಾರುವ ಒಂದು ರಾಜಾಜ್ಞೆ (Royal ordinance) ಯನ್ನು ಹೊರಡಿಸಲಾಯಿತು. ಮುಂದುವರೆದು 1934ರಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸುವ ಕಾಯಿದೆಯನ್ನು ಜಾರಿಗೊಳಿಸಲಾಯಿತು.

ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆಗೆ ಶಾಲಾ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನು ಮನಗಂಡ ಸಂವಿಧಾನದ ರಚನಾಕಾರರು 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ಆಶಯದೊಂದಿಗೆ ಸಂವಿಧಾನದ 4ನೇ ಅಧ್ಯಾಯದ ರಾಜ್ಯನಿರ್ದೇಶಕ ತತ್ವಗಳ ಅಡಿಯಲ್ಲಿ 45ನೇ ವಿಧಿಯನ್ನು

Kiran Raghupathi

ಸೇರಿಸುವುದರ ಮೂಲಕ ಎಲ್ಲಾ ಮಕ್ಕಳಿಗೆ ಸಂವಿಧಾನ ಜಾರಿಯಾದ 10 ವರ್ಷಗಳೊಳಗಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವ ವಾಗ್ದಾನವನ್ನು ಜನತೆಗೆ ನೀಡಿದರು. 1950ರಲ್ಲಿ ಸಂವಿಧಾನವು ಜಾರಿಯಾದ ನಂತರ 14 ವರ್ಷದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ನಿಟ್ಟಿನಲ್ಲಿ ಅನೇಕ ಹೊಸ ಪ್ರಯತ್ನಗಳು ಪ್ರಾರಂಭವಾದವು.

ನಮ್ಮ ಶಿಕ್ಷಣ ಪದ್ಧತಿ ಹೇಗಿರಬೇಕು ಮತ್ತು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪದೋಷಗಳೇನೆಂಬುದನ್ನು ತಿಳಿಯಲು ಶಿಕ್ಷಣ ವ್ಯವಸ್ಥೆಯ ಸಮಗ್ರ ಅಧ್ಯಯನಕ್ಕಾಗಿ ಜುಲೈ 14, 1964ರಲ್ಲಿ ಭಾರತ ಸರ್ಕಾರವು ಶಿಕ್ಷಣ ಆಯೋಗವನ್ನು ರಚಿಸಿತು. ಡಾ॥ಕೊಠಾರಿಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಈ ಅಯೋಗವು ಕಾನೂನು ಮತ್ತು ವೈದ್ಯಕೀಯ ಶಿಕ್ಷಣವನ್ನು ಹೊರತುಪಡಿಸಿ ಉಳಿದೆಲ್ಲ ಹಂತಗಳ ಸಮಗ್ರ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತು. ಈ ವರದಿಯನ್ನು ಆಧರಿಸಿ 1968ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸಲಾಯಿತು. ನಂತರ 1986ರಲ್ಲಿ, 1968ರ ಶಿಕ್ಷಣ ನೀತಿಯನ್ನು ಪರಿಷ್ಕರಿಸಿದ ಸರ್ಕಾರ, ಕೆಲವು ಹೊಸ ಆಯಾಮಗಳೊಂದಿಗೆ 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿತು. 1992ರಲ್ಲಿ ಆಚಾರ್ಯ ರಾಮಮೂರ್ತಿಯವರ ನೇತೃತ್ವದಲ್ಲಿ ಪರಿಷ್ಕೃತಗೊಂಡ ಈ ರಾಷ್ಟ್ರೀಯ ಶಿಕ್ಷಣ ನೀತಿಯು ಸಂಸತ್ತಿನ ಅಂಗೀಕಾರವನ್ನು ಪಡೆಯಿತು.

ಈ ಎಲ್ಲಾ ಪ್ರಯತ್ನಗಳ ನಡುವೆಯೂ ಸಂವಿಧಾನದ ಆಶಯದಂತೆ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ 1960ರ ಒಳಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವ ಸಂವಿಧಾನಬದ್ಧ ಕಾರ್ಯವು ಪೂರ್ಣಗೊಳ್ಳಲಿಲ್ಲ. ನಂತರ ಕಾಲಮಿತಿಯ ಈ ಕೆಲಸವು ಅನೇಕ ಬಾರಿ ಮುಂದೂಡಲ್ಪಟ್ಟಿತು. ಮೊದಲಿಗೆ 1970, ನಂತರ 1976, 1986, 1990 ಮತ್ತು 2000 ಹೀಗೆ ಮುಂದುವರಿಯುತ್ತಲೇ ಸಾಗಿತು. ಇದನ್ನು ಸವಾಲಾಗಿ ಸ್ವೀಕರಿಸಿದ ಕೇಂದ್ರ ಸರ್ಕಾರವು ಶಿಕ್ಷಣದ ಸಾರ್ವತ್ರೀಕರಣಕ್ಕೆ ಮಹತ್ವಾಕಾಂಕ್ಷೆಯ 'ಸರ್ವಶಿಕ್ಷಣ ಅಭಿಯಾನ'ವನ್ನು ಜಾರಿಗೊಳಿಸಿ, ಸಮುದಾಯದ ಸಹಭಾಗಿತ್ವದೊಂದಿಗೆ 2010ರ ವೇಳೆಗೆ ಎಲ್ಲಾ ಮಕ್ಕಳಿಗೆ 8 ವರ್ಷಗಳ ಗುಣಾತ್ಮಕ ಶಾಲಾ ಶಿಕ್ಷಣವನ್ನು ನೀಡುವ ಬದ್ಧತೆಯನ್ನು ಪುನರುಚ್ಚರಿಸಿತು.


ಒಟ್ಟಾರೆ, ಮಾನವ ಹಕ್ಕುಗಳ ಇಂದಿನ ಯುಗದಲ್ಲಿ ಎಲ್ಲಾ ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂಬ ಬೇಡಿಕೆ ಕೇವಲ ಕೆಲವು ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗದೆ ಒಂದು ಜಾಗತಿಕ ವಿಷಯವಾಗಿದೆ. ಗುಣಾತ್ಮಕ ಶಿಕ್ಷಣದ ಹಕ್ಕು ಪ್ರತಿಯೊಂದು ಮಗುವಿಗೂ ಸಿಗಲೇಬೇಕೆಂಬ ಕೂಗು ಜಾಗತಿಕ ಮಟ್ಟದಲ್ಲಿ ದಿನದಿಂದ ದಿನಕ್ಕೆ ಗಟ್ಟಿಯಾಗುತ್ತಿದೆ. ಭಾರತ ಸರ್ಕಾರದ ನ್ಯಾಯಾಂಗದ ಕ್ರಿಯಾಶೀಲತೆಯಿಂದಾಗಿ ಸಂವಿಧಾನದ ನಿರ್ದೇಶಕತತ್ವದ ಅಡಿಯಲ್ಲಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಪರಿಗಣಿಸಿ ಸರ್ವೋಚ್ಚ ನ್ಯಾಯಾಲಯವು 1993ರಲ್ಲಿ ಐತಿಹಾಸಿಕ ತೀರ್ಪನ್ನು ನೀಡಿತು.

ಮುಂದುವರಿದು, ಭಾರತದ ಸಂಸತ್ತು 2002ರಲ್ಲಿ 86ನೇ ಸಂವಿಧಾನದ ತಿದ್ದುಪಡಿಕಾಯಿದೆಯನ್ನು ಅಂಗೀಕರಿಸಿ ಪರಿಚ್ಛೇದ 21ರ ಜೀವಿಸುವ ಹಕ್ಕಿನ ನಂತರ, ಪರಿಚ್ಛೇದ 21ಎ ಯನ್ನು ಸೇರಿಸಿ 6 ರಿಂದ 14 ವರ್ಷ ವಯಸ್ಸಿನ ಭಾರತದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಮಹತ್ವದ ನಿರ್ಧಾರಕ್ಕೆ ಸಾಕ್ಷಿಯಾಯಿತು. ಸಂವಿಧಾನದ 86ನೇ ತಿದ್ದುಪಡಿ ಕಾಯಿದೆಯ 21ಎ ಅನ್ವಯ ಸರ್ಕಾರವು ಈ ಮೂಲಭೂತ ಹಕ್ಕನ್ನು ತಾನು ತೀರ್ಮಾನಿಸುವ ಕಾನೂನಿನ (IN SUCH MANNER AS THE STATE MAY, BY LAW, DETERMINE) ರೀತಿಯಲ್ಲಿ ಜಾರಿಗೊಳಿಸುವುದಾಗಿ ಸ್ಪಷ್ಟಪಡಿಸಿತು.

ಅದರಂತೆ, ಸಂವಿಧಾನದ 86ನೇ ತಿದ್ದುಪಡಿ ಕಾಯಿದೆಯನ್ನು ಜಾರಿಗೆ ತರಲು ಭಾರತದ ಸಾರ್ವಭೌಮ ಸಂಸ್ಥೆಯಾದ ಸಂಸತ್ತಿನಲ್ಲಿ ಆಗಸ್ಟ್ 2009ರಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಮಸೂದೆಯನ್ನು ಮಂಡಿಸಿದ ಸಂದರ್ಭದಲ್ಲಿ, ಮಸೂದೆಯ ಉದ್ದೇಶ ಮತ್ತು ಕಾರಣಗಳನ್ನು (Objects and Reasons) ವಿವರಿಸುವ ಮಸೂದೆಯ 4ನೇ ಪ್ಯಾರಾವು "ಸಮಾನತೆ, ಸಾಮಾಜಿಕ ನ್ಯಾಯ, ಪ್ರಜಾಪ್ರಭುತ್ವ ಮತ್ತು ಮಾನವೀಯ ನೆಲೆಯಲ್ಲಿ ಸಮಸಮಾಜವನ್ನು ಕಟ್ಟಿಕೊಳ್ಳುವ ಕೆಲಸ ಎಲ್ಲರನ್ನೂ ಒಳಗೊಳ್ಳುವ ಪ್ರಾಥಮಿಕ ಶಿಕ್ಷಣವನ್ನು ಕಲ್ಪಿಸುವ ಅವಕಾಶದಿಂದ ಮಾತ್ರ ಸಾಧ್ಯವೆಂಬ ಬಲವಾದ ನಂಬಿಕೆಯಿಂದ ಈ ಉದ್ದೇಶಿತ ಕಾನೂನನ್ನು ತರುತ್ತಿದ್ದೇವೆ. ಅವಕಾಶ ವಂಚಿತ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ತೃಪ್ತಿದಾಯಕ ಗುಣಮಟ್ಟದ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವ ಜವಾಬ್ದಾರಿ ಕೇವಲ ಸರ್ಕಾರ ನಡೆಸುತ್ತಿರುವ ಅಥವಾ ಸರ್ಕಾರ ಬೆಂಬಲಿಸುವ ಶಾಲೆಗಳ ಕೆಲಸ ಮಾತ್ರವಲ್ಲ. ಸರ್ಕಾರದ ಅನುದಾನ ಅಥವಾ ಹಣಕಾಸಿನ ನೆರವನ್ನು ಅವಲಂಬಿಸದ ಶಾಲೆಗಳ ಕರ್ತವ್ಯವೂ ಆಗಿದೆ" ಎಂಬ ಅಂಶವನ್ನು ನೇರ ಹಾಗೂ ಸ್ಪಷ್ಟ ಮಾತುಗಳಲ್ಲಿ ಹೇಳಿತ್ತು.

ಸಂಸತ್ತಿನಲ್ಲಿ ಮಂಡನೆಯಾದ ಈ ಮಸೂದೆಯು, ಎರಡೂ ಸದನಗಳಲ್ಲಿ ಅಂಗೀಕಾರಗೊಂಡ ನಂತರ ಆಗಸ್ಟ್ 26, 2009ರಲ್ಲಿ ರಾಷ್ಟ್ರಪತಿಯವರ ಒಪ್ಪಿಗೆ ಪಡೆಯುವುದರ ಮೂಲಕ ಕಾಯಿದೆಯಾಯಿತು. ಈ ಕಾಯಿದೆಯು ಏಪ್ರಿಲ್ 1, 2010ರಿಂದ ದೇಶಾದ್ಯಂತ ಜಾರಿಗೊಂಡಿತು. ಜಾರಿಗೊಂಡ ಪ್ರಾರಂಭದಲ್ಲಿಯೇ, ಈ ಕಾಯಿದೆಯ ಸಿಂಧುತ್ವವನ್ನು ಪ್ರಶ್ನಿಸಿ

Kiran Raghupathi


ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳ ಹಕ್ಕು ಅಧಿನಿಯಮ, 2009 ಮತ್ತು ನಿಯಮಗಳು, 2010

(2009ರ ಅಧಿನಿಯಮ ಸಂಖ್ಯೆ 35)
2012ರ ತಿದ್ದುಪಡಿಯೊಂದಿಗೆ

THE RIGHT OF CHILDREN TO FREE AND COMPULSORY EDUCATION ACT, 2009 AND RULES, 2010
(Act No. 35 of 2009)
As Amended by Act No. 30 of 2012

ಹಾಗೂ;
ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಮಕ್ಕಳ ಹಕ್ಕು ನಿಯಮಗಳು, 2012
ಮಕ್ಕಳ ರಾಷ್ಟ್ರೀಯ ಸನ್ನದು, 2003
ಜೀತ ಪದ್ಧತಿ (ನಿರ್ಮೂಲನಾ) ಅಧಿನಿಯಮ, 1976 ಮತ್ತು ನಿಯಮಗಳು, 1976
ಅಧಿಸೂಚನೆಗಳು, ಸುತ್ತೋಲೆಗಳು, ಸಾರ್ವಜನಿಕ ಪ್ರಕಟಣೆಗಳು, ಅರ್ಜಿ ನಮೂನೆಗಳು ಇತ್ಯಾದಿ

ಹಲವು ಖಾಸಗಿ ಅನುದಾನರಹಿತ ಶಾಲೆಗಳು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗಿದ್ದವು. ಕಾಯಿದೆಯ ಸಾಂವಿಧಾನಿಕ ಚೌಕಟ್ಟನ್ನು ಸಮಗ್ರವಾಗಿ ಪರಿಶೀಲಿಸಿದ ಸರ್ವೋಚ್ಚ ನ್ಯಾಯಾಲಯವು ಏಪ್ರಿಲ್ 2012ರಲ್ಲಿ ನೀಡಿದ ತೀರ್ಪಿನಲ್ಲಿ ಕಾಯಿದೆಯ ಸಿಂಧುತ್ವವನ್ನು ಎತ್ತಿ ಹಿಡಿಯುವ ಮಹತ್ವದ ತೀರ್ಪನ್ನು ನೀಡಿತು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರಗಳು ಶಿಕ್ಷಣ ಹಕ್ಕು ಕಾಯಿದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಿವೆ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣದ ಹಕ್ಕು ಕಾಯಿದೆಯನ್ನು ಜಾರಿಗೊಳಿಸಲು ಅಗತ್ಯವಾದ ನಿಯಮಗಳನ್ನು ರೂಪಿಸಿ, ದಿನಾಂಕ 28.04.2012ರಂದು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಮಕ್ಕಳ ಈ ಮೂಲಭೂತ ಹಕ್ಕನ್ನು ಜಾರಿಗೊಳಿಸುವ ವಿಧಿ–ವಿಧಾನ ಮತ್ತು ಪೂರ್ಣ ಜವಾಬ್ದಾರಿ ಸರ್ಕಾರಕ್ಕೆ ಸೇರಿದ ವಿಷಯವಾಗಿದ್ದು, ಸಾಕಷ್ಟು ಚರ್ಚೆಗಳ ನಂತರ ಸಾಧಕ–ಬಾಧಕಗಳನ್ನು ಅವಲೋಕಿಸಿ ಕಾನೂನನ್ನು ರೂಪಿಸಲಾಗಿದೆ. ಅಲ್ಪಸಂಖ್ಯಾತ ಶಾಲೆಗಳಿಗೆ ಸಂಬಂಧಿಸಿದಂತೆ ಇರುವ ಕೆಲವು ಗೊಂದಲಗಳನ್ನು ಹೊರತುಪಡಿಸಿದರೆ ಕಾಯಿದೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರ ಹಾಗೂ ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು ಸ್ಪಷ್ಟವಾಗಿವೆ.

ಪ್ರಸ್ತುತ ಜಾರಿಯಲ್ಲಿರುವ ಶಿಕ್ಷಣ ಹಕ್ಕು ಕಾಯಿದೆಯು ಮಾರ್ಚ್ 2021ಕ್ಕೆ 11 ವರ್ಷಗಳನ್ನು ಮುಗಿಸಿ 12 ನೇ ವರ್ಷಕ್ಕೆ ಕಾಲಿಡುತ್ತಿದೆ. ತಾತ್ವಿಕವಾಗಿ ನಾವೆಲ್ಲರೂ ಎಲ್ಲಾ ಮಕ್ಕಳಿಗೆ ಸಮಾನ ಗುಣಮಟ್ಟದ ಶಾಲಾ ಶಿಕ್ಷಣವನ್ನು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ನೆಲೆಗಟ್ಟಿನಲ್ಲಿ "ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ" ಮೂಲಕ ಕಂಡುಕೊಳ್ಳುವ ಆಶಯವನ್ನು ಹೊಂದಿದ್ದೇವೆ. ಈ ಆಶಯದ ಮೊದಲ ಹೆಜ್ಜೆಯಾಗಿ ಸರ್ಕಾರಿ ಶಾಲೆಗಳನ್ನು ಗುಣಾತ್ಮಕ ಕೇಂದ್ರಗಳಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯ ಜಾರಿಯಲ್ಲಿ ರಚನಾತ್ಮಕವಾಗಿ ಮತ್ತು ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳುವುದು ಮಹತ್ವದ ಕೆಲಸವಾಗಿದೆ.

ಈ ನಿಟ್ಟಿನಲ್ಲಿ ಪೋಷಕರಾಗಿ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಾಗಿ ಹಾಗೂ ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬರು ಈ ಕಾಯಿದೆಯನ್ನು ಅನುಷ್ಠಾನಗೊಳಿಸುವ ನೇರ ಹೊಣೆಗಾರಿಕೆ ಹೊಂದಿರುತ್ತಾರೆ. ಈ ದಿಶೆಯಲ್ಲಿ ಕಾಯಿದೆಯ ಅಡಿಯಲ್ಲಿ ಎಸ್.ಡಿ.ಎಂ.ಸಿ.ಯ ರಚನೆ ಮತ್ತು ಪ್ರಕಾರ್ಯಗಳ ಬಗ್ಗೆ ಸದಸ್ಯರಿಗೆ ಸ್ಪಷ್ಟ ಅರಿವಿರುವುದು ಅತ್ಯಂತ ಮುಖ್ಯವಾಗಿದೆ. ಕಾಯಿದೆಯ ಅನ್ವಯ ಎಸ್.ಡಿ.ಎಂ.ಸಿ.ಯ ರಚನೆ ಮತ್ತು ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಅವಕಾಶಗಳನ್ನು ಕಲ್ಪಿಸಲಾಗಿದೆ.

**ಶಿಕ್ಷಣ ಹಕ್ಕು ಕಾಯ್ದೆ**

**ಸೆಕ್ಷನ್** 21(1):ಶಿಕ್ಷಣ ಹಕ್ಕು ಕಾಯ್ದೆಯ 2ನೇ ಪ್ರಕರಣದ (ಎನ್) ಖಂಡದ (೧ತ)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯಲ್ಲದ ಒಂದು ಶಾಲೆಯು, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಅಂಥ ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ–ತಾಯಿಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾ ವ್ಯವಸ್ಥಾಪನಾ ಸಮಿತಿಯೊಂದನ್ನು ರಚಿಸತಕ್ಕದ್ದು.

Kiran Raghupathi

## ಶಿಕ್ಷಣ ಹಕ್ಕು ಕಾಯಿದೆ ಅನ್ವಯ ಎಸ್.ಡಿ.ಎಂ.ಸಿ.ಯ ರಚನೆ

ಅನುದಾನ ರಹಿತ ಶಾಲೆಗಳನ್ನು ಹೊರತುಪಡಿಸಿ ಉಳಿದೆಲ್ಲ ಶಾಲೆಗಳು ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ–ತಾಯಿ ಅಥವಾ ಕಾನೂನಿನನ್ವಯ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯೊಂದನ್ನು ರಚಿಸಿಕೊಳ್ಳುವುದು. ಈ ಸಮಿತಿಯ ಸದಸ್ಯರಲ್ಲಿ;

1. ಕನಿಷ್ಠ ಮುಕ್ಕಾಲು (ಶೇಕಡ 75) ಮಂದಿ ಸದಸ್ಯರು ತಂದೆ–ತಾಯಿ ಅಥವಾ ಕಾನೂನಿನನ್ವಯ ಪೋಷಕರಾಗಿರಬೇಕು.
2. ಅವಕಾಶವಂಚಿತ ಗುಂಪು ಹಾಗೂ ದುರ್ಬಲವರ್ಗಕ್ಕೆ ಸೇರಿದ ಮಕ್ಕಳ ಪೋಷಕರು ಅಥವಾ ಪಾಲಕರಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯ ನೀಡಬೇಕು.
3. ಈ ಸಮಿತಿಯ ಸದಸ್ಯರ ಶೇಕಡಾ ಐವತ್ತರಷ್ಟು ಸದಸ್ಯರು ಮಹಿಳೆಯರಾಗಿರಬೇಕು.

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆಯ ವಿಧಿ–ವಿಧಾನ

**ಹಂತ–1**

ಪ್ರತಿಯೊಂದು ಕಿರಿಯ ಅಥವಾ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ತಮ್ಮ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿನಿಯ ಪೋಷಕರ (ತಂದೆ ಮತ್ತು ತಾಯಿ ಇಬ್ಬರೂ, ತಂದೆ ತಾಯಿ ಇಲ್ಲದಿದ್ದಲ್ಲಿ ಕಾನೂನಿನನ್ವಯ ಪೋಷಕರು / ವಾರಸುದಾರರು) ಪಟ್ಟಿಯನ್ನು ಸಿದ್ಧಪಡಿಸಬೇಕು.

**ಹಂತ–2**

ಈ ರೀತಿ ಸಿದ್ಧಪಡಿಸಿದ ಪಟ್ಟಿಯನ್ನು ಸಾರ್ವಜನಿಕರ ಗಮನಕ್ಕಾಗಿ ಶಾಲೆಯ ಸೂಚನಾಫಲಕದಲ್ಲಿ ಪ್ರಕಟಿಸಬೇಕು.

**ಹಂತ–3**

ಈ ರೀತಿ ಪ್ರಕಟಿಸಿದ 15 ದಿನಗಳ ನಂತರ ಪಟ್ಟಿಯಲ್ಲಿರುವ 'ಎಲ್ಲಾ ಪಾಲಕರು / ಪೋಷಕರನ್ನು ಒಳಗೊಂಡ ಸಾಮಾನ್ಯ ಸಭೆಯನ್ನು ನಿಗದಿತ ದಿನಾಂಕದಂದು ಶಾಲೆಯ ಆವರಣದಲ್ಲಿ ಮುಖ್ಯ ಶಿಕ್ಷಕರು ಕರೆಯುವುದು. ಈ ರೀತಿ ಕರೆಯಲ್ಪಟ್ಟ ಸಭೆಯ ಬಗ್ಗೆ ಜನರ ಮಾಹಿತಿಗಾಗಿ ವ್ಯಾಪಕ ಪ್ರಚಾರ ಮಾಡುವುದು (ಉದಾ: ಸಾರ್ವಜನಿಕ ಸ್ಥಳಗಳಲ್ಲಿ ನೋಟೀಸ್ ಪ್ರತಿಯನ್ನುಅಂಟಿಸುವುದು / ಡಂಗೂರ ಸಾರಿಸುವುದು / ಕರಪತ್ರವನ್ನು ಮುದ್ರಿಸಿ ಹಂಚುವುದು ಇತ್ಯಾದಿ).

**ಹಂತ–4**

ಈ ರೀತಿ ಔಪಚಾರಿಕವಾಗಿ ಸಮಾವೇಶಗೊಂಡ ಪಾಲಕರ ಸಭೆಯಲ್ಲಿ ವಿಧಿವತ್ತಾಗಿ ಆ ಶೈಕ್ಷಣಿಕ ವರ್ಷಕ್ಕೆ ಪೋಷಕರ ಸಭೆಯು (ಪಾಲಕರ ಪರಿಷತ್ತು) ರಚಿತವಾಯಿತೆಂಬ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸಬೇಕು (ಪಾಲಕರ ಪರಿಷತ್ತಿನ ಸಭೆಗೆ ಪೋಷಕರ ಪ್ರತಿನಿಧಿಗಳಲ್ಲಿ ಮೂರನೇ ಎರಡಷ್ಟು ಹಾಜರಾತಿ ಇರಬೇಕು).

**ಹಂತ–5**

ವಿಧಿವತ್ತಾಗಿ ರಚಿಸಲ್ಪಟ್ಟ ಪಾಲಕರ ಪರಿಷತ್ತಿನಿಂದ 18 ಜನ ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು.



**ಹಂತ–6**

**ಈ ರೀತಿ 18 ಜನರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಈ ಕೆಳಗಿನ ಮಾನದಂಡವನ್ನು ಅನುಸರಿಸುವುದು.**

**ಉದಾಹರಣೆಗೆ** : ಈ ಕೆಳಗಿನ ಸೂತ್ರವನ್ನು ಉಪಯೋಗಿಸಿ ಲೆಕ್ಕಾಚಾರ ಮಾಡತಕ್ಕದ್ದು:

ಪಾಲಕರ ಪ್ರತಿನಿಧಿಗಳ ಸಂಖ್ಯೆ

ಸದಸ್ಯರ = ---------------------- X ಎಸ್‌ಡಿಎಂಸಿಗೆ ಆಯ್ಕೆ ಆಗಬೇಕಾದ ಪಾಲಕರ ಪ್ರತಿನಿಧಿಗಳ ಸಂಖ್ಯೆ

ಶಾಲೆಯಲ್ಲಿನ ಒಟ್ಟು ಮಕ್ಕಳ ಸಂಖ್ಯೆ

ಉದಾಹರಣೆ: ತಂದೆ ತಾಯಿ ಪರಿಷತ್ತಿನಿಂದ ಸದಸ್ಯರ ಆಯ್ಕೆ ವಿಧಾನ: ಶಾಲೆಯಲ್ಲಿ ಒಟ್ಟು 64 ಮಕ್ಕಳಿದ್ದಾರೆ ಎಂದು ಭಾವಿಸೋಣ. ಇವರಲ್ಲಿ 28 ಪರಿಶಿಷ್ಟ ಜಾತಿ, 16 ಪರಿಶಿಷ್ಟ ಪಂಗಡ, 6 ಅಲ್ಪಸಂಖ್ಯಾತರು, 04 ಹಿಂದುಳಿದ ವರ್ಗ ಹಾಗೂ 10 ಸಾಮಾನ್ಯ ವರ್ಗದ ಮಕ್ಕಳಿದ್ದಾರೆ. ನಾವು ಆಯ್ಕೆ ಮಾಡಬೇಕಾಗಿರುವುದು 18 ಸದಸ್ಯರು.

| | | |
|---|---|---|
| ಪರಿಶಿಷ್ಟ ಜಾತಿಗೆ ಪ್ರಾತಿನಿಧ್ಯ | = | 28/64 X 18=7.87 ಅಂದರೆ 8 ಜನರು |
| ಪರಿಶಿಷ್ಟ ಪಂಗಡದ ಪ್ರಾತಿನಿಧ್ಯ | = | 16/64 X 18=4.5 ಅಂದರೆ 4 ಜನರು |
| ಅಲ್ಪಸಂಖ್ಯಾತ ವರ್ಗದ ಪ್ರಾತಿನಿಧ್ಯ | = | 6/64 X 18= 1.69 ಅಂದರೆ 2 ಜನರು |
| ಹಿಂದುಳಿದ ವರ್ಗದ ಪ್ರಾತಿನಿಧ್ಯ | = | 4/64 X 18 = 1.12 ಅಂದರೆ ಒಬ್ಬರು |
| ಸಾಮಾನ್ಯ ವರ್ಗದ ಪ್ರಾತಿನಿಧ್ಯ | = | 10/64 X 18= 2.81 ಅಂದರೆ 3 ಜನರು |
| ಒಟ್ಟು ಸದಸ್ಯರು | | – 18 ಜನರು |

**ಹಂತ–7**

**ಎಸ್.ಡಿ.ಎಂ.ಸಿ. ಅಧ್ಯಕ್ಷರ ಆಯ್ಕೆ**

ಪೋಷಕರ ಸಭೆಯಿಂದ ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆಯಾದ 18 ಜನ ಚುನಾಯಿತ ಪೋಷಕ ಪ್ರತಿನಿಧಿಗಳಲ್ಲಿ ಬಹುಮತವಿರುವ ಒಬ್ಬರನ್ನು ಎಸ್.ಡಿ.ಎಂ.ಸಿ.ಯ ಅಧ್ಯಕ್ಷರನ್ನಾಗಿ ಹಾಗೂ ಒಬ್ಬರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು. ಇದರಲ್ಲಿ ಒಬ್ಬರು ಕಡ್ಡಾಯವಾಗಿ ಮಹಿಳೆಯಾಗಿರಬೇಕು.

**ಹಂತ–8**

**ಸದಸ್ಯ ಕಾರ್ಯದರ್ಶಿಯ ನೇಮಕ**

ಎಸ್.ಡಿ.ಎಂ.ಸಿ.ಯ ಪದನಿಮಿತ್ತ ಸದಸ್ಯರಾದ ಶಾಲೆಯ ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ.ಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಮುಂದುವರಿದು, ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮ 13ರ ಅನ್ವಯ ಪ್ರತಿಯೊಂದು ಸರ್ಕಾರಿ ಮತ್ತು ಅನುದಾನಿತ ಶಾಲೆಯು ಎಸ್.ಡಿ.ಎಂ.ಸಿ.ಯನ್ನು ಹೊಂದಿರತಕ್ಕದ್ದು. ಅಂತಹ ಸಮಿತಿಯನ್ನು ಈ ನಿಯಮಗಳು ಜಾರಿಗೆ ಬಂದ ಆರು ತಿಂಗಳೊಳಗೆ ರಚಿಸಬೇಕು ಮತ್ತು 3 ವರ್ಷಗಳಿಗೊಂದು ಬಾರಿ ಮರು ರಚಿಸಬೇಕು.

ಎಸ್.ಡಿ.ಎಂ.ಸಿ.ಯ 18 ಚುನಾಯಿತ ಸದಸ್ಯರು ಮಕ್ಕಳ ತಂದೆ ತಾಯಿ ಅಥವಾ ಕಾನೂನಿನನ್ವಯ ಪೋಷಕರಿಂದಲೇ ಆಯ್ಕೆಯಾಗಬೇಕು.

- ಮುಖ್ಯೋಪಾಧ್ಯಾಯರು ಅಥವಾ ಪ್ರಭಾರಿ ಮುಖ್ಯೋಪಾಧ್ಯಾಯರು ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರಬೇಕು.

- ಶಾಲೆಯು ಇರುವ ಪ್ರದೇಶ ವ್ಯಾಪ್ತಿಯ ಆರೋಗ್ಯ ಕಾರ್ಯಕರ್ತೆ ಮತ್ತು ಅಂಗನವಾಡಿ ಕಾರ್ಯಕರ್ತೆ ಎಸ್.ಡಿ.ಎಂ.ಸಿ.ಯ ಪದನಿಮಿತ್ತ ಸದಸ್ಯರಾಗಿರಬೇಕು.

- ಉಳಿದ 3 ಜನ ಎಸ್.ಡಿ.ಎಂ.ಸಿ. ಸದಸ್ಯರು ಈ ಕೆಳಕಂಡಂತೆ ತಿಳಿಸಿರುವ ವ್ಯಕ್ತಿಗಳ ಪೈಕಿ ನಾಮನಿರ್ದೇಶಿತ ಸದಸ್ಯರಾಗಿರಬೇಕು.

Kiran Raghupathi

1. ಸ್ಥಳೀಯ ಪ್ರಾಧಿಕಾರದ ಚುನಾಯಿತ ಸದಸ್ಯರಲ್ಲಿ ಒಬ್ಬರನ್ನು ಸ್ಥಳೀಯ ಪ್ರಾಧಿಕಾರ ನಾಮನಿರ್ದೇಶನ ಮಾಡಬೇಕು.

2. ಮತ್ತೊಬ್ಬ ಸದಸ್ಯನನ್ನು ಶಾಲಾ ಉಪಾಧ್ಯಾಯರ ಪೈಕಿ ಬಿ.ಇ.ಓ. ನಾಮನಿರ್ದೇಶನ ಮಾಡಬೇಕು

3. ಉಳಿಕೆ ಒಬ್ಬ ಸದಸ್ಯ ಸ್ಥಳೀಯ ಪ್ರದೇಶದ ಶಿಕ್ಷಣ ತಜ್ಞ ಅಥವಾ ಶಾಲೆಯ ಮಕ್ಕಳಲ್ಲಿ ಒಬ್ಬರನ್ನು ಬಿ.ಇ.ಓ. ನಾಮನಿರ್ದೇಶನ ಮಾಡಬೇಕು.

- ಎಸ್.ಡಿ.ಎಂ.ಸಿ.ಯ ಒಟ್ಟು ಸದಸ್ಯರಲ್ಲಿ ಶೇಕಡಾ 50ರಷ್ಟು ಸದಸ್ಯರು ಮಹಿಳೆಯರಾಗಿರಬೇಕು.

- ಎಸ್.ಡಿ.ಎಂ.ಸಿ.ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ತಂದೆ ತಾಯಿ ಅಥವಾ ಕಾನೂನಿನನ್ವಯ ಪೋಷಕರಿಂದ ಚುನಾಯಿತ ಸದಸ್ಯರಲ್ಲೇ ಚುನಾಯಿತರಾಗಬೇಕು.

**ಸೆಕ್ಷನ್ 21(2)**

**ಶಾಲಾ ವ್ಯವಸ್ಥಾಪನಾ ಸಮಿತಿಯು** ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಶಾಲೆಯ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು;
(ಬಿ) ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು ಮತ್ತು ಶಿಫಾರಸು ಮಾಡುವುದು;
(ಸಿ) ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು; ಮತ್ತು
ಡಿ) ನಿಯಮಿಸಬಹುದಾದ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

- ಬಿ.ಇ.ಓ. ತನ್ನ ಕಾರ್ಯವ್ಯಾಪ್ತಿಯ ಎಲ್ಲಾ ಎಸ್.ಡಿ.ಎಂ.ಸಿ. ಕಾರ್ಯನಿರ್ವಹಿಸುವುದನ್ನು ಖಾತ್ರಿಪಡಿಸಲು ಸಮರ್ಥ ಪ್ರಾಧಿಕಾರವಾಗಿರುತ್ತಾರೆ. ಜೊತೆಗೆ ಏನಾದರೂ ಕುಂದುಕೊರತೆಗಳಿದ್ದಲ್ಲಿ ಬಗೆಹರಿಸಲು ಕ್ರಮಕೈಗೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಸ್ಥಳೀಯ ಪ್ರಾಧಿಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

- ಎಸ್.ಡಿ.ಎಂ.ಸಿ.ಯು ತಿಂಗಳಲ್ಲಿ ಕೊನೆ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಸಭೆಯ ನಡಾವಳಿಗಳನ್ನು ವರದಿ ಮಾಡಿಕೊಳ್ಳಬೇಕು ಮತ್ತು ಸಾರ್ವಜನಿಕರಿಗೆ ದೊರಕುವಂತೆ ಮಾಡತಕ್ಕದ್ದು.

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪ್ರಕಾರ್ಯಗಳು

ಈ ರೀತಿ ರಚನೆಯಾದ ಎಸ್.ಡಿ.ಎಂ.ಸಿ.ಯು ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು;

ಎ. ಶಾಲೆಯ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವುದು;
ಬಿ. ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸುವುದು ಮತ್ತು ಶಿಫಾರಸ್ಸು ಮಾಡುವುದು;
ಸಿ. ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು; ಮತ್ತು,
ಡಿ. ನಿಯಮಿಸಬಹುದಾದ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

ಮುಂದುವರಿದು, ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮ 13(5)ರ ಅನ್ವಯ ಎಸ್.ಡಿ.ಎಂ.ಸಿ.ಯು ಮೇಲೆ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳ ಜೊತೆಗೆ ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸಬೇಕು.

1. ಶಾಲೆಯ ಅಕ್ಕ–ಪಕ್ಕದ ನಿವಾಸಿಗಳಿಗೆ ಕಾಯಿದೆಯಲ್ಲಿ ಹೇಳಿರುವ ಮಕ್ಕಳ ಹಕ್ಕುಗಳನ್ನು ತಿಳಿಯುವಂತೆ ಹೇಳಬೇಕು.

2. ಕಾಯಿದೆಯ ಕಲಂ 28, ಯಾವುದೇ ಶಿಕ್ಷಕರು ಖಾಸಗಿ ಪಾಠಗಳನ್ನು ಮಾಡಬಾರದು, ಖಾಸಗಿಯಾಗಿ ಕಲಿಸುವುದರಲ್ಲಿ ನಿರತರಾಗಬಾರದು ಮತ್ತು ಕಲಂ 24 ಖಂಡ (ಎ) ಶಾಲೆಗೆ ತಪ್ಪದೆ ಹಾಜರಾಗುವುದು ಮತ್ತು ಸಮಯಪಾಲನೆ ಮಾಡುವುದು ಮತ್ತು ಪೋಷಕರು ಹಾಗೂ ತಂದೆ ತಾಯಿಯರೊಡನೆ ಕ್ರಮಬದ್ಧವಾಗಿ ಸಭೆ ನಡೆಸಿ, ಅವರ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಾಗುವ, ಕಲಿಯುವ ಸಾಮರ್ಥ್ಯ, ಕಲಿಯುವುದರಲ್ಲಿ ಮಾಡಿರುವ ಪ್ರಗತಿ ಮತ್ತು ಇನ್ನಿತರ ಸೂಕ್ತವಾದ ಮಾಹಿತಿಗಳನ್ನು ಹಂಚಿಕೊಳ್ಳಬೇಕು ಹಾಗೂ ಜಾರಿ ಯಾಗಿರುವುದನ್ನು ಖಾತರಿಗೊಳಿಸಿಕೊಳ್ಳಬೇಕು.

Kiran Raghupathi

3. ಕಲಂ 27ರಲ್ಲಿ ಯಾವುದೇ ಶಿಕ್ಷಕರನ್ನು ಶೈಕ್ಷಣಿಕವಲ್ಲದ ಕೆಲಸಗಳಿಗೆ, ಹತ್ತು ವರ್ಷಗಳಿಗೊಮ್ಮೆ ನಡೆಯುವ ಜನಗಣತಿ, ವಿಪತ್ತು ನಿರ್ವಹಣೆ, ಸ್ಥಳೀಯ ಸರ್ಕಾರಗಳು, ರಾಜ್ಯ ವಿಧಾನ ಸಭೆ ಮತ್ತು ಸಂಸತ್ ಚುನಾವಣೆ ಹೊರತು ಪಡಿಸಿ, ಇತರೆ ಕೆಲಸಗಳಿಗೆ ನೇಮಿಸಬಾರದು. ನಿರ್ದಿಷ್ಟಪಡಿಸಿರುವುದನ್ನು ಹೊರತುಪಡಿಸಿ ಉಪಾಧ್ಯಾಯರಿಗೆ ಶೈಕ್ಷಣಿಕವಲ್ಲದ ಕರ್ತವ್ಯಗಳಿಂದ ಹೊರೆಯಾಗದಂತೆ ಮೇಲ್ವಿಚಾರಣೆ ಮಾಡಬೇಕು. ಉಪಾಧ್ಯಾಯರ ದೂರುಗಳನ್ನು ಎಸ್.ಡಿ.ಎಂ.ಸಿ.ಯು ಸ್ಥಳೀಯ ಪ್ರಾಧಿಕಾರದ ಮೊದಲ ಹಂತವಾಗಿ ಆಲಿಸಬೇಕು. ಸಾಮಾನ್ಯವಾಗಿ ಉಪಾಧ್ಯಾಯರಿಗೆ ತೊಂದರೆ ಇರುವಂತಹ ಸಂದರ್ಭದಲ್ಲಿ ಮತ್ತು ವಿಶೇಷವಾಗಿ ಮಹಿಳಾ ಉಪಾಧ್ಯಾಯರ ದೂರುಗಳ ಸಂದರ್ಭದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.

4. ಧರ್ಮ, ಜನಾಂಗ, ಜಾತಿ, ಲಿಂಗ, ಭಾಷೆ ಮತ್ತು ಜನನ ಸ್ಥಳಗಳನ್ನು ಗಮನಿಸದೇ ನೆರೆಹೊರೆ ಶಾಲೆಗೆ ಹೋಗದಿರುವ ಮಕ್ಕಳ ಮತ್ತು ಅಕ್ಕ–ಪಕ್ಕದ ಶಾಲೆಯ ಮಕ್ಕಳ ನಿರಂತರ ಹಾಜರಾತಿಯ ಪಟ್ಟಿಯನ್ನು ಖಾತರಿಪಡಿಸಬೇಕು. ಈ ಸಂಬಂಧವಾಗಿ ಎಸ್.ಡಿ.ಎಂ.ಸಿ.ಯು ಹೆಣ್ಣುಮಕ್ಕಳಿಗಾಗಿ ವಿಶೇಷ ಶಿಬಿರಗಳನ್ನು ಮಾಡಬಹುದು.

5. ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಲ್ಲಿ ನೀಡಲಾಗಿರುವ ಶಾಲೆಗಳಿಗೆ ನಿಗದಿಪಡಿಸಿದ ಗುಣಮಟ್ಟದ ವಿಧಿಗಳು ಮತ್ತು ಮಾನಕಗಳ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು (ಅನುಬಂಧ ಗಮನಿಸುವುದು).

6. ಶಾಲೆಯ ಅವಶ್ಯಕತೆಗಳನ್ನು ಗುರುತಿಸುವುದು ಮತ್ತು ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸುವುದು ಮತ್ತು ಕಲಂ 4ರ ಉಪಬಂಧಗಳ ಅನ್ವಯ ಶಾಲೆಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸುವುದನ್ನು ಮೇಲ್ವಿಚಾರಣೆ ಮಾಡುವುದು.

7. ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಗೆ ಹೋಗಲು ಶಕ್ತವಾಗಲು ವಿಶೇಷ ಸೌಲಭ್ಯಗಳು ಅಂದರೆ ಶ್ರವಣ ಸಾಧನ, ಬ್ರೈಲ್ ಕಿಟ್ ಇತ್ಯಾದಿಗಳನ್ನು ಕೊಡುವಾಗ ತಾರತಮ್ಯವಾಗದಿರುವುದನ್ನು ಖಾತರಿಗೊಳಿಸಬೇಕು. ಅಂತಹ ಮಕ್ಕಳನ್ನು ಗುರುತಿಸಿ, ಪಟ್ಟಿ ಮಾಡಿ ಮತ್ತು ಕಲಿಕಾ ಸೌಲಭ್ಯಗಳನ್ನು ನೀಡುವಲ್ಲಿ ಮೇಲ್ವಿಚಾರಣೆ ಮಾಡಬೇಕು. ಪ್ರಾಥಮಿಕ ಶಿಕ್ಷಣದಲ್ಲಿ ಭಾಗಿಯಾಗುವುದನ್ನು ಮತ್ತು ಪೂರ್ತಿಗೊಳಿಸುವುದನ್ನು ಖಾತ್ರಿಗೊಳಿಸಬೇಕು.

8. ನಿಯತಕಾಲಿಕವಾಗಿ ಶಾಲೆಯಿಂದ ಹೊರಗುಳಿದ ಮಕ್ಕಳ (ಡ್ರಾಪ್–ಔಟ್ ದರವನ್ನು) ಮೇಲ್ವಿಚಾರಣೆ ಮಾಡುವುದು ಮತ್ತು ಹಾಜರಾತಿಯನ್ನು ಖಾತ್ರಿಗೊಳಿಸುವುದು ಮತ್ತು ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು, ಉಚಿತ ಪಠ್ಯಪುಸ್ತಕಗಳ ಹಂಚಿಕೆ, ಮಧ್ಯಾಹ್ನದ ಅಕ್ಷರ ದಾಸೋಹ ಊಟದ ಕಾರ್ಯಕ್ರಮ, ಕ್ಷೀರಭಾಗ್ಯ, ಉಚಿತ ಸಮವಸ್ತ್ರಗಳು, ಉಚಿತ ಬೈಸಿಕಲ್, ವಿದ್ಯಾರ್ಥಿ ವೇತನಗಳು ಮತ್ತು ಸರ್ಕಾರವು ಕಾಲಕಾಲಕ್ಕೆ ಕೊಡಬಹುದಾದ ಇತರ ಯಾವುದೇ ಉತ್ತೇಜಕ ಕಾರ್ಯಕ್ರಮಗಳ ಸಮರ್ಪಕ ಕಾರ್ಯಗತಗೊಳಿಸುವಿಕೆಯನ್ನು ಮೇಲ್ವಿಚಾರಣೆ ಮಾಡುವುದು.

9. ಪ್ರತಿಯೊಂದು ಶಾಲೆಯ ಮಾರ್ಚ್ ತಿಂಗಳ 31ನೇ ತಾರೀಖಿಗೆ ಕೊನೆಗೊಂಡ ಕಾಲಾವಧಿಯ ವರ್ಷದ ಜೂನ್ ತಿಂಗಳ ಮೊದಲು ವಾರ್ಷಿಕ ಸ್ವೀಕೃತಿ ಮತ್ತು ವೆಚ್ಚಗಳ (Receipts & Expenditure) ಲೆಕ್ಕವನ್ನು ಸಿದ್ಧಪಡಿಸುವುದು ಹಾಗೂ ಅನುಮೋದನೆ ಮಾಡತಕ್ಕದ್ದು ಮತ್ತು ಎಸ್.ಡಿ.ಎಂ.ಸಿ.ಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಯಿಂದ ಸಹಿ ಮಾಡಲ್ಪಡಬೇಕು. ಅದನ್ನು ಸ್ಥಳೀಯ ಪ್ರಾಧಿಕಾರದ ಮುಂದೆ ಇಡಬೇಕು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಬೇಕು.

10. ಎಸ್.ಡಿ.ಎಂ.ಸಿ.ಯು ಶಾಲೆಯ ಅಗತ್ಯಗಳನ್ನು ಗುರುತಿಸಿದ ನಂತರ ಆರ್ಥಿಕ ವರ್ಷಕ್ಕಾಗಿ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು. ಶಾಲೆಯ ಮೂಲಭೂತ ಸೌಕರ್ಯಗಳಾದ ಆಟದ ಮೈದಾನ, ಕಾಂಪೌಂಡ್, ತರಗತಿಕೊಠಡಿಗಳು, ಶೌಚಾಲಯ, ಪೀಠೋಪಕರಣ, ಕುಡಿಯುವ ನೀರಿನ ಸೌಲಭ್ಯ ಇತ್ಯಾದಿಗಳನ್ನು ಮೇಲ್ವಿಚಾರಣೆ ಮಾಡುವುದು; ಇಲ್ಲದಿದ್ದಲ್ಲಿ ಹೊಂದಲು ಪ್ರಯತ್ನಿಸುವುದು ಅದರ ಕರ್ತವ್ಯವಾಗಿದೆ. ಅದು ಶಾಲಾ ಅಭಿವೃದ್ಧಿ ಯೋಜನೆಯಂತೆ ಯಾವುದೇ ಕೆಲಸದ ನಿರ್ಮಾಣ ವ್ಯವಸ್ಥೆ ಮತ್ತು ನಿರ್ವಹಣೆಯನ್ನು ಸಹ ಮಾಡಬೇಕು. ಶಾಲೆಯನ್ನು ನಡೆಸುವ ಸಲುವಾಗಿ ಅಗತ್ಯವಾದಂತಹ ಸ್ಥಿರ ಅಥವಾ ಚರ ಆಸ್ತಿಯನ್ನು ಸ್ವಾಧೀನ, ಕ್ರಯ ಅಥವಾ ಬಾಡಿಗೆಗೆ ತೆಗೆದುಕೊಳ್ಳಬಹುದಾಗಿದೆ. ಶಾಲಾ ಆವರಣವನ್ನು ಅತಿಕ್ರಮ ಮತ್ತು ಉಪದ್ರವಗಳಿಂದ ರಕ್ಷಿಸಬೇಕು. ಶಾಲೆಯ ಮಕ್ಕಳ ಸಹಾಯವಾಣಿ ಸಂಖ್ಯೆ 1098ನ್ನು ಪ್ರಕಟಿಸಲಾಗಿದೆ ಎಂಬುದನ್ನು ಖಾತ್ರಿಗೊಳಿಸಬೇಕು. ಶಾಲಾ ಸ್ವಚ್ಛತೆಯನ್ನು ನೋಡಿಕೊಳ್ಳಬೇಕು ಮತ್ತು ಶಾಲೆಯನ್ನು ನಿರ್ವಹಣೆ ಮಾಡಬೇಕು. ಅದರ ಜೊತೆಗೆ ಶಾಲೆಯ ಮಕ್ಕಳಿಗೆ ಆರೋಗ್ಯ ಕಾರ್ಯಕ್ರಮಗಳು ಮತ್ತು ನಿರಂತರ ಆರೋಗ್ಯ ಶಿಬಿರಗಳ ಸೌಲಭ್ಯಗಳನ್ನು ಮೇಲ್ವಿಚಾರಣೆ ಮಾಡುವುದು.

Kiran Raghupathi

11. ಎಸ್.ಡಿ.ಎಂ.ಸಿ.ಯು ತಿಂಗಳಿಗೊಂದು ಬಾರಿ ಸಭೆಗಳನ್ನು ನಡೆಸಬೇಕು ಮತ್ತು ಯಾರು ನಿರಂತರವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ ಅಂತಹ ಪೋಷಕರೊಂದಿಗೆ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಚರ್ಚೆ ಮಾಡುವುದು. ಶಾಲೆಯ ಮಕ್ಕಳ ದಾಖಲಾತಿ ಆಂದೋಲನ, ಸೇತುಬಂಧ ತರಗತಿಗಳು, ಹೆಣ್ಣು ಮಕ್ಕಳಿಗಾಗಿ ವಿಶೇಷ ಶಿಬಿರಗಳ ವ್ಯವಸ್ಥೆಯನ್ನೂ ಸಹ ಮಾಡಬೇಕು. ಎಲ್ಲಾ ಪೋಷಕರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಭಾಗವಹಿಸಲು ಪೋಷಕರ ದಿನಾಚರಣೆಯನ್ನು ನಡೆಸಬೇಕು.

*ಸಭೆಯ ದಿನಾಂಕ, ಸ್ಥಳ, ಸಮಯ ನಿಗದಿಪಡಿಸುವಾಗ ಕನಿಷ್ಠಪಕ್ಷ ಅಧ್ಯಕ್ಷ/ಉಪಾಧ್ಯಕ್ಷರೊಂದಿಗೆ ಸಮಾಲೋಚಿಸಿ ನಿರ್ಧರಿಸುವುದು. ಪ್ರತೀ ಬಾರಿ ಶಾಲೆಯಲ್ಲಿಯೇ ಸಭೆಯನ್ನು ಆಯೋಜಿಸುವುದಕ್ಕಿಂತ ಸಮುದಾಯದಲ್ಲಿನ ಚಾವಡಿ, ಸಮುದಾಯ ಭವನ ಇತರೆ ಸ್ಥಳಗಳಲ್ಲಿ ಮಾಡುವುದು ಸೂಕ್ತ. ಪ್ರತೀ ಸಭೆಯಲ್ಲಿ ಮುಂದಿನ ಸಭೆಯ ರೂಪುರೇಷೆಗಳನ್ನು ನಿರ್ಧರಿಸುವುದು ಸೂಕ್ತ. ಕ್ರಮೇಣವಾಗಿ ಪ್ರತೀ ತಿಂಗಳು ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ಸಮುದಾಯದ ಎಲ್ಲಾ ಸದಸ್ಯರಿಗೆ ಅನುಕೂಲವಾಗುವ ಒಂದು ನಿಗದಿತ ದಿನವನ್ನು ನಿಗದಿಪಡಿಸಿಕೊಳ್ಳಬಹುದು. ಈ ರೀತಿ ಮಾಡುವಾಗ ಅದು ಸಾರ್ವಜನಿಕ ರಜೆ, ಶಾಲಾ ಸಮಯ ಮೀರಿಯೂ ಇರಬಹುದು.*

12. ಎಸ್.ಡಿ.ಎಂ.ಸಿ.ಯು, ಎಲ್ಲಾ ಪೋಷಕರು ಶಾಲೆಯ ಕಾರ್ಯಚಟುವಟಿಕೆಯಲ್ಲಿ ಭಾಗವಹಿಸುವಂತೆ ಮತ್ತು ಶಾಲೆಯು ಅಭಿವೃದ್ಧಿ ಹೊಂದಲು ಸ್ಥಳೀಯ ಪ್ರಾಧಿಕಾರಕ್ಕೆ ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ರಚನಾತ್ಮಕ ಸಲಹೆಗಳನ್ನು ಕೊಡುವಂತೆ ಉತ್ತೇಜಿಸುವುದು. ಅದು ವಿದ್ಯಾರ್ಥಿಗಳು, ಪೋಷಕರು, ಉಪಾಧ್ಯಾಯರು ಮತ್ತು ಶಾಲೆಯ ಬೋಧಕೇತರ ಸಿಬ್ಬಂದಿಯ ದೂರು ಅಥವಾ ಫಿರ್ಯಾದುಗಳನ್ನು ಆಲಿಸಿ ಪರಿಹರಿಸಲು ಪ್ರಯತ್ನಿಸಬೇಕು.

13. ಎಸ್.ಡಿ.ಎಂ.ಸಿ.ಯು ವರ್ಷದಲ್ಲಿ ಕನಿಷ್ಠ 220 ಕಾರ್ಯನಿರತ ಕೆಲಸದ ದಿವಸಗಳನ್ನು ಖಾತ್ರಿಗೊಳಿಸುವುದು. ಸ್ಥಳೀಯ ರಜಾದಿನಗಳನ್ನು ವರ್ಷದಲ್ಲಿ 4 ದಿವಸಕ್ಕೆ ಮೀರದಂತೆ ತೀರ್ಮಾನಿಸಬೇಕು.

14. ಅಗತ್ಯವಿದ್ದಾಗ ಸ್ವ–ಇಚ್ಛೆ ಆಧಾರದ ಮೇಲೆ ಅಥವಾ ನಿಗದಿತ ಗೌರವಧನ ನೀಡುವುದರ ಮೇಲೆ ಅದರ ವೆಚ್ಚವನ್ನು ನಿಧಿಯಿಂದ ಭರಿಸಿ, ಪ್ರಕರಣಾನುಸಾರ ಸ್ಥಳೀಯ ವ್ಯಕ್ತಿಗಳ ಅಥವಾ ಶಿಕ್ಷಕರ ಸೇವೆಯನ್ನು ಎರವಲು ತೆಗೆದುಕೊಳ್ಳಬಹುದಾಗಿದೆ. ಈ ರೀತಿಯಲ್ಲಿ ಖಾಯಂ ಸ್ಥಾನಗಳನ್ನು ತುಂಬಬಾರದು.

15. ಎಸ್.ಡಿ.ಎಂ.ಸಿ.ಯು ನಿಯತಕಾಲಿಕವಾಗಿ ಉಪಾಧ್ಯಾಯರ ಕಾರ್ಯಚಟುವಟಿಕೆಯನ್ನು ವಿಮರ್ಶೆ ಮಾಡಬಹುದಾಗಿದೆ ಮತ್ತು ಸಮಿತಿಯ ಷೆಡ್ಯುಲ್‌ನಲ್ಲಿ ನಿಗದಿಪಡಿಸಿರುವ ಕನಿಷ್ಠ ಪ್ರಮಾಣದ ಪರಿಮಾಣ ಮತ್ತು ಕಾಲಕಾಲಕ್ಕೆ ಕೇಂದ್ರಸರ್ಕಾರ ಅಥವಾ ರಾಜ್ಯಸರ್ಕಾರದ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಕೂಲ ಮಾಡಿಕೊಡಬೇಕು. ಉಪಾಧ್ಯಾಯರ ಮತ್ತು ಮುಖ್ಯೋಪಾಧ್ಯಾಯರ ಬೇಡಿಕೆಗೆ ಅನುಸಾರವಾಗಿ ಉಪಾಧ್ಯಾಯರುಗಳಿಗೆ ಅಗತ್ಯ ಆಧಾರಿತ ತರಬೇತಿಗಳನ್ನು ಆಯೋಜಿಸಲು ಸಹಕರಿಸುವುದು.

16. ಮೇಲಿನ ಪ್ರಕಾರ್ಯಗಳ ಜೊತೆಗೆ ಪ್ರತಿಯೊಂದು ಎಸ್.ಡಿ.ಎಂ.ಸಿ.ಯು ಮೂರು ವರ್ಷಗಳ ದೂರದೃಷ್ಟಿಯುಳ್ಳ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು. ಈ ಶಾಲಾ ಅಭಿವೃದ್ಧಿಯೋಜನೆಯು, ಸಂದರ್ಭಾನುಸಾರ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ರಚಿಸಿದ ಯೋಜನೆಗಳು ಮತ್ತು ನೀಡಿದ ಅನುದಾನಗಳಿಗೆ ಅನುಗುಣವಾಗಿರಬೇಕು. ಶಾಲೆಯ ಅಗತ್ಯಕ್ಕನುಗುಣವಾಗಿ ಶಿಕ್ಷಣ ಹಕ್ಕು ಕಾಯಿದೆಯ ಅನುಸೂಚಿಯಲ್ಲಿ ನಮೂದಿಸಿರುವ ಮಾನಕಗಳು ಹಾಗೂ 'ಸಂಗಮ' ಪುಸ್ತಕದಲ್ಲಿ ನಿಗದಿಪಡಿಸಿರುವ ಸೂಚಕಗಳಿಗೆ ಅನುಗುಣವಾಗಿ ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು. ಶಾಲಾಭಿವೃದ್ಧಿ ಯೋಜನೆಯ ಕುರಿತು ಮುಂದಿನ ಅಧ್ಯಾಯದಲ್ಲಿ ಹೆಚ್ಚಿನ ವಿವರಗಳನ್ನು ನೀಡಲಾಗಿದೆ.

Kiran Raghupathi

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಗುಣಾತ್ಮಕ ಶಿಕ್ಷಣ

ಶಾಲಾ ಭೌತಿಕ ಸೌಕರ್ಯಗಳ ಅಭಿವೃದ್ಧಿಯ ಜೊತೆಜೊತೆಗೆ ಎಲ್ಲಾ ಮಕ್ಕಳಿಗೆ ಶಿಶು ಸ್ನೇಹಿ, ಶಿಶುಕೇಂದ್ರಿತ ವಾತಾವರಣದಲ್ಲಿ ಗುಣಾತ್ಮಕ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವುದೂ ಸಹ ಎಸ್.ಡಿ.ಎಂ.ಸಿ.ಯ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ.ಸದಸ್ಯರು ಪಠ್ಯಕ್ರಮ, ಪಠ್ಯವಸ್ತು, ಕಲಿಕಾ ಪ್ರಕ್ರಿಯೆ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 29ರ ಅನ್ವಯ ಈ ಕೆಳಗಿನ ಅಂಶಗಳಿಗೆ ಮಹತ್ವ ನೀಡಬೇಕು;

- ಸಂವಿಧಾನದಲ್ಲಿನ ಮೌಲ್ಯಗಳು
- ಮಕ್ಕಳ ಸರ್ವಾಂಗೀಣ ಅಭಿವೃದ್ಧಿ
- ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ
- ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ
- ಶಿಶು ಸ್ನೇಹಿ ಮತ್ತು ಶಿಶು ಕೇಂದ್ರಿತ ವಾತಾವರಣದಲ್ಲಿ ಚಟುವಟಿಕೆಗಳು, ಅನ್ವೇಷಣೆ ಮತ್ತು ಸಾಹಸ ಶೋಧನೆ ಮೂಲಕ ಮಕ್ಕಳ ಕಲಿಕೆ
- ಶಿಕ್ಷಣ ಮಾಧ್ಯಮ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆ
- ಮಗುವಿನ ಭಯ, ಆಘಾತ ಹಾಗೂ ಆತಂಕ ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ನೆರವು
- ಜ್ಞಾನದಗ್ರಹಿಕೆ ಮತ್ತು ಅದನ್ನು ಅನ್ವಯಿಸುವ ಆತನ ಅಥವಾ ಆಕೆಯ ಸಾಮರ್ಥ್ಯದ ಬಗ್ಗೆ ಸಮಗ್ರ ಹಾಗೂ ನಿರಂತರ ಮೌಲ್ಯ ನಿರ್ಧರಣೆ






Kiran Raghupathi

# ಅಧ್ಯಾಯ–2

## ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.)ಯ ರಚನೆ ಮತ್ತು ನಿರ್ವಹಿಸಬೇಕಾದ ಪ್ರಕಾರ್ಯಗಳು

### ರಚನೆಗೆ ಮೂಲ ತಳಹದಿ ದಸ್ತಾವೇಜುಗಳು

1. ಸರ್ಕಾರಿ ಆದೇಶ ಸಂಖ್ಯೆ ಇಡಿ1 ಪಿಬಿಎಸ್ 2001 ಬೆಂಗಳೂರು: 28.04.2001
2. ಮಾನ್ಯ ಉಚ್ಚ ನ್ಯಾಯಾಲಯದ W.P. No. 80352/2009 ದಿನಾಂಕ: 06/02/2009
3. ಸರ್ಕಾರಿ ಆದೇಶ ಸಂಖ್ಯೆ: 105/ಎಸ್ ಒ ಹೆಚ್ 2008, ಬೆಂಗಳೂರು ದಿನಾಂಕ: 28/07/2009

### ಉದ್ದೇಶಗಳು

### ಈ ಅಧಿವೇಶನದ ನಂತರ ಸದಸ್ಯರು...

1. ಶಿಕ್ಷಣ ಸಾರ್ವತ್ರೀಕರಣದ ಸಂಕ್ಷಿಪ್ತ ಇತಿಹಾಸ ಮತ್ತು ಮಹತ್ವವನ್ನು ಅರಿಯುವರು.
2. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ–2009 (ಶಿಕ್ಷಣ ಹಕ್ಕು ಕಾಯ್ದೆ) ಅನ್ವಯ ಎಸ್‌ಡಿಎಂಸಿ ರಚನೆಕುರಿತು ತಿಳಿಯುವರು.
3. ಶಿಕ್ಷಣ ಹಕ್ಕು ಕಾಯ್ದೆ ಮತ್ತು ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012ರ ಅನ್ವಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಮನನ ಮಾಡಿಕೊಳ್ಳುವರು.
4. ಶಾಲಾ ಹಂತದಲ್ಲಿ ಎಸ್‌ಡಿಪಿ (ಶಾಲಾಭಿವೃದ್ಧಿಯೋಜನೆ)ಯನ್ನು ತಯಾರಿಸಬೇಕಾದ ಮಹತ್ವವನ್ನು ತಿಳಿಯುವರು.

### ಪ್ರೌಢಶಾಲಾ ಹಂತದಲ್ಲಿ ಸಮುದಾಯದ ಭಾಗವಹಿಸುವಿಕೆ: ಅರ್ಥ, ಸ್ವರೂಪ ಮತ್ತು ಅವಕಾಶ

### ಸಂಕ್ಷಿಪ್ತ ಹಿನ್ನೆಲೆ

ಸಮುದಾಯ ಅದರಲ್ಲೂ ವಿಶೇಷವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ–ತಾಯಿಯರ ಸಕ್ರಿಯ ಭಾಗವಹಿಸುವಿಕೆ ವಿಕೇಂದ್ರೀಕೃತ ಶಾಲಾ ಆಡಳಿತದಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಈ ಮಹತ್ವದ ಅಂಶವನ್ನು ಪ್ರಾರಂಭದಿಂದಲೂ ಗುರುತಿಸಿರುವ ನಮ್ಮ ಶೈಕ್ಷಣಿಕ ನೀತಿ–ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳನ್ನು ಕೈಗೊಳ್ಳುತ್ತಿವೆ. ಈ ಪ್ರಯತ್ನಕ್ಕೆ ಶಾಲಾ ಆಡಳಿತ ಮತ್ತು ಅಭಿವೃದ್ಧಿಯಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆಗೆ ಮಾತ್ರ ಸೀಮಿತವಾಗದೆ ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿಯೂ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಕಾರ್ಯತಂತ್ರಗಳ ಮೂಲಕ ಸಮುದಾಯವನ್ನು ಒಳಮಾಡಿಕೊಳ್ಳುವ ಪ್ರಯತ್ನವಾಗಿದೆ.

ಹೇಳಬೇಕೆಂದರೆ ಶಾಲಾ ಶಿಕ್ಷಣದ ಸಾರ್ವತ್ರೀಕರಣವು ಶಿಕ್ಷಣದಲ್ಲಿ ಗುಣಾತ್ಮಕತೆ, ಸಮತೆ, ಮಕ್ಕಳ ಭಾಗವಹಿಸುವಿಕೆ, ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಈ ಎಲ್ಲ ಅಂಶಗಳ ಅನುಷ್ಠಾನಕ್ಕೆ ಅಗತ್ಯವಾದ ಪ್ರಜಾಸತ್ತಾತ್ಮಕ ಸಾಂಸ್ಥಿಕ ಚೌಕಟ್ಟು, ವಿಕೇಂದ್ರೀಕರಣ ಆಡಳಿತ ವ್ಯವಸ್ಥೆಯ ಮೂಲಕ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸುವ ಅನೇಕ ಪ್ರಯತ್ನಗಳು ಸ್ವಾತಂತ್ರ್ಯ ಪೂರ್ವದಿಂದಲೂ ನಡೆಯುತ್ತಾ ಬಂದಿವೆ. 1854ರಲ್ಲಿ ವುಡ್ಸ್ ಆಯೋಗವು ಸ್ಥಳೀಯ ಕರಗಳ ಮೂಲಕ ಶಾಲೆಗಳ ನಿರ್ವಹಣೆಗೆ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಪ್ರಸ್ತಾಪ ಮಾಡಿತ್ತು.ನಂತರ ಲಾರ್ಡರಿಪ್ಪನ್‌ರವರ ನಿರ್ಣಯ (1882), ಸ್ಥಳೀಯ ಸರ್ಕಾರ ಕಾಯಿದೆ (1883) ಮತ್ತು ಭಾರತ ಸರ್ಕಾರದ ಕಾಯಿದೆ (1919) ಈ ಎಲ್ಲಾ ಪ್ರಯತ್ನ ಮತ್ತು ಸ್ಥಳೀಯ ಹಂತದ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡುವ ಹಲವು ಪ್ರಯತ್ನಗಳನ್ನು ನಡೆಸಿದವು. ಮುಂದುವರಿದು, 1992ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮೂಲಕ 73 ಮತ್ತು 74ನೇ ತಿದ್ದುಪಡಿ ಕಾಯಿದೆಗಳು ವಿಕೇಂದ್ರಿಕರಣ ಪ್ರಕ್ರಿಯೆಗೆ ಐತಿಹಾಸಿಕ ಚಾಲನೆ ನೀಡಿದವು.

ಮತ್ತೊಂದೆಡೆ ಈ ಎಲ್ಲಾ ಬೆಳವಣಿಗೆಗಳಿಗೆ ಪೂರಕವಾಗಿ 1986ರ ರಾಷ್ಟ್ರೀಯ ಶಿಕ್ಷಣ ನೀತಿಯು ಸ್ಥಳೀಯ ಸಂಸ್ಥೆಗಳ ಮೂಲಕ ಸೂಕ್ತವಾದ ಸಾಂಸ್ಥಿಕ ಚೌಕಟ್ಟನ್ನು ಒದಗಿಸಿ ಸಮುದಾಯದ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸುವ ಮೂಲಕ

Kiran Raghupathi

ಸಮುದಾಯದ ಪಾಲ್ಗೊಳ್ಳುವಿಕೆಗೆ ನೀತಿ ನಿರೂಪಣೆಯಲ್ಲಿ ಅವಕಾಶ ಕಲ್ಪಿಸಿತು. ನಂತರ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಲೋಕ್ ಜಂಬಿಷ್(1988), ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ(1994), ಸರ್ವ ಶಿಕ್ಷಣ ಅಭಿಯಾನ(2000) ಇತ್ಯಾದಿ ಯೋಜನೆಗಳು ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಗೆ ಹೊಸ ಆಯಾಮಗಳನ್ನು ನೀಡಿದವು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಸರ್ವ ಶಿಕ್ಷಣ ಅಭಿಯಾನವು ಸಮುದಾಯದ ಸಹಭಾಗಿತ್ವದಲ್ಲಿ ಶಿಕ್ಷಣದ ಸಾರ್ವತ್ರೀಕರಣ ಎಂಬ ಧ್ಯೇಯವಾಕ್ಯದೊಂದಿಗೆ ಪ್ರಾರಂಭವಾಯಿತು.

ಈ ಎಲ್ಲ ಬೆಳವಣಿಗೆಗಳ ಬೆನ್ನಲ್ಲಿಯೇ ಕರ್ನಾಟಕದಲ್ಲಿಯೂ ಶಿಕ್ಷಣ ಸಾರ್ವತ್ರೀಕರಣಕ್ಕೆ ರಾಷ್ಟ್ರೀಯ ಮಟ್ಟದ ಬೆಳವಣಿಗೆಗಳ ಮಾದರಿಯಲ್ಲಿಯೇ ಅನೇಕ ಕ್ರಮಗಳನ್ನು ಕೈಗೊಳ್ಳಲಾಯಿತು. ಉದಾಹರಣೆಗೆ 1854ರಲ್ಲಿ ವುಡ್ಸ್‌ಆಯೋಗದ ವರದಿಯನ್ನು ಆಧರಿಸಿ ಮೈಸೂರು ರಾಜ್ಯಕ್ಕೆ ಅಂದಿನ ಶಿಕ್ಷಣ ಆಯುಕ್ತರು ಸಮಗ್ರ ಯೋಜನೆಯೊಂದನ್ನು ಸಿದ್ಧಪಡಿಸಿ 1857 ರಲ್ಲಿ ಭಾರತ ಸರ್ಕಾರದ ಅನುಮೋದನೆ ಪಡೆದಿದ್ದರು. ಮುಂದುವರಿದು, ಕರ್ನಾಟಕ ರಾಜ್ಯದಲ್ಲಿ ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ಒಳಮಾಡಿಕೊಳ್ಳುವ ಅನೇಕ ಪ್ರಯತ್ನಗಳು ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿ ನಂತರ ಚಾಲನೆ ಪಡೆದವು. 1988ರಲ್ಲಿ ಶೈಕ್ಷಣಿಕ ಸಮಿತಿಗಳನ್ನು ರಚಿಸಲು ಸರ್ಕಾರವು ಆದೇಶವೊಂದನ್ನು ಹೊರಡಿಸಿ ಅವಕಾಶ ಕಲ್ಪಿಸಿತು. ನಂತರ 1995 ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸುವ ನಿಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು. ಈ ಎಲ್ಲ ಪ್ರಯತ್ನಗಳಿಗೆ ಅಂತಿಮ ಸ್ವರೂಪ ನೀಡುವ ಭಾಗವಾಗಿ 1999ರಲ್ಲಿ ರಚನೆಯಾದ ಶಿಕ್ಷಣ ಕಾರ್ಯಪಡೆಯ ವರದಿಯ ಶಿಫಾರಸ್ಸಿನಂತೆ ರಾಜ್ಯದ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವ ಐತಿಹಾಸಿಕ ತೀರ್ಮಾನವನ್ನು ತೆಗೆದುಕೊಂಡಿತು.

**ದಿನಾಂಕ: 28.04.2001 ರಲ್ಲಿ ಹೊರಡಿಸಿದ ಕಾರ್ಯಕಾರಿ ಅದೇಶದ ಅನ್ವಯ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಎಸ್.ಡಿ.ಎಂ.ಸಿ.ಗಳು ರಚನೆಯಾಗಿ ಕಾರ್ಯನಿರ್ವಹಿಸುತ್ತಿವೆ.**

ಈ ಮಧ್ಯೆ ಪ್ರೌಢ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ರೂಪಿಸಿರುವ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಹಿಂದಿನ ಎಲ್ಲ ಪ್ರಯತ್ನಗಳನ್ನು ಕ್ರೋಢೀಕರಿಸಿ ಮುಂದುವರಿಸುವ ಪ್ರಯತ್ನದ ಭಾಗವಾಗಿ ಪ್ರೌಢಶಾಲಾ ಹಂತದಲ್ಲಿ ಎಸ್.ಡಿ.ಎಂ.ಸಿ.ಗಳನ್ನು ಬಲವರ್ಧನೆಗೊಳಿಸಲು ತೀರ್ಮಾನಿಸಿದೆ.

ತನ್ನ ಮಾರ್ಗಸೂಚಿಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಶಾಲಾ ಶಿಕ್ಷಣದ ವಿಕೇಂದ್ರೀಕರಣಕ್ಕಾಗಿ ಅಗತ್ಯ ಅಧಿಕಾರಗಳನ್ನು ಸ್ಥಳೀಯ ಸರ್ಕಾರ ಮತ್ತು ಶಾಲಾ ಮೇಲುಸ್ತುವಾರಿ ಸಮಿತಿಗಳಿಗೆ ನೀಡುವ ನಿಟ್ಟಿನಲ್ಲಿ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ (ಪ್ಯಾರ 3.1.8).

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನವು ಪ್ರೌಢಶಾಲಾ ಹಂತದಲ್ಲಿ ಎಸ್.ಡಿ.ಎಂ.ಸಿ.ಗಳ ಬಲವರ್ಧನೆಗಾಗಿ ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಿದ್ದು, ಅದರ ಭಾಗವಾಗಿ ಈ ಮಾಹಿತಿ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಈ ಕೈಪಿಡಿಯು ರಾಜ್ಯದ ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಸ್.ಡಿ.ಎಂ.ಸಿ.ಸದಸ್ಯರು, ಎಸ್.ಡಿ.ಎಂ.ಸಿ.ರಚನೆ, ಅಧಿಕಾರ, ಕರ್ತವ್ಯ, ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಅಡಿಯಲ್ಲಿ ಯೋಜನೆ, ಅನುಷ್ಠಾನ ಇತ್ಯಾದಿಗಳ ಬಗ್ಗೆ ಎಲ್ಲ ಮಾಹಿತಿಗಳನ್ನು ಒದಗಿಸುತ್ತದೆ.

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆಯ ಉದ್ದೇಶ

1. ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರೌಢ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲು
2. ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಳ್ಳಲು
3. ತಮ್ಮ ಮಕ್ಕಳ ಏಳಿಗೆಯ ಬಗ್ಗೆ ಸದಾ ಕಾಳಜಿಯುಳ್ಳ ಪೋಷಕರು / ಪಾಲಕರು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು
4. ಶಿಕ್ಷಣ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ ಶಾಲಾ ಆಡಳಿತವನ್ನು ಸುಧಾರಿಸಲು
5. ಶಿಕ್ಷಕರನ್ನು ಪ್ರೇರೇಪಿಸಿ ಅವರ ಜವಾಬ್ದಾರಿಯನ್ನು ಹೆಚ್ಚಿಸಲು
6. ಗ್ರಾಮ ಶಿಕ್ಷಣ ಸಮಿತಿಗಳ ರಚನೆಯಲ್ಲಿ ಉಳಿದುಕೊಂಡ ನ್ಯೂನತೆಗಳನ್ನು ಹೋಗಲಾಡಿಸಲು
7. ಅಭಿವೃದ್ಧಿಗಾಗಿ ಶಾಲೆಯನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಶಾಲಾಭಿವೃದ್ಧಿ ಯೋಜನೆ ತಯಾರಿಸಲು

Kiran Raghupathi

8. ವಿದ್ಯಾರ್ಥಿಗಳ ದಾಖಲಾತಿ, ಹಾಜರಾತಿ ಮತ್ತು ಶಿಕ್ಷಣದ ಗುಣಮಟ್ಟ ಸುಧಾರಣೆ ಕುರಿತಂತೆ ಇರುವ ಸಮಸ್ಯೆಗಳನ್ನು ಪರಿಹರಿಸಲು
9. ತರಗತಿಯ ಚಟುವಟಿಕೆಗಳನ್ನು ಶಿಸ್ತುಬದ್ಧವಾಗಿ ಸಂಘಟಿಸಲು
10. ಶಾಲಾಭಿವೃದ್ಧಿಗೆ ಅಗತ್ಯ ಸಂಪನ್ಮೂಲಗಳನ್ನು ಕ್ರೋಡೀಕರಿಸಲು

## ಶಿಕ್ಷಣ ಹಕ್ಕು ಕಾಯಿದೆ ಅನ್ವಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆ

**ಹಂತ–1**

| |
|---|
| ಪ್ರತಿಯೊಂದು ಪ್ರೌಢಶಾಲೆಯ ಮುಖ್ಯ ಶಿಕ್ಷಕರು ತಮ್ಮ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿನಿಯ ಪೋಷಕರ (ತಂದೆ ಮತ್ತು ತಾಯಿಇಬ್ಬರೂ, ತಂದೆತಾಯಿ ಇಲ್ಲದಿದ್ದಲ್ಲಿ ಕಾನೂನಿನನ್ವಯ ಪೋಷಕರು / ವಾರಸುದಾರರು) ಪಟ್ಟಿಯನ್ನು ಸಿದ್ಧಪಡಿಸಬೇಕು. |

**ಹಂತ–2**

| |
|---|
| ಈ ರೀತಿ ಸಿದ್ಧಪಡಿಸಿದ ಪಟ್ಟಿಯನ್ನು ಸಾರ್ವಜನಿಕರ ಗಮನಕ್ಕಾಗಿ ಶಾಲೆಯ ಸೂಚನಾಫಲಕದಲ್ಲಿ ಪ್ರಕಟಿಸಬೇಕು. |

**ಹಂತ–3**

| |
|---|
| ಈ ರೀತಿ ಪ್ರಕಟಿಸಿದ 15 ದಿನಗಳ ನಂತರ ಪಟ್ಟಿಯಲ್ಲಿರುವ ಎಲ್ಲಾ ಪಾಲಕರು / ಪೋಷಕರನ್ನು ಒಳಗೊಂಡ ಸಾಮಾನ್ಯ ಸಭೆಯನ್ನು ನಿಗದಿತ ದಿನಾಂಕದಂದು ಶಾಲೆಯಆವರಣದಲ್ಲಿ ಮುಖ್ಯ ಶಿಕ್ಷಕರು ಕರೆಯುವುದು. ಈ ರೀತಿಕರೆಯಲ್ಪಟ್ಟ ಸಭೆಯ ಬಗ್ಗೆ ಜನರ ಮಾಹಿತಿಗಾಗಿ ವ್ಯಾಪಕ ಪ್ರಚಾರ ಮಾಡುವುದು (ಉದಾ: ಸಾರ್ವಜನಿಕ ಸ್ಥಳಗಳಲ್ಲಿ ನೋಟೀಸ್ ಪ್ರತಿಯನ್ನುಅಂಟಿಸುವುದು / ಡಂಗೂರ ಸಾರಿಸುವುದು / ಕರಪತ್ರವನ್ನು ಮುದ್ರಿಸಿ ಹಂಚುವುದು ಇತ್ಯಾದಿ). |

**ಹಂತ–4**

| |
|---|
| ಈ ರೀತಿ ಔಪಚಾರಿಕವಾಗಿ ಸಮಾವೇಶಗೊಂಡ ಪಾಲಕರ ಸಭೆಯಲ್ಲಿ ವಿಧಿವತ್ತಾಗಿ ಆ ಶೈಕ್ಷಣಿಕ ವರ್ಷಕ್ಕೆ ಪೋಷಕರ ಪರಿಷತ್ತು (ಪಾಲಕರ ಪರಿಷತ್ತು) ರಚಿತವಾಯಿತೆಂಬ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸಬೇಕು (ಪಾಲಕರ ಪರಿಷತ್ತಿನ ಸಭೆಗೆ ಪೋಷಕರ ಪ್ರತಿನಿಧಿಗಳಲ್ಲಿ ಮೂರನೇ ಎರಡಷ್ಟು ಹಾಜರಾತಿ ಇರಬೇಕು). |

**ಹಂತ–5**

| |
|---|
| ವಿಧಿವತ್ತಾಗಿ ರಚಿಸಲ್ಪಟ್ಟ ಪಾಲಕರ ಪರಿಷತ್ತಿನಿಂದ 9 ಜನ ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು (ಅಗತ್ಯವಿದ್ದಲ್ಲಿ ಕೈ ಎತ್ತುವ ಮೂಲಕ ಆಯ್ಕೆ ಮಾಡಬಹುದು). |

**ಹಂತ–6**

| |
|---|
| ಈ ರೀತಿ 9 ಜನರನ್ನುಆಯ್ಕೆ ಮಾಡುವ ಸಂದರ್ಭದಲ್ಲಿ ಈ ಕೆಳಗಿನ ಮಾನದಂಡವನ್ನು ಅನುಸರಿಸುವುದು. |
| • ಕನಿಷ್ಠ ಮೂವರು ಮಹಿಳಾ ಪ್ರತಿನಿಧಿಗಳು.<br>• ಕನಿಷ್ಠ ಇಬ್ಬರು ಪರಿಶಿಷ್ಟ ಜಾತಿ / ಪಂಗಡಗಳಿಗೆ ಸೇರಿದವರು.<br>• ಒಬ್ಬರು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರು. |
| **ವಿ.ಸೂ:** ಯಾವುದೇ ಪೋಷಕರು ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಎಸ್.ಡಿ.ಎಂ.ಸಿ.ಗಳ ಸದಸ್ಯರಾಗಿರ ಕೂಡದು.<br><br>ಒಂದು ವೇಳೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಅಲ್ಪಸಂಖ್ಯಾತ ಪ್ರತಿನಿಧಿಗಳು ಲಭ್ಯವಿಲ್ಲದಿದ್ದರೇ, ಇತರರಿಂದ ಭರ್ತಿ ಮಾಡುವುದು.<br><br>ಮುಂದಿನ ಮೂರು ವರ್ಷಗಳ ಒಳಗೆ ಈ ವರ್ಗದ ಮಕ್ಕಳು ಶಾಲೆಗೆ ದಾಖಲಾದರೆ ಅಂತಹ ಪೋಷಕರನ್ನು ಗುರುತಿಸಿ ಮುಂದೆ ಉದ್ಭವಿಸುವ ಸ್ಥಾನಗಳಿಗೆ ಆದ್ಯತೆಯ ಮೇರೆಗೆ ಭರ್ತಿ ಮಾಡುವುದು. |

Kiran Raghupathi

**ಹಂತ–7**

**ಎಸ್.ಡಿ.ಎಂ.ಸಿ. ಅಧ್ಯಕ್ಷರ ಆಯ್ಕೆ**
ಪೋಷಕರ ಸಭೆಯಿಂದ ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆಯಾದ 9 ಜನ ಚುನಾಯಿತ ಪೋಷಕ ಪ್ರತಿನಿಧಿಗಳಲ್ಲಿ ಬಹುಮತವಿರುವ ಒಬ್ಬರನ್ನು ಎಸ್.ಡಿ.ಎಂ.ಸಿ.ಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು

**ಹಂತ–8**

**ಸದಸ್ಯ ಕಾರ್ಯದರ್ಶಿಯ ನೇಮಕ**
ಎಸ್.ಡಿ.ಎಂ.ಸಿ.ಯ ಪದನಿಮಿತ್ತ ಸದಸ್ಯರಾದ ಶಾಲೆಯ ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ.ಯ ಸದಸ್ಯ ಕಾರ್ಯದರ್ಶಿ ಹಾಗೂ ಖಜಾಂಚಿಯಾಗಿರುತ್ತಾರೆ.

**ಹಂತ–9**

ಅಧ್ಯಕ್ಷರ ಆಯ್ಕೆ ನಂತರ 9 ಜನ ಪೋಷಕರ ಚುನಾಯಿತ ಪ್ರತಿನಿಧಿಗಳು ಸೇರಿ ಪದನಿಮಿತ್ತ ಹಾಗೂ ನಾಮನಿರ್ದೇಶಿತ ಸದಸ್ಯರನ್ನೊಳಗೊಂಡಂತೆ ಶಾಲೆಯಲ್ಲಿ ಎಸ್.ಡಿ.ಎಂ.ಸಿ. ಯನ್ನು ರಚಿಸಿದ ಬಗ್ಗೆ ನಿರ್ಣಯ ಕೈಗೊಳ್ಳುವುದು.

**ಪದನಿಮಿತ್ತ ಸದಸ್ಯ**ರೆಂದರೆ, ಶಾಲೆಯಿರುವ ಕ್ಷೇತ್ರವನ್ನು ಪ್ರತಿನಿಧಿಸುವ ಗ್ರಾಮ ಪಂಚಾಯತ್, ತಾಲ್ಲೂಕ್ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರು, ಗರಿಷ್ಠ ಸದಸ್ಯರ ಸಂಖ್ಯೆ (06) ಅಂಗನವಾಡಿ ಕಾರ್ಯಕರ್ತೆ, ಶಾಲೆಯಿರುವ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು ಮತ್ತು ಆ ಶಾಲೆಯ ಮುಖ್ಯ ಶಿಕ್ಷಕರು.

**ನಾಮನಿರ್ದೇಶಿತ ಸದಸ್ಯ**ರೆಂದರೆ, ಶಾಲೆಯನ್ನು ದತ್ತು ತೆಗೆದುಕೊಂಡ ಮಹನೀಯರು, ಶಾಲೆ ಕಟ್ಟಲು ಭೂಮಿ ದಾನ ಮಾಡಿದ ದಾನಿಗಳು, ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟ ಅಥವಾ ಹತ್ತು ಸಾವಿರ ರೂಪಾಯಿಗಳು ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಶೈಕ್ಷಣಿಕ ಉಪಕರಣಗಳನ್ನು ಕೊಡಿಸಿದ ಮಹನೀಯರು ಅಥವಾ ಹತ್ತು ಸಾವಿರ ರೂಪಾಯಿಗಳು ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ದಾನ ಮಾಡಿದ ದಾನಿಗಳು, ಆ ಕ್ಷೇತ್ರದಲ್ಲಿ ವಾಸಿಸುವ ಒಬ್ಬ ಶಿಕ್ಷಣ ತಜ್ಞರು ಅಥವಾ ಒಬ್ಬ ನಿವೃತ್ತ ಶಿಕ್ಷಕರು, ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಇಬ್ಬರು ಸದಸ್ಯರು, ಯುವಕ ಸಂಘ ಅಥವಾ ಯುವತಿ ಸಂಘದ ಒಬ್ಬ ಪದಾಧಿಕಾರಿಗಳು ಹಾಗೂ ಹತ್ತನೇ ವರ್ಗದ ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ.

ಸೂಚನೆ: ನಾಮನಿರ್ದೇಶನಗೊಂಡ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕರ್ತವ್ಯಗಳು

1. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಎಲ್ಲಾ ಮಕ್ಕಳು ಪ್ರೌಢ ಶಿಕ್ಷಣಕ್ಕೆ ದಾಖಲಾಗುವಂತೆ ಕ್ರಮವಹಿಸುವುದು
2. ಈ ರೀತಿ ದಾಖಲಾದ ಎಲ್ಲಾ ಮಕ್ಕಳು ನಿಯಮಿತವಾಗಿ ಶಾಲೆಗೆ ಹಾಜರಾಗುವಂತೆ ಮಾಡುವುದು.
3. ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿ, ಪ್ರೌಢ ಶಿಕ್ಷಣಕ್ಕೆ ದಾಖಲಾಗುವ ಸಂದರ್ಭದಲ್ಲಿ ಬುನಾದಿ ಸಾಮರ್ಥ್ಯಗಳನ್ನು ಗಳಿಸಲು ಸೇತುಬಂಧ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸಲು ಎಲ್ಲಾ ರೀತಿಯ ಸಹಕಾರ ನೀಡುವುದು.
4. ಶಾಲೆಯಲ್ಲಿ ಓದುವ ಎಲ್ಲಾ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ಬೇಕಾದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.
5. ಶಾಲೆಯ ಆವರಣವನ್ನು ಹಾಗೂ ಕಟ್ಟಡವನ್ನು ಅತಿಕ್ರಮಣ ಹಾಗೂ ವಿನಾಶಗಳಿಂದ ಕಾಪಾಡುವುದು.
6. ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ 220 ಕಲಿಕಾ ದಿನಗಳು ಮತ್ತು ಪ್ರತಿ ದಿನ ಐದೂವರೆ ಗಂಟೆಗಳ ಕಾಲ ಶಾಲೆ ನಡೆಯುವುದನ್ನು ಖಾತರಿಪಡಿಸಿಕೊಳ್ಳುವುದು.
7. ಶಾಲೆಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೆ ಸರ್ಕಾರದಿಂದ ನಿಯಮಾನುಸಾರ ಸಿಗಬೇಕಾದ ಉತ್ತೇಜಕಗಳನ್ನು ಸಕಾಲಕ್ಕೆ ಒದಗಿಸಲು ಅಗತ್ಯಕ್ರಮವನ್ನು ವಹಿಸುವುದು (ಉದಾ:ಬೈಸಿಕಲ್/ಬಿಸಿಯೂಟ/ಸಮವಸ್ತ್ರ/ಪಠ್ಯಪುಸ್ತಕ/ನೋಟ್ ಬುಕ್/ವಿದ್ಯಾರ್ಥಿ ವೇತನಇತ್ಯಾದಿ).

Kiran Raghupathi

8. ಪ್ರೌಢಶಾಲೆಯಲಿ ಕಲಿಯುತ್ತಿರುವ ಮಕ್ಕಳಿಗೆ ಇಲಾಖೆಯಿಂದ ಏರ್ಪಡಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು (ವಿಜ್ಞಾನ ಮೇಳ, ಶೈಕ್ಷಣಿಕ ಪ್ರವಾಸ, ಪ್ರತಿಭಾ ಕಾರಂಜಿ, ಸಹಪಠ್ಯ ಚಟುವಟಿಕೆಗಳು, ಕ್ರೀಡಾ ಕೂಟಗಳು, ಶಾಲಾ ಸಂಸತ್ತು, ವಿಜ್ಞಾನ ಕ್ಲಬ್, ಇಕೋಕ್ಲಬ್, ಕಲಾ ಉತ್ಸವ, ಹದಿಹರೆಯದ ಶಿಕ್ಷಣ ಇತ್ಯಾದಿ).
9. ಶಾಲಾಭಿವೃದ್ಧಿಯೋಜನೆ ತಯಾರಿಸಿ ಅನುಷ್ಠಾನಗೊಳಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.
10. ವರ್ಷದಲ್ಲಿ ಮೂರು ಬಾರಿ ಅಂದರೆ ಜುಲೈ, ನವೆಂಬರ್ ಹಾಗೂ ಫೆಬ್ರವರಿ ತಿಂಗಳುಗಳಲ್ಲಿ ಪೋಷಕರ ಸಭೆಗಳನ್ನು ಆಯೋಜಿಸುವುದು.
11. ಶಾಲೆಗೆ ಮಂಜೂರಾದ ಅನುದಾನಗಳನ್ನು ನಿಯಮಾನುಸಾರ ಬಳಸಲು ಕಾಲಕಾಲಕ್ಕೆ ಅನುಮೋದನೆ ನೀಡಿ ಸಮರ್ಪಕವಾಗಿ ಬಳಕೆಯಾಗಿದೆಯೋ ಎಂಬುದನ್ನು ಖಾತರಿಪಡಿಸಿಕೊಳ್ಳುವುದು.
12. ಶಾಲಾ ಶಿಕ್ಷಣ ನಿಧಿ ಸ್ಥಾಪಿಸುವುದು. ಶಾಲಾ ಅಭಿವೃದ್ಧಿಗಾಗಿ ಎಸ್.ಡಿ.ಎಂ.ಸಿ.ಯು ಸಾರ್ವಜನಿಕರಿಂದ ವಂತಿಗೆಗಳನ್ನು ಸ್ವೀಕರಿಸಬಹುದು. ಸ್ವೀಕರಿಸಿದ ವಂತಿಕೆಗಳಿಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸುವುದು.
13. ಶಾಲೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳ ಮೇಲುಸ್ತುವಾರಿಯನ್ನು ನಿರ್ವಹಿಸುವುದು.
14. ದಾನಿಗಳನ್ನು ಗುರುತಿಸಿ ಅವರನ್ನು ಸಂಪರ್ಕಿಸಿ, ಶಾಲೆಯನ್ನು ದತ್ತು ತೆಗೆದುಕೊಳ್ಳಲು ಪ್ರೇರೇಪಿಸುವುದು.
15. ಎಸ್.ಡಿ.ಎಂ.ಸಿ.ಯು ಶಾಲೆಯಲ್ಲಿ ಸಾಮೂಹಿಕವಾಗಿ ಮತ್ತು ವಿಕೇಂದ್ರೀಕರಣ ತತ್ವದ ಅಡಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅಗತ್ಯವಿರುವ ಕಡೆ ವಿವಿಧ ಉಪಸಮಿತಿಗಳನ್ನು ರಚಿಸಿಕೊಳ್ಳಬಹುದು. ಉದಾ: ಅಭಿವೃದ್ಧಿ ಸಮಿತಿ, ಮೇಲುಸ್ತುವಾರಿ ಸಮಿತಿ, ಇತ್ಯಾದಿ.

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧಿಕಾರಗಳು

1. ಶಾಲೆಯು ಸರಿಯಾಗಿ ಕೆಲಸ ಮಾಡುವುದನ್ನು ಖಾತರಿಪಡಿಸಿಕೊಳ್ಳುವುದು.
2. ಶಾಲಾ ಸಿಬ್ಬಂದಿಯ ಸಕಾಲಿಕ ಹಾಗೂ ನಿಯಮಿತ ಹಾಜರಾತಿಯ ಮೇಲೆ ಗಮನವಿಡುವುದು.
3. ಸದಸ್ಯರು ಶಿಕ್ಷಕರ ಹಾಜರಾತಿ ವಹಿಯನ್ನು ಶಾಲೆಯಲ್ಲಿಯೇ ಪರಿವೀಕ್ಷಿಸಬಹುದು.
4. ಶಾಲಾ ಸಿಬ್ಬಂದಿಯ ಸಕಾಲಿಕ ಹಾಗೂ ನಿಯಮಿತ ಹಾಜರಾತಿಯಲಿ ಏನಾದರೂ ದೋಷಕಂಡುಬಂದರೆ, ಆ ಬಗ್ಗೆ ಮಾಸಿಕ ಸಭೆಯಲ್ಲಿ ಚರ್ಚಿಸಿ, ಗೊತ್ತುವಳಿ ಅಂಗೀಕರಿಸಿ ಸೂಕ್ತ ಕ್ರಮಕ್ಕೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದು (ಗೊತ್ತುವಳಿ ಸ್ವೀಕರಿಸಿದ 30 ದಿನಗಳೊಳಗೆ ಮೇಲಾಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಸದಸ್ಯ ಕಾರ್ಯದರ್ಶಿ ಎಸ್.ಡಿ.ಎಂ.ಸಿ.ಗೆ ತಿಳಿಸಬೇಕು).
5. ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಸಾಂದರ್ಭಿಕ ಹಾಗೂ ನಿರ್ಬಂಧಿತರಜೆಯನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷರು ಮಂಜೂರು ಮಾಡುವುದು.
6. ಒಂದು ವರ್ಷದಲ್ಲಿ ನಾಲ್ಕಕ್ಕೆ ಮೀರದಂತೆ ಸ್ಥಳೀಯ ರಜೆಗಳನ್ನು ನಿರ್ಧರಿಸುವುದು.
7. ನಿರುಪಯುಕ್ತ ವಿಜ್ಞಾನೋಪಕರಣಗಳು, ಕಲಿಕೆಯ ಸಾಧನಗಳು, ಪೀಠೋಪಕರಣಗಳು, ಆಟದ ಸಾಮಗ್ರಿಗಳು, ನಕಾಶೆಗಳು, ಚಾರ್ಟ್‌ಗಳು, ವಾಚನಾಲಯದ ಪುಸ್ತಕಗಳು, ಇತ್ಯಾದಿ ಸಾಮಗ್ರಿಗಳು ಸೇರಿ ಗರಿಷ್ಠ ಹತ್ತು ಸಾವಿರ ರೂಪಾಯಿಗಳ ಮಿತಿಯೊಳಗೆ ನಿರುಪಯುಕ್ತವೆಂದು ಘೋಷಿಸಬಹುದು. ಈ ರೀತಿ ಘೋಷಿಸಿದ ವಸ್ತುಗಳನ್ನು ಹರಾಜು ಮಾಡಿ ಬಂದ ಹಣವನ್ನು ಶಾಲೆಯ ಎಸ್.ಡಿ.ಎಂ.ಸಿ. ಖಾತೆಗೆ ಜಮಾ ಮಾಡುವುದು.
8. ಸಾಂಸ್ಕೃತಿಕ ಚಟುವಟಿಕೆಗಳು, ಆಟೋಟಗಳು, ರಾಜ್ಯದೊಳಗಿನ ಶೈಕ್ಷಣಿಕ ಪ್ರವಾಸಗಳು, ಸಂದರ್ಶನಗಳು ಇತ್ಯಾದಿಗಳನ್ನು ಸಂಘಟಿಸಲು ಅನುಮತಿ ನೀಡುವುದು.
9. ಶಾಲೆಯು ದಾನವಾಗಿ ಸ್ವೀಕರಿಸಿದ ಹಾಗೂ ಖರ್ಚು ಮಾಡಿದ ಹಣದ ಲೆಕ್ಕಪತ್ರಗಳನ್ನು ಹಾಗೂ ತತ್ಸಂಬಂಧಿಯಾದ ದಾಖಲೆಗಳನ್ನು ಪರಿಶೀಲಿಸುವುದು.
10. ವಾಚನಾಲಯ ನಿಧಿ, ಕ್ರೀಡಾ ನಿಧಿ, ಪ್ರಯೋಗಾಲಯ ನಿಧಿ ಇತ್ಯಾದಿ ಸರ್ಕಾರೇತರ ನಿಧಿಗಳ ಬಳಕೆಗೆ ಅನುಮೋದನೆಯನ್ನು ನಿಯಮಾನುಸಾರ ನೀಡುವುದು.
11. ಶಾಲೆಯ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಅಗತ್ಯವಿದ್ದಷ್ಟು ಮಧ್ಯಾಹ್ನದ ಬಿಸಿಯೂಟಕ್ಕೆ ಬಳಸಿ, ಹೆಚ್ಚುವರಿಇದ್ದಲ್ಲಿ ಹರಾಜು ಮಾಡಿ ಶಾಲೆಯ ಎಸ್.ಡಿ.ಎಂ.ಸಿ. ಖಾತೆಗೆ ಜಮಾ ಮಾಡುವುದು.
12. ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ರಾಜ್ಯ ಮತ್ತು ಕೇಂದ್ರ ವಲಯದಿಂದ ಬಿಡುಗಡೆಯಾಗುವ ಹಣದಲ್ಲಿ ಶಾಲೆಗೆ ಬೇಕಾಗುವ ಸಾಧನ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಸಂಬಂಧಿಸಿದ ಮುಖ್ಯ ಶಿಕ್ಷಕರಿಗೆ ಅನುಮೋದನೆ ನೀಡುವುದು.

Kiran Raghupathi

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಭೆಗಳು / ವಿಧಿ–ವಿಧಾನಗಳು:**

1. ಕನಿಷ್ಠ ತಿಂಗಳಿಗೊಮ್ಮೆ ಎಸ್.ಡಿ.ಎಂ.ಸಿ. ಸಭೆಯನ್ನು ನಡೆಸಬೇಕು.
2. ಈ ಸಭೆಯನ್ನು ಕರೆಯಲು ಅಧ್ಯಕ್ಷರನ್ನು ಸಂಪರ್ಕಿಸಿ ಅವರ ಸೂಚನೆಯಂತೆ ಸಭೆಯನ್ನು ಕರೆಯುವುದು.
3. ಸಭೆಯ ಸೂಚನಾ ಪತ್ರವನ್ನು ಅಜೆಂಡಾದೊಂದಿಗೆ ಕನಿಷ್ಠ ಮೂರು ದಿನಗಳು ಮುಂಚಿತವಾಗಿ ಎಲ್ಲಾ ಸದಸ್ಯರಿಗೂ ಕಳುಹಿಸತಕ್ಕದ್ದು (ತುರ್ತು ವಿಷಯವಿದ್ದಲ್ಲಿ ಒಂದು ದಿನ ಮುಂಚಿತವಾಗಿ ಸಭಾ ಸೂಚನೆ ನೀಡಿ ಎಸ್.ಡಿ.ಎಂ.ಸಿ. ತುರ್ತು ಸಭೆಯನ್ನು ಕರೆಯಬಹುದು).
4. ಸಭೆ ನಡೆಸಲು ಸದಸ್ಯರ ಕನಿಷ್ಠ ಹಾಜರಾತಿ ಇರಬೇಕು (ತಂದೆ ತಾಯಿಯವರ ಪರಿಷತ್ತಿನಿಂದ ಆರಿಸಲ್ಪಟ್ಟ ಒಂಬತ್ತು ಜನರಲ್ಲಿ ಕನಿಷ್ಠ ಐದು ಜನ ಮತ್ತು ಪದನಿಮಿತ್ತ ಮತ್ತು ನಾಮನಿರ್ದೇಶಿತ ಸದಸ್ಯರ ಪೈಕಿ ತಲಾ ಒಬ್ಬ ಸದಸ್ಯರಾದರೂ ಹಾಜರಾಗಿರಬೇಕು).

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಭೆ ನಡೆಸುವ ವಿಧಾನ:**

1. ಸಭೆಗೆ ಎಸ್.ಡಿ.ಎಂ.ಸಿ.ಯ ಅಧ್ಯಕ್ಷರು ಗೈರು ಹಾಜರಾಗಿದ್ದಲ್ಲಿ ಸಭೆಯು ತೀರ್ಮಾನಿಸುವ ಎಸ್.ಡಿ.ಎಂ.ಸಿ.ಯ ಸದಸ್ಯರೊಬ್ಬರು ಆ ಸಭೆಯ ಅಧ್ಯಕ್ಷರಾಗುವರು.
2. ಹಿಂದಿನ ಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು.
3. ಸಭೆಯ ಕಾರ್ಯಸೂಚಿಯಲ್ಲಿರುವ ವಿಷಯಗಳನ್ನು ಪ್ರಸ್ತಾಪಿಸಿ, ಚರ್ಚಿಸಿ ಸೂಕ್ತವಾದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.
4. ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ ಮತ್ತು ಕಾಲಮಿತಿಯನ್ನು ನಿಗದಿಗೊಳಿಸಬೇಕು.
5. ಸಭೆಯ ನಡಾವಳಿಯನ್ನು ಎಸ್.ಡಿ.ಎಂ.ಸಿ. ಸಭಾ ನಡಾವಳಿಯ ಪುಸ್ತಕದಲ್ಲಿ ದಾಖಲಿಸಿ ಎಲ್ಲರ ಸಹಿಯನ್ನು ಪಡೆಯುವುದು.
6. ಸಭಾ ನಡಾವಳಿಯನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಶಾಲಾ ನಾಮಫಲಕದಲ್ಲಿ ಪ್ರಕಟಿಸುವುದು.
7. ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಜಾರಿಗೊಳಿಸಲು ಕ್ರಮವಹಿಸಿ, ಮುಂದಿನ ಸಭೆಯಲ್ಲಿ ಅನುಪಾಲನಾ ವರದಿಯನ್ನು ಮಂಡಿಸಬೇಕು.

***ಸಭೆಯ ದಿನಾಂಕ, ಸ್ಥಳ, ಸಮಯ ನಿಗದಿಪಡಿಸುವಾಗ ಕನಿಷ್ಠಪಕ್ಷ ಅಧ್ಯಕ್ಷ/ಉಪಾಧ್ಯಕ್ಷರೊಂದಿಗೆ ಸಮಾಲೋಚಿಸಿ ನಿರ್ಧರಿಸುವುದು. ಪ್ರತೀ ಬಾರಿ ಶಾಲೆಯಲ್ಲಿಯೇ ಸಭೆಯನ್ನು ಆಯೋಜಿಸುವುದಕ್ಕಿಂತ ಸಮುದಾಯದಲ್ಲಿನ ಚಾವಡಿ, ಸಮುದಾಯ ಭವನ ಇತರೆ ಸ್ಥಳಗಳಲ್ಲಿ ಮಾಡುವುದು ಸೂಕ್ತ. ಪ್ರತೀ ಸಭೆಯಲ್ಲಿ ಮುಂದಿನ ಸಭೆಯ ರೂಪುರೇಷೆಗಳನ್ನು ನಿರ್ಧರಿಸುವುದು ಸೂಕ್ತ. ಕ್ರಮೇಣವಾಗಿ ಪ್ರತೀ ತಿಂಗಳು ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ಸಮುದಾಯದ ಎಲ್ಲಾ ಸದಸ್ಯರಿಗೆ ಅನುಕೂಲವಾಗುವ ಒಂದು ನಿಗದಿತ ದಿನವನ್ನು ನಿಗದಿಪಡಿಸಿಕೊಳ್ಳಬಹುದು. ಈ ರೀತಿ ಮಾಡುವಾಗ ಅದು ಸಾರ್ವಜನಿಕ ರಜೆ, ಶಾಲಾ ಸಮಯ ಮೀರಿಯೂ ಇರಬಹುದು.***





Kiran Raghupathi

## ಉಪಸಂಹಾರ

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯು ಗುರಿಯ ದೃಷ್ಟಿಯಿಂದಾಗಲಿ ಅಥವಾ ತಲುಪಬೇಕಾದ ಜನ ಸಮುದಾಯದ ದೃಷ್ಟಿಯಿಂದಾಗಲಿ ಸ್ಪಷ್ಟತೆಯಿಂದ ಕೂಡಿದ್ದು, ಅನುಷ್ಠಾನ ಪ್ರಕ್ರಿಯೆ ಅದೇ ಮಾರ್ಗದಲ್ಲಿ ಸಾಗಿದಾಗ ಮಾತ್ರ, ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆ ಅರ್ಥಪೂರ್ಣವಾಗಬಲ್ಲದು. ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಮೊದಲ ಬಾರಿಗೆ ರಾಜಕೀಯ ಇಚ್ಛಾಶಕ್ತಿಯನ್ನು ನೀತಿ ನಿರೂಪಣೆಯಲ್ಲಿ ಪ್ರಕಟಿಸಿದ್ದು, ಈ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ನಿರಂತರವಾಗಿ ಶಿಕ್ಷಣದಿಂದ ವಂಚಿತರಾಗಿರುವ ಜನ ಸಮುದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಒಂದು ವಿಶಿಷ್ಟ ಯೋಜನೆಯಾಗಬೇಕು.

ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಯೋಜನೆಯ ಜಾರಿಯ ಫಲವಾಗಿ ನಮ್ಮ ಸರ್ಕಾರಿ ಶಾಲೆಗಳು ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಅದರ್ಶ ಶಾಲೆಗಳಾಗಬೇಕು. ಗುಣಮಟ್ಟದ ಶಿಕ್ಷಣ ಈ ಮಕ್ಕಳಿಗೂ ಎಟುಕುವಂತಾಗಬೇಕು.ಇದೆಲ್ಲವೂ ಸಾಧ್ಯವಾಗಬೇಕಾದರೆ ಸರ್ಕಾರಿ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಮ್ಮ ಶಿಕ್ಷಕ ಸಮುದಾಯ ಸಮರ್ಪಣ ಮನೋಭಾವವನ್ನು ಬೆಳಸಿಕೊಳ್ಳಬೇಕು. ಎಲ್ಲಕ್ಕಿಂತ ಮಿಗಿಲಾಗಿ ಬದ್ಧತೆ, ಹೊಣೆಗಾರಿಕೆ ಮತ್ತು ಶಾಲಾ ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮೊದಲಾಗಬೇಕು. ಶಿಕ್ಷಣ ವಂಚಿತ ಮತ್ತು ತುಳಿತಕ್ಕೊಳಗಾದ ಮಕ್ಕಳ ಬದುಕಿನಲ್ಲಿ ಹೊಸ ಭರವಸೆಯನ್ನು ಮೂಡಿಸಬೇಕು. ಇದು ಸರಳವಾದ ಕೆಲಸವಲ್ಲ; ಆದರೆ ಅಸಾಧ್ಯವೂ ಅಲ್ಲ.

ಜನಪ್ರತಿನಿಧಿಗಳ ಸಮುದಾಯದ ಸಹಭಾಗಿತ್ವದಿಂದ ಮಾತ್ರ ಶಾಲಾ ಶಿಕ್ಷಣದ ಸಾರ್ವತ್ರೀಕರಣದ ಯಶಸ್ವಿಯಾಗಲು ಸಾಧ್ಯ. ಈ ಕಾರಣದಿಂದಲೇ ಸಮುದಾಯದ ಭಾಗವಹಿಸುವಿಕೆಯು ಸರ್ವಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಅಭಿಯಾನದ ಕೇಂದ್ರ ಬಿಂದುವಾಗಿದೆ. ಎಲ್ಲಿ ಇಂತಹ ಪ್ರಯತ್ನಗಳು ಬಲಿಷ್ಟವಾಗಿವೆಯೋ ಅಲ್ಲಿ ನಮ್ಮ ಕಣ್ಣಿಗೆ ಕಾಣಬಹುದಾದ ಯಶಸ್ವಿ ಫಲಿತಾಂಶವನ್ನು ಕಂಡಿದ್ದೇವೆ. ಇದು ನಮ್ಮಲ್ಲಿಯೂ ಸಾಧ್ಯವಾಗಬಹುದಾದರೆ ನಾವೆಲ್ಲರೂ ಮಕ್ಕಳ ಹಿತದೃಷ್ಟಿಯಿಂದ ಒಂದಾಗಲೇಬೇಕು. ಇದು ಇಂದಿನ ಅನಿವಾರ್ಯ ಮತ್ತು ಅತ್ಯಂತ ಅಗತ್ಯವಾದ ಕೆಲಸವಾಗಿದೆ.

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಯಶಸ್ವಿಯಾಗಿ ಈಡೇರಬೇಕಾದರೆ ರಾಷ್ಟ್ರೀಯ ಮಟ್ಟದಲ್ಲಿ ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಯೋಜನೆಯ ಮೂಲಕ ಅಭಿವ್ಯಕ್ತಗೊಂಡಿರುವ ರಾಜಕೀಯ ಇಚ್ಛಾಶಕ್ತಿ ಕೆಳಸ್ತರ ಸ್ತರಗಳವರೆಗೆ ಹರಿದು ನಿಜವಾದ ಅರ್ಥದಲ್ಲಿ ಸಾಕಾರಗೊಳ್ಳಬೇಕಾಗಿದೆ. ಇದಕ್ಕಾಗಿ ರಾಜ್ಯದ ಮುಖ್ಯಮಂತ್ರಿಯವರನ್ನು ಒಳಗೊಂಡಂತೆ ಉಳಿದೆಲ್ಲಾ ಮಂತ್ರಿಮಹೋದಯರು, ಸಂಸದರು, ಶಾಸಕರು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಚುನಾಯಿತ ಪ್ರತಿನಿಧಿಗಳು ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಗೆ ಅಗತ್ಯವಾದ ರಾಜಕೀಯ ಇಚ್ಛಾಶಕ್ತಿಯನ್ನು ಪ್ರಕಟಿಸುವುದರ ಮೂಲಕ ಪೂರಕವಾಗಿ ಕೆಲಸ ನಿರ್ವಹಿಸಿದಾಗ ಎಲ್ಲಾ ಅಡ್ಡಿ ಆತಂಕಗಳನ್ನು ಮೀರಿ ನಿಲ್ಲಬಹುದು.

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಬೇಡಿಕೆ ಸಾಕಾರಗೊಳ್ಳಬೇಕಾದರೆ ಸಮುದಾಯ ಅದರಲ್ಲೂ ವಿಶೇಷವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಿ ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾಗಬೇಕು. ಶಾಲಾ ಅಭಿವೃದ್ಧಿಯ ವಿವಿಧ ಹಂತಗಳಾದ ಯೋಜನೆ, ಸಂಪನ್ಮೂಲ ಕ್ರೋಢೀಕರಣ, ಅನುಷ್ಠಾನ, ಅನುಪಾಲನೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಸಮುದಾಯ ಸಕ್ರಿಯವಾಗಿ ಭಾಗವಹಿಸುವಂತಾಗಬೇಕು.

ಸಮುದಾಯದ ಭಾಗವಹಿಸುವಿಕೆ ಸಾಧ್ಯವಾಗಬೇಕಾದರೆ ಶಾಲಾ ಹಂತದಲ್ಲಿ ಪ್ರಜಾತಾಂತ್ರಿಕ ಸಾಂಸ್ಥಿಕ ಚೌಕಟ್ಟು ಅಸ್ತಿತ್ವದಲ್ಲಿರಬೇಕು. ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಕೇವಲ ಹೆಸರಿಗೆ ಮಾತ್ರ ಸೀಮಿತಗೊಳಿಸದೇ ಪ್ರಾಮಾಣಿಕವಾಗಿ ಪಾಲ್ಗೊಳ್ಳುವ ವಾತಾವರಣವನ್ನು ಸೃಷ್ಟಿಸಬೇಕು.

ಅಧ್ಯಯನಗಳ ಪ್ರಕಾರ ಮಾಹಿತಿಯು ಸಮರ್ಪಕವಾಗಿ ಸಮುದಾಯಕ್ಕೆ ತಲುಪದಿರುವುದು ಸಮುದಾಯದ ಪಾಲ್ಗೊಳ್ಳುವಿಕೆಗೆ ಒಂದು ಹಿನ್ನಡೆಯಾಗಿದೆ. ಜನರ ಸಬಲೀಕರಣದ ಪ್ರಮುಖ ಅಸ್ತ್ರವಾಗಿರುವ ಮಾಹಿತಿ ಜನಸಮುದಾಯವನ್ನು ತಲುಪದ ಹೊರತು ಜನರು ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ನಿರೀಕ್ಷಿಸುವುದು ತಪ್ಪಾಗುತ್ತದೆ. ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಅಂಶವೆಂದರೆ, ಶಾಲಾ ಶಿಕ್ಷಣದ ಸಾರ್ವತ್ರೀಕರಣ ಭಾಗವಾಗಿರುವ ಒಂದು ವರ್ಗವು ಸಮುದಾಯಕ್ಕೆ ಅಗತ್ಯ ಮಾಹಿತಿಯನ್ನು ನೀಡಲು ಹಿಂಜರಿಯುತ್ತಿದ್ದು, ಕೇವಲ ಮೇಲಿನ ಒತ್ತಾಯಗಳಿಗೆ ಮಣಿದು ಮಾಹಿತಿ ನೀಡಲು ಮುಂದಾದರೂ ಅಪೂರ್ಣ ಮಾಹಿತಿಯನ್ನು ನೀಡುತ್ತಿರುವುದು ಹಲವಾರು ಮೂಲಗಳಿಂದ ದೃಢಪಟ್ಟಿದೆ. ಇದಕ್ಕೆ ರಾಜಕೀಯ ಕಾರಣವೂ ಉಂಟು. ಆದ್ದರಿಂದ ಮಾಹಿತಿ ಅದರಲ್ಲೂ ಸರಿಯಾದ ಮಾಹಿತಿ ಒದಗಿಸುವುದು ನಮ್ಮ ಆದ್ಯ ಕರ್ತವ್ಯವಾಗಬೇಕು.

Kiran Raghupathi

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿರುವ ಎಲ್ಲಾ ಸದಸ್ಯರಿಗೆ ಪರಿಣಾಮಕಾರಿಯಾದ ತರಬೇತಿ ಸಿಗುವಂತಾಗಬೇಕು. ಸಾಮರ್ಥ್ಯಾಭಿವೃದ್ಧಿಯಿಂದ ಮಾತ್ರ ಸಬಲೀಕರಣ ಸಾಧ್ಯವೆಂಬುದು ನಾವು ನಮ್ಮ ಅನುಭವದಿಂದ ಕಂಡುಕೊಂಡ ಸತ್ಯ. ಆದರೆ ನಮ್ಮ ಈಗಿನ ತರಬೇತಿಗಳು ತೋರಿಕೆಗಾಗಿದ್ದು ನಿಜವಾದ ಅರ್ಥದಲ್ಲಿ ಅವು ನಿಷ್ಪ್ರಯೋಜಕವಾಗಿವೆ. ಜೊತೆಗೆ ಬಹುತೇಕ ತರಬೇತಿಗಳು ಶೈಕ್ಷಣಿಕವರ್ಷದ ಆರಂಭದಲ್ಲಿ ಸಿಗದೆ ವರ್ಷದ ಕೊನೆಯಲ್ಲಿ ಹಣವನ್ನು ಖರ್ಚುಮಾಡಿದ್ದಕ್ಕಾಗಿ ರಶೀದಿಗಳನ್ನು ನೀಡುವ ತರಾತುರಿಯ ತರಬೇತಿಯಾಗಿವೆ. ಈ ವಿಚಾರದಲ್ಲಿ ಮೇಲಿನ ಮಾತುಗಳು ಕಹಿ ಎನಿಸಿದರೂ ಪ್ರಾಮಾಣಿಕವಾಗಿ ಚಿಂತಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ತರಬೇತಿಗಳು ತರಬೇತಿದಾರರು ಮತ್ತು ಶಿಬಿರಾರ್ಥಿಗಳನ್ನು ಸಬಲೀಕರಿಸುವುದರ ಮೂಲಕ ಕೆಳಹಂತದಲ್ಲಿ ಶಿಕ್ಷಣದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಣಿಗೊಳಿಸಬೇಕಾಗಿದೆ.

ಸಮುದಾಯ ಅದರಲ್ಲೂ ವಿಶೇಷವಾಗಿ ಬಡಮಕ್ಕಳ ತಂದೆ ತಾಯಂದಿರ ಬಗ್ಗೆ ನಮಗಿರುವ ಮನೋಧೋರಣೆ ಬದಲಾಗಬೇಕಾಗಿದೆ.ನೀತಿಯ ಭಾಗವಾಗಿ ಮತ್ತು ಕಾನೂನುಬದ್ಧವಾಗಿ ಸಮುದಾಯದ ಭಾಗವಹಿಸುವಿಕೆಗೆ ರಾಜ್ಯದಲ್ಲಿ ನಿರ್ದಿಷ್ಟ ನೀತಿ ಜಾರಿಯಲ್ಲಿದ್ದರೂ ಅದನ್ನು ಜಾರಿಗೊಳಿಸಬೇಕಾದ ಅಧಿಕಾರಿವರ್ಗ, ಕೆಳ ಹಂತದ ಸಿಬ್ಬಂದಿ ಸಮುದಾಯದ ಬಗ್ಗೆ ತಾತ್ಸಾರ ಮತ್ತು ಇವರೇನು ಮಾಡಬಲ್ಲರೆಂಬ ಧೋರಣೆಯನ್ನು ಹೊಂದಿದ್ದಾರೆ. ಈ ಧೋರಣೆ ಬದಲಾಗಲೇ ಬೇಕು. ಸಮುದಾಯದಲ್ಲಿ ನಮ್ಮ ನಂಬಿಕೆ ಬಲಗೊಳ್ಳಬೇಕು.ಅವರನ್ನು ಗಣನೆಗೆ ತೆಗೆದುಕೊಂಡು ನಮ್ಮೊಂದಿಗೆ ಕರದೊಯ್ಯುವ ಸಂಕಲ್ಪ ನಮ್ಮದಾಗಬೇಕು.ನಮ್ಮ ಅನುಭವದಲ್ಲಿ ಒಂದು ಮಾತಂತೂ ಸತ್ಯ. ಒಮ್ಮೆ ಸಮುದಾಯ ಮತ್ತು ಶಿಕ್ಷಕರಿಗೆ ಪರಿಸ್ಪರ ನಂಬಿಕೆ ಮತ್ತು ಗೌರವ ಬೆಳೆದು, ಸಮುದಾಯ ಶಾಲಾ ಶಿಕ್ಷಕರ ಬೆನ್ನೆಲುಬಾಗಿ ನಿಂತರೆ ಶಿಕ್ಷಕರು ಸಮುದಾಯದ ಹಿತಚಿಂತಕರಾಗಿ, ಮಾರ್ಗದರ್ಶಿಗಳಾಗಿ ಮತ್ತು ಅಭಿವೃದ್ಧಿಯ ರೂವಾರಿಗಳಾಗಿ ನಿಲ್ಲುವರೆಂದರೆ ಅತಿಶಯೋಕ್ತಿಯಲ್ಲ. ಇದಕ್ಕೆ ಹಲವು ನಿದರ್ಶನಗಳಿವೆ. ಆದ್ದರಿಂದ ಇರುವ ಪರಿಸ್ಥಿತಿಯನ್ನು ಮತ್ತಷ್ಟು ಸುಧಾರಿಸುವ ಕೆಲಸವಾಗಬೇಕೇ ಹೊರತು ಎಲ್ಲರೂ ವಿದ್ಯಾವಂತರಾಗಿರುವ, ಹಣವಂತರಾಗಿರುವ ಮತ್ತು ನಯ-ನಾಜೂಕಿನ ಸಮುದಾಯಕ್ಕಾಗಿ ಪರಿತಪಿಸುತ್ತಾ ಕೂರುವುದು ಸರಿಯಲ್ಲ.

ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ದೃಷ್ಟಿಯಿಂದ ನಮ್ಮ ಸಮುದಾಯವೆಂದರೆ ಅವಿದ್ಯಾವಂತ, ಅರೆವಿದ್ಯಾವಂತ, ಕಡುಬಡವ, ಕೂಲಿಕಾರರ ಸಮುದಾಯ. ಅವರಜೊತೆ ನಾವು ಹೊಂದಿಕೊಳ್ಳಲೇಬೇಕು. ಅವರನ್ನು ನಮ್ಮೊಂದಿಗೆ ಕೊಂಡೊಯ್ಯಲೇಬೇಕು. ಇಲ್ಲಿ ಯಾವುದೇ ಪರ್ಯಾಯವಿಲ್ಲ. ಪರ್ಯಾಯದ ಬಗ್ಗೆ ಚಿಂತಿಸಲೂ ಬಾರದು.

ಕೊನೆಯದಾಗಿ, ಪ್ರತಿಯೊಂದು ಚಟುವಟಿಕೆಯಲ್ಲಿ ಬದ್ಧತೆ, ಪಾರದರ್ಶಕತೆ ಮತ್ತು ಜವಾಬ್ದಾರಿ ಶಿಕ್ಷಕ ವೃತ್ತಿಯ ಸಂಸ್ಕೃತಿಯಾಗಬೇಕು; ಶಿಕ್ಷಣ ಕ್ಷೇತ್ರ ಇದಕ್ಕೆ ಹೊರತಲ್ಲ. ನಮ್ಮ ಶಿಕ್ಷಕರು ಪರಿಣಾಮಕಾರಿಯಾಗಿ ಮತ್ತು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವುದರ ಮೂಲಕ ನಿರ್ದಿಷ್ಟ ಫಲಿತಾಂಶಗಳನ್ನು ಕಂಡುಕೊಳ್ಳಬೇಕು.ಇದಕ್ಕಾಗಿ ಬಾಹ್ಯ ಒತ್ತಡ ಅನಿವಾರ್ಯವಾಗಬಾರದು. ನಮ್ಮ ಸಮುದಾಯ ನಮಗೆ ಬೆಂಬಲವಾಗಿ ನಿಲ್ಲುವಂತಾಗಬೇಕು.

ಸ್ವ-ಯೋಜನೆ, ಸ್ವ-ಅನುಷ್ಠಾನ, ಸ್ವ-ಅನುಪಾಲನೆ, ಸ್ವ-ಮೌಲ್ಯಾಂಕನ ಮತ್ತು ಸ್ವ-ಕಲಿಕೆ ನಮ್ಮ ಕಾಯಕದ ಮೂಲ ಮಂತ್ರವಾಗಬೇಕು. ಈ ಎಲ್ಲಾ ಹಂತಗಳಲ್ಲಿ ಸಮುದಾಯದ ಸಕ್ರಿಯ ಭಾಗವಹಿಸುವಿಕೆ ಮತ್ತು ಬೆಂಬಲ ಪ್ರತಿ ನಿತ್ಯದ ಆಧಾರದ ಮೇಲೆ ಸಿಗುವಂತಾಗಬೇಕು.ಈ ಎಲ್ಲಾ ವಿಚಾರಗಳಲ್ಲಿ ಶಿಕ್ಷಕರು ಮಾದರಿಯಾದಾಗ ಸಮುದಾಯದ ಭಾಗವಹಿಸುವಿಕೆ ರಚನಾತ್ಮಕವಾಗಿರುತ್ತದೆ. ತನ್ಮೂಲಕ ಸಮುದಾಯದ ಪಾಲ್ಗೊಳ್ಳುವಿಕೆ ಶಾಲಾ ಶಿಕ್ಷಣ ಸಾರ್ವತ್ರೀಕರಣವೆಂಬ ಒಂಟಿ ಚಕ್ರದ ಗಾಡಿಗೆ ಮತ್ತೊಂದು ಚಕ್ರವಾಗುತ್ತದೆ. ಗಾಡಿಯು ಮುಂದೆ ಸಾಗುತ್ತದೆ.ಮಕ್ಕಳ ಹಿತದೃಷ್ಟಿಯಿಂದ ಗಾಡಿ ಮುಂದೆ ಸಾಗಲೇಬೇಕು.

ಮುಗಿಸುವ ಮುನ್ನ ಅಂಬೇಡ್ಕರ್‌ರವರ ಒಂದು ಮಾತು ಪ್ರಸ್ತುತ್ತವೆನಿಸುತ್ತದೆ. ***ದೇಶಕಟ್ಟುವ ಕೆಲಸ ನಡೆಯುವುದು ಸಣ್ಣಮನಸ್ಸಿನ ದೊಡ್ಡಜನರಿಂದಲ್ಲ; ದೊಡ್ಡ ಮನಸ್ಸಿನ ಸಣ್ಣ ಜನರಿಂದ.*** ನಾವು ದೊಡ್ಡ ಮನಸ್ಸಿನ ಸಣ್ಣ ಜನರಾಗಿ ಸುಭದ್ರ ಶಿಕ್ಷಣ ವ್ಯವಸ್ಥೆ ಕಟ್ಟೋಣ, ಮುಗ್ಧ ಮಕ್ಕಳಿಗೆ ನ್ಯಾಯ ಒದಗಿಸೋಣ...

Kiran Raghupathi

# ಅಧ್ಯಾಯ–3

## ಶಾಲಾ ಅಭಿವೃದ್ಧಿ ಯೋಜನೆ

**ಉದ್ದೇಶಗಳು**

**ಈ ಅಧ್ಯಾಯದ ನಂತರ ಸದಸ್ಯರು;**

- ಶಾಲಾಭಿವೃದ್ಧಿ ಯೋಜನೆ (SDP)ಯನ್ನು ವಿವರಿಸುವರು.
- ಶಾಲಾಭಿವೃದ್ಧಿ ಯೋಜನೆ ಪ್ರಕ್ರಿಯೆಯನ್ನು ಅರ್ಥೈಸಿಕೊಳ್ಳುವರು.
- ಮಕ್ಕಳ ಕಲಿಕೆ ಹಾಗೂ ಪೋಷಕರ ನಿರೀಕ್ಷೆಗಳನ್ನು ವಿವರಿಸುವರು.
- ಶಾಲಾ ಹಂತದಲ್ಲಿನ ಶಾಲಾಭಿವೃದ್ಧಿ ಯೋಜನೆ ಪ್ರಕ್ರಿಯೆಯನ್ನು ಅವಲೋಕಿಸುವರು.
- ಶಾಲಾ ಹಂತದ ಸಮಸ್ಯೆಗಳನ್ನು ನಿವಾರಿಸಲು ಅಗತ್ಯ ಪರಿಹಾರೋಪಾಯಗಳನ್ನು ಮನಗಾಣುವರು.
- ಶಾಲಾಹಂತದಲ್ಲಿನ ಶಾಲಾಭಿವೃದ್ಧಿ ಯೋಜನೆಯಲ್ಲಿ ಶೂನ್ಯ ಬಜೆಟ್ ಚಟುವಟಿಕೆಗಳ ಮಹತ್ವವನ್ನು ಅರ್ಥೈಸುವರು.

ಮಕ್ಕಳ ಕಲಿಕೆಯನ್ನು ನಿರ್ವಹಿಸುವಲ್ಲಿ ಶಾಲೆ ಅತ್ಯಂತ ಮಹತ್ವಪೂರ್ಣವಾದ ಸ್ಥಳ. ಈ ಕಲಿಕೆಯನ್ನು ಹಲವಾರು ಅಂಶಗಳು ಪ್ರಭಾವಿಸುತ್ತವೆ. ಸ್ಥಳೀಯ ಸನ್ನಿವೇಶ, ಕಲಿಕೋಪಕರಣಗಳು, ಮಕ್ಕಳ ಮನೋಸಾಮಾಜಿಕ ಅಂಶಗಳು ಮತ್ತು ಪೋಷಕರ ಪ್ರಭಾವ. ಪ್ರಸ್ತಾಪಿತ ಅಂಶಗಳ ಬೆಂಬಲವಿಲ್ಲದಿದ್ದರೆ ಶಿಕ್ಷಕರು ಕಲಿಕಾ ಅನುಭವಗಳನ್ನು ಕಟ್ಟಿಕೊಡುವ ಸನ್ನಿವೇಶ ನಿರ್ಮಾಣ ಆಗದೇ ಇರಬಹುದು. ಆದುದರಿಂದ ಈ ಪ್ರಭಾವಿಸುವ ಅನುಭವಗಳನ್ನು ಒಳಗೊಂಡಂತೆ ಶಿಕ್ಷಕರ ಪ್ರಯತ್ನಗಳು ಹಾಗೂ ಪೋಷಕರ ನಿರೀಕ್ಷೆಗಳಿಗೂ ಪರಸ್ಪರ ಸಂಬಂಧವಿರಬೇಕು. ತರಗತಿ ಅನುಭವಗಳನ್ನು ಸಂಯೋಜಿಸುವಲ್ಲಿ ಶಾಲೆಯ ಅಗತ್ಯಗಳೇನು? ಈ ಅಗತ್ಯಗಳನ್ನು ಹೇಗೆ ಪೂರ್ಣಗೊಳಿಸಿಕೊಳ್ಳಬೇಕು? ಇದನ್ನು ಸಾಧಿಸುವಲ್ಲಿ ಪೋಷಕರ ಪಾತ್ರವೇನು? ಎಂಬುವು ಬಹಳ ಮಹತ್ವದ ಪ್ರಶ್ನೆಗಳಾಗುತ್ತವೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸಮುದಾಯ ಮತ್ತು ಎಸ್.ಡಿ.ಎಂ.ಸಿ. ಕೇವಲ ಸರ್ಕಾರವನ್ನು ಮಾತ್ರ ಅವಲಂಬಿಸದೆ ತನ್ನದೇ ಸಂಪನ್ಮೂಲವನ್ನು ಒಟ್ಟು ಮಾಡಬೇಕಾದ ಅವಶ್ಯಕತೆಯಿದೆ. ಈ ಕಾರ್ಯದಲ್ಲಿ ಭಾಗೀದಾರರಾಗಿ, ಪೋಷಕರಾಗಿ, ಪೋಷಕರ ಪ್ರತಿನಿಧಿಯಾಗಿ ಈ ಕೆಲವು ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿ.

1. ನೀವು, ನಿಮ್ಮ ಮಗು ಕಲಿಯುತ್ತಿರುವ ಶಾಲೆಯಲ್ಲಿ ಬಯಸುವ ಸೌಲಭ್ಯಗಳಾವುವು?
    - ಭೌತಿಕ (ಶಾಲಾ ಕಟ್ಟಡ) ಇತ್ಯಾದಿ
    - ಕಲಿಕೆ
    - ಶಿಕ್ಷಕರು
    - ಮೌಲ್ಯಮಾಪನ
    - ಇತರೆ ವಿಷಯಗಳು
2. ನೀವು ಶಾಲೆಯ ಬಗ್ಗೆ, ಶಾಲೆಯಲ್ಲಿನ ಚಟುವಟಿಕೆಗಳ ಬಗ್ಗೆ ಮಾಹಿತಿ ಹೇಗೆ ಪಡೆಯುವಿರಿ?
3. ನೀವು ನಿಮ್ಮ ಶಾಲೆಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ /ಪೂರೈಸಿದ ಸೌಲಭ್ಯಗಳಾವುವು?
4. ನೀವು ನಿಮ್ಮ ಶಾಲೆಯಲ್ಲಿ ಅತೀ ಅಗತ್ಯವಾಗಿ ಇರಬೇಕೆಂದು ಬಯಸುವ ಮೊದಲ ಮೂರು ಆದ್ಯತೆಗಳಾವವು?
5. ಈ ಅಂಶಗಳನ್ನು ಹೊಂದಲು/ನಿರ್ವಹಿಸಲು ನೀವು ಈ ಹಿಂದೆ ಮಾಡಿದ ಪ್ರಯತ್ನಗಳೇನು?
6. ಇಂತಹ ಪ್ರಯತ್ನಗಳು ಯಶಸ್ವಿಯಾಗಲು/ಯಶಸ್ವಿಯಾಗದಿರಲು ಕಾರಣವಾದ ಅಂಶಗಳಾವುವು?
7. ಶಾಲಾಭಿವೃದ್ಧಿ ಯೋಜನೆ ಎಂದರೇನು?
8. ಈಗ ಮತ್ತೊಮ್ಮೆ ನೀವು ಬಯಸಿರುವ ಸೌಲಭ್ಯಗಳನ್ನು ಹೊಂದಲು/ನಿರ್ವಹಿಸಲು ಅಡ್ಡಿಯಾದ ಕಾರಣಗಳನ್ನು ನಿವಾರಿಸಿಕೊಳ್ಳುವುದು ಹೇಗೆ?
9. ನೀವು ಬಯಸಿದಂತೆ ಶಾಲೆಯನ್ನು ರೂಪಿಸುವಲ್ಲಿ ನೀವು ಹೇಗೆ ಸಹಕರಿಸುವಿರಿ?
10. ನಿಮ್ಮ ದೃಷ್ಟಿಯಲ್ಲಿ ಮಕ್ಕಳ ಕಲಿಕೆಯನ್ನು ಉಂಟುಮಾಡಲು ಶಾಲೆಯು ಕೈಗೊಳ್ಳಬೇಕಾದ ಕ್ರಮಗಳಾವವು? ನಿಮ್ಮ ಶಾಲೆಯಲ್ಲಿ ಇವುಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಯಿತೆ?

Kiran Raghupathi


ಪ್ರಸ್ತುತ ನಿಮ್ಮ ಉತ್ತರಗಳನ್ನು ಗಮನಿಸಿ. ಅತ್ಯಂತ ಅಗತ್ಯವಾಗಿ ಇವುಗಳಿಗೆ ಸಂಬಂಧಿಸಿದಂತೆ ನೀವು ಹೇಗೆ ಸಹಕರಿಸಬಹುದು? ಆಲೋಚಿಸಿ ಮುನ್ನಡೆಯಿರಿ. ಮುಖ್ಯ ಶಿಕ್ಷಕರೊಂದಿಗೆ, ಇತರರೊಂದಿಗೆ ಕೈಜೋಡಿಸಿ. ಯಾವುದೇ ಶಾಲೆಯ ಅಭಿವೃದ್ಧಿ ಹಾಗೂ ಅಪೇಕ್ಷಿತ ಬದಲಾವಣೆಗಾಗಿ ಸ್ಥಳೀಯ ಸಮುದಾಯದ ಪಾಲ್ಗೊಳ್ಳುವಿಕೆ ಅತ್ಯಂತ ಅಗತ್ಯವಾಗಿದೆ. ಆದುದರಿಂದ ನಿಮ್ಮ ಪಾಲ್ಗೊಳ್ಳುವಿಕೆ ಶಾಲಾದೃಷ್ಟಿಯಿಂದ ಅತ್ಯಂತ ಮಹತ್ವ ಪಡೆದಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ ಹಾಗೂ ನಿಯಮಗಳಲ್ಲಿ ಶಾಲಾಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಜವಾಬ್ದಾರಿಯೆಂದು ಹೇಳಿದೆ.

ಹೀಗೆ ಶಾಲಾ ಪರಿಸರದ ಪೋಷಕ ಸಮುದಾಯವನ್ನು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯ ಪ್ರಮುಖ ಭಾಗವಾಗಿಸಿದ ಹೆಗ್ಗಳಿಕೆ ಶಾಲಾಭಿವೃದ್ಧಿ ಯೋಜನೆಗೆ ಇದೆ. 2012–13ನೇ ಸಾಲಿನಿಂದ ಇದು ಪ್ರತಿಯೊಂದು ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ಬಂದಿದೆ. ಇಂತಹ ಯೋಜನೆ ಏಕೆ ಬೇಕು? ಹೇಗಿರಬೇಕು? ಮುಂತಾದ ಅಂಶಗಳನ್ನು ಕುರಿತು ಕಳೆದ ಸಾಲುಗಳಲ್ಲಿ ಅನುಭವ ಪಡೆದಿದ್ದೇವೆ. ಪ್ರತಿಯೊಂದು ಶಾಲೆಯು ತನ್ನದೇ ಆದ ಶಾಲಾಭಿವೃದ್ಧಿ ಯೋಜನೆ (SDP)ಯನ್ನು ಹೊಂದಿದೆ.

ಪ್ರತಿಯೊಂದು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮೂರು ವರ್ಷಗಳ ದೂರದೃಷ್ಟಿಯುಳ್ಳ ಶಾಲಾಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಬೇಕು. ಈ ಶಾಲಾ ಅಭಿವೃದ್ಧಿ ಯೋಜನೆಯು, ಸಂದರ್ಭಾನುಸಾರ ಸಮುಚಿತ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ರಚಿಸಿದ ಯೋಜನೆಗಳು ಮತ್ತು ನೀಡಿದ ಅನುದಾನಗಳಿಗೆ ಅನುಗುಣವಾಗಿರಬೇಕು. ಶಾಲೆಯ ಅಗತ್ಯಕ್ಕನುಗುಣವಾಗಿ ಶಿಕ್ಷಣ ಹಕ್ಕು ಕಾಯಿದೆಯ ಅನುಸೂಚಿಯಲ್ಲಿ ನಮೂದಿಸಿರುವ ಮಾನಕಗಳು ಹಾಗೂ 'ಸಂಗಮ' ಪುಸ್ತಕದಲ್ಲಿ ಶಾಲಾ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಸೂಚಕಗಳಿಗೆ ಅನುಗುಣವಾಗಿ ಎಸ್‌ಡಿಎಂಸಿಯು ಶಾಲಾ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವುದು.

(ಎ) ಕಾಯಿದೆಯ ಅನುಸೂಚಿಯಲ್ಲಿರುವಂತೆ ಗುಣಮಟ್ಟದ ವಿಧಿಗಳು ಹಾಗೂ ಮಾನಕಗಳ ಆಧಾರದ ಮೇಲೆ ಪ್ರತ್ಯೇಕವಾಗಿ 1ರಿಂದ 5ನೇ ಮತ್ತು 6ರಿಂದ 8ನೇ ತರಗತಿವರೆಗೆ 3 ವರ್ಷಕ್ಕಾಗಿ ಲೆಕ್ಕ ಮಾಡಿದ ಹೆಚ್ಚುವರಿ ಉಪಾಧ್ಯಾಯರ ಅಗತ್ಯತೆ

1. 3 ವರ್ಷಕ್ಕಾಗಿ ಲೆಕ್ಕ ಮಾಡಿದ ಭೌತಿಕವಾಗಿ ಅಗತ್ಯ ಹೆಚ್ಚುವರಿ ಮೂಲಭೂತ ಸೌಕರ್ಯ
2. 3 ವರ್ಷಕ್ಕಾಗಿ ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಹಣಕಾಸು ಅಗತ್ಯವನ್ನುಒಳಗೊಂಡಿರಬೇಕು.




(ಬಿ) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಹಣಕಾಸುವರ್ಷದ ಕೊನೆಯ 3 ತಿಂಗಳ ಮೊದಲು ಶಾಲಾಅಭಿವೃದ್ಧಿ ಯೋಜನೆಯನ್ನುರಚಿಸಬೇಕು. ಈ ಯೋಜನೆಯು ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯಗಳನ್ನೂ ಒಳಗೊಂಡಿರಬೇಕು.

(ಸಿ) ಶಾಲಾ ಅಭಿವೃದ್ಧಿ ಯೋಜನೆಯು ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿರಬೇಕು. ಪಠ್ಯಕ್ರಮ ಮತ್ತು ಸಹ–ಪಠ್ಯಕ್ರಮ ಎರಡನ್ನೂ ಒಳಗೊಂಡಂತೆ ಮಕ್ಕಳ ನಿಯತಕಾಲಿಕ ಮಕ್ಕಳ ಕಾರ್ಯಪರಿಮಿತಿ ಪುನರ್‌ವಿಮರ್ಶೆಯನ್ನು ಒಳಗೊಂಡಂತೆ ಶಾಲೆಯ ಶೈಕ್ಷಣಿಕ ಬೆಳವಣಿಗೆ ಕಾರ್ಯ ಚಟುವಟಿಕೆಗಳನ್ನು ವಿವರಿಸಬೇಕು.

(ಡಿ) ಶಾಲಾ ಅಭಿವೃದ್ಧಿ ಯೋಜನೆಗೆ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಖ್ಯಸ್ಥ ಮತ್ತು ಕಾರ್ಯದರ್ಶಿ ಸಹಿ ಮಾಡಿರಬೇಕು. ಅದನ್ನು ಸ್ಥಳೀಯಪ್ರಾಧಿಕಾರದ ಮೂಲಕ ಬಿ.ಇ.ಓ.ಗೆ ಆರ್ಥಿಕವರ್ಷದ ಮುಂಚೆ ಸಲ್ಲಿಸಬೇಕು. ಶಾಲಾ ಅಭಿವೃದ್ಧಿ ಯೋಜನೆಯು ಗ್ರಾಮ ಪಂಚಾಯಿತಿ, ಕ್ಲಸ್ಟರ್, ಬ್ಲಾಕ್ ಹಂತದಲ್ಲಿ ಕ್ರೋಢೀಕೃತವಾಗಿರಬೇಕು ಮತ್ತು ಶಾಲೆಗಳಿಗೆ ಪ್ರತೀ ಶೈಕ್ಷಣಿಕ ಕ್ಷೇತ್ರದಲ್ಲಿ ಯೋಜನಾ ಸಂಪನ್ಮೂಲ ಹಂಚಿಕೆಗೆ ಆಧಾರವನ್ನು ರಚನೆ ಮಾಡಬೇಕು.ಮೂರು ವರ್ಷಕ್ಕೆ ತಯಾರಿಸಿದ ಶಾಲಾಭಿವೃದ್ಧಿ ಯೋಜನೆಯಲ್ಲಿ ವರ್ಷಕ್ಕೊಮ್ಮೆ ಪುನರಾವಲೋಕಿಸಬೇಕು.

Kiran Raghupathi

ಹಣಕಾಸು ವರ್ಷದ ಕೊನೆಯ ಮೂರು ತಿಂಗಳ ಮೊದಲು ಅಂದರೆ ಡಿಸೆಂಬರ್ ಅಂತ್ಯದೊಳಗೆ ಪೋಷಕರ, ಮಕ್ಕಳ, ಎಸ್.ಡಿ.ಎಂ.ಸಿ.ಸದಸ್ಯರ ಮತ್ತು ಎಲ್ಲಾ ಶಿಕ್ಷಕರನ್ನು ಒಳಗೊಂಡ ಸಭೆಯನ್ನು ಆಯೋಜಿಸಿ ಶಾಲೆಗೆ ಮುಂದಿನ ವರ್ಷಕ್ಕೆ ಅಗತ್ಯವಾಗಿ ಬೇಕಾಗುವ ವಸ್ತುಗಳು, ಸಲಕರಣೆ, ಸಂಪನ್ಮೂಲ ಇತ್ಯಾದಿ ಬೇಡಿಕೆಗಳನ್ನು ಪಟ್ಟಿಮಾಡುವುದು.




ಈ ಪಟ್ಟಿಯಲ್ಲಿರುವಂತಹವುಗಳನ್ನು ಆದ್ಯತೆಗೊಳಿಸಿ ಅವುಗಳಿಗೆ ತಗಲುವ ವೆಚ್ಚ, ಇಲಾಖೆಯಿಂದ ಲಭ್ಯವಾಗುವ ಸಂಪನ್ಮೂಲಗಳು, ಕೊರತೆ ಬೀಳುವ ಸಂಪನ್ಮೂಲಗಳನ್ನು ಲೆಕ್ಕಾಚಾರ ಮಾಡಿ ಕೊರತೆಯ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಅದನ್ನು ಸರಿದೂಗಿಸಿಕೊಳ್ಳುವುದು. ಈ ರೀತಿ ಅಂತಿಮಗೊಳಿಸುವಾಗ ಆಯಾ ಕಾರ್ಯಕ್ಕೆ ಅನುಗುಣವಾಗಿ ಜವಾಬ್ದಾರಿಗಳನ್ನು ನಿಗದಿ ಮಾಡುವುದು ಸೂಕ್ತ. ಇದು ಅಲ್ಪಾವಧಿ/ದೀರ್ಘಾವಧಿಯದ್ದಾಗಿರಬಹುದು.

**ಶಾಲಾಭಿವೃದ್ಧಿ ಯೋಜನೆ ಎಂದರೇನು?**

ಶಾಲಾ ಹಂತದಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಯೋಜನೆಗಳನ್ನು ತಯಾರಿಸಲಾಗುತ್ತಿದ್ದು, ಈ ಯೋಜನೆಗಳು ನಾವು ಕೈಗೊಂಡಿರುವ ಕಾರ್ಯಕ್ರಮಗಳಿಗೆ ದಿಕ್ಸೂಚಿಯಂತೆ ಕಾರ್ಯನಿರ್ವಹಿಸುತ್ತವೆ. ಅಪೇಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಗಾಗಿ ಹೆಚ್ಚಿನ ಒತ್ತು ನೀಡಲು ಶಾಲಾಭಿವೃದ್ಧಿ ಯೋಜನೆಯನ್ನು ರೂಪಿಸುವುದು ಅಗತ್ಯವಾಗಿದೆ. ಇದು ಶಾಲಾ ಹಂತದಲ್ಲಿ ಮಕ್ಕಳ ಶೈಕ್ಷಣಿಕ ಮತ್ತು ಶಾಲೆಯ ಸಮಗ್ರ ಅಭಿವೃದ್ಧಿಗಾಗಿ ಸಿದ್ಧಪಡಿಸುವ ಯೋಜನೆಯಾಗಿರುತ್ತದೆ.

**ಶೈಕ್ಷಣಿಕ ಗುರಿ ಸಾಧಿಸಲು, ಶಾಲೆಯಲ್ಲಿ ನಿರೀಕ್ಷಿತ ಬದಲಾವಣೆಗಾಗಿ ಕೈಗೊಳ್ಳುವ ವಿವಿಧ ಕಾರ್ಯತಂತ್ರಗಳನ್ನು ಯಾವಾಗ ಮತ್ತು ಹೇಗೆ ಮಾಡಬೇಕೆಂದು ಮಾರ್ಗದರ್ಶಿಸುವ ನಕ್ಷೆಯೇ ಶಾಲಾಭಿವೃದ್ಧಿ ಯೋಜನೆ.**

**ಡೆಮಿಂಗ್ ಚಕ್ರ**




**ಪ್ಲಾನ್–ಯೋಜನೆ**

- ನಾವು ಏನು ಮಾಡಲು ಹೊರಟಿದ್ದೇವೆ? ಎಂಬ ಸ್ಪಷ್ಟತೆ
- ಪ್ರಸ್ತುತ ನಾವು ಎಲ್ಲಿದ್ದೇವೆ? ಎಂಬುದರ ಮಾಪನ
- ನಾವು ಎಲ್ಲಿರಬೇಕಿತ್ತು ? ಎಂಬ ಅವಲೋಕನ
- ಹೇಗೆ ಈ ಅಂತರವನ್ನು ಕಡಿಮೆಗೊಳಿಸುವುದು? ಎಂಬ ಕುರಿತಂತೆ ಆಲೋಚನೆಗಳು
- ಕೆಲವೊಂದು ಪರಿಹಾರೋಪಾಯಗಳನ್ನು ಗುರುತಿಸಿಕೊಳ್ಳುವುದು

**ಡೂ–ನಿರ್ವಹಣೆ**

ಪರಿಹಾರವನ್ನು ಅನುಷ್ಠಾನ ಮಾಡಿ, ಪ್ರಾಯೋಗಿಕವಾಗಿ ಪರೀಕ್ಷಿಸುವುದು.

**ಚೆಕ್ (ಸ್ಟಡಿ) – ಪರಿಶೀಲನೆ**

ನಿರೀಕ್ಷಿಸಿದ ಬದಲಾವಣೆಯಾಗಿದೆಯೇ ಎಂದು ತಿಳಿಯುವುದು. ಋಣಾತ್ಮಕ ಪರಿಣಾಮಗಳನ್ನು ಸರಿಪಡಿಸುವುದು.

Kiran Raghupathi

**ಆಕ್ಟ್ – ಪ್ರವರ್ತನೆ**

ಕಲಿಕೆಯನ್ನು ಆಧರಿಸಿ ಕೆಲಸ ಮಾಡುವುದು, ಉದ್ದೇಶ ಈಡೇರಿದ್ದರೆ ಸಮಸ್ಯೆ ಮತ್ತೆ ಬಾರದಂತೆ ಸನ್ನಿವೇಶವನ್ನು ನಿಯಂತ್ರಿಸುವುದು, ನಿರೀಕ್ಷಿತ ಉದ್ದೇಶದ ಸಾಧನೆಗಾಗಿ ಪ್ರಯತ್ನಿಸುವುದು. ಇಂತಹ ಪ್ರಯತ್ನಗಳ ಪ್ರತಿ ಆವರ್ತವೂ ವ್ಯವಸ್ಥೆಯನ್ನು ಗುಣಾತ್ಮಕತೆಯ ಹಾದಿಯಲ್ಲಿ ಎತ್ತರಕ್ಕೇರಿಸುತ್ತದೆ.

ಈ ಬಗ್ಗೆ ಆಲೋಚಿಸಿ.

1. ನೀವು ನಿಮ್ಮ ಶಾಲೆಯ ಕುರಿತಂತೆ ಯೋಜನೆ ಹೊಂದಿರುವಿರಾ?
2. ಈ ಹಿಂದೆ ನೀವು ಮಾಡಿದ ಎಲ್ಲಾ ಯೋಜನೆಗಳು ಸಫಲವಾಗಿವೆಯೇ?
3. ಕೆಲವು ಯೋಜನೆ ವಿಫಲಗೊಂಡಿದ್ದರೆ, ನಿಮ್ಮ ಪ್ರಕಾರ ಅದಕ್ಕೆ ಕಾರಣಗಳೇನು?
4. ಈ ಯೋಜನೆಗಳನ್ನು ತಯಾರಿಸುತ್ತಿದ್ದವರು ಯಾರು ಯಾರು?
5. ಶಾಲಾ ಶೈಕ್ಷಣಿಕ ಯೋಜನೆಯನ್ನು ಯಾರು ಸಿದ್ಧಪಡಿಸಬೇಕು?
6. ಈ ಯೋಜನೆಗಳ ತಯಾರಿಕೆಯಲ್ಲಿ ನೀವು ಏನೇನು ಮಾಡುತ್ತಿದ್ದಿರಿ?

**ಶಾಲಾಭಿವೃದ್ಧಿ ಯೋಜನೆ ತಯಾರಿ**

ಯೋಜನೆಯ ತಯಾರಿ ಮತ್ತು ಅನುಷ್ಠಾನವು ತಂಡದಲ್ಲಿ ನಿರ್ವಹಿಸುವ ಕಾರ್ಯವಾಗಿದೆ. ಪ್ರಕ್ರಿಯೆಗಳನ್ನು ರೂಪಿಸುವಲ್ಲಿ ಮತ್ತು ಅನುಷ್ಠಾನ ಮಾಡುವಲ್ಲಿ  ತೊಡಗಿಸಿಕೊಳ್ಳುವುದು ಅತೀ ಮುಖ್ಯ ಅಂಶವಾಗಿದೆ. ಯೋಜನೆ ಮತ್ತು ಅನುಷ್ಠಾನದ ಪ್ರತಿಯೊಂದು ಹಂತದಲ್ಲಿ ಸಮುದಾಯದ ನಾಯಕತ್ವ ಗುಣವು ನಿರೀಕ್ಷಿತ ಫಲದ ಮೇಲೆ ತನ್ನ ಪ್ರಭಾವ ಬೀರುತ್ತದೆ.

**ಶಾಲೆಯ ವಿವಿಧ ಅಭಿವೃದ್ಧಿ ಕ್ಷೇತ್ರಗಳು**

- ಶಾಲಾ ಭೌತಿಕ ಪರಿಸರ
- ತರಗತಿಯ ಕಲಿಕಾ ವಾತಾವರಣ
- ಬೋಧನಾ–ಕಲಿಕೆಯ ಪ್ರಕ್ರಿಯೆಗಳು
- ಶಿಕ್ಷಕರಲ್ಲಿ  ಪ್ರೇರಣೆ ಹಾಗೂ ಅವರ ವೃತ್ತಿಪರತೆ
- ಶಾಲಾ ಕಾರ್ಯಕ್ರಮಗಳಲ್ಲಿ ಸಮುದಾಯದ ಭಾಗವಹಿಸುವಿಕೆ
- ಶಾಲಾ ಮುಖ್ಯಶಿಕ್ಷಕರಲ್ಲಿ ನಾಯಕತ್ವ ಗುಣ.

ನಿಮ್ಮ ಶಾಲೆಯ ಸನ್ನಿವೇಶಕ್ಕೆ ಪ್ರಸ್ತುತವೆನ್ನಬಹುದಾದ ಸೂಚಕಗಳನ್ನು ಗುರುತಿಸಿಕೊಂಡು ಆದ್ಯತೀಕರಿಸಿಕೊಳ್ಳಬೇಕು. ಅಂತೆಯೇ ಇಲಾಖೆಯು ಇನ್ನಷ್ಟು ಸೂಚಕಗಳನ್ನೊಳಗೊಂಡ ಪಟ್ಟಿಯನ್ನು ನೀಡಬಹುದು. ಪ್ರಾಥಮಿಕ ಶಾಲೆಗೆ ಸಂಬಂಧಿಸಿದಂತೆ 158 ಸೂಚಕಗಳು ಹಾಗೂ ಪ್ರೌಢಶಾಲೆಗೆ ಸಂಬಂಧಿಸಿದಂತೆ 141 ಸೂಚಕಗಳನ್ನು ಪಟ್ಟಿ ಮಾಡಿದೆ (ಹೆಚ್ಚಿನ ಮಾಹಿತಿಗಾಗಿ **"ಸಂಗಮ"** ಹಾಗೂ **"ಸಮ್ಮಿಲನ"** ಸಾಹಿತ್ಯ ಗಮನಿಸಿ). ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಶಾಲಾಭಿವೃದ್ಧಿಯ ವಿವಿಧ ಕ್ಷೇತ್ರಗಳಿಗೆ ಸೂಚಕಗಳನ್ನು ಗುರುತಿಸಿ, ಯಾವ ಸೂಚಕಗಳಿಗಾಗಿ ಮಧ್ಯವರ್ತನೆಗಳನ್ನು ಕೈಗೊಳ್ಳಬೇಕಾಗಿದೆ ಎಂದು ಗುರುತಿಸಿದರೆ, ಯೋಜಿಸಲು ಒಂದು ಸ್ಪಷ್ಟ ಕಾರ್ಯಸೂಚಿ ದೊರಕಿದಂತಾಗುತ್ತದೆ.

ಶಾಲಾಭಿವೃದ್ಧಿ ಯೋಜನೆಯು ಹೊಂದಿರಬೇಕಾದ ಪ್ರಮುಖ ಅಂಶಗಳು.

1. ಕ್ಷೇತ್ರ
2. ಸೂಚಕ
3. ಪೂರೈಸುವಉದ್ದೇಶ
4. ಅವಶ್ಯವಿರುವ ಸಂಪನ್ಮೂಲ
    - ಮಾನವ ಸಂಪನ್ಮೂಲ
    - ಆರ್ಥಿಕ ಸಂಪನ್ಮೂಲ
    - ಭೌತಿಕ ಸಾಮಗ್ರಿಗಳು

Kiran Raghupathi

5. ಕಾರ್ಯತಂತ್ರ
6. ಸಮಯ ನಿಗದಿ
7. ಜವಾಬ್ದಾರಿ ಹಂಚಿಕೆ
8. ಉಸ್ತುವಾರಿ
9. ಪುನರಾವಲೋಕನ/ಪೂರಕ ಕಾರ್ಯತಂತ್ರ
10. ಮೌಲ್ಯಮಾಪನ

**ಯೋಜನೆಯ ತಯಾರಿ, ಅನುಷ್ಠಾನ, ಅನುಪಾಲನೆ, ಮೌಲ್ಯಮಾಪನ ಕುರಿತಂತೆ ಕೆಲವು ಸಲಹೆಗಳು**

- ✓ ಯೋಜನೆಯ ಬೆಳವಣಿಗೆಯ ಸಮಯದಲ್ಲಿಯೇ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಯೋಜಿಸಬೇಕು.
- ✓ ಯೋಜನೆಯ ಗುರಿ ಮತ್ತು ಕಾರ್ಯತಂತ್ರಗಳಿಗೆ ಪೂರಕವಾಗಿ ದೈನಂದಿನ ಶಾಲಾ ದಿನಚರಿಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.
- ✓ ಶಾಲಾ ಸಿಬ್ಬಂದಿ ಸಭೆ, ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಯೋಜನೆಯ ಅನುಷ್ಠಾನದ ಕುರಿತು ಚರ್ಚಿಸುವುದು.
- ✓ ಶಾಲಾ ಯೋಜನೆಯ ಬಗ್ಗೆ ಹೆಚ್ಚು ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕು.
- ✓ ಶಾಲಾ ಸುದ್ದಿಪತ್ರದಲ್ಲಿ, ಸ್ಥಳೀಯ ದಿನಪತ್ರಿಕೆಗಳಲ್ಲಿ ಶಾಲಾ ಯೋಜನೆಯ ಕುರಿತು ಪ್ರಕಟಿಸುವುದು.
- ✓ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಪ್ರತಿಯೊಂದು ಸಣ್ಣ ಸಾಧನೆಯನ್ನು ಗುರುತಿಸಿ ಆಚರಿಸಬೇಕು ಮತ್ತು ಸಾಧನೆಯನ್ನು ಪ್ರೋತ್ಸಾಹಿಸಬೇಕು. ಹೀಗೆ ಮಾಡುವುದರಿಂದ ಗುರಿಯೆಡೆಗೆ ನಿರಂತರವಾಗಿ ಮುನ್ನಡೆಯಲು ಸಾಧ್ಯವಾಗುವುದು.
- ✓ ಯೋಜನೆಯನ್ನು ಅನುಷ್ಠಾನಗೊಳಿಸಿದ ನಂತರ ಯೋಜನೆಯಲ್ಲಿ ಗುರುತಿಸಿರುವಂತೆ ಮಧ್ಯಂತರ ಹಾಗೂ ಅಂತಿಮ ಮೌಲ್ಯಮಾಪನವನ್ನು ಕೈಗೆತ್ತಿಕೊಳ್ಳಬೇಕು. ವಿದ್ಯಾರ್ಥಿಗಳ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ, ಪ್ರಗತಿ ಪತ್ರ, ಪೋಷಕರ ವಿದ್ಯಾರ್ಥಿಗಳ ಸಮೀಕ್ಷೆ ಇತ್ಯಾದಿ ಸಾಧನಗಳನ್ನು ಮೌಲ್ಯಮಾಪನ ಮಾಹಿತಿಯ ಮೂಲವನ್ನಾಗಿ ಬಳಸಬಹುದು.
- ✓ ಒಮ್ಮೆಗೇ ಯೋಜನೆಯ ಉದ್ದೇಶಗಳ ಈಡೇರಿಕೆಯೇ ಅಂತ್ಯವಲ್ಲ. ಕ್ರಿಯೆಯು ಇಲ್ಲಿಗೆ ನಿಲ್ಲುವುದಿಲ್ಲ. ಮೌಲ್ಯಮಾಪನ ಹಾಗೂ ಪುನರಾವಲೋಕನವು ಮುಂದಿನ ಯೋಜನೆ ಮತ್ತು ಕಾರ್ಯತಂತ್ರಗಳಿಗೆ ಹೆಜ್ಜೆಯಾಗಿರುವುದು. ಈ ರೀತಿಯಾಗಿ ಶಾಲಾಭಿವೃದ್ಧಿ ಯೋಜನೆಯು ಆವರ್ತಗಳಲ್ಲಿ ಮುಂದುವರಿಯುತ್ತದೆ. ಕಾಣ್ಕೆಯನ್ನು ಸಾಕಾರಗೊಳಿಸುವವರೆಗೂ ಈ ಆವರ್ತಗಳು ಮುಂದುವರಿಯುತ್ತವೆ. ಮೊದಲ ಹಂತದಲ್ಲಿ ರಚಿಸಿಕೊಂಡ ಕಾಣ್ಕೆಯ ಸಾಧನೆಯಾದ ಬಳಿಕ ಇನ್ನೂ ಉಚ್ಚಮಟ್ಟದ ಕಾಣ್ಕೆಗಳಿಗಾಗಿ ಯೋಜನೆಗಳನ್ನು ರೂಪಿಸಿಕೊಳ್ಳಬಹುದು.

ನಮ್ಮ ಯೋಜನೆಗಳು ಉತ್ತಮವಾಗಿ ಅನುಷ್ಠಾನಗೊಳ್ಳಬೇಕಾದರೆ ಅದು ನಮ್ಮ ಶಾಲೆಯ ಸ್ವರೂಪ, ಸ್ಥಳೀಯತೆ, ಸವಾಲುಗಳು ಮುಂತಾದವುಗಳನ್ನು ಆಧರಿಸಿದ ಯೋಜನೆಯನ್ನು ರೂಪಿಸಿಕೊಳ್ಳಬೇಕು. ನಮ್ಮ ಶಾಲಾ ವೈವಿಧ್ಯತೆಯನ್ನು ಗಮನದಲ್ಲಿರಿಸಿದ ಯೋಜನೆ ನಮ್ಮ ಶಾಲೆಗಳಿಗೆ ಸೂಕ್ತವಾದುದು.

ಹೀಗೆ ಶಾಲೆಗಳು ಅಗತ್ಯ ಬದಲಾವಣೆಯೆಡೆಗೆ ತಮ್ಮ ಗಮನಹರಿಸಿದಾಗಲೇ ವಿಶೇಷ ಸಾಧನೆಯನ್ನು ಮಾಡಲು ಸಾಧ್ಯವಾಗುವುದು. ಶಾಲೆಯು ತನ್ನ ಬೆಳವಣಿಗೆ ಗುರಿಗಳನ್ನು ಗುರುತಿಸಿಕೊಂಡು, ಆ ಗುರಿಗಳನ್ನು ಯಾವಾಗ ಮತ್ತು ಹೇಗೆ? ಸಾಧಿಸಬೇಕು ಎಂಬುದರ ಬಗ್ಗೆ ನಿರ್ಧಾರ ಕೈಗೊಳ್ಳುವುದು ಅತಿಮುಖ್ಯ. ಎಲ್ಲಾ ಯೋಜನೆಗಳ ಅಂತಿಮ ಗುರಿ ಶಾಲೆಯು ಹಲವಾರು ಕ್ಷೇತ್ರಗಳಲ್ಲಿ ನಿರಂತರ ಅಭಿವೃದ್ಧಿಯಾಗುತ್ತಿರಬೇಕು.

Kiran Raghupathi

**ನಮ್ಮ ಯೋಜನೆಯು ಹೀಗಿತ್ತೆ?**

1. ಯೋಜನೆಯು ನಮ್ಮ ಪೂರ್ವಾನುಭವಗಳನ್ನು ಆಧರಿಸಿತ್ತೇ ? ಹೌದು/ ಇಲ್ಲ

2. ಯೋಜನೆಯಲ್ಲಿ ಮಾನವ / ಆರ್ಥಿಕ ಸಂಪನ್ಮೂಲಗಳ ಬಳಕೆ ನಿಖರವಾಗಿತ್ತೇ ? ಹೌದು/ ಇಲ್ಲ

3. ಗುರಿಗಳು ಕಾಲಬದ್ಧವಾಗಿತ್ತೇ ? ಹೌದು/ ಇಲ್ಲ

4. ಗುರಿಗಳು ಸಾಧಿಸುವಂತಹ ವಾಸ್ತವಿಕ ನೆಲೆಯಲ್ಲಿತ್ತೇ? ಹೌದು/ ಇಲ್ಲ

5. ಪುನರ್ ಪರಿಶೀಲನೆ ಹಾಗೂ ಮೌಲ್ಯಮಾಪನಕ್ಕೆ ಒಗ್ಗುವಂತಿತ್ತೇ? ಹೌದು/ ಇಲ್ಲ

6. ವೈವಿಧ್ಯಮಯ ಕಾರ್ಯತಂತ್ರಗಳು ಹಾಗೂ ಚಟುವಟಿಕೆಗಳನ್ನು ಹೊಂದಿತ್ತೇ? ಹೌದು/ ಇಲ್ಲ

7. ಸ್ಥಳೀಯ ಸಮುದಾಯದ ಪಾಲ್ಗೊಳ್ಳುವಿಕೆ ಹೆಚ್ಚಿತ್ತೇ? ಹೌದು/ ಇಲ್ಲ

8. ಸರ್ಕಾರದ ಅನುದಾನಗಳ ಮೇಲೆ ಅತಿಯಾದ ಅವಲಂಬನೆ ಮಾಡದಂತಿತ್ತೇ? ಹೌದು/ ಇಲ್ಲ

9. ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು ಅಗತ್ಯ ಸಂದರ್ಭಗಳಲ್ಲಿ ಸಲಹೆ ಮಾರ್ಗದರ್ಶನಕ್ಕೆ ಅನುಗುಣವಾಗಿ ಕಾರ್ಯಪ್ರವೃತ್ತರಾಗುತ್ತಿದ್ದರ್ತೇ? ಹೌದು/ ಇಲ್ಲ

10. ಆರ್ಥಿಕ ಸಂಪನ್ಮೂಲ ಹಾಗೂ ಇತರ ಸಂಪನ್ಮೂಲಗಳ ಸಂಗ್ರಹ ವಾಸ್ತವವಾಗಿತ್ತೇ? ಹೌದು/ ಇಲ್ಲ

11. ಶಾಲೆಯ ಅಗತ್ಯಗಳ ವಿಶ್ಲೇಷಣೆ ಮತ್ತು ಶಾಲೆಯು ಹೊಂದಿರುವ ಬಲ ಹಾಗೂ ದೌರ್ಬಲ್ಯಗಳನ್ನು ಪರಿಗಣಿಸಿದ ಕಾರ್ಯತಂತ್ರಗಳು ಯೋಜನೆಯ ಭಾಗವಾಗಿತ್ತೇ? ಹೌದು/ ಇಲ್ಲ

ಈ ಚರ್ಚೆಯಲ್ಲಿ ನೀವು ಗಮನಿಸಿದ ಅಂಶಗಳನ್ನು ನಿಮ್ಮ ಶಾಲೆಯ ಪೋಷಕರೊಂದಿಗೆ, ಸ್ನೇಹಿತರೊಂದಿಗೆ ಸಹಭಾಗಿಗಳೊಂದಿಗೆ ಹಂಚಿಕೊಳ್ಳಿ. ಈಗ ಹೇಳಿ ನೀವು ನಿಮ್ಮ ಶಾಲಾಭಿವೃದ್ಧಿ ಯೋಜನೆಯಲ್ಲಿ ಮುಂದಿನ ಅಂಶಗಳನ್ನು ಹೇಗೆ ಸಾಧಿಸುವಿರಿ?

- ಯೋಜನೆ ಸಮಗ್ರವಾಗಿರುವಂತೆ ಶಾಲೆಯ ಎಲ್ಲಾ ಭಾಗೀದಾರರನ್ನು ತೊಡಗಿಸಿಕೊಳ್ಳುವುದು.
- ಯೋಜನೆಯ ಅನುಷ್ಠಾನವನ್ನು ವಿವಿಧ ಹಂತಗಳಲ್ಲಿ ಮೇಲ್ವಿಚಾರಿಸುವುದು.
- ಯೋಜನೆಯ ವಿವಿಧ ಹಂತಗಳಲ್ಲಿ ಎದುರಾಗುವ ಸವಾಲುಗಳನ್ನು ಚರ್ಚಿಸುತ್ತಾ, ಅವುಗಳಿಗೆ ಪರಿಹಾರೋಪಾಯ ಕಂಡುಕೊಳ್ಳುವುದು.
- ಕಾರ್ಯಯೋಜನೆಯ ಆರಂಭಿಕ ಆಸಕ್ತಿಯನ್ನು ಕೊನೆಯವರೆಗೂ ಉಳಿಸಿಕೊಳ್ಳುವಂತೆ ಯೋಜನಾತಂಡವನ್ನು ಹುರಿದುಂಬಿಸುವುದು.

ನೀವು ಈವರೆಗೆ ಚರ್ಚಿಸಿದ ವಿಚಾರಗಳನ್ನು ಗಮನಿಸಿ. ಇನ್ನು ಮುಂದಿನ ಶಾಲಾಭಿವೃದ್ಧಿ ಯೋಜನೆ ಇನ್ನಷ್ಟು ಸಫಲವಾಗಲು ನಿಮ್ಮ ಶಾಲೆಯ ಎಲ್ಲರೊಂದಿಗೆ ಸಹಕರಿಸಿ.

Kiran Raghupathi

| ಯೋಜನೆಯ ತಯಾರಿ, ಅನುಷ್ಠಾನ, ಅನುಪಾಲನೆ, ಮೌಲ್ಯಮಾಪನ....... |
|---|
| ❖ ಯೋಜನೆಯನ್ನು ರೂಪಿಸುವ ಹಂತದಲ್ಲಿಯೇ ಅನುಷ್ಠಾನದ ಕುರಿತು ಚಿಂತಿಸಬೇಕು.<br>❖ ಯೋಜನೆಯ ಗುರಿ ಮತ್ತು ಉದ್ದೇಶಗಳಿಗನುಗುಣವಾಗಿ ದೈನಂದಿನ ಶಾಲಾ ದಿನಚರಿಯಲ್ಲಿ ಅಗತ್ಯ ಬದಲಾವಣೆಯನ್ನು ಮಾಡಿಕೊಳ್ಳಬೇಕು.<br>❖ ಶಾಲಾ ಸಿಬ್ಬಂದಿ ಸಭೆ, ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಯೋಜನೆಯ ಅನುಷ್ಠಾನದ ಕುರಿತು ಚರ್ಚಿಸುವುದು.<br>❖ ಯೋಜನೆಯ ಅನುಷ್ಠಾನದ ವೇಳೆ ಪ್ರತಿಯೊಂದು ಹಂತದ ಯಶಸ್ಸನ್ನು ಹಂಚಿಕೊಳ್ಳಬೇಕು.<br>❖ ಯೋಜಿಸಿದಂತೆ ಮೌಲ್ಯಮಾಪನ ಕಾರ್ಯಗಳನ್ನು ನಿರ್ವಹಿಸಬೇಕು. |

ಹೀಗೆ ಯೋಜನೆಯ ವಿವಿಧ ಮಜಲುಗಳನ್ನು ಅನುಸರಿಸಿದರೆ ಯಶಸ್ಸನ್ನು ಹೊಂದಲು ಸಾಧ್ಯ. ಈ ಪ್ರಕ್ರಿಯೆ ನಿರ್ದಿಷ್ಟ ಕಾಲಕ್ಕೆ ಮುಗಿದು ಹೋಗುವಂತಹದ್ದಲ್ಲ. ಈ ನಿಟ್ಟಿನಲ್ಲಿ ಯೋಜನೆಯ ಉದ್ದೇಶಗಳ ಈಡೇರಿಕೆಯೇ ಅಂತ್ಯವಲ್ಲ. ಕ್ರಿಯೆಯು ಇಲ್ಲಿಗೆ ನಿಲ್ಲುವುದಿಲ್ಲ. ಮೌಲ್ಯಮಾಪನ ಹಾಗೂ ಪುನರಾವಲೋಕನವು ಮುಂದಿನ ಯೋಜನೆ ಹಾಗೂ ಕಾರ್ಯತಂತ್ರಗಳಿಗೆ ಹೆಜ್ಜೆಯಾಗಿರುವುದು.ಈ ರೀತಿಯಾಗಿ ಶಾಲಾಭಿವೃದ್ಧಿಯು ಹಲವು ಸುತ್ತುಗಳಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ. ನಮ್ಮ ಶಾಲೆಯು ಹೊಂದಿರಬಹುದಾದ ದೂರದೃಷ್ಟಿ ಆಧಾರಿತ ಯೋಜನೆಗಳ ಅನುಷ್ಠಾನಕ್ಕೆ ನಾವೆಲ್ಲರೂ ಕಂಕಣಬದ್ಧರಾಗಬೇಕಿದೆ.

| ಶಾಲೆಯ ಅಭಿವೃದ್ಧಿಯಲ್ಲಿ ಸಾಮುದಾಯಿಕ ಸಂಸ್ಥೆಗಳ ಬೆಂಬಲ ಪಡೆಯಬಹುದಾದ ಕೆಲವು ಸಂಸ್ಥೆಗಳು.<br><br>1. ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ<br>2. ಶಾಲೆಯ ವ್ಯಾಪ್ತಿಯಲ್ಲಿರುವಯುವಕ/ಯುವತಿ ಮಂಡಲಗಳು<br>3. ಆಯಾ ಪ್ರಾದೇಶಿಕವಾರು ಕಾರ್ಯ ನಿರ್ವಹಿಸುತ್ತಿರುವ ಟ್ರಸ್ಟ್‌ಗಳು (ದತ್ತಿ ನಿಧಿಗಳು)<br>3. ಶಾಲಾ ವ್ಯಾಪ್ತಿಯಲ್ಲಿ /ಬ್ಲಾಕಿನಲ್ಲಿರುವ ಕೈಗಾರಿಕಾ ಘಟಕಗಳ ಸಾಮಾಜಿಕ ಯೋಜನೆಗಳು ಇತ್ಯಾದಿ<br>4. ಅಜೀಂ ಪ್ರೇಮ್‌ಜಿ ಫೌಂಡೇಶನ್ (ಎಪಿಎಫ್)<br>5. ಇನ್ಫೋಸಿಸ್ ಫೌಂಡೇಶನ್<br>6. ಪ್ರಜಾಯತ್ನ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ<br>7. ಅಮೇರಿಕಾ ಇಂಡಿಯಾ ಫೌಂಡೇಶನ್ (ಎಐಎಫ್)<br>ಸೂಕ್ತ ಯೋಜನೆಯೊಂದಿಗೆ ಇವರನ್ನು ಸಂಪರ್ಕಿಸಿ ಅವರಲ್ಲಿ ಲಭ್ಯವಿರುವ ಯೋಜನೆಗಳನ್ನು ನಮ್ಮ ಶಾಲೆಯ ಎಸ್.ಡಿ.ಪಿ.ಭಾಗವಾಗಿ ಮಾಡಿಕೊಳ್ಳಬಹುದು. |
|---|

**ಶಾಲಾಭಿವೃದ್ಧಿ ಯೋಜನೆಯಲ್ಲಿ ಶೂನ್ಯ ಬಜೆಟ್ ಚಟುವಟಿಕೆಗಳು**

ಪ್ರಸ್ತುತ ಶಾಲೆಗಳ ಶಾಲಾಭಿವೃದ್ಧಿ ಯೋಜನೆಯನ್ನು ಗಮನಿಸಿ, ಇವುಗಳಿಗೆ ಸಂಬಂಧಿಸಿದಂತೆ ನಾವು ಹೇಗೆ ನಮ್ಮ ಯೋಜನೆಗಳನ್ನು ಯಶಸ್ಸು ಹೊಂದುವಂತೆ ಸಹಕರಿಸಬಹುದು? ಆಲೋಚಿಸಿ ಮುನ್ನಡೆಯಿರಿ. ಮುಖ್ಯ ಶಿಕ್ಷಕರೊಂದಿಗೆ, ಇತರರೊಂದಿಗೆ ಕೈಜೋಡಿಸಿ. ಯಾವುದೇ ಶಾಲೆಯ ಅಭಿವೃದ್ಧಿ ಹಾಗೂ ಅಪೇಕ್ಷಿತ ಬದಲಾವಣೆಗಾಗಿ ಸ್ಥಳೀಯ ಸಮುದಾಯದ ಬೆಂಬಲ ಹಾಗೂ ಶೂನ್ಯ ಬಜೆಟ್ ಚಟುವಟಿಕೆಗಳು ಅತ್ಯಂತ ಅಗತ್ಯವಾಗಿದೆ.

ಶೈಕ್ಷಣಿಕ ಗುರಿ ಸಾಧಿಸಲು, ಶಾಲೆಯಲ್ಲಿ ಅಪೇಕ್ಷಿತ ಬದಲಾವಣೆಗಾಗಿ ಕೈಗೊಳ್ಳುವ ವಿವಿಧ ಕಾರ್ಯತಂತ್ರಗಳನ್ನು ಯಾವಾಗ ಮತ್ತು ಹೇಗೆ ಕೈಗೊಳ್ಳಬೇಕೆಂಬ ವಿಚಾರದಲ್ಲಿ ಪ್ರತಿಯೊಂದು ಶಾಲೆಯು ತನ್ನದೇ ವಿಚಾರಗಳನ್ನು ಹೊಂದಿರುತ್ತದೆ. ಕೆಲವೊಮ್ಮೆ ಹಣಕಾಸನ್ನು ಹೊಂದುವಲ್ಲಿನ ವಿಫಲತೆ ಎಸ್.ಡಿ.ಪಿ.ಯ ಯಶಸ್ಸಿಗೆ ಅಡ್ಡಿಯಾಗುವುದನ್ನು ಗಮನಿಸಬಹುದು. ಇದನ್ನುದೂರಮಾಡಲು ಶೂನ್ಯ ಬಜೆಟ್ ಚಟುವಟಿಕೆಗಳು ಮಹತ್ವದ ಪಾತ್ರ ವಹಿಸುತ್ತವೆ. ಇದನ್ನು ನಮ್ಮ ನಮ್ಮ ಶಾಲೆಗಳ ಯೋಜನೆಗಳಲ್ಲಿ ಅಳವಡಿಸಿಕೊಳ್ಳಲು ಅನುವಾಗುವ ಅಂಶಗಳನ್ನು ಗಮನಿಸಿ.

Kiran Raghupathi

**ಶಾಲಾ ಅಭಿವೃದ್ಧಿ ಕ್ರಿಯಾ ಯೋಜನಾ ನಕ್ಷೆ (ಶೂನ್ಯ ಬಜೆಟ್ ಆಧಾರಿತ)**

- ✓ ಸೂಚಕಗಳ ಪಟ್ಟಿಯನ್ನು ಗಮನಿಸಿದಾಗ ಹಣಕಾಸಿನ ಅಗತ್ಯವಿಲ್ಲದ ಸೂಚಕಗಳನ್ನು ಗುರುತಿಸಿ.
- ✓ ಈ ಸೂಚಕಗಳ ಈಡೇರಿಕೆಗಾಗಿ ಶಾಲೆಯಲ್ಲಿಯೇ ಲಭ್ಯವಿರುವ ವಸ್ತು–ಸಾಮಗ್ರಿಗಳನ್ನು ಗುರುತಿಸಿ.
- ✓ ಇವುಗಳನ್ನು ಬಳಸಿ ತರಬೇಕಾದ ಮಾರ್ಪಾಡು ಕ್ರಮಗಳನ್ನು ಪಟ್ಟಿ ಮಾಡಿ ಸಂಬಂಧಿಸಿದ ವ್ಯಕ್ತಿ (ಶಿಕ್ಷಕರು/ ಸದಸ್ಯರು/ಪೋಷಕರು/ಮಕ್ಕಳು) ಗಳನ್ನು ಗುರುತಿಸಿ.
- ✓ ಅಗತ್ಯ ಸಮಯವನ್ನು ಗುರುತಿಸಿ ಎಸ್.ಡಿ.ಪಿ.ಯಲ್ಲಿ ಸ್ಪಷ್ಟವಾಗಿ ನಮೂದಿಸಿಕೊಳ್ಳಿ.
- ✓ ಸೂಚಕದ 'ಈಡೇರಿಕೆಗಾಗಿ ವಿವಿಧ ಹಂತದ ಕಾರ್ಯತಂತ್ರಗಳನ್ನು ಗುರುತಿಸಿಕೊಳ್ಳಿ.
- ✓ ಪ್ರತಿಯೊಂದು ಕಾರ್ಯತಂತ್ರಕ್ಕೂ ಅಗತ್ಯ ಸಮಯ ಹಾಗೂ ಜವಾಬ್ದಾರಿ ಹಂಚಿಕೆ ಮಾಡಿ.
- ✓ ನಿಗದಿಯಾದ ಕಾಲಕ್ಕನುಗುಣವಾಗಿ ಇದನ್ನು ಉಸ್ತುವಾರಿ ಮಾಡುವವರನ್ನು ಸ್ಪಷ್ಟವಾಗಿ ಗುರುತಿಸಿ.
- ✓ ಅಗತ್ಯಕ್ಕನುಗುಣವಾಗಿ ಪುನರಾವಲೋಕನ ಹಾಗೂ ಮೌಲ್ಯಮಾಪನ ಕೈಗೊಳ್ಳಿ.

**ಶಾಲಾ ಶಿಕ್ಷಣದಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರ**

ಭಾರತ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಜಾರಿಯಾದ ಪಂಚಾಯತ್‌ರಾಜ್ ಅಧಿನಿಯಮಗಳಲ್ಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಜನರ ಸರ್ವಾಂಗೀಣ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲು ಅವಕಾಶ ಮಾಡಿಕೊಡಲಾಗಿದೆ. ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ – 2015 (2ನೇ ತಿದ್ದುಪಡಿ)ರ ಅನುಸೂಚಿ–1 ಪ್ರಕರಣ 58ರಲ್ಲಿ ನಿರೂಪಿಸಿರುವ ವಿಷಯಗಳಲ್ಲಿ ಶಾಲಾ ಶಿಕ್ಷಣಕ್ಕೆ ಆದ್ಯತೆಯನ್ನು ನೀಡಲಾಗಿದೆ.

**ಕಾಯ್ದೆಯಲ್ಲಿ ಶಿಕ್ಷಣಕ್ಕಿರುವ ಅವಕಾಶಗಳು**

1. ಪಂಚಾಯಿತಿ ಮಟ್ಟದಲ್ಲಿ ಸಾಂಪ್ರದಾಯಿಕ ಮತ್ತು ಸಾಂಪ್ರದಾಯಿಕವಲ್ಲದ ಶಿಕ್ಷಣ ನೀಡುವ ಕುರಿತು ಯೋಜನೆಗಳನ್ನು ರೂಪಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು.
2. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲು ಸಕ್ಷಮಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಮತ್ತು ಮಂಜೂರಾತಿ ಪಡೆಯುವುದು ಮತ್ತು ಮೇಲುಸ್ತುವಾರಿ ಮಾಡುವುದು.
3. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸುವುದು.
4. ಮಕ್ಕಳ ವಿವರಗಳನ್ನು ಸಂಗ್ರಹಿಸುವುದು ಮತ್ತು ಇಂದೀಕರಿಸುವುದು.
5. ಸಾಕ್ಷರತಾ ಕಾರ್ಯಕ್ರಮಗಳು, ಅನೌಪಚಾರಿಕ ಮತ್ತು ಔಪಚಾರಿಕ ಶಿಕ್ಷಣ ಕಾರ್ಯಕ್ರಮಗಳನ್ನು

   ಅನುಷ್ಠಾನಗೊಳಿಸುವುದು ಹಾಗೂ ವಯಸ್ಕರ ಸಾಕ್ಷರತೆಗೆ ಉತ್ತೇಜನ ನೀಡುವುದು.
6. ಆಡಳಿತ ನಿರ್ವಹಣೆಯನ್ನು ಒಳಗೊಂಡಂತೆ ಶಾಲಾ ಶಿಕ್ಷಣದ ಗುಣಮಟ್ಟ ನಿಯಂತ್ರಣ, ಮೇಲ್ವಿಚಾರಣೆ ಮಾಡುವುದು.
7. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಸಮೀಕ್ಷೆ ಮತ್ತು ಮೌಲ್ಯಮಾಪನ ಮಾಡುವುದು.

Kiran Raghupathi

8. ಹಿಂದುಳಿದ ವರ್ಗಗಳ, ಬಾಲಕಿಯರ, ವಿಶೇಷವಾಗಿ ವಿಕಲಚೇತನರ ಮತ್ತು ಅಲ್ಪಸಂಖ್ಯಾತರ ಉನ್ನತ ಪ್ರಾಥಮಿಕ ಹಂತದವರೆಗಿನ ಆಶ್ರಮ ಶಾಲೆಗಳನ್ನು/ವಿದ್ಯಾರ್ಥಿ ನಿಲಯಗಳನ್ನು ಮೇಲ್ವಿಚಾರಣೆ ಮಾಡುವುದು.

9. ಗ್ರಾಮೀಣ ಕುಶಲಕರ್ಮಿಗಳಿಗೆ ಉತ್ತೇಜನ ನೀಡುವುದು ಮತ್ತು ಅವರಿಗೆ ವೃತ್ತಿತರಬೇತಿ ನೀಡುವುದು.

10. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಸಂಪೂರ್ಣ ದಾಖಲಾತಿ ಮತ್ತು ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MNREG), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಇಪ್ಪತ್ತೊಂದು ಅಂಶಗಳ ಕಾರ್ಯಕ್ರಮಗಳ ಅಡಿಯಲ್ಲಿ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ನೀಡಬಹುದಾದ ಸೌಲಭ್ಯಗಳು ಮತ್ತು ಕೈಗೆತ್ತಿಕೊಳ್ಳಬಹುದಾದ ಕಾಮಗಾರಿಗಳು ಈ ಕೆಳಗಿನಂತಿವೆ;

1. ಗ್ರಾಮದ ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಮತ್ತು ಯುವತಿಯರಲ್ಲಿ ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಆಟದ ಮೈದಾನಗಳನ್ನು ಅಭಿವೃದ್ಧಿಪಡಿಸುವುದು ಮತ್ತು ನಿರ್ವಹಿಸುವುದು.

2. ನಮ್ಮ ಹಳ್ಳಿ, ನಮ್ಮ ನೀರು ಯೋಜನೆಯಡಿಯಲ್ಲಿ ಶಾಲೆಗಳ ಆವರಣದಲ್ಲಿ ಸಸಿಗಳನ್ನು ನೆಡುವುದು, ಉದ್ಯಾನಗಳನ್ನು ಸ್ಥಾಪಿಸುವುದು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.

3. ಶಾಲೆ ಮತ್ತು ಅಂಗನವಾಡಿಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಲು ಪ್ರೋತ್ಸಾಹಧನವನ್ನು ನೀಡುವುದು.

4. ಶಾಲೆ ಮತ್ತು ಅಂಗನವಾಡಿಗಳಲ್ಲಿ ಘನ ಮತ್ತು ದ್ರವ ತ್ಯಾಜ್ಯವಸ್ತುಗಳ ನಿರ್ವಹಣಾ ಕಾಮಗಾರಿಗಳನ್ನೂ ಸಹ ಕೈಗೊಳ್ಳಬಹುದು.

5. ಹೆಣ್ಣು ಮಕ್ಕಳಿರುವ ಪ್ರೌಢಶಾಲೆಗಳಲ್ಲಿ ಸ್ಯಾನಿಟರಿ ಪ್ಯಾಡ್‌ಗಳನ್ನು ಸುಡುವ ಉಪಕರಣಗಳನ್ನು (Incinerator) ಅಳವಡಿಸುವುದು.

6. ಮಕ್ಕಳು ಶಾಲೆಗೆ ಹೋಗುವಲ್ಲಿ ನದಿ ತೊರೆಗಳು ಅಡಚಣೆಯಾಗುವಂತಿದ್ದಲ್ಲಿ ಕಾಲು ಸಂಕಗಳನ್ನು ನಿರ್ಮಿಸುವುದು.

7. ಅಂಗನವಾಡಿಗಳಿಗೆ ಸ್ವಂತಕಟ್ಟಡ ಇಲ್ಲದಿದ್ದ ಪಕ್ಷದಲ್ಲಿ ಕಟ್ಟಡ, ಕಾಂಪೌಂಡ್, ಶೌಚಾಲಯ ನಿರ್ಮಾಣ ಮಾಡುವುದು.

8. ಸೈಬರ್ ಮತ್ತು ಕಂಪ್ಯೂಟರ್ ಕೇಂದ್ರಗಳನ್ನು ಸ್ಥಾಪಿಸಿ, ಗ್ರಾಮೀಣ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಕಂಪ್ಯೂಟರ್ ಕಲಿಕೆ ಹಾಗೂ ಗ್ರಾಮೀಣ ಶಾಲೆಗಳಲ್ಲಿ ಕಂಪ್ಯೂಟರ್ ಆಧಾರಿತ ಕಲಿಕೆಗೆ ಅವಕಾಶಮಾಡಿಕೊಡುವುದು.

9. ಗ್ರಾಮೀಣ ಕಲೆ ಮತ್ತು ಸಂಸ್ಕೃತಿಗಳನ್ನು ಬೆಳೆಸಿ ಪ್ರೋತ್ಸಾಹಿಸಲು ಸಾಂಸ್ಕೃತಿಕ ಕೇಂದ್ರಗಳನ್ನು ಸ್ಥಾಪಿಸುವುದು.

10. ವ್ಯಾಯಾಮ ಶಾಲೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

**ಕೇಂದ್ರ ಸರ್ಕಾರದ 'ಸಂಸದರ ಆದರ್ಶ ಗ್ರಾಮ' ಯೋಜನೆಯಡಿಯಲ್ಲಿ ಶಾಲಾ ಶಿಕ್ಷಣಕ್ಕೆ ನೀಡಬಹುದಾದ ಸೌಲಭ್ಯಗಳು**

1. ಹತ್ತನೇ ತರಗತಿವರೆಗೆ ಎಲ್ಲರಿಗೂ ಶಿಕ್ಷಣವನ್ನು ನೀಡುವುದು.

2. ಗುಣಮಟ್ಟದ ಶಿಕ್ಷಣಕ್ಕಾಗಿ ಶಾಲೆಗಳನ್ನು ಸ್ಮಾರ್ಟ್ ಶಾಲೆಗಳನ್ನಾಗಿ ಪರಿವರ್ತಿಸುವುದು.

3. ಇ–ಶಿಕ್ಷಣವನ್ನು ಒದಗಿಸುವುದು.

4. ಇ–ಗ್ರಂಥಾಲಯವನ್ನುಒದಗಿಸುವುದು.

Kiran Raghupathi

**ಶೂನ್ಯ ವೆಚ್ಚದಲ್ಲಿ ಗ್ರಾಮ ಪಂಚಾಯಿತಿಗಳು ಮಾಡಬೇಕಾದ ಇತರ ಕಾರ್ಯಕ್ರಮಗಳು**

1. 6ರಿಂದ 14 ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ಕಡ್ಡಾಯವಾಗಿದಾಖಲಾಗುವಂತೆ ಮತ್ತು ಹಾಜರಾಗುವಂತೆ ನೋಡಿಕೊಳ್ಳುವುದು.

2. ವ್ಯಾಪ್ತಿಯಲ್ಲಿರುವ ಬಾಲಕಾರ್ಮಿಕರನ್ನು, ಜೀತದಾಳುಗಳನ್ನು ಗುರುತಿಸಿ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರುವುದು.

3. ಸಾಮಾನ್ಯ ಸಭೆಗಳಲ್ಲಿ ಆರೋಗ್ಯ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಚರ್ಚಿಸುವುದು ಮತ್ತು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಂಪರ್ಕ ಸಾಧಿಸುವುದು.

4. ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ಮಕ್ಕಳಿಗೆ ದೊರೆಯುವ ಸೌಲಭ್ಯಗಳು ಸರಿಯಾಗಿ ದೊರೆಯುವಂತೆ ನೋಡಿಕೊಳ್ಳುವುದು.

5. ಶಾಲಾ ಮಕ್ಕಳ ಆರೋಗ್ಯತಪಾಸಣೆ ಮಾಡಿಸುವುದು.

6. ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ನೀಡಲಾಗುವ ಮಧ್ಯಾಹ್ನದ ಬಿಸಿಯೂಟ ಮತ್ತು ಪೌಷ್ಟಿಕ ಆಹಾರದ ವಿತರಣೆಯನ್ನು ಮೇಲ್ವಿಚಾರಣೆ ಮಾಡುವುದು.

7. ಶಿಕ್ಷಣ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಗುರುತಿಸಿ, ಪ್ರೋತ್ಸಾಹಿಸುವುದು ಮತ್ತು ಇವುಗಳನ್ನು ಶಾಲೆಗಳಲ್ಲಿ ಆಯೋಜಿಸಿ, ಬಹುಮಾನಗಳನ್ನು ನೀಡುವುದು.

8. ಮಕ್ಕಳ ಶಿಕ್ಷಣ, ಸುರಕ್ಷತೆ ಮತ್ತು ಪೌಷ್ಟಿಕಾಂಶಗಳ ಕುರಿತು ಮಕ್ಕಳ ವಿಶೇಷ ಗ್ರಾಮ ಸಭೆಯನ್ನುಆಯೋಜಿಸುವುದು.

Kiran Raghupathi

# ಅಧ್ಯಾಯ–4

## ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಪಾಲುದಾರಿಕೆ

### ಶಾಲಾ ಸಂಕೀರ್ಣಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಆಡಳಿತ :

**ಉದ್ದೇಶ : ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಅನುಕೂಲವಾಗುವಂತೆ ಮತ್ತು ಶಾಲಾ ಆಡಳಿತವನ್ನು ಹೆಚ್ಚು ಸ್ಥಳೀಯವಾಗಿ, ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನೀಡಲು ಶಾಲೆಗಳನ್ನು ಶಾಲಾ ಸಂಕೀರ್ಣಗಳಾಗಿ ಗುಂಪು ಮಾಡಲಾಗಿದೆ.**

ಶಾಲಾ ಸಂಕೀರ್ಣಗಳ ಸ್ಥಾಪನೆಯಿಂದ ಸಾರ್ವಜನಿಕ ಶಾಲೆಗಳು, ಅದರಲ್ಲೂ ವಿಶೇಷವಾಗಿ ಸಣ್ಣ ಶಾಲೆಗಳು ಪ್ರಸ್ತುತ ಎದುರಿಸುತ್ತಿರುವ ಅನೇಕ ಸಂಪನ್ಮೂಲ ಬಿಕ್ಕಟ್ಟಿನ ಸಮಸ್ಯೆಗಳನ್ನು ತಗ್ಗಿಸಲು ಸಹಾಯವಾಗುತ್ತದೆ. ಹಲವಾರು ಸಾರ್ವಜನಿಕ ಶಾಲೆಗಳನ್ನು ಒಂದೇ ಸಾಂಸ್ಥಿಕ ಮತ್ತು ಆಡಳಿತ ಘಟಕದಡಿಯಲ್ಲಿ ಸೇರಿಸಲಾಗುವುದು. ಶಾಲೆಗಳನ್ನು ಭೌತಿಕವಾಗಿ ಸ್ಥಳಾಂತರಗೊಳಿಸುವ ಅಗತ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಅಡೆತಡೆಗಳನ್ನು ರಾಜಿ ಮಾಡಿಕೊಳ್ಳದೆ ಪರಿಣಾಮಕಾರಿ ಆಡಳಿತಾತ್ಮಕ ಘಟಕಗಳನ್ನು ಸ್ಥಾಪಿಸಲು ಇದು ನೆರವಾಗುತ್ತದೆ.

ಎ. 2023ರ ವೇಳೆಗೆ ಜನಸಂಖ್ಯಾ ಹಂಚಿಕೆ, ಸಂಪರ್ಕ ಮತ್ತು ಇತರ ಸ್ಥಳೀಯ ಪರಿಗಣನೆಗಳ ಪ್ರಕಾರ ರಾಜ್ಯಸರ್ಕಾರವು ಶಾಲೆಗಳನ್ನು ಸಂಕೀರ್ಣಗಳನ್ನಾಗಿ ಒಟ್ಟಾಗಿಸುತ್ತದೆ. ಈ ಒಟ್ಟಾಗಿಸುವ ಕಾರ್ಯವು ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳ ವಿಮರ್ಶೆ ಮತ್ತು ಬಲವರ್ಧನೆಯನ್ನೂ ಸಹ ಒಳಗೊಂಡಿರುತ್ತದೆ. (ಉದಾ: 20 ವಿದ್ಯಾರ್ಥಿಗಳು) ಇದೇ ಸಮಯದಲ್ಲಿ ಸಾರಿಗೆ ಸೌಕರ್ಯ ಒದಗಿಸುವ ಕ್ರಮಗಳ ಮೂಲಕ ಪ್ರವೇಶ ಪ್ರಕ್ರಿಯೆಯ ಮೇಲೆ ಪರಿಣಾಮ ಉಂಟಾಗದಂತೆ ನೋಡಿಕೊಳ್ಳಲಾಗುತ್ತದೆ. ಅಸ್ತಿತ್ವದಲ್ಲಿರುವ ಶಾಲೆಗಳ ಸ್ಥಿತಿಗತಿಗಳನ್ನು ನಿರ್ಣಯಿಸಲು ರಾಜ್ಯ ಸರ್ಕಾರಕ್ಕೆ ಇದೊಂದು ಅವಕಾಶವನ್ನೂ ಸಹ ಒದಗಿಸುತ್ತದೆ.

ಬಿ. ಶಾಲಾ ಸಂಕೀರ್ಣಗಳು ಸಣ್ಣ ಶಾಲೆಗಳ ಪ್ರತ್ಯೇಕತೆಯನ್ನು ತೊಡೆದುಹಾಕುತ್ತದೆ ಮತ್ತು ಶಿಕ್ಷಕರು ಹಾಗೂ ಪ್ರಾಂಶುಪಾಲರ ನಡುವೆ ಸಹಸಂಬಂಧವೇರ್ಪಡುತ್ತದೆ. ಇದರಿಂದ ಅವರು ಶೈಕ್ಷಣಿಕವಾಗಿ ಮತ್ತು ಆಡಳಿತಾತ್ಮಕವಾಗಿ ಒಟ್ಟಾಗಿ ಕೆಲಸ ಮಾಡಬಹುದು ಹಾಗೂ ಪರಸ್ಪರರನ್ನು ಬೆಂಬಲಿಸಬಹುದು. ಶಾಲಾ ಸಂಕೀರ್ಣವು ಸಾರ್ವಜನಿಕ ಶಾಲಾ ವ್ಯವಸ್ಥೆಯ ಪ್ರಮುಖ ಆಡಳಿತ ಘಟಕವಾಗಿರುತ್ತದೆ.

ಸಿ. ಒಂದು ಶಾಲಾ ಸಂಕೀರ್ಣವು ಸರಿಸುಮಾರು 10–20 ಸಾರ್ವಜನಿಕ ಶಾಲೆಗಳ ಗುಂಪನ್ನು ಒಳಗೊಂಡಿದ್ದು, ಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೆ ಸಂಪರ್ಕಿತ/ಹೊಂದಿಕೊಂಡಿರುವ ಭೌಗೋಳಿಕ ಪ್ರದೇಶದೊಳಗೆ ಶಿಕ್ಷಣವನ್ನು ನೀಡುತ್ತದೆ. ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರು ಈ ಶಾಲಾ ಸಂಕೀರ್ಣದ ಮುಖ್ಯಸ್ಥರಾಗಿರುತ್ತಾರೆ.

ಡಿ. ಪ್ರತಿಯೊಂದು ಶಾಲಾ ಸಂಕೀರ್ಣವು ಅರೆ–ಸ್ವಾಯತ್ತ ಘಟಕವಾಗಿದ್ದು, ಅದು ಪ್ರಾಥಮಿಕ ಹಂತದಿಂದ ಹಿಡಿದು 12ನೇ ತರಗತಿಯವರೆಗೂ ಶಿಕ್ಷಣ ನೀಡಲಿದ್ದು, ಇದು ಒಂದು ಪ್ರೌಢಶಾಲೆಯನ್ನು (9–12ನೇ ತರಗತಿ) ಮತ್ತು ತನ್ನ ನೆರೆಹೊರೆಯಲ್ಲಿ ಮೂಲ/ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ನೀಡುವಎಲ್ಲಾ ಸಾರ್ವಜನಿಕ ಶಾಲೆಗಳನ್ನು ಹೊಂದಿರಲಿದೆ.

ಎಫ್. ಪ್ರತಿ ಶಾಲಾ ಸಂಕೀರ್ಣ ನಿರ್ವಹಣಾ ಸಮಿತಿ ಹೊಂದಿದ್ದು, ಸಂಕೀರ್ಣದಲ್ಲಿರುವ ಎಲ್ಲಾ ಶಾಲೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವುದರ ಜೊತೆಗೆ ವಯಸ್ಕರ ಶಿಕ್ಷಣ ಕೇಂದ್ರ, ಸಮೂಹ ಸಂಪನ್ಮೂಲ ಕೇಂದ್ರ ಮುಂತಾದ ಅನೇಕ ಇತರ ಕೇಂದ್ರಗಳು ಸಂಕೀರ್ಣಕ್ಕೆ ಸೇರಿಕೊಳ್ಳಲಿವೆ. ಶಾಲೆಯ ಪರವಾಗಿ ಮಧ್ಯಪ್ರವೇಶಿಸಿ ರಾಜ್ಯ ಮತ್ತು ಅದರ ಸಂಸ್ಥೆಗಳೊಂದಿಗೆ ಮಾತನಾಡಲು ಸಮಿತಿಗೆ ಅಧಿಕಾರ ನೀಡಲಾಗುತ್ತದೆ. ಇದು ಶಿಕ್ಷಕರ ಕಾರ್ಯಕ್ಷಮತೆಯ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಐ. ಪ್ರತಿ ಶಾಲೆಯೂ ತಮ್ಮ ಯೋಜನೆಗಳನ್ನು ಅಭಿವೃದ್ಧಿಪಡಿಸಿ, ಇದನ್ನು ಶಾಲಾ ಸಂಕೀರ್ಣದ ಯೋಜನೆಯನ್ನು ವಿಕಸಿಸಲು ಬಳಸಲಾಗುತ್ತದೆ. ಹಾಗೆಯೇ ಇದನ್ನು ಶಾಲಾ ಶಿಕ್ಷಣ ಇಲಾಖೆಯು ಅನುಮೋದಿಸುತ್ತದೆ. ಶಾಲಾ ವ್ಯವಸ್ಥೆಯ ಮೇಲ್ವಿಚಾರಣೆ ಮತ್ತು ಅವುಗಳ ಕಾರ್ಯನಿರ್ವಹಣೆ ಹಾಗೂ ಸಬಲೀಕರಣವನ್ನು ಸಕ್ರಿಯಗೊಳಿಸುವ ಸಲುವಾಗಿ ಪ್ರತಿ ಜಿಲ್ಲೆಯು ಜಿಲ್ಲಾ ಶಿಕ್ಷಣ ಸಮಿತಿ/ಜಿಲ್ಲಾ ಪರಿಷತ್ ಹೊಂದಿರುತ್ತದೆ.

Kiran Raghupathi

**ಶಾಲಾ ಶಿಕ್ಷಣದ ನಿಯಂತ್ರಣ:**

**ಉದ್ದೇಶ :** ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಪರಿಣಾಮಕಾರಿ ನಿಯಂತ್ರಣ ಮತ್ತು ಮಾನ್ಯತಾ ಕಾರ್ಯವಿಧಾನಗಳ ಮೂಲಕ ಉತ್ತೇಜಿಸಲಾಗುತ್ತದೆ ಮತ್ತು ಅದರ ಸಮಗ್ರತೆ ಹಾಗೂ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಶೈಕ್ಷಣಿಕ ಫಲಿತಾಂಶವನ್ನು ನಿರಂತರವಾಗಿ ಸುಧಾರಿಸಲು ಗುಣಮಟ್ಟ ಮತ್ತು ನಾವೀನ್ಯತೆಯನ್ನು ಪ್ರೋತ್ಸಾಹಿಸಲಾಗುತ್ತದೆ.

ನಿಯಂತ್ರಣವು ಶೈಕ್ಷಣಿಕ ಸುಧಾರಣೆಯ ಪ್ರಮುಖ ಸಾಧನವಾಗಬೇಕು ಮತ್ತು ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಗೊಳಿಸಬೇಕು.

ಹಿತಾಸಕ್ತಿಯ ಘರ್ಷಣೆಗಳನ್ನು ತೊಡೆದುಹಾಕಲು ಶಾಲೆಗಳ ನಿಯಂತ್ರಣ ಮತ್ತು ಕಾರ್ಯಾಚರಣೆಗಳನ್ನು (ಸೇವಾ ಅವಕಾಶ) ಪ್ರತ್ಯೇಕ ಸಂಸ್ಥೆಗಳು ನೋಡಿಕೊಳ್ಳುತ್ತವೆ. ನೀತಿಯನ್ನು ಸಿದ್ಧಪಡಿಸಲು, ಕಾರ್ಯನಿರ್ವಹಿಸಲು ಮತ್ತು ಶೈಕ್ಷಣಿಕ ವಿಷಯಗಳಿಗೆ ಸ್ಪಷ್ಟವಾದ ಪ್ರತ್ಯೇಕ ವ್ಯವಸ್ಥೆಗಳು ಇರುತ್ತವೆ.

ಪ್ರಸ್ತುತ ಪರಿಶೀಲನಾ ವಿಧಾನದಿಂದ ನಿಯಂತ್ರಣವನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಬದಲಾಗಿ ಶಾಲೆಗಳಿಗೆ ಸಂಬಂಧಿಸಿದ ಎಲ್ಲಾ ಮುಖ್ಯವಾದ ಮಾಹಿತಿಯು ಸಾರ್ವಜನಿಕ ವಲಯದಲ್ಲಿರುವುದರಿಂದ, ಪೋಷಕರು ವಾಸ್ತವಿಕ ನಿಯಂತ್ರಕರಾಗಿರುತ್ತಾರೆ.

Kiran Raghupathi

# ಅಧ್ಯಾಯ–5

## ಶಾಲೆಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಮತ್ತು ಶಾಲಾ ಸಿದ್ಧಿ

**ಉದ್ದೇಶಗಳು**

**ಈ ಅಧ್ಯಾಯದ ನಂತರ ಸದಸ್ಯರು...**

- ಶಿಕ್ಷಣ ಹಕ್ಕು ಕಾಯಿದೆ ಪ್ರಕಾರ ಶಾಲೆಯ ಒಟ್ಟಾರೆ ಕಾರ್ಯನಿರ್ವಹಣೆಯ ಮೌಲ್ಯಮಾಪನ ಮಾಡುವ ಸಾಮರ್ಥ್ಯ ಪಡೆಯುವರು.
- ಶಾಲಾಭಿವೃದ್ಧಿ ಯೋಜನೆ ತಯಾರಿ, ಅನುಷ್ಠಾನ, ಅನುಪಾಲನೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆಯನ್ನುಅವಲೋಕಿಸಿ ಸುಧಾರಿತ ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸಲು ಸಲಹೆ ನೀಡುವ ಜ್ಞಾನ ಗಳಿಸುವರು.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯವೈಖರಿ ಅರ್ಥಮಾಡಿಕೊಂಡು ಸ್ಥಳೀಯಪ್ರಾಧಿಕಾರದ ಬಲವರ್ಧನೆಗೆ ಸಹಕರಿಸುವ ಮನೋಭಾವ ಮೂಡಿಸಿಕೊಳ್ಳುವರು.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವರು.
- ಮಕ್ಕಳ ಕಲಿಕೆಯನ್ನು ಅವಲೋಕಿಸುವುದರ ಮಾಹಿತಿ ಹೊಂದುವರು.
- ಸಾಮಾಜಿಕ ಲೆಕ್ಕಪರಿಶೋಧನೆಯ ಪ್ರಕ್ರಿಯೆಯಲ್ಲಿ ಎಲ್ಲಾ ಭಾಗೀದಾರರ ಮುಕ್ತ ಸಂವಾದಕ್ಕೆ ಅವಕಾಶ ಮಾಡಿಕೊಡುವರು.
- ಶಾಲೆಯ ಒಟ್ಟಾರೆ ಕಾರ್ಯನಿರ್ವಹಣೆಯ ಪಾರದರ್ಶಕತೆಯನ್ನು ಇಡೀ ಸಮುದಾಯಕ್ಕೆ ಪ್ರಸ್ತುತಪಡಿಸುವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳುವರು.

ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಹಕಾರಿಯಾಗುವಂತೆ ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಸಬಲೀಕರಣಗೊಳಿಸಲು 2011–12 ಸಾಲಿನಿಂದ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮತ್ತು 2012–13ನೇ ಸಾಲಿನಿಂದ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸಲು ಕ್ರಮವಾಗಿ 'ಸಮ್ಮಿಲನ' ಮತ್ತು 'ಸಂಗಮ' ಎಂಬ ಪುಸ್ತಕಗಳಲ್ಲಿ ಸಂಪನ್ಮೂಲ ಸಾಹಿತ್ಯ ರಚಿಸಿ, ಪ್ರಕಟಿಸಲಾಗಿದೆ. ಪ್ರೌಢಶಾಲೆಗಳ ಶಾಲಾಭಿವೃದ್ಧಿ ಯೋಜನೆಯಲ್ಲಿ 141 ಸೂಚಕಗಳನ್ನು ಹಾಗೂ ಪ್ರಾಥಮಿಕ ಶಾಲೆಗಳ ಶಾಲಾಭಿವೃದ್ಧಿ ಯೋಜನೆಯಲ್ಲಿ 158 ಸೂಚಕಗಳನ್ನು ಸೇರಿಸಲಾಗಿದೆ.

2016–17ನೇ ಸಾಲಿನಲ್ಲಿ ನವದೆಹಲಿಯ ನ್ಯೂಪಾ ಸಂಸ್ಥೆಯಿಂದ ಜಾರಿಗೆ ತರಲಾಗಿರುವ ಶಾಲಾಸಿದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ವ ಶಿಕ್ಷಣ ಅಭಿಯಾನ ಮತ್ತು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು (ಕೆ.ಎಸ್.ಕ್ಯೂ.ಎ.ಎ.ಸಿ) ಇವುಗಳ ಜಂಟಿ ಸಹಭಾಗಿತ್ವದಲ್ಲಿ ಕ್ರಮವಹಿಸಲಾಗುತ್ತಿದೆ.

ಶಾಲಾ ಸಿದ್ಧಿ ಮತ್ತು ಶಾಲಾಭಿವೃದ್ಧಿ ಯೋಜನೆ – ಇವೆರೆಡರ ಉದ್ದೇಶ ಬಹುತೇಕ ಒಂದೇ ಆಗಿದೆ. ಶಾಲಾಭಿವೃದ್ಧಿ ಯೋಜನೆಯು ಶಾಲೆಯ ಸಮಗ್ರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಬೇಕಾದ ಚಟುವಟಿಕೆಗಳ ಕ್ರಿಯಾ ಯೋಜನೆಯ ಪ್ರಕ್ರಿಯೆಯನ್ನು ಸ್ಥಿರೀಕರಿಸುವ ದಾಖಲೆಯಾದರೆ, ಶಾಲಾಸಿದ್ಧಿ ಮತ್ತು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು ಸದರಿ ಯೋಜನೆಯ ಅನುಷ್ಠಾನ ಮತ್ತು ಫಲಿತಾಂಶವನ್ನು ಮೌಲ್ಯಮಾಪನ ಮಾಡಿ, ಸದರಿ ಶಾಲೆಯ ಗುಣಮಟ್ಟ ನಿರ್ಧರಿಸುವ ಪ್ರಕ್ರಿಯೆ ಆಗಿದೆ.

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು 5 ಕ್ಷೇತ್ರಗಳು, 15 ಮಾನದಂಡಗಳ 98 ಸೂಚಕಗಳನ್ನು ಒಳಗೊಂಡಿದೆ. ಶಾಲಾ ಸಿದ್ಧಿ 12 ಮಾನದಂಡಗಳು 47 ಸೂಚಕಗಳನ್ನು ಒಳಗೊಂಡಿದೆ. ಪ್ರಾಥಮಿಕ ಶಾಲೆಗಳ ಶಾಲಾಭಿವೃದ್ಧಿ ಯೋಜನೆಯಲ್ಲಿ 7 ಕ್ಷೇತ್ರಗಳಲ್ಲಿ 158 ಸೂಚಕಗಳನ್ನು ಒಳಗೊಂಡಿದೆ. ಪ್ರೌಢಶಾಲೆಗಳ ಶಾಲಾಭಿವೃದ್ಧಿ ಯೋಜನೆ 141 ಸೂಚಕಗಳನ್ನು ಒಳಗೊಂಡಿದೆ. ಮೇಲ್ಕಾಣಿಸಿದ ಎಲ್ಲಾ ದಾಖಲೆಗಳ ಸೂಚಕಗಳು ಸಮುದಾಯದ ಸಕ್ರಿಯ

Kiran Raghupathi

ಪಾಲ್ಗೊಳ್ಳುವಿಕೆಯೊಂದಿಗೆ ಶಾಲೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಮೂಲಕ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶ ಹೊಂದಿದೆ.

ಈ ಹಿನ್ನೆಲೆಯಲ್ಲಿ ಶಾಲಾಭಿವೃದ್ಧಿ ಯೋಜನೆಯ ಅಧ್ಯಾಯದಲ್ಲಿ ಪ್ರಸ್ತಾಪಿಸಿರುವ ಅಂಶಗಳನ್ನು ಎಲ್ಲಾ ಭಾಗೀದಾರರೂ ಮನನ ಮಾಡಿಕೊಂಡು ಕ್ರಿಯಾತ್ಮಕ ಯೋಜನೆ ಸಿದ್ಧಪಡಿಸಿ, ಅನುಷ್ಠಾನಗೊಳಿಸಬೇಕು. ಶಾಲಾ ಸಿದ್ಧಿಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿರುವ ಸೂಚಕಗಳು ಶಾಲಾಭಿವೃದ್ಧಿ ಯೋಜನೆಯಲ್ಲಿ ವಿಸ್ತೃತವಾಗಿ ಪ್ರಸ್ತಾಪಿಸಲ್ಪಟ್ಟಿರುವ ಕಾರಣ ಶಾಲಾಭಿವೃದ್ಧಿ ಯೋಜನೆಯನ್ನು ಅರ್ಥಪೂರ್ಣವಾಗಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅನುಷ್ಠಾನಗೊಳಿಸಬೇಕಾಗಿದೆ. ಶಾಲಾ ಸಿದ್ಧಿ ಮತ್ತು ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು ಶಾಲೆಗಳ ಮೌಲ್ಯಮಾಪನ ಮಾಡಿ ಗುಣಮಟ್ಟ ನಿರ್ಧರಿಸುವುದು.

ಸಾಮಾಜಿಕ ಲೆಕ್ಕ ಪರಿಶೋಧನೆಗೆ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ನಿಗದಿಪಡಿಸಿರುವ ನಮೂನೆಯ ಕ್ರಮಸಂಖ್ಯೆ 3ರ ಗುಣಾತ್ಮಕ ಕಲಿಕೆಯ ನಮೂನೆಗೆ 'ಪಢೇ ಭಾರತ್ ಬಢೇ ಭಾರತ್', 'ಬೇಟಿ ಬಚಾವೋ ಬೇಟಿ ಪಢಾವೋ', ಸಿಸಿಇ ಇತ್ಯಾದಿ ವಿಶೇಷ ಅಂಶಗಳನ್ನು ಒಳಗೊಂಡ ಹೆಚ್ಚುವರಿ ಅನುಬಂಧವನ್ನು ಸಾಮಾಜಿಕ ಲೆಕ್ಕಪರಿಶೋಧನಾ ತಂಡ ಬಳಸುವಂತಾಗಬೇಕು. ಪ್ರಾಥಮಿಕ ಶಾಲೆಗಳ ಶಾಲಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಸೂಚಕಗಳು ಹಾಗೂ ಮತ್ತಿತರ ವಿವರಗಳಿಗಾಗಿ 2012–13ನೇ ಸಾಲಿನಲ್ಲಿ ಪ್ರಕಟಿಸಿರುವ 'ಸಂಗಮ' ಪುಸ್ತಕವನ್ನು ಅವಲೋಕಿಸಬೇಕು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ತಾಯಂದಿರ ಮೇಳ, ಮಕ್ಕಳ ವಿಶೇಷ ಗ್ರಾಮಸಭೆ, ಗ್ರಾಮಸಭೆ, ತಿಂಗಳ ತಿರುಳು ಮುಂತಾದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿದೆ. ಶಾಲೆಗೆ ಬನ್ನಿ ಶನಿವಾರ ಇತ್ತೀಚಿನ ಸೇರ್ಪಡೆ. ಸಮುದಾಯದ ಪಾಲ್ಗೊಳ್ಳುವಿಕೆಗಾಗಿ ಸಮುದಾಯದತ್ತ ಶಾಲಾ ಕಾರ್ಯಕ್ರಮ ಪ್ರಾರಂಭದ ದಿನಗಳಲ್ಲಿ ಒಂದು ವಿನೂತನ ಪ್ರಯೋಗವಾಗಿತ್ತು. ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಪಾರದರ್ಶಕತೆಗೆ ಮತ್ತೊಂದು ಅರ್ಥಪೂರ್ಣ ಪ್ರಯೋಗ ಸಾಮಾಜಿಕ ಲೆಕ್ಕಪರಿಶೋಧನೆ.

ಶಿಕ್ಷಣ ಹಕ್ಕು ಕಾಯಿದೆಯ ಅರ್ಥಪೂರ್ಣ ಅನುಷ್ಠಾನಕ್ಕಾಗಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿ ಸಮುದಾಯದತ್ತ ಶಾಲಾ ಕಾರ್ಯಕ್ರಮದ ಹೊಸ ರೂಪವಾಗಿದೆ.

ಬದುಕಿನ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯಗಳನ್ನು ಮಕ್ಕಳಲ್ಲಿ ಮೈಗೂಡಿಸುವ ಕೇಂದ್ರ 'ಶಾಲೆ'. ಶೈಕ್ಷಣಿಕ ತಂತ್ರಜ್ಞಾನದ ಬದಲಾವಣೆಯಿಂದಾಗಿ ಹೆಚ್ಚಿನ ಕಲಿಕೆ ತರಗತಿ ಕೋಣೆಗಳಿಗಿಂತ ಹೊರಗಡೆ ಆಗುತ್ತಿದೆ. ಕಲಿಕೆಗೆ ಕೊನೆ ಎಂಬುದಿಲ್ಲ. ಬದಲಾದ ಸನ್ನಿವೇಶಕ್ಕೆ, ಸವಾಲುಗಳಿಗೆ ಸಮರ್ಥವಾಗಿ ಪ್ರತಿಕ್ರಿಯಿಸಲು ಸರ್ಕಾರಿ ಶಾಲೆಗಳ ಸಬಲೀಕರಣ ಇಂದು ಅನಿವಾರ್ಯವಾಗಿದೆ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಶಾಲೆ ಮತ್ತು ಸಮುದಾಯದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಬೇಕಾಗಿದೆ. ಶಾಲೆ ಸಮುದಾಯದ ವಾರಸುದಾರಿಕೆ ಮತ್ತು ಒಡೆತನವನ್ನು ಹೊಂದಿರಬೇಕು. ಎಲ್ಲಿಯವರೆಗೆ ಸಮುದಾಯ ಶಾಲಾ ಒಡೆತನ ಹಾಗೂ ವಾರಸುದಾರಿಕೆಯನ್ನು ವಹಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಸಮುದಾಯದ ಎಲ್ಲಾ ಭಾಗೀದಾರರ ಸಕ್ರಿಯ ಪಾಲ್ಗೊಳ್ಳುವಿಕೆ ಸಾಧ್ಯವಾಗುವುದಿಲ್ಲ.

ಈ ತರಬೇತಿ ಸಾಹಿತ್ಯದಲ್ಲಿ ಪ್ರಸ್ತಾಪಿಸಿರುವ ಪ್ರತಿಯೊಂದು ಅಧ್ಯಾಯ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಂದೊಂದು ಮೆಟ್ಟಿಲು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆ, ಕಾರ್ಯನಿರ್ವಹಣೆ, ಮಕ್ಕಳ ಕಲಿಕೆ ಮತ್ತು ಪೂರಕ ವ್ಯವಸ್ಥೆಗಳ ಮಾಹಿತಿ ಮಕ್ಕಳ ಸುರಕ್ಷತಾ ನೀತಿ, ಶಾಲಾ ನೈರ್ಮಲ್ಯ, ನಲಿ–ಕಲಿ, ಸಿಸಿಇ, ಶಾಲಾಭಿವೃದ್ಧಿ ಯೋಜನೆಗಳನ್ನು ಅರ್ಥೈಸಿಕೊಳ್ಳುವ ಮೂಲಕ ಸಾಮಾಜಿಕ ಲೆಕ್ಕಪರಿಶೋಧನೆಯು ಶಾಲಾ ಕಾರ್ಯನಿರ್ವಹಣೆಯ ಮೌಲ್ಯಮಾಪನದಲ್ಲಿ ಮಹತ್ತರ ಮೈಲುಗಲ್ಲಾಗಿದೆ.

Kiran Raghupathi

**ಸಾಮಾಜಿಕ ಲೆಕ್ಕ ಪರಿಶೋಧನೆಗೆ ಪೂರ್ವಸಿದ್ಧತೆ**

ಸಾಮಾಜಿಕ ಲೆಕ್ಕ ಪರಿಶೋಧನೆಗೆ ಪೂರ್ವಸಿದ್ಧತೆ ಹಿನ್ನೆಲೆಯಲ್ಲಿ ಭಾಗೀದಾರರಾರು ಈ ಕೆಳಕಾಣಿಸಿದ ಕೆಲವು ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಬೇಕು.

- ನಿಮ್ಮೂರಿನ ಶಾಲೆಯಲ್ಲಿ ಕಲಿಯುತ್ತಿರುವ ನಿಮ್ಮ ಮಗುವಿನ ಕಲಿಕೆ ಬಗ್ಗೆ ನಿಮಗೆ ತೃಪ್ತಿ ಇದೆಯೆ?
- ನಿಮ್ಮ ಮಗು ಕಲಿಯುತ್ತಿರುವ ಶಾಲೆಯಲ್ಲಿ ನೀವು ಬಯಸುವ ಸೌಲಭ್ಯಗಳು ಯಾವುವು?
- ಮೂಲ ಸೌಕರ್ಯಗಳಾದ ಶಾಲಾ ಕೊಠಡಿ, ಕುಡಿಯುವ ನೀರು, ಶೌಚಾಲಯ ಇತ್ಯಾದಿ.
- ಕಲಿಕೆಗೆ ಪೂರಕವಾದ ಕಲಿಕಾ ಸಾಮಗ್ರಿ, ಗ್ರಂಥಾಲಯ ಇತ್ಯಾದಿ.
- ಆಟದ ಮೈದಾನ
- ಮಕ್ಕಳು ಶಿಕ್ಷಕರ ಅನುಪಾತ
- ಶಿಕ್ಷಕರ ಹಾಜರಾತಿ / ಕಾರ್ಯನಿರ್ವಹಣೆ
- ತರಗತಿ ನಿರ್ವಹಣೆ ಇತ್ಯಾದಿ,
- ನಿಮ್ಮ ಶಾಲೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯನಿರ್ವಹಣೆ ಹೇಗಿದೆ?
- ನಿಮ್ಮ ಶಾಲೆಯಲ್ಲಿ ಶಾಲಾಭಿವೃದ್ಧಿ ಯೋಜನೆ ಸಿದ್ಧಪಡಿಸಲಾಗಿದೆಯೆ?
- ನಿಮ್ಮ ಶಾಲೆಯ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ನೀವು ಭಾಗವಹಿಸಿದ್ದೀರಾ?
- ನಿಮ್ಮ ಶಾಲೆಯ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಿಮಗೆ ತೃಪ್ತಿ ತಂದಿದೆಯೆ?
- ನಿಮ್ಮ ಮಗುವಿನ ಕಲಿಕೆಯ ಬಗ್ಗೆ ಶಿಕ್ಷಕರು ನಿಮಗೆ ಮನವರಿಕೆ ಮಾಡಿದ್ದಾರೆಯೆ?
- ನೀವು ಹಾಗೂ ನಿಮ್ಮ ಮಗುವಿನ ಜೊತೆ ಶಿಕ್ಷಕರು ಸಮಾಲೋಚಿಸಿದ್ದಾರೆಯೆ?
- ನಿಮ್ಮ ಮಗುವಿನ ಕಲಿಕಾ ಸಮಸ್ಯೆಗಳ ಬಗ್ಗೆ ಶಿಕ್ಷಕರು ನಿಮಗೆ ತಿಳಿಸಿದ್ದಾರೆಯೆ?
- ನಿಮ್ಮ ಶಾಲೆಯ ತಂದೆ–ತಾಯಿ ಪರಿಷತ್ತಿನಲ್ಲಿ ನೀವು ಭಾಗವಹಿಸಿದ್ದೀರಾ?
- ನಿಮ್ಮ ಶಾಲೆಯಲ್ಲಿನ ಮಧ್ಯಾಹ್ನ ಉಪಹಾರ ಯೋಜನೆ ನಿಮಗೆ ತೃಪ್ತಿ ನೀಡಿದೆಯೆ?
- ನಿಮ್ಮ ಶಾಲೆಯಲ್ಲಿ ಸಾರ್ವಜನಿಕ ಮಾಹಿತಿಗಾಗಿ ಫಲಕ ನಿರ್ವಹಿಸಲಾಗಿದೆಯೆ?
- ನಿಮ್ಮ ಗ್ರಾಮದ ಗ್ರಾಮಸಭೆಯಲ್ಲಿ ಶಾಲೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲಾಗಿದೆಯೆ?
- ಶಾಲಾ ವಾರ್ಷಿಕೋತ್ಸವದಲ್ಲಿ ನಿಮ್ಮ ಮಗು ಪ್ರತಿಭೆಯನ್ನು ಪ್ರದರ್ಶಿಸಿದೆಯೆ?

ಮೇಲ್ಕಾಣಿಸಿದ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಗಮನಿಸಿ, ಸ್ವಯಂಮೌಲ್ಯಮಾಪನ ಮಾಡಿಕೊಳ್ಳಿ. ಸಾಮಾಜಿಕ ಲೆಕ್ಕ ಪರಿಶೋಧನೆಗಾಗಿ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ನೀಡಿರುವ ಚೆಕ್‌ಲಿಸ್ಟನ್ನು(ನಮೂನೆ) ಅನುಬಂಧದಲ್ಲಿ ಲಗತ್ತಿಸಲಾಗಿದೆ. ಅದನ್ನು ಗಮನಿಸಿ, ಸದರಿ ನಮೂನೆಯಲ್ಲಿ ಇರುವ ಪ್ರಶ್ನೆಗಳಿಗೆ ಉತ್ತರಿಸಲು ಶಾಲಾ ಮುಖ್ಯೋಪಾಧ್ಯಾಯರಿಂದ ಅಗತ್ಯ ಮಾಹಿತಿ ಸಂಗ್ರಹಿಸಿ. ಶಾಲಾ ಆವರಣ, ಶಾಲಾಕೊಠಡಿ, ತರಗತಿ ಕೊಠಡಿಗಳನ್ನು ಒಮ್ಮೆ ನಿಧಾನವಾಗಿ ಅವಲೋಕಿಸಿ. ನಮೂನೆ ಭರ್ತಿ ಮಾಡುವ ಮುಂಚೆ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರೊಂದಿಗೆ ಚರ್ಚಿಸಿ. ನಿಮ್ಮ ಮನಸಿನಲ್ಲಿ ಮೂಡುವ ಪ್ರಶ್ನೆಗಳನ್ನು ಮುಕ್ತವಾಗಿ ಕೇಳಿ ಮಾಹಿತಿಪಡೆಯಿರಿ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆ, ಕಾರ್ಯನಿರ್ವಹಣೆ, ಸಭಾ ನಡಾವಳಿ, ಅನುಪಾಲನಾ ಕ್ರಮಗಳ ಬಗ್ಗೆ ಮಾಹಿತಿ ಸಂಗ್ರಹಿಸಿ. ಶಾಲಾಭಿವೃದ್ಧಿ ಯೋಜನೆಯ ಅಧ್ಯಾಯದಲ್ಲಿ ಮಾದರಿಗಾಗಿ ನೀಡಿರುವ ಪ್ರಶ್ನೆಗಳಿಗೆ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳಿ. ಈ ತರಬೇತಿ ಸಾಹಿತ್ಯದ ಇತರೆ ಅಧ್ಯಾಯಗಳಲ್ಲಿ ನೀಡಿರುವ ಕಾಯಿದೆಯ ಅಂಶಗಳು ಹಾಗೂ ಸಲಹೆ

Kiran Raghupathi

ಸೂಚನೆ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಿ.

ಸಾಮಾಜಿಕ ಲೆಕ್ಕ ಪರಿಶೋಧನೆಯ ಪೂರ್ವಸಿದ್ಧತೆಗಾಗಿ ಶಾಲಾಭಿವೃದ್ಧಿ ಯೋಜನೆಗೆ ಇಲಾಖೆ ಸಿದ್ಧಪಡಿಸಿರುವ ಸಂಗಮ ಮತ್ತು ಸಮ್ಮಿಲನ ಎಂಬ ತರಬೇತಿ ಸಾಹಿತ್ಯದಲ್ಲಿ ನೀಡಿರುವ ಸೂಚಕಗಳು ಮತ್ತು ಸೂಚನೆಗಳ ಬಗ್ಗೆ ಮನನಮಾಡಿಕೊಳ್ಳಿ.

"ಶಾಲೆಗೆ ಬನ್ನಿ ಶನಿವಾರ" ಮಕ್ಕಳ ಕುತೂಹಲವನ್ನು ಕೆರಳಿಸಿ ಜ್ಞಾನಾರ್ಜನೆಗೆ ಸಜ್ಜುಗೊಳಿಸುವ ವಿಶಿಷ್ಟ ಕಾರ್ಯಕ್ರಮವಾಗಿದ್ದು, ಈ ಬಗ್ಗೆ ಶಿಕ್ಷಣಾಸಕ್ತರು ಶಾಲೆಗೆ ಬಂದು ನೀಡಿರುವ ಕಾರ್ಯಕ್ರಮಗಳನ್ನು ಅವಲೋಕಿಸಿ, ಟಿಪ್ಪಣಿ ಮಾಡಿಕೊಳ್ಳಿ.

ಶಾಲೆಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಮಾಹಿತಿ ಫಲಕದಲ್ಲಿ ನಿರ್ವಹಿಸಿರುವ ಮಾಹಿತಿಯನ್ನು ಅವಲೋಕಿಸಿ, ಅಪೂರ್ಣ ಇದ್ದಲ್ಲಿ ಪೂರ್ಣಗೊಳಿಸಲು ಮುಖ್ಯ ಶಿಕ್ಷಕರಿಗೆ ಸೂಚನೆ ನೀಡಿ ಮತ್ತು ಈ ಬಗ್ಗೆ ಇಲಾಖೆ ನೀಡಿರುವಸುತ್ತೋಲೆಗಳನ್ನು ಮನನ ಮಾಡಿಕೊಳ್ಳಿ.

ಸಮುದಾಯದತ್ತ ಶಾಲಾ ಕಾರ್ಯಕ್ರಮದ ಬಗ್ಗೆ ಇಲಾಖೆ ನೀಡಿರುವ ಸುತ್ತೋಲೆಗಳನ್ನು ಅವಲೋಕಿಸಿ, ಸುತ್ತೋಲೆಯ ಸೂಚನೆಗಳನ್ವಯ ಸಮುದಾಯದತ್ತ ಶಾಲಾ ಕಾರ್ಯಕ್ರಮ ನಡೆದಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಿ.

**ಸಾಮಾಜಿಕ ಲೆಕ್ಕಪರಿಶೋಧನಾ ತಂಡದ ಪೂರ್ವಸಿದ್ಧತೆ**

ಸಾಮಾಜಿಕ ಲೆಕ್ಕ ಪರಿಶೋಧನಾ ತಂಡವು ಎಸ್.ಡಿ.ಎಂ.ಸಿ.ಅಧ್ಯಕ್ಷರು ಹಾಗೂ ಮುಖ್ಯ ಶಿಕ್ಷಕರೊಂದಿಗೆ ಸಮಾಲೋಚಿಸಿ 15 ದಿನಗಳ ಮುಂಚಿತವಾಗಿ ದಿನಾಂಕ ನಿಗದಿಪಡಿಸಬೇಕು.

ಎಸ್.ಡಿ.ಎಂ.ಸಿ.ಯು ಸ್ಥಳೀಯ ಪ್ರಾಧಿಕಾರವಾಗಿದ್ದು, ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012ರ ನಿಯಮ 17ರಲ್ಲಿ ಶಿಕ್ಷಣದ ಕುಂದುಕೊರತೆ ವಿಲೇವಾರಿಗೆ ಪ್ರಥಮಹಂತದ ಕುಂದುಕೊರತೆ ವಿಲೇವಾರಿ ಪ್ರಾಧಿಕಾರ ಆಗಿದೆ.

ಸಾಮಾಜಿಕ ಲೆಕ್ಕ ಪರಿಶೋಧನೆಯ ತಂಡ ಶಾಲೆಗೆ ಆಗಾಗ್ಗೆ ಅನೌಪಚಾರಿಕವಾಗಿ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಬೇಕು, ಅಲ್ಲದೆ ಶಾಲೆಯಲ್ಲಿ ನಡೆಯುವ ದಿನಾಚರಣೆಗಳು, ಸಮುದಾಯದತ್ತ ಶಾಲಾ ಕಾರ್ಯಕ್ರಮ, ತಂದೆತಾಯಿ ಪರಿಷತ್ ಸಭೆ, ಶಾಲಾ ವಾರ್ಷಿಕೋತ್ಸವ, ಕ್ರೀಡಾಕೂಟ ಇನ್ನಿತರ ಚಟುವಟಿಕೆಗಳ ಸಭೆ ಸಮಾರಂಭಗಳಲ್ಲಿ ವೀಕ್ಷಕರಾಗಿ ಭಾಗವಹಿಸಿ, ಆಯಾ ದಿನವೇ ಟಿಪ್ಪಣಿ ಮಾಡಿಕೊಂಡು ಶಾಲಾ ಮುಖ್ಯಸ್ಥರೊಂದಿಗೆ ಸಮಾಲೋಚಿಸಬೇಕು.

ಶಾಲೆಯ ಎಲ್ಲಾ ಭಾಗೀದಾರರು ಭಾಗವಹಿಸುವಂತೆ ಸ್ಥಳೀಯ ಮಾಧ್ಯಮದ ಮೂಲಕ ವ್ಯಾಪಕ ಪ್ರಚಾರನೀಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು, ಸಾರ್ವಜನಿಕರು, ಸ್ವ ಸಹಾಯ ಸಂಘದ ಸದಸ್ಯರು, ಯುವಕ ಸಂಘ, ಯುವತಿ ಮಂಡಲದ ಸದಸ್ಯರು, ಹಿರಿಯ ವಿದ್ಯಾರ್ಥಿಗಳು, ದಾನಿಗಳು, ಸ್ಥಳೀಯ ಜನ ಪ್ರತಿನಿಧಿಗಳು, ಸ್ಥಳೀಯಕಛೇರಿಗಳ ಮುಖ್ಯಸ್ಥರು ಭಾಗವಹಿಸುವಂತೆ ಆಹ್ವಾನ ಪತ್ರ ಕಳುಹಿಸಿಕೊಡಬೇಕು.

ಸಾಮಾಜಿಕ ಲೆಕ್ಕ ಪರಿಶೋಧನೆಯ ನಮೂನೆಯಲ್ಲಿ ಮೂಲ ಸೌಕರ್ಯ ಮುಂತಾದ ಅಗತ್ಯ ಮಾಹಿತಿಯನ್ನು, ಶಾಲಾ ದಾಖಲೆಗಳನ್ನು ಪರಿಶೀಲಿಸಿ ಮೊದಲೇ ಭರ್ತಿ ಮಾಡಿಕೊಂಡಿರಬೇಕು. ಸಾಮಾಜಿಕ ಲೆಕ್ಕ ಪರಿಶೀಲನೆಯ ದಿನಾಂಕ ನಿಗದಿಯಾದ ಕೂಡಲೇ ನಿಗದಿತ ದಿನಾಂಕಕ್ಕಿಂತ ಒಂದೆರಡು ದಿನ ಮುಂಚೆ ಸಂಬಂಧಿಸಿದ ನಮೂನೆಯೊಂದಿಗೆ ಶಾಲೆಗೆ ಲೆಕ್ಕ ಪರಿಶೋಧನಾ ತಂಡ ಭೇಟಿ ನೀಡಿ ಈ ಕೆಳಕಾಣಿಸಿದ ಅಂಶಗಳಿಗೆ ಉತ್ತರ ಕಂಡುಕೊಳ್ಳಬೇಕು;

- ಶಿಕ್ಷಕರ ಹಾಜರಾತಿ ವಹಿ ನೋಡಿ ಪ್ರತಿ ಶಿಕ್ಷಕರು ಬಳಸಿಕೊಂಡಿರುವ ರಜಾ ದಿನಗಳು, ಅನ್ಯ ಕಾರ್ಯನಿಮಿತ್ತದ ದಿನಗಳು ಹಾಗೂ ಬೋಧನೇತರ ಚಟುವಟಿಕೆಗಳ ದಿನಗಳನ್ನು ಲೆಕ್ಕ ಮಾಡಿಕೊಳ್ಳುವುದು.
- ಶಿಕ್ಷಕರ ಸಕಾಲಿಕ ಹಾಜರಾತಿ, ಸಮಯ ಪಾಲನೆ ಬಗ್ಗೆ ಮಕ್ಕಳು ಹಾಗೂ ಪೋಷಕರಿಂದ ಮಾಹಿತಿ ಸಂಗ್ರಹಿಸುವುದು.

Kiran Raghupathi

- ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗೆ ಶಿಕ್ಷಕರು ನೀಡಿರುವ ವಿಶೇಷ ಮಾರ್ಗದರ್ಶನ ಏನು ಎಂಬ ಬಗ್ಗೆ ಮಕ್ಕಳಿಂದಲೇ ಮಾಹಿತಿ ಸಂಗ್ರಹಿಸಿಟ್ಟುಕೊಳ್ಳುವುದು.
- ತದನಂತರ ಇದೇ ಪ್ರಶ್ನೆಗೆ ಶಿಕ್ಷಕರು ನೀಡುವ ಉತ್ತರ ತಾಳೆ ನೋಡಿ, ವ್ಯತ್ಯಾಸವಿದ್ದಲ್ಲಿ ಸತ್ಯಾಸತ್ಯತೆಯನ್ನು ಪರಿಶೀಲಿಸಿ ವಾಸ್ತವತೆಯನ್ನು ಖಾತರಿಪಡಿಸಿಕೊಳ್ಳುವುದು.
- ಯಾವುದಾದರೂ ಮಗುವಿಗೆ ಶಿಕ್ಷಕರು ಎಂದಾದರೂ, ಯಾವುದಾದರೂ ದಂಡನೆ ನೀಡಿರುವರೆ? ದಂಡನೆ ನೀಡಿದ್ದರೆ ಕಾರಣ ತಿಳಿದುಕೊಂಡು ಟಿಪ್ಪಣಿ ಮಾಡಿಕೊಳ್ಳುವುದು.
- ನಿಮ್ಮ ಗ್ರಾಮದಲ್ಲಿ ಗ್ರಾಮ ಸಭೆಗಳು / ವಾರ್ಡ್ ಸಭೆಗಳು ನಡೆದಿವೆಯೇ? ನಡೆದಿದ್ದರೆ ದಾಖಲೆ ಪರಿಶೀಲಿಸಿ ದಿನಾಂಕ ನಮೂದಿಸಿ, ಭಾಗವಹಿಸಿದವರ ಸಂಖ್ಯೆ ನಮೂದಿಸಿಕೊಳ್ಳುವುದು.
- ನಿಮ್ಮ ಶಾಲೆಯಲ್ಲಿ ತಂದೆತಾಯಿ ಪರಿಷತ್ ಸಭೆಗಳು ನಡೆದಿವೆಯೇ? ನಡೆದಿದ್ದರೆ ದಾಖಲೆ ಪರಿಶೀಲಿಸಿ, ದಿನಾಂಕ ಹಾಗೂ ಭಾಗವಹಿಸಿದವರ ಸಂಖ್ಯೆ ನಮೂದಿಸಿಕೊಳ್ಳುವುದು.
- ನಿಮ್ಮೂರ ಶಾಲೆಗೆ ಆಟದ ಮೈದಾನ ಇದೆಯೇ?
- ನಿಮ್ಮ ಶಾಲಾ ಆವರಣ ಸ್ವಚ್ಛವಾಗಿದೆಯೇ?
- ನಿಮ್ಮ ಶಾಲೆಯಲ್ಲಿ ಶಾಲಾವನ, ಶಾಲಾ ಕೈತೋಟ ನಿರ್ವಹಿಸಲಾಗಿದೆಯೇ?
- ಪ್ರತಿ ತರಗತಿ ಕೊಠಡಿಗಳಲ್ಲಿ ಕಸದ ಬುಟ್ಟಿ ಇಡಲಾಗಿದೆಯೇ?
- ತರಗತಿ ಕೊಠಡಿಗಳಲ್ಲಿ ಕಲಿಕೆಗೆ ಪೂರಕವಾಗುವ ಕಲಿಕಾ ಸಾಮಗ್ರಿಗಳನ್ನು ಶಿಕ್ಷಕರು ತಯಾರಿಸಿ ಬಳಸುತ್ತಿದ್ದಾರೆಯೇ?
- ಕಲಿಕಾ ಪ್ರಕ್ರಿಯೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಲಾಗುತ್ತಿದೆಯೇ?
- ಮಧ್ಯಾಹ್ನ ಉಪಹಾರ ಯೋಜನೆಯಡಿ ಊಟ ಮಾಡದಿರುವ ಯಾವುದಾದರೂ ಮಗು ಇದೆಯೇ? ಇದ್ದರೆ ಕಾರಣ ತಿಳಿದುಕೊಳ್ಳುವುದು.
- ಯಾವುದಾದರೂ ಮಗು ಶಾಲೆ ಬಿಟ್ಟಿದೆಯೇ? ಬಿಟ್ಟಿದ್ದರೆ ಯಾವ ದಿನಾಂಕದಿಂದ ಮತ್ತು ಯಾವ ಕಾರಣಕ್ಕಾಗಿ ಶಾಲೆಗೆ ಗೈರು ಹಾಜರಾದ ಮಗುವನ್ನು ಮತ್ತೆ ಶಾಲೆಗೆ ಕರೆತರಲು ಮುಖ್ಯ ಶಿಕ್ಷಕರು ಹಾಗೂ ಹಾಜರಾತಿ ಪ್ರಾಧಿಕಾರಿಯಾದ ಶಿಕ್ಷಣ ಸಂಯೋಜಕರು ತೆಗೆದುಕೊಂಡಿರುವ ಕ್ರಮಗಳೇನು? ಅಂತಹ ಮಗುವಿನ ಪೂರ್ಣ ಮಾಹಿತಿ ಸಂಗ್ರಹಿಸುವುದು.

ಈ ಪ್ರಶ್ನೆಗಳಿಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ನಿಗದಿಪಡಿಸಿರುವ ನಮೂನೆಯಲ್ಲಿ ಮಾಹಿತಿ ತುಂಬಲು ಅಗತ್ಯವೆನಿಸಿದ ಪ್ರಶ್ನೆಗಳನ್ನು ಕೇಳಿ ಮಾಹಿತಿ ಸಂಗ್ರಹಿಸಬೇಕು.

**ಸಾಮಾಜಿಕ ಲೆಕ್ಕ ಪರಿಶೋಧನೆಯ ದಿನದಂದು;**

- ಶಾಲಾ ಮುಖ್ಯಶಿಕ್ಷಕರು ಭಾಗೀದಾರರೆಲ್ಲರನ್ನು ಸ್ವಾಗತಿಸಿ ಶಾಲಾ ಸಿಬ್ಬಂದಿಗೆ ಪರಿಚಯಿಸಿ ಲೆಕ್ಕಪರಿಶೋಧನೆಗೆ ಚಾಲನೆ ನೀಡಬೇಕು.
- ಶಾಲಾ ಮುಖ್ಯ ಶಿಕ್ಷಕರು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭಾ ನಡಾವಳಿ, ನಗದು ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕ, ಅನುದಾನ ಬಿಡುಗಡೆಯ ಮತ್ತು ಬಳಕೆಯ ಲೆಕ್ಕ ಪತ್ರ ಮುಂತಾದ ದಾಖಲೆಗಳನ್ನು ತಂಡದ ಸಮ್ಮುಖದಲ್ಲಿ ಎಲ್ಲಾ ಭಾಗೀದಾರರಿಗೆ ತೋರಿಸಿ, ವಿವರಿಸಿ ಹೇಳಬೇಕು.
- ಸಾಮಾಜಿಕ ಲೆಕ್ಕ ಪರಿಶೋಧನಾ ತಂಡ ಶಾಲೆಯ ಅಭಿವೃದ್ಧಿಗಾಗಿ ಕೈಗೊಂಡಿರುವ ಎಲ್ಲಾ ಚಟುವಟಿಕೆಗಳನ್ನು ಪರಾಮರ್ಶಿಸಬೇಕು.
- ಸಮುದಾಯದತ್ತ ಶಾಲಾ ಕಾರ್ಯಕ್ರಮ, ಶಾಲೆಗೆ ಬನ್ನಿ ಶನಿವಾರ, ತಿಂಗಳ ತಿರುಳಿನ ಕಾರ್ಯಕ್ರಮದ ಅನುಪಾಲನೆ, ಶಾಲಾ ಸ್ವಚ್ಛತೆ, 10 ಅಂಶಗಳ ಕಾರ್ಯಕ್ರಮ, ತಂದೆತಾಯಿ ಪರಿಷತ್ ಸಭೆ, ಗ್ರಾಮಸಭೆಗಳ ಫಲಶೃತಿ ಬಗ್ಗೆ ಭಾಗೀದಾರರಿಗೆ ತಿಳುವಳಿಕೆ ನೀಡಬೇಕು. ಸಕ್ರಿಯ ಪಾಲ್ಗೊಳ್ಳುವಿಕೆಗೆ ಪ್ರೇರೇಪಿಸಬೇಕು.

Kiran Raghupathi

- ಶಿಕ್ಷಕರ ಸಮಯ ಪಾಲನೆ, ಶಾಲಾ ದಿನಗಳು, ಕಲಿಕಾ ಬೋಧನಾ ದಿನಗಳು, ನಲಿ–ಕಲಿ, ಸಿಸಿಇ,ಗ್ರಂಥಾಲಯ ಬಳಕೆ ಬಗ್ಗೆ ಮಾಹಿತಿ ಸಂಗ್ರಹಿಸಿ ಪೋಷಕರಿಗೆ ಶಾಲೆಯ ಬಗ್ಗೆ ಗೌರವ ಮೂಡುವಂತಹ ವಾತಾವರಣ ನಿರ್ಮಾಣ ಮಾಡಬೇಕು.
- ಆಯ್ದ ಮಕ್ಕಳಿಗೆ ಪ್ರಶ್ನೆ ಕೇಳಿ ನಿರರ್ಗಳವಾಗಿ ಮಾತನಾಡುವ, ಸ್ಪಷ್ಟವಾಗಿ ಓದುವ, ಶುದ್ಧವಾಗಿ ಬರೆಯುವ ಸಾಮರ್ಥ್ಯಗಳನ್ನು ಮಕ್ಕಳು ಗಳಿಸಿಕೊಂಡಿರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು.
- ಆಯ್ದ ಮಕ್ಕಳಿಗೆ ದಿನಪತ್ರಿಕೆ, ಮಾಸಪತ್ರಿಕೆ ಅಥವಾ ಯಾವುದಾದರೂ ಕಥೆ ಪುಸ್ತಕದ ಪ್ರತಿ ನೀಡಿ, ಓದಿಸಿ, ಗ್ರಹಿಸುವಿಕೆಯನ್ನು ಪರೀಕ್ಷಿಸಲು ಪ್ರಶ್ನೆ ಕೇಳಬೇಕು. ಸರಿಯಾಗಿ ಉತ್ತರ ನೀಡಿದ ಮಕ್ಕಳ ಸಂಖ್ಯೆನಮೂದಿಸಿ, ಮಕ್ಕಳ ಕಲಿಕೆಯ ಮಟ್ಟವನ್ನು ಮೌಲ್ಯಮಾಪನ ಮಾಡಬೇಕು.
- ವಿವಿಧ ತರಗತಿಗಳ ಕೆಲವು ಮಕ್ಕಳಿಗೆ ಸ್ಥಳೀಯ ಪ್ರಾಣಿ, ಪಕ್ಷಿ ಅಥವಾ ಇಷ್ಟದ ವಸ್ತುಗಳ ಬಗ್ಗೆ ಕನಿಷ್ಠ 5 ವಾಕ್ಯ ಅಥವಾ ಒಂದು ವಾಕ್ಯವೃಂದ (ಪ್ಯಾರಾ) ಬರೆಸಬೇಕು.
- ವಿಜ್ಞಾನ ವಿಷಯದ ಬಗ್ಗೆ ಕೆಲವು ಪ್ರಶ್ನೆ ನೀಡಿ ಮಕ್ಕಳ ಕಲಿಕೆಯ ಮೌಲ್ಯಮಾಪನ ಮಾಡಬೇಕು.
- ತರಗತಿವಾರು ಸಾಮರ್ಥ್ಯ ಆಧಾರಿತ ಲೆಕ್ಕ ನೀಡಿ ಮಕ್ಕಳಲ್ಲಿ ಗಣಿತದ ಪರಿಣತಿಯನ್ನು ಮೌಲ್ಯಮಾಪನ ಮಾಡಬೇಕು.
- ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ (ಸಿಸಿಇ) ಬಗ್ಗೆ ಶಿಕ್ಷಕರು ನಿರ್ವಹಿಸಿರುವ ದಾಖಲೆಗಳನ್ನು ಪರಿಶೀಲಿಸಿ ಸಂಬಂಧಿಸಿದ ಮಗುವಿನ ಕಲಿಕೆಯನ್ನು ತಾಳೆ ನೋಡಬೇಕು.

**ಕುಂದುಕೊರತೆ ವಿಲೇವಾರಿ:** ದೈನಂದಿನ ಆಡಳಿತಕ್ಕೆ ಸಂಬಂಧಿಸಿದ ದೂರುಗಳನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ವಿಲೇವಾರಿ ಮಾಡತಕ್ಕದ್ದು. ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 32ರ ಅನ್ವಯ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 8, 9ರಲ್ಲಿ ನಮೂದಿಸಿರುವ ಯಾವುದಾದರೂ ಸೆಕ್ಷನ್ ಉಲ್ಲಂಘನೆಯಾದಲ್ಲಿ ತಾಲ್ಲೂಕು ಮಟ್ಟದಲ್ಲಿಯ ತಾಲ್ಲೂಕು ಪಂಚಾಯಿತಿಯ ಸಾಮಾನ್ಯ ಸ್ಥಾಯಿ ಸಮಿತಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಪಂಚಾಯತಿಯ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಗಳನ್ನು ಸ್ಥಳೀಯ ಪ್ರಾಧಿಕಾರಗಳನ್ನಾಗಿ ಪದನಾಮೀಕರಿಸಿ ಸರ್ಕಾರ ದಿನಾಂಕ:16.09.2013ರಂದು ಆದೇಶ ಹೊರಡಿಸಿದೆ. ಅದರಂತೆ ಕುಂದುಕೊರತೆ ವಿಲೇವಾರಿ ಪ್ರಕ್ರಿಯೆ ನಡೆದಿದೆಯೇ? ಎಂಬುದನ್ನು ಪರಿಶೀಲಿಸುವುದು. ತಂಡದ ಸದಸ್ಯರು ಭಾಗೀದಾರರಿಗೆ ಪ್ರಶ್ನೆ ಕೇಳಲು ಮುಕ್ತ ಅವಕಾಶಮಾಡಿಕೊಟ್ಟು, ಭಾಗೀದಾರರು ನೀಡುವ ಸಲಹೆಗಳನ್ನು ಸ್ವೀಕರಿಸಿ, ಚರ್ಚಿಸಿ ತೀರ್ಮಾನಿಸಬೇಕು. ಮುಕ್ತ ಸಂವಾದದ ಫಲವಾಗಿ ಮೂಡಿಬಂದ ಸೃಜನಾತ್ಮಕ ಸಲಹೆಗಳನ್ನು ಮುಂಬರುವ ಶಾಲಾಭಿವೃದ್ಧಿ ಯೋಜನೆಯಲ್ಲಿ ಸೇರಿಸಿ ಅನುಷ್ಠಾನಗೊಳಿಸಲು ಸೂಚನೆ ನೀಡಬೇಕು.

ಶಾಲೆಯ ದೈನಂದಿನ ದಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸಲು ಅನುಕೂಲವಾಗುವಂತೆ ಸಾಮಾಜಿಕ ಲೆಕ್ಕ ಪರಿಶೋಧನಾ ವರದಿಯ ಮುಖ್ಯಾಂಶಗಳನ್ನು ಗ್ರಾಮ ಸಭೆ ಮತ್ತು ಗ್ರಾಮ/ವಾರ್ಡ್ ಶಿಕ್ಷಣ ಸಮಿತಿಯ ಸಭೆಗಳಲ್ಲಿ ಹಂಚಿಕೊಳ್ಳಬೇಕು. ಶಾಲಾಭಿವೃದ್ಧಿ ಯೋಜನೆಯ ತಯಾರಿ, ಅನುಷ್ಠಾನ, ಅನುಪಾಲನೆ ಮತ್ತು ಮೌಲ್ಯಮಾಪನ ಈ ಎಲ್ಲಾ ಹಂತಗಳನ್ನು ಸಾಮಾಜಿಕ ಲೆಕ್ಕಪರಿಶೋಧನಾ ತಂಡ ಅವಲೋಕಿಸಿ ಎಲ್ಲಾ ಸೂಚಕಗಳನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಎಸ್.ಡಿ.ಎಂ.ಸಿ. ಹಾಗೂ ಸಮುದಾಯ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು.

ಸರ್ಕಾರಿ ಶಾಲೆಗಳ ಸಬಲೀಕರಣ ಇಂದಿನ ಅಗತ್ಯವಾಗಿದೆ. ಎಸ್.ಡಿ.ಎಂ.ಸಿ.ಬಲವರ್ಧನೆ, ಅರ್ಥಪೂರ್ಣ ಶಾಲಾಭಿವೃದ್ಧಿ ಯೋಜನೆ ತಯಾರಿ, ಅನುಷ್ಠಾನ, ಅನುಪಾಲನೆ ಮತ್ತು ಮೌಲ್ಯಮಾಪನ ಖಾತರಿಪಡಿಸಿಕೊಳ್ಳಲು ಸಾಮಾಜಿಕ ಲೆಕ್ಕ ಪರಿಶೋಧನಾ ತಂಡ ವೇಗವರ್ಧಕವಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಈ ತರಬೇತಿಯಲ್ಲಿ ನೀವು ಪಡೆದ ಜ್ಞಾನ ನಿಮ್ಮ ಸಮುದಾಯ ತಲುಪಲಿ. ಸಮುದಾಯದ ಸಂಘಟಿತ ಜ್ಞಾನ(Collective wisdom)ಎಸ್.ಡಿ.ಎಂ.ಸಿ.ಬಲವರ್ಧನೆಗೆ ಸಹಕಾರಿಯಾಗಲಿ. ಎಸ್.ಡಿ.ಎಂ.ಸಿ.ಉತ್ತಮ ಶಾಲಾಭಿವೃದ್ಧಿಯೋಜನೆ ಸಿದ್ಧಪಡಿಸಿ, ಅನುಷ್ಠಾನಗೊಳಿಸಲಿ. ಈ ಮೂಲಕ 'ಪಢೇ ಭಾರತ್ ಬಢೇ ಭಾರತ್' ಕನಸು ನನಸಾಗಲು ನಾವೆಲ್ಲರೂ ಸಂಘಟಿತ ಪ್ರಯತ್ನ ಮಾಡೋಣ.

Kiran Raghupathi

**ವಿದ್ಯಾವಾಹಿನಿ ತಂತ್ರಾಂಶದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಾಗಿ ಎಸ್‌ಎಂಎಸ್ ಆಧಾರಿತ ದೂರು ಪರಿಹರಣ ವ್ಯವಸ್ಥೆ**

ಸಾರ್ವಜನಿಕ ಶಿಕ್ಷಣ ಇಲಾಖೆಯ ವಿದ್ಯಾವಾಹಿನಿ ತಂತ್ರಾಂಶದಲ್ಲಿ ಎಸ್.ಡಿ.ಎಂ.ಸಿ.ಸದಸ್ಯರು ಎಸ್‌ಎಂಎಸ್ ಕಳುಹಿಸುವ ಮೂಲಕ ಶಾಲೆ ಮತ್ತು ಎಸ್.ಡಿ.ಎಂ.ಸಿ.ವ್ಯಾಪ್ತಿಗೆ ಸಂಬಂಧಿಸಿದ ದೂರುಗಳನ್ನು ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ವ್ಯವಸ್ಥೆಯು ಹಿಂದೆ ಇದ್ದ ಸಾಂಪ್ರದಾಯಿಕ ದೂರು ನಿರ್ವಹಣಾ ವ್ಯವಸ್ಥೆಯಲ್ಲಿದ್ದ ಸಮಯ, ಹಣ, ಶ್ರಮದ ಅಪವ್ಯಯವನ್ನು ತಪ್ಪಿಸಿ ವೇಗ ಮತ್ತು ಸರಳವಾಗಿ ದೂರುಗಳನ್ನು ಪರಿಹರಿಸಲು ಶೈಕ್ಷಣಿಕ ಆಡಳಿಗಾರರಿಗೆ ನೆರವಾಗುತ್ತದೆ. ಅಲ್ಲದೇ ಶಾಲಾಭಿವೃದ್ಧಿಯ ಪ್ರಮುಖ ಭಾಗೀದಾರರಾದ ಎಸ್.ಡಿ.ಎಂ.ಸಿ.ಸದಸ್ಯರಿಗೆ ದೂರುಗಳನ್ನು ವೇಗವಾಗಿ ಪರಿಹರಿಸುವ ಮೂಲಕ ಇನ್ನೂ ಹೆಚ್ಚು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ.

**ಮುಖ್ಯ ಉದ್ದೇಶಗಳು**

1. ಎಸ್.ಡಿ.ಎಂ.ಸಿ.ಯ ನೋಂದಾಯಿತ ಸದಸ್ಯರಿಗೆ ಸರಳವಾಗಿ ದೂರನ್ನು ಸಲ್ಲಿಸಲು ತಂತ್ರಾಂಶದ ಮೂಲಕ ಅವಕಾಶ ಕಲ್ಪಿಸುವುದು.
2. ಸುಲಭವಾದ ಮತ್ತು ಸ್ನೇಹಮಯ ದೂರು ಪರಿಹಾರ ವ್ಯವಸ್ಥೆಯೊಂದನ್ನು ಒದಗಿಸುವ ಮೂಲಕ ಎಸ್.ಡಿ.ಎಂ.ಸಿ. ಭಾಗೀದಾರರಲ್ಲಿ ಶಾಲಾಭಿವೃದ್ಧಿಯಲ್ಲಿ ಇನ್ನೂ ಹೆಚ್ಚಾಗಿ ತೊಡಗಿಕೊಳ್ಳುವಂತೆ ಪ್ರೇರೇಪಣೆ ನೀಡುವುದು.
3. ತಂತ್ರಜ್ಞಾನದ ಸಹಾಯದಿಂದ ದೂರು ಪರಿಹಾರದ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಆಗುವ ಮಾನವ ಸಂಪನ್ಮೂಲದ ಅಪವ್ಯಯವನ್ನು ತಪ್ಪಿಸಿ ವೇಗ ಮತ್ತು ನಿಖರತೆಯನ್ನು ಸಾಧಿಸುವುದು.
4. ಶಾಲೆಗಳಲ್ಲಿನ ತಳಹಂತದ ಸಮಸ್ಯೆಗಳನ್ನು ಅರಿಯಲು ಮತ್ತು ಅವುಗಳನ್ನು ಪರಿಹರಿಸಲು ಶೈಕ್ಷಣಿಕ ಆಡಳಿತಗಾರರಿಗೆ ಸುಲಭವಾದ ವಿನೂತನವಾದ ವ್ಯವಸ್ಥೆಯೊಂದನ್ನು ಒದಗಿಸುವುದು.

**ಕಾರ್ಯವಿಧಾನ**

- ವಿದ್ಯಾವಾಹಿನಿ ತಂತ್ರಾಂಶದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು ದೂರು ಸಲ್ಲಿಸಲು ಅವರ ಹೆಸರು, ದೂರವಾಣಿ ಸಂಖ್ಯೆ ಮತ್ತಿತರ ವಿವರಗಳು ತಂತ್ರಾಂಶದಲ್ಲಿ ನೋಂದಾಯಿಸಲ್ಪಟ್ಟಿರಬೇಕು.
- ಒಂದು ಪಕ್ಷ ನೋಂದಾಯಿಸಿಲ್ಲದಿದ್ದಲ್ಲಿ ತಮ್ಮ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ಅಥವಾ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ತಮ್ಮ ವಿವರಗಳನ್ನು ನೀಡುವ ಮೂಲಕ ನೋಂದಾಯಿಸಿಕೊಳ್ಳಬಹುದು. ಶಾಲೆಯ ಮುಖ್ಯ ಶಿಕ್ಷಕರು ನೋಂದಾಯಿಸಲು ಕ್ರಮವಹಿಸುವರು.
- ನೋಂದಾಯಿತ ಸದಸ್ಯರು ತಮ್ಮ ಶಾಲೆಗೆ ಸಂಬಂಧಿಸಿದ ದೂರುಗಳಿದ್ದಲ್ಲಿ ,ನೋಂದಾಯಿಸಲ್ಪಟ್ಟ ಮೊಬೈಲ್ ನಂಬರಿನಿಂದ ಎಸ್‌ಎಂಎಸ್ ಸಂದೇಶವನ್ನು ಚಿಕ್ಕದಾಗಿ ಮತ್ತು ಸ್ಪಷ್ಟವಾಗಿ ಬರೆದು 161 ಸಂಖ್ಯೆಗೆ ಕಳುಹಿಸಬೇಕು.
- ಎಸ್‌ಎಂಎಸ್ ಬರೆಯುವಾಗ ಇಂಗ್ಲಿಷ್ ಅಕ್ಷರಗಳನ್ನು ಬಳಸುವುದು ಸೂಕ್ತ.
- ಕ್ಷೇತ್ರಶಿಕ್ಷಣಾಧಿಕಾರಿಗಳು ವಿದ್ಯಾವಾಹಿನಿಯ ತಮ್ಮ ಲಾಗಿನ್‌ನಲ್ಲಿ ಪ್ರತಿನಿತ್ಯ ಬಂದ ದೂರುಗಳನ್ನು ಅವಲೋಕಿಸಿ, ತಮ್ಮ ಹಂತದ ಅಧೀನ ಅಧಿಕಾರಿಗಳಿಗೆ ಸೂಚನೆ ನೀಡುವ ಮೂಲಕ ಸೂಕ್ತ ಕ್ರಮವಹಿಸುವರು.
- ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ದೂರು ಪರಿಹರಿಸಲಾಗದಿದ್ದಲ್ಲಿ ಜಿಲ್ಲಾ ಹಂತಕ್ಕೆ ತಂತ್ರಾಂಶದ ಮೂಲಕವೇ ಕಳುಹಿಸುವರು. ಜಿಲ್ಲಾ ಹಂತದಲ್ಲಿಯೂ ಕೂಡಾ ಪರಿಹರಿಸಲಾಗದಿದ್ದಲ್ಲಿ ವಿಭಾಗ ಮಟ್ಟಕ್ಕೂ, ಅಲ್ಲಿಯೂ ಪರಿಹರಿಸಲಾಗದಿದ್ದಲ್ಲಿ ರಾಜ್ಯ ಹಂತಕ್ಕೆ ಕಳುಹಿಸುವರು.
- ದೂರು ಪರಿಹಾರವಾದ ಬಗ್ಗೆ ಅಥವಾ ಮೇಲಿನ ಹಂತಕ್ಕೆ ವರ್ಗಾಯಿಸಿದ ಬಗ್ಗೆ ಎಸ್‌ಎಂಎಸ್ ಮೂಲಕ ದೂರುದಾರರಿಗೆ ಮಾಹಿತಿಯನ್ನು ನೀಡಲಾಗುತ್ತದೆ.

Kiran Raghupathi

## ಅಧ್ಯಾಯ-6

## ಶಿಕ್ಷಣದ ಸಾರ್ವತ್ರೀಕರಣದಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣದ ಮಹತ್ವ ರೂಪುರೇಷೆಗಳು

## ಮಕ್ಕಳ ಕಲಿಕೆ ಮತ್ತು ಪೂರಕ ವ್ಯವಸ್ಥೆ

**ಉದ್ದೇಶಗಳು**

**ಈ ಅಧ್ಯಾಯದ ನಂತರ ಸದಸ್ಯರು;**

- ಮಕ್ಕಳ ಆರೈಕೆ ಮತ್ತು ಬೆಳವಣಿಗೆಯ ಕುರಿತು ಅರಿಯುವರು.
- ಅಂಗನವಾಡಿಯ ಪ್ರಾಮುಖ್ಯತೆ, ಕಾರ್ಯಗಳ ಕುರಿತು ತಿಳಿಯುವರು.
- ಅಂಗನವಾಡಿ ನಿರ್ವಹಣಾ ಸಮಿತಿಯ ಕಾರ್ಯ ಮತ್ತು ಜವಾಬ್ದಾರಿಗಳನ್ನು ಅರಿಯುವರು.
- ಅಂಗನವಾಡಿ ಮತ್ತು ಶಾಲೆಯ ನಡುವಿನ ಸಂಬಂಧದ ಮಹತ್ವ ತಿಳಿಯುವರು.

### ಬಾಲ್ಯಪೂರ್ವಆರೈಕೆ ಮತ್ತು ಶಿಕ್ಷಣ

ಬಾಲ್ಯಪೂರ್ವಆರೈಕೆ ಮತ್ತು ಶಿಕ್ಷಣ (ECCE-Early Childhood Care and Education)ವು ಶಿಕ್ಷಣದ ಒಂದು ಪ್ರಮುಖ ಭಾಗವಾಗಿದ್ದು, ಸರ್ವರಿಗೂ ಶಿಕ್ಷಣದ ಗುರಿಗಳನ್ನು ಸಾಧಿಸುವಲ್ಲಿ ಮೊದಲ ಮತ್ತು ಅತ್ಯಗತ್ಯ ಹೆಜ್ಜೆಯನ್ನು ಪ್ರತಿನಿಧಿಸುತ್ತದೆ. ಈ ವ್ಯವಸ್ಥೆಯು **ಹುಟ್ಟಿನಿಂದ 6 ವರ್ಷಗಳ ವಯೋಮಾನ**ದ ಮಕ್ಕಳನ್ನು ಒಳಗೊಂಡಿದೆ. ಮಗುವಿನ ಸಮಗ್ರ ಬೆಳವಣಿಗೆಯನ್ನು ಗುರುತಿಸುತ್ತಾ, ಮಕ್ಕಳ ಆರೋಗ್ಯ, ಪೌಷ್ಟಿಕಾಂಶ ಮತ್ತು ಶಿಕ್ಷಣವನ್ನು ಒಟ್ಟುಗೂಡಿಸಿದ ಒಂದು ಸಮಗ್ರ ದೃಷ್ಟಿಕೋನವನ್ನು ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣ ಕಾರ್ಯಕ್ರಮವು ಒಳಗೊಳ್ಳುತ್ತದೆ.

ಹುಟ್ಟಿನಿಂದ ಆರು ವರ್ಷಗಳ ಅವಧಿಯಲ್ಲಿ ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ತೀವ್ರಗತಿಯಲ್ಲಿ ಆಗುತ್ತದೆ. ಇದು ಅವರ ಜೀವನದ ಮುಂದಿನ ವಿಕಾಸಕ್ಕೆ ಅಡಿಪಾಯವಾಗಿದ್ದು, ಸೂಕ್ತ ಆರೈಕೆ, ರಕ್ಷಣೆ, ಉತ್ತೇಜನ ಮತ್ತು ಶಿಕ್ಷಣದ ಮೂಲಕ ಮಗುವಿನ ಒಟ್ಟಾರೆ ಬೆಳವಣಿಗೆಯನ್ನು ಪೋಷಿಸಿ, ವ್ಯಕ್ತಿತ್ವ ಬೆಳವಣಿಗೆಯನ್ನು ಬೆಂಬಲಿಸಬಹುದು. ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ನ್ಯೂನತೆಗಳನ್ನು ಈ ಹಂತದಲ್ಲಿ ಪತ್ತೆ ಹಚ್ಚಿ, ಸರಿಪಡಿಸಲೂಬಹುದು. ಈ ಅವಧಿಯಲ್ಲಿ ವಿವಿಧ ವಿಚಾರಗಳ ಬಗ್ಗೆ ಸಂಪರ್ಕ ಬೆಳೆಸಲು ಮೆದುಳಿನ ನರಮಂಡಲಗಳು ಸತ್ವಯುತವಾಗಿರುತ್ತವೆ. ಇಲ್ಲಿ ಕಲಿತುಕೊಂಡ ವಿಚಾರಗಳನ್ನು ಮಗು ತನ್ನ ಜೀವನದುದ್ದಕ್ಕೂ ಸಂಬಂಧೀಕರಿಸಲು ನೆರವಿಗೆ ಬರುತ್ತವೆ. ಈ ಹಿನ್ನೆಲೆಯಲ್ಲಿ ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣವು ಅತ್ಯಂತ ಮಹತ್ವದ್ದಾಗಿದ್ದು, ಈ ಸಂಬಂಧ ಕೇಂದ್ರ ಸರ್ಕಾರ 2013ರಲ್ಲಿ ಬಾಲ್ಯಪೂರ್ವಆರೈಕೆ ಮತ್ತು ಶಿಕ್ಷಣದ ನೀತಿಯನ್ನು ರೂಪಿಸಿದೆ.

ನಮ್ಮಲ್ಲಿ ಅನೇಕ ಶತಮಾನಗಳಿಂದ ಚಿಕ್ಕ ಮಕ್ಕಳ ಆರೈಕೆ ಎನ್ನುವುದು ಹೆಚ್ಚಿನ ವೇಳೆ ಒಂದು ಖಾಸಗಿ ಕೌಟುಂಬಿಕ ವ್ಯವಹಾರವಾಗಿತ್ತು. ಪ್ರಸ್ತುತ ಕಾಲಘಟ್ಟದಲ್ಲಿ ಜೀವನೋಪಾಯದ ಸ್ಥಿತಿಗತಿಗಳು ಶೀಘ್ರಗತಿಯಲ್ಲಿ ಬದಲಾಗುತ್ತಿದ್ದು, ನಗರೀಕರಣದ ಪ್ರಭಾವವು ಹೆಚ್ಚುತ್ತಿದೆ. ಈ ಬಗೆಯ ಪ್ರಕ್ರಿಯೆಗಳು ನಗರ, ಅರೆನಗರ ಮತ್ತು ಗ್ರಾಮೀಣಭಾಗದ ಅಲ್ಪ ಆದಾಯ ವರ್ಗದ ಜನರನ್ನು ಒತ್ತಡಕ್ಕೆ ಸಿಲುಕಿಸುತ್ತಿವೆ. ಇದರಿಂದ ಮಕ್ಕಳ ಆರೈಕೆಗೆ ನೆರವಾಗುವ ಕೌಟುಂಬಿಕ ಬೆಂಬಲಾತ್ಮಕ ವ್ಯವಸ್ಥೆಗಳು ಕಡಿಮೆಯಾಗುತ್ತಿವೆ. ಹೀಗಾಗಿ ಮಕ್ಕಳ ಆರೈಕೆ ಮತ್ತು ಕಲಿಕೆಯು ಮನೆಯಿಂದ ಹೊರಗಿರುವ, ಪ್ರಭಾವವಿರುವ ಒಂದು ಚಟುವಟಿಕೆಯಾಗಿದೆ.

ಕಳೆದ 4 ದಶಕಗಳಿಂದ ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣವನ್ನು ಒದಗಿಸುವ ಉದ್ದೇಶದೊಂದಿಗೆ ಅಂಗನವಾಡಿಗಳು ಕಾರ್ಯನಿರ್ವಹಿಸುತ್ತಿವೆ. ಇದರಿಂದ ಲಕ್ಷಾಂತರ ಮಕ್ಕಳಿಗೆ ಅನೇಕ ರೀತಿಯಲ್ಲಿ ಉಪಯೋಗವಾಗಿದೆ. ಆದರೂ ನಿರೀಕ್ಷಿತ ಮಟ್ಟದಲ್ಲಿ ಉದ್ದೇಶವನ್ನು ಈಡೇರಿಸಲು ಸಾಕಷ್ಟು ಶ್ರಮಿಸಬೇಕಾದ ಅಗತ್ಯವಿದೆ.

ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣಕ್ಕೆ ವ್ಯವಸ್ಥಿತ ಅವಕಾಶ ಕಲ್ಪಿಸುವುದರಿಂದ ಚಿಕ್ಕ ಮಕ್ಕಳಿಗೆ ಸಂಬಂಧಿಸಿದಂತೆ ವಿಭಿನ್ನ ಕ್ಷೇತ್ರಗಳಲ್ಲಿ ಅಭಿವೃದ್ಧಿ ಆಗುತ್ತದೆ ಎಂಬುದು ಸಾರ್ವತ್ರಿಕವಾಗಿ ಅಂಗೀಕರಿಸಿರುವ ವಿಚಾರ. ಮಗುವಿನ ಭೌತಿಕ, ಬೌದ್ಧಿಕ, ಸಾಮಾಜಿಕ ಹಾಗೂ ಭಾವನಾತ್ಮಕವಾದ, ಒಟ್ಟಾರೆ ಸರ್ವತೋಮುಖ ಬೆಳವಣಿಗೆಯನ್ನು ಉತ್ತೇಜಿಸುವ ಬಾಲ್ಯಪೂರ್ವಆರೈಕೆ ಮತ್ತು ಶಿಕ್ಷಣವು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಧಿಸುವಲ್ಲಿಯೂ ಬೆಂಬಲವಾಗುತ್ತದೆ. ಜೊತೆಗೆ ಮಕ್ಕಳು ಶಾಲೆಯಲ್ಲಿ ಉಳಿಯುವಿಕೆ ಹಾಗೂ ಶೈಕ್ಷಣಿಕ ಅಂಶಗಳಲ್ಲಿ ಪ್ರಗತಿ ಹೊಂದಲು ಸಮರ್ಥರನ್ನಾಗಿಸುತ್ತದೆ.

Kiran Raghupathi

ಸಮರ್ಪಕ ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣವು ಅಪೌಷ್ಟಿಕತೆ, ಅನಾರೋಗ್ಯ, ಲಿಂಗಭೇದ ಮತ್ತು ಸಾಮಾಜಿಕ–ಆರ್ಥಿಕ ಸ್ಥಿತಿಗತಿಯ ಮೇಲೆ ಪ್ರಭಾವ ಬೀರುತ್ತದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಇದಕ್ಕೆ ಸಮುದಾಯಗಳು ಬೆಂಬಲ ನೀಡುವಂತಹ ವಾತಾವರಣವನ್ನು ನಿರ್ಮಿಸಬೇಕಿದೆ.

ಒಂದು ನಿರ್ದಿಷ್ಟ ಸಮುದಾಯದ ವೈವಿಧ್ಯತೆ ಮತ್ತು ಸಂಸ್ಕೃತಿಯಲ್ಲಿ ಬೇರುಬಿಟ್ಟು ತನ್ನದೇ ಗತಿಯನ್ನು ಹೊಂದಿರುವ ನೆಲೆಯಲ್ಲಿ ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣವನ್ನು ನೋಡಬೇಕಿದೆ. ಜೊತೆಗೆ ಭವಿಷ್ಯದ ಸಾಧ್ಯತೆಗಳಿಗೆ ಅವರನ್ನು ಸಿದ್ಧಗೊಳಿಸುವಲ್ಲಿಯೂ ಇದು ಬೆಂಬಲಿಸುವಂತಿರಬೇಕು. ಸಮುದಾಯದ ಆಂತರಿಕ ಸಾಮರ್ಥ್ಯ ಹಾಗೂ ಅನುಭವಗಳ ಮೇಲೆ ಕಟ್ಟಿಕೊಂಡ ಬಾಲ್ಯಪೂರ್ವಆರೈಕೆ ಮತ್ತು ಶಿಕ್ಷಣದ ದೃಷ್ಟಿಕೋನ ಇಂದಿನ ಅಗತ್ಯವಾಗಿದೆ.




**ಬಾಲವಿಕಾಸ ಸಮಿತಿ**

ಎಳೆಯರ ಆರೈಕೆ ಮತ್ತು ಶಿಕ್ಷಣದ ಸಮಸ್ಯೆಯನ್ನು ಉದ್ದೇಶಿಸಲು ಎಲ್ಲಾ ಭಾಗೀದಾರರನ್ನು ಒಟ್ಟಾಗಿ ಸಂಘಟಿಸಿ, ಭಾಗೀದಾರರೇ ತಮ್ಮ ಹೊಣೆಗಾರಿಕೆಯಡಿ, ಕೇಂದ್ರದ ಅಗತ್ಯತೆ ಗುರುತಿಸಲು, ಸ್ಥಳೀಯ ಸಾಧ್ಯತೆಗಳ ಹಿನ್ನೆಲೆಯಲ್ಲಿ ಆ ಬಗ್ಗೆ ಸಮರ್ಪಕ ಯೋಜನೆ ರೂಪಿಸಲು, ಜೊತೆಗೆ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಬಾಲವಿಕಾಸ ಸಮಿತಿಗಳನ್ನು ರಚಿಸಿಕೊಳ್ಳಲು **ಸರ್ಕಾರಿ ಆದೇಶ ಸಂಖ್ಯೆ: ಮಮಇ 81 ಐಸಿಡಿ 2014, ಬೆಂಗಳೂರು, ದಿನಾಂಕ: 19.01.2016**ರಲ್ಲಿ ಅವಕಾಶ ಕಲ್ಪಿಸಿದೆ.

**ಸಮಿತಿ ಸದಸ್ಯರು**

| | | |
|---|---|---|
| 1 | ಗ್ರಾಮ ಪಂಚಾಯಿತಿ/ವಾರ್ಡ್ ಸದಸ್ಯರು (ಮಹಿಳಾ ಸದಸ್ಯರಿದ್ದರೆ ಒಳ್ಳೆಯದು) | ಅಧ್ಯಕ್ಷರು |
| 2 | ಮುಖ್ಯೋಪಾಧ್ಯಾಯರು (ಪ್ರಾಥಮಿಕ / ಹಿರಿಯ ಪ್ರಾಥಮಿಕ ಶಾಲೆ) | ಸದಸ್ಯರು |
| 3 | ಆರೋಗ್ಯಇಲಾಖೆಯ ಆಶಾ/ಕಿರಿಯ ಮಹಿಳಾ ಆರೋಗ್ಯ ಸಹಾಯಕಿ | ಸದಸ್ಯರು |
| 4 | ಸಬಲ ಕಾರ್ಯಕ್ರಮದಡಿಯಲ್ಲಿ ಬರುವ ಸಖಿ (ಕಾರ್ಯಕ್ರಮವಿದ್ದಲ್ಲಿ) | ಸದಸ್ಯರು |
| 5 | ಅಂಗನವಾಡಿ ಮಕ್ಕಳ ಮೂರು ಜನ ತಾಯಂದಿರು (ಒಬ್ಬರು ಪಜಾ/ಪಪಂಕ್ಕೆ ಸೇರಿದವರು) | ಸದಸ್ಯರು |
| 6 | ಸಮುದಾಯಆಧಾರಿತ ಸಂಸ್ಥೆಯ ಪ್ರತಿನಿಧಿ | ಸದಸ್ಯರು |
| 7 | ಸ್ತ್ರೀ ಶಕ್ತಿ ಗುಂಪುಗಳ ಇಬ್ಬರು ಪ್ರತಿ ನಿಧಿಗಳು. | ಸದಸ್ಯರು |
| 8 | ಅಂಗನವಾಡಿ ಕಾರ್ಯಕರ್ತೆ | ಸದಸ್ಯರು<br>ಕಾರ್ಯದರ್ಶಿ |

(ಹೆಚ್ಚಿನ ಮಾಹಿತಿಗಾಗಿ ಅನುಬಂಧದಲ್ಲಿರುವ ಸುತ್ತೋಲೆಯನ್ನು ಗಮನಿಸುವುದು)

Kiran Raghupathi

**ಬಾಲವಿಕಾಸ ಸಮಿತಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು**

- ಅಂಗನವಾಡಿ ಕೇಂದ್ರದ ಸುಧಾರಣೆಗಾಗಿ ಸಮಿತಿಯು ವರ್ಷಕ್ಕೆ 2 ಬಾರಿ ಕ್ರಿಯಾಯೋಜನೆಯನ್ನು ಫಲಾನುಭವಿಗಳ ಹಿತದೃಷ್ಟಿಯಿಂದರೂಪಿಸುವುದು.
- ಪ್ರತಿ ತಿಂಗಳಲ್ಲಿ ಅಂಗನವಾಡಿ ಕೇಂದ್ರಕ್ಕೆ ದಾಖಲಾಗಿರುವ ಮಕ್ಕಳ ತಾಯಂದಿರ ಸಭೆಯನ್ನು ನಡೆಸಿ ಕ್ರಿಯಾಯೋಜನೆಯಂತೆ ಮಕ್ಕಳು ಕಲಿತ ಆಟ–ಪಾಠಗಳನ್ನು ಪ್ರದರ್ಶಿಸಿ ಪಾಲಕರಿಂದ ಸಲಹೆ ಪಡೆಯುವುದು.
- ಶಾಲಾ ಪೂರ್ವ ಶಿಕ್ಷಣಕ್ಕೆ ವರ್ಷಕ್ಕೊಮ್ಮೆ ನೀಡುವ ರೂ 3000/–ಗಳಲ್ಲಿ ಮಕ್ಕಳಿಗೆ ಆಕರ್ಷಣೀಯವಾಗಿರುವ ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವಂತೆ 1ರಿಂದ 3 ವರ್ಷದ ಮಕ್ಕಳಿಗೆ ಯೋಗ್ಯವಾದ ಆಟಿಕೆಗಳನ್ನು ಮೊದಲನೆ ವರ್ಷದಲ್ಲಿ, ನಂತರ 3ರಿಂದ 6ವರ್ಷದ ಮಕ್ಕಳಿಗೆ ಮುಂದಿನ ಸಾಲಿನಲ್ಲಿ ಆಟಿಕೆಗಳನ್ನು ಖರೀದಿಸಿ ಪೂರಕ ಸಾಮಗ್ರಿ ಒದಗಿಸಲು ಕ್ರಮವಹಿಸುವುದು.
- ಅಂಗನವಾಡಿ ಕೇಂದ್ರ ನಡೆಸಲು ಸೂಕ್ತವಾದ ನಿವೇಶನ ಒದಗಿಸಿಕೊಡುವುದು.
- ಅಂಗನವಾಡಿ ಕಟ್ಟಡ ನಿರ್ಮಾಣದ ವೇಳೆಯಲ್ಲಿ ಗುಣಾತ್ಮಕವಾದ ಕಟ್ಟಡ ನಿರ್ಮಾಣವಾಗುವಂತೆ ಮೇಲ್ವಿಚಾರಣೆವಹಿಸಿ ಅಂಗವಿಕಲ ಮಕ್ಕಳ ಉಪಯೋಗಕ್ಕಾಗಿ ಕೇಂದ್ರದಲ್ಲಿ ರ್ಯಾಂಪ್‌ಗಳನ್ನು ಕಡ್ಡಾಯವಾಗಿ ಇಡುವಂತೆ ಗಮನಿಸುವುದು.
- ಅಂಗನವಾಡಿ ಕಟ್ಟಡಕ್ಕೆ ಸಣ್ಣಪುಟ್ಟ ದುರಸ್ತಿಗಳು, ಕಾಲಕಾಲಕ್ಕೆ ಸುಣ್ಣಬಣ್ಣವನ್ನು ಮಾಡಿಸುವುದು.
- ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಿಸುವಂತೆ ಹಾಗೂ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಅನುಕೂಲವನ್ನು ಗಮನಿಸಿ ನೀರಿನ ಸೌಕರ್ಯವನ್ನು ಒದಗಿಸುವಂತೆ ಮೇಲುಸ್ತುವಾರಿ ಮಾಡುವುದು.
- ಅಂಗನವಾಡಿ ಕಾರ್ಯಕರ್ತೆ ಪ್ರತಿವರ್ಷ ತಪ್ಪದೇ ತನ್ನ ಸಮೀಕ್ಷಾಕಾರ್ಯ ನಡೆಸುವಂತೆ ಮೇಲ್ವಿಚಾರಣೆ ಮಾಡುವುದು.
- ಸಮೀಕ್ಷಾವ್ಯಾಪ್ತಿಯ ಎಲ್ಲಾ ಗರ್ಭಿಣಿ, ಬಾಣಂತಿಯರು ಅಂಗನವಾಡಿ ಫಲಾನುಭವಿಗಳಾಗಿ ದಾಖಲಾಗುವಂತೆ ನೋಡಿಕೊಳ್ಳುವುದು, ಪರಿಶೀಲಿಸುವುದು, ವರ್ಷಕ್ಕೊಂದು ಬಾರಿ ದಾಖಲಾತಿಆಂದೋಲನ ನಡೆಸುವುದು.
- ಬೆಳಗ್ಗೆ 9.30ರಿಂದ ಮಧ್ಯಾಹ್ನ 4.00 ಗಂಟೆಯವರೆಗೆ ಸಮರ್ಪಕವಾಗಿ ಅಂಗನವಾಡಿ ನಡೆಯುವಂತೆ ಮೇಲ್ವಿಚಾರಣೆ ನಡೆಸುವುದು.
- ಅಂಗನವಾಡಿ ಕಾರ್ಯಕರ್ತೆಯು ಮಧ್ಯಾಹ್ನ 2.30ರಿಂದ 4.00ರವರೆಗೆ ಮನೆ ಭೇಟಿ ಹಾಗೂ ಸ್ತ್ರೀಶಕ್ತಿ ಗುಂಪುಗಳ ಸಭೆಯನ್ನು ನಡೆಸುವಂತೆ ಮೇಲ್ವಿಚಾರಣೆ ಮಾಡುವುದು.
- ಅಂಗನವಾಡಿ ಕೇಂದ್ರಕ್ಕೆ ಆಹಾರ ಸಾಮಗ್ರಿಗಳ ಸರಬರಾಜು ಆಗುವ ವೇಳೆಯಲ್ಲಿ ಸಮಿತಿಯ ಇಬ್ಬರು ಸದಸ್ಯರು ಖುದ್ದಾಗಿ ಹಾಜರಿದ್ದು, ಗುಣಮಟ್ಟ ಮತ್ತು ಸರಿಯಾದ ಪ್ರಮಾಣದಲ್ಲಿ ಸರಬರಾಜಾಗುವಂತೆ ನೋಡಿಕೊಂಡು ದೃಢೀಕರಿಸುವುದು.
- ಅಂಗನವಾಡಿ ಕೇಂದ್ರದಲ್ಲಿ ಎಲ್ಲಾ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಣೆಯಾಗುವಂತೆ ಮೇಲ್ವಿಚಾರಣೆ ನಡೆಸಿ, ಸ್ಥಳೀಯವಾಗಿ ದೊರಕುವ ಆಹಾರ

Kiran Raghupathi

ಪದಾರ್ಥಗಳಾದ ತರಕಾರಿ, ಸೊಪ್ಪು ಮತ್ತು ಹಣ್ಣುಗಳನ್ನು ಉಚಿತವಾಗಿ ಪಡೆಯಲು ಪ್ರಯತ್ನಿಸುವುದು.

- ತೀವ್ರ ನ್ಯೂನತೆಗೆ ಒಳಗಾದ ಮಕ್ಕಳಿಗೆ ಹೆಚ್ಚಿನ ಪೌಷ್ಟಿಕ ಆಹಾರ ಹಾಗೂ ಔಷಧೋಪಚಾರ ಅಗತ್ಯವಿದ್ದಲ್ಲಿ ಅಂತಹ ಮಕ್ಕಳಿಗೆ ಪ್ರಾಯೋಜಕತೆ ಮೂಲಕ ಸಹಾಯವನ್ನು ಒದಗಿಸುವುದು.
- ಆರೋಗ್ಯ ಸೇವೆಗಳಾದ ಚುಚ್ಚುಮದ್ದು ಕಾರ್ಯಕ್ರಮ, ಆರೋಗ್ಯತಪಾಸಣೆ ಹಾಗೂ ಆರೋಗ್ಯ ಮತ್ತು ಪೌಷ್ಟಿಕ ಶಿಬಿರಗಳು ಕ್ರಮವಾಗಿ ನಡೆಯುವಂತೆ ನೋಡಿಕೊಳ್ಳುವುದು.
- ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರುವ ಮಕ್ಕಳ ಹುಟ್ಟುಹಬ್ಬಗಳನ್ನು ಆಚರಿಸುವಂತೆ ಕ್ರಮವಹಿಸುವುದು.
- ಕೇಂದ್ರಗಳಲ್ಲಿ ರಾಷ್ಟ್ರೀಯ ಹಬ್ಬಗಳು ಹಾಗೂ ದಿನಾಚರಣೆ ನಡೆಯುವಂತೆಕ್ರಮವಹಿಸುವುದು.
- ಅಂಗನವಾಡಿ ಕಾರ್ಯಕರ್ತೆ ಹಾಗೂ ಮೇಲ್ವಿಚಾರಕಿ ಮತ್ತು ಗ್ರಾಮ ಪಂಚಾಯಿತಿ ನಡುವೆ ಸಂಪರ್ಕ ಸೇತುವೆಯಂತಿರುವುದು.
- ಸಮಿತಿಯು ಪ್ರತಿ ತಿಂಗಳು ಸಭೆ ನಡೆಸಿ, ಕೇಂದ್ರದ ಕುಂದು–ಕೊರತೆಯ ಬಗ್ಗೆ ಚರ್ಚಿಸಿ ಸೂಕ್ತ ಕ್ರಮವಹಿಸುವುದು.
- ಅಂಗನವಾಡಿ ಕೇಂದ್ರಗಳಲ್ಲಿ 6 ವರ್ಷದೊಳಗಿನ ಮಕ್ಕಳು ಕೇಂದ್ರವನ್ನು ಬಿಡದಂತೆ ಪೋಷಕರಿಗೆ ತಿಳಿಸಿ ಅನುಪಾಲನೆ ಮಾಡುವುದು.
- ಅಂಗನವಾಡಿ ಕೇಂದ್ರಗಳನ್ನು ಬಿಟ್ಟ 6 ವರ್ಷ ಮೇಲ್ಪಟ್ಟ ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಪೋಷಕರಿಗೆ ತಿಳಿಸಿ ಅನುಪಾಲನೆ ಮಾಡುವುದು.
- ಅಂಗನವಾಡಿ ಕೇಂದ್ರಗಳ ಅಭಿವೃದ್ಧಿಗೆ ಅವಶ್ಯಕವಾಗಿರುವ ಇತರ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.


ಈ ಮೇಲಿನ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವ ಮೂಲಕ ನಮ್ಮ ಮಕ್ಕಳಿಗೆ ಅಗತ್ಯವಿರುವ ಬಾಲ್ಯಪೂರ್ವಆರೈಕೆ ಹಾಗೂ ಶಿಕ್ಷಣವನ್ನು ಖಾತರಿ ಮಾಡೋಣ. ಆ ಮೂಲಕ ಎಲ್ಲಾ ಮಕ್ಕಳು ಸಾರ್ವತ್ರಿಕ ಶಿಕ್ಷಣ ಪಡೆಯಲು ಅಗತ್ಯ ಪೂರ್ವಸಿದ್ಧತೆಯನ್ನು ಖಚಿತಪಡಿಸೋಣ.

ಈ ರೀತಿ ಬಾಲ್ಯಪೂರ್ವ ಶಿಕ್ಷಣವನ್ನು ಪಡೆದ ಮಕ್ಕಳು ನಮ್ಮ ಶಾಲೆಗೆ ದಾಖಲಾಗಿ ಹಾಜರಾಗುವಂತೆ ಮಾಡೋಣ. ಇದಕ್ಕೆ ಸಂಬಂಧಿಸಿದಂತೆ ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಸೌಲಭ್ಯಗಳ ವಿವರವನ್ನು ಗಮನಿಸಿ ಸಂಬಂಧಿಸಿದ ಪೋಷಕರ ಗಮನಕ್ಕೆ ತರೋಣ.

Kiran Raghupathi

# ಅಧ್ಯಾಯ–7

## ಸರ್ಕಾರದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು



ಶಿಕ್ಷಣದ ಸಾರ್ವತ್ರೀಕರಣ ಹಾಗೂ ಗುಣಮಟ್ಟದ ಶಿಕ್ಷಣಕ್ಕಾಗಿ ಸರ್ಕಾರವು ಹಲವಾರು ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದೆ. ಈ ಕಾರ್ಯಕ್ರಮಗಳನ್ನು ರೂಪಿಸುವಾಗ ಸಮಾಜದ ಅಗತ್ಯತೆಗಳು ಹಾಗೂ ಸರ್ಕಾರದ ಸಾಮಾಜಿಕ ಜವಾಬ್ದಾರಿಯಿಂದಾಗಿ ರೂಪಿಸಲಾಗಿದೆ ಎಂಬುದು ನಮಗೆ ತಿಳಿದಿರಬೇಕು. ಸಮಾಜದ ವಿವಿದ ಸ್ತರಗಳ, ಹಿನ್ನೆಲೆಯಿಂದ ಬರುವ ಮಕ್ಕಳು ಹಸಿವಿನಿಂದ, ಬಟ್ಟೆ, ಪುಸ್ತಕ ಮುಂತಾದ ಕೊರತೆಗಳಿಂದ ಶಾಲೆಗೆ ಬಂದಾಗ ಅವರ ಕಲಿಕಾ ಮಟ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದೆಂಬುದು ನಮಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಾಮಾಜಿಕ ಹಿನ್ನೆಲೆ, ಆರ್ಥಿಕಮಟ್ಟ, ಕೌಟುಂಬಿಕ ಸಮಸ್ಯೆಗಳೆಲ್ಲ ನಮ್ಮ ಶಿಕ್ಷಣ ವ್ಯವಸ್ಥೆ ಹಾಗೂ ಕಲಿಕೆಯ ಮೇಲೆ ನೇರ ಪರಿಣಾಮ ಬೀರುತ್ತವೆ.

ಈ ಹಿಂದೆ ಹಸಿವಿನಿಂದ ಬಟ್ಟೆಯಿಲ್ಲದೆ, ಪುಸ್ತಕ ಇತರೆ ಲೇಖನ ಸಾಮಗ್ರಿಗಳಿಲ್ಲದೆ, ಶುಲ್ಕ ಭರಿಸಲಾಗದ ಆರ್ಥಿಕ ಮುಗ್ಗಟ್ಟು ಇತ್ಯಾದಿಗಳಿಂದ ಮಕ್ಕಳು ಶಾಲೆ ಬಿಟ್ಟ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ.

ಪ್ರತಿಯೊಂದು ಮಗುವು ಈ ದೇಶದ ಸಂಪತ್ತೆಂದು 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪರಿಗಣಿಸಲ್ಪಟ್ಟಿದೆ. ಸರ್ಕಾರದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಪ್ರಮುಖ ಉದ್ದೇಶಗಳನ್ನು ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ.ಯವರು ಮನಗಾಣಬೇಕು ಹಾಗೂ ಮೂಲ ಉದ್ದೇಶ/ಆಶಯಗಳನ್ನು ಗಮನದಲ್ಲಿಟ್ಟುಕೊಂಡು ಅನುಷ್ಠಾನಗೊಳಿಸಿ, ಮಕ್ಕಳಲ್ಲಿ ಗುಣಮಟ್ಟದ ಕಲಿಕೆ ಹಾಗೂ ಸಾರ್ವತ್ರೀಕರಣದ ಗುರಿ ಸಾಧಿಸಿ ಭವ್ಯ ಭಾರತದ ಉತ್ತಮ ಪ್ರಜೆಗಳನ್ನು ರೂಪಿಸುವ ಜವಾಬ್ದಾರಿ ನಮ್ಮದಾಗಿದೆ.

### ಉದ್ದೇಶಗಳು

- ಈ ಅಧಿವೇಶನದ ನಂತರ ಎಸ್.ಡಿ.ಎಂ.ಸಿ. ಸದಸ್ಯರು ಮತ್ತು ಮುಖ್ಯ ಶಿಕ್ಷಕರು, ವಿದ್ಯಾರ್ಥಿಗಳಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಯಾವುವು ಎಂಬುದನ್ನು ತಿಳಿದುಕೊಳ್ಳುವರು.
- ಈ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವುದು ಎಲ್ಲರ ಜವಾಬ್ದಾರಿ ಎಂಬುದನ್ನು ಅರ್ಥೈಸಿಕೊಳ್ಳುವ ಮೂಲಕ ಯಾವುದೇ ಮಗು ಈ ಸೌಲಭ್ಯಗಳಿಂದ ವಂಚಿತವಾಗದಂತೆ ನೋಡಿಕೊಳ್ಳುವುದು ಎಲ್ಲಾ ಮೇಲ್ವಿಚಾರಣಾಧಿಕಾರಿಗಳ ಜವಾಬ್ದಾರಿ ಎಂಬುದನ್ನು ಅರಿಯುವರು.
- ಈ ಸೌಲಭ್ಯಗಳನ್ನು ನೀಡುವ ಹಂತದಲ್ಲಿ ಯಾವುದೇ ಲೋಪವಾದಲ್ಲಿ ಅಥವಾ ನೈಜ ಫಲಾನುಭವಿಗಳಿಗೆ ದೊರೆಯದೆ ಆಗುವ ತೊಂದರೆಯನ್ನು ಅರ್ಥಮಾಡಿಕೊಳ್ಳುವರು (ಈ ಸೌಲಭ್ಯಗಳು ಯಾವುದೇ ರೀತಿಯಲ್ಲೂ ದುರುಪಯೋಗವಾದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ).
- ಈ ಸೌಲಭ್ಯಗಳೆಲ್ಲ ವಿದ್ಯಾರ್ಥಿಗಳಿಗೆ ದೊರೆತು ಉತ್ತಮ ಕಲಿಕೆಯಲ್ಲಿ ಪಾಲ್ಗೊಳ್ಳುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಸಮುದಾಯದ ಜವಾಬ್ದಾರಿ ಆಗಿರುತ್ತದೆಂದು ತಿಳಿಯುವರು.
- ಈ ಸೌಲಭ್ಯಗಳನ್ನು ಪಡೆಯಲು ಅಗತ್ಯವಿರುವ ದಾಖಲೆಗಳನ್ನು ಒದಗಿಸುವುದು ಪೋಷಕರ ಜವಾಬ್ದಾರಿ ಆಗಿರುತ್ತದೆಂದು ತಿಳಿಯುವರು.

6 ರಿಂದ 14 ವರ್ಷವಯೋಮಾನದ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವುದು, ನಿರಂತರವಾಗಿ ಹಾಜರಾಗುವುದು ಜೊತೆಗೆ ಮುಕ್ತ ಕಲಿಕಾ ವಾತಾವರಣದಲ್ಲಿ ಹಸಿವಿನಿಂದ ಬಳಲದೆ ತರಗತಿ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂತೋಷದಿಂದ ಬಾಲ್ಯ ಕಳೆಯಬೇಕೆಂಬುದು ಸರಕಾರದಆಶಯ. ವಿಶೇಷವಾಗಿ ಹೆಣ್ಣು ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗಿ ಗುಣಮಟ್ಟದ ಶಿಕ್ಷಣ ಪಡೆಯಲು ಬಡತನ ಮತ್ತು ಇತರೆ ಸಾಮಾಜಿಕ ಕಾರಣ/ಕೌಟುಂಬಿಕ ಸಮಸ್ಯೆಗಳಿಂದಾಗಿ

Kiran Raghupathi

ಕಲಿಕಾ ಪ್ರಕ್ರಿಯೆಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ ಮಧ್ಯಾಹ್ನದ ಬಿಸಿಯೂಟ, ಕೆನೆಭರಿತ ಹಾಲು, ವಿದ್ಯಾರ್ಥಿಗಳಿಗೆ ಬೇಕಾದ ಇತರೆ ಸೌಲಭ್ಯಗಳನ್ನು ಹಂತ ಹಂತವಾಗಿ ಸರ್ಕಾರವು ಕಲ್ಪಿಸುತ್ತಾ ಬಂದಿದೆ. **ಸದೃಢ ದೇಹದಲ್ಲಿ ಸದೃಢ ಮನಸ್ಸು** ಎಂಬ ಸ್ವಾಮಿ ವಿವೇಕಾನಂದರ ಮಾತಿನಂತೆ ಮಕ್ಕಳು ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಹರ್ಷದಿಂದ ಪಾಲ್ಗೊಂಡು ಗುಣಮಟ್ಟದ ಶಿಕ್ಷಣ ಪಡೆಯಲು ವಸತಿ ಶಾಲೆಗಳು, ವಿಶೇಷ ಶಾಲೆಗಳು, ಅವಕಾಶಗಳು ಹಾಗೂ ಪಾಠೋಪಕರಣಗಳನ್ನು ಒದಗಿಸುತ್ತಾ ಬಂದಿದೆ.

### *ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಉತ್ತೇಜಕಗಳು*

1. ಎಲ್ಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಮತ್ತು ಎರಡು ಜೊತೆ ಉಚಿತ ಸಮವಸ್ತ್ರಗಳು (1 ರಿಂದ 8ನೇ ತರಗತಿಯವರೆಗೆ) ಹಾಗೂ 9 ರಿಂದ 10ನೇ ತರಗತಿವರೆಗೂ ಒಂದು ಜೊತೆ ಸಮವಸ್ತ್ರ
2. ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳಿಗೆ ಬ್ಯಾಗ್ ಮತ್ತು ನೋಟ್ ಪುಸ್ತಕ ವಿತರಣೆ
3. ಎಲ್ಲಾ ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ, ಹಾಲು ವಿತರಣೆ ಮತ್ತು ವಿಟಮಿನ್ ಹಾಗೂ ಜಂತು ನಿವಾರಣಾ ಮಾತ್ರೆಗಳು
4. ಎನ್.ಎಂ.ಎಂ.ಎಸ್. ಮತ್ತು ಎನ್.ಟಿ.ಎಸ್.ಇ. ಪರೀಕ್ಷೆಗಳಲ್ಲಿ ಅರ್ಹರಾದವರಿಗೆ ವಿದ್ಯಾರ್ಥಿ ವೇತನ
5. ವಿಶೇಷ ಸಾಧನೆ ತೋರಿದ ಆಯ್ದ ಮಕ್ಕಳಿಗೆ ಶೌರ್ಯ ಪ್ರಶಸ್ತಿ–ನಗದು ಪುರಸ್ಕಾರ
6. ಕ್ರೀಡೆ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಪಡೆದವರಿಗೆ ಪ್ರೋತ್ಸಾಹಧನ
7. ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವ್ಯವಸ್ಥೆ
8. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಪ್ರತಿ ಶಾಲೆಯಿಂದ ಒಂದು ಮಗುವಿಗೆ ರಾಷ್ಟ್ರೀಯ ವಿಜ್ಞಾನ ಕಾರ್ಯಕ್ರಮದಲ್ಲಿ ಐದು ಸಾವಿರ ರೂಪಾಯಿ ಪ್ರೇರಕಧನ ವಿತರಣೆ (ಇನ್‌ಸ್ಪೈರ್ ಅವಾರ್ಡ್)
9. ಒಂದರಿಂದ ಹತ್ತನೇತರಗತಿ ಮಕ್ಕಳಿಗೆ (ಸಮಾಜಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಇಲಾಖೆ ಇತ್ಯಾದಿಗಳ ಮೂಲಕ) ವಿವಿಧ ವಿದ್ಯಾರ್ಥಿ ವೇತನ
10. 10ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ.ಯಲ್ಲಿ 90% ಮತ್ತು ಅದಕ್ಕಿಂತ ಹೆಚ್ಚು ಅಂಕ ಗಳಿಸಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ **ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರ**

#### *ಸರ್ಕಾರಿ ಶಾಲೆಗಳಲ್ಲಿ ದೊರೆಯುವ ವಿಶೇಷ ಅವಕಾಶಗಳು*

1. ಉಚಿತ ವಿದ್ಯಾರ್ಥಿ ನಿಲಯದ ವ್ಯವಸ್ಥೆ
2. ರಿಯಾಯಿತಿ ಬಸ್ ಪಾಸ್ ವ್ಯವಸ್ಥೆ
3. ಎಲ್ಲಾ ಶಾಲೆಗಳಲ್ಲಿ ಮಕ್ಕಳು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಮಕ್ಕಳ ಹಕ್ಕುಗಳ ಕ್ಲಬ್, ಶಾಲಾ ಮಂತ್ರಿಮಂಡಲ ಮತ್ತು ಮೀನಾ ತಂಡಗಳ ರಚನೆ

ಈ ಕೆಳಕಂಡಂತೆ ವಿವಿಧ ವರ್ಗದ ಶಾಲೆಗಳಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗಿದೆ;

| ಕ್ರ.ಸಂ. | ಶಾಲೆಯ ವಿಧ | ಪ್ರವೇಶ ಕ್ರಮ | ಅರ್ಹತೆ | ದಾಖಲಾತಿ | ಮಾಧ್ಯಮ |
|---|---|---|---|---|---|
| 1 | ಕಸ್ತೂರಿ ಬಾ ಗಾಂಧಿ ಬಾಲಿಕಾ ವಿದ್ಯಾಲಯ | ನೇರ ದಾಖಲಾತಿ | ಬಡ ಹೆಣ್ಣುಮಕ್ಕಳು, ಏಕ ಪೋಷಕರ ಮಕ್ಕಳು, ಅನಾಥ ಮಕ್ಕಳು, ಶಾಲೆಯಿಂದ ಹೊರಗುಳಿದ ಮತ್ತು ಶಾಲೆ ಬಿಟ್ಟ ಮಕ್ಕಳಿಗೆ ಮುಕ್ತ ಅವಕಾಶ | 6ನೇ ತರಗತಿ | ಕನ್ನಡ |
| 2 | ಗಿರಿಜನ ಆಶ್ರಮ ಶಾಲೆ | | ಮುಕ್ತ ಅವಕಾಶ | 1ರಿಂದ 7ನೇ ತರಗತಿವರೆಗೆ | ಕನ್ನಡ |
| 3 | ಕೇಂದ್ರೀಯ ವಿದ್ಯಾಲಯ | | ಮುಕ್ತ ಅವಕಾಶ | 1ನೇ ತರಗತಿಯಿಂದ 12ನೇ ತರಗತಿವರೆಗೆ | ಇಂಗ್ಲೀಷ್ |

Kiran Raghupathi

| | | | | | |
|---|---|---|---|---|---|
| 4 | ಆದರ್ಶ ವಿದ್ಯಾಲಯ | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6 ರಿಂದ 10ನೇ ತರಗತಿ | ಇಂಗ್ಲೀಷ್ |
| 5 | ಮೊರಾರ್ಜಿ ದೇಸಾಯಿ ವಸತಿ ಶಾಲೆ (ಎಸ್.ಸಿ., ಎಸ್.ಟಿ., ಹಿಂ.ವರ್ಗ, ಸಾಮಾನ್ಯ ವರ್ಗದವರಿಗೆ ಪ್ರತ್ಯೇಕ ) | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6 ರಿಂದ 10ನೇ ತರಗತಿ | ಇಂಗ್ಲೀಷ್ |
| 6 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ (ಎಸ್.ಸಿ./ಎಸ್.ಟಿ. ವರ್ಗದವರಿಗೆ ಪ್ರತ್ಯೇಕ) | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6 ರಿಂದ 10ನೇ ತರಗತಿ | ಇಂಗ್ಲೀಷ್ |
| 7 | ಏಕಲವ್ಯ ವಸತಿ ಶಾಲೆ (ಪರಿಶಿಷ್ಟ ಪಂಗಡ) | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6ನೇ ತರಗತಿ | ಇಂಗ್ಲೀಷ್ |
| 8 | ಹುತಾತ್ಮ ವಸತಿ ಶಾಲೆ (ಸಾಮಾನ್ಯ ವರ್ಗ) | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6ನೇ ತರಗತಿ | ಇಂಗ್ಲೀಷ್ |
| 9 | ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ (ಎಸ್.ಸಿ., ಎಸ್.ಟಿ., ಹಿಂ.ವರ್ಗದವರಿಗೆ ಪ್ರತ್ಯೇಕ) | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6ನೇ ತರಗತಿ | ಇಂಗ್ಲೀಷ್ |
| 10 | ಜಿಲ್ಲಾ ಕ್ರೀಡಾ ಶಾಲೆ | 5ನೇ ತರಗತಿಯಲ್ಲಿ ಆಯ್ಕೆ ಪರೀಕ್ಷೆ | ದೈಹಿಕ ಸದೃಢತೆ ಪರೀಕ್ಷೆ ಉತ್ತೀರ್ಣತೆ | 5 ರಿಂದ 7ನೇ ತರಗತಿ | ಕನ್ನಡ/ ಇಂಗ್ಲೀಷ್ |
| 11 | ಸೈನಿಕ ಶಾಲೆ | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ (ಪ್ರತಿ ವರ್ಷಜನವರಿಯಲ್ಲಿ) | ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ | 6ನೇ ತರಗತಿಗೆ (10 ರಿಂದ 11 ವರ್ಷದೊಳಗೆ) ಮತ್ತು 9ನೇ ತರಗತಿಗೆ (13 ರಿಂದ 14 ವರ್ಷದೊಳಗೆ) | ಇಂಗ್ಲೀಷ್ |
| 12 | ಜವಾಹರ್ ನವೋದಯ ವಿದ್ಯಾಲಯ | 5ನೇ ತರಗತಿಯಲ್ಲಿ ಪ್ರವೇಶ ಪರೀಕ್ಷೆ | ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯ್ಕೆಯಾದ 75% ಗ್ರಾಮೀಣ ಮತ್ತು 25% ನಗರ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ | 6ನೇ ತರಗತಿಯಿಂದ 12ನೇ ತರಗತಿವರೆಗೆ | ಇಂಗ್ಲೀಷ್ |
| 13 | ಕೆ.ಜಿ.ಬಿ.ವಿ. ವಸತಿ ನಿಲಯ | 6ನೇ ತರಗತಿಯಿಂದ 10ನೇ ತರಗತಿಯ ಬಡ ವಿದ್ಯಾರ್ಥಿಗಳು ಮತ್ತು ಕೆ.ಜಿ.ಬಿ.ವಿ. ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ | | | |

***ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಪ್ರಮುಖ ಸೌಲಭ್ಯಗಳು***

1. ತರಬೇತಿ ಪಡೆದ ವೃತ್ತಿಪರಿಣಿತ ಶಿಕ್ಷಕರಿಂದ ಶಿಶುಕೇಂದ್ರಿತ ಹಾಗೂ ಶಿಶುಸ್ನೇಹಿ ವಿಧಾನದಲ್ಲಿ ಬೋಧನಾ-ಕಲಿಕಾ ಪ್ರಕ್ರಿಯೆ
2. ಒಂದನೇ ತರಗತಿಯಿಂದಲೇ ಆಂಗ್ಲ ಭಾಷಾ ಕಲಿಕೆ
3. ಸ್ವಚ್ಛ ಮತ್ತು ಸುಂದರ ಶಾಲಾ ಭೌತಿಕ ಪರಿಸರ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ

Kiran Raghupathi

4. ಮಕ್ಕಳು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಲು ಸೂಕ್ತ ಪ್ಯಾನೆಲ್ ಬೋರ್ಡ್, ಶಾಲಾ ಪತ್ರಿಕೆ, ಓದುವ ಮೂಲೆ ಇತ್ಯಾದಿಗಳ ವ್ಯವಸ್ಥೆ
5. ನಿರಂತರ ಸಹಪಠ್ಯ ಚಟುವಟಿಕೆಗಳು, ಪ್ರತಿಭಾ ಕಾರಂಜಿ ಮತ್ತು ಕ್ರೀಡಾಕೂಟ
6. ಕಂಪ್ಯೂಟರ್ ಶಿಕ್ಷಣ (ಸಿ.ಎ.ಎಲ್.ಸಿ./ಐಸಿಟಿ/ಟ್ಯಾಲ್ಪ ಯೋಜನೆ) ಮತ್ತು ಗ್ರಂಥಾಲಯ ಸೌಲಭ್ಯ
7. ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಮೂಲಕ ಮಕ್ಕಳ ಆರೋಗ್ಯ ಸುಧಾರಣೆಗಾಗಿ ಸಮಗ್ರ ವೈದ್ಯಕೀಯ ತಪಾಸಣೆ ಮತ್ತು ಅಗತ್ಯವಿದ್ದಲ್ಲಿ ಶಸ್ತ್ರಚಿಕಿತ್ಸೆಗಾಗಿ ಆರ್ಥಿಕ ನೆರವು
8. ಕಿಶೋರಿಯರ ರಾಷ್ಟ್ರೀಯ ಸ್ವಾಸ್ಥ್ಯ ಕಾರ್ಯಕ್ರಮದ ಮೂಲಕ ಹದಿಹರೆಯದ ಹೆಣ್ಣು ಮಕ್ಕಳಿಗೆ ಆಪ್ತ ಸಮಾಲೋಚನೆ ಹಾಗೂ ವೈದ್ಯಕೀಯ ನೆರವು ಮತ್ತು ಉಚಿತ ಸ್ಯಾನಿಟರಿ ನ್ಯಾಪ್ಕಿನ್ಸ್ ವಿತರಣೆ
9. ಅಪಘಾತದಲ್ಲಿ ಮೃತರಾದ/ಗಾಯಗೊಂಡ ವಿದ್ಯಾರ್ಥಿಗಳಿಗೆ ಪರಿಹಾರಧನ
10. ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಸಹಾಯಧನ ಮತ್ತು ಅಗತ್ಯ ಸಾಧನ ಸಲಕರಣೆಗಳ ವಿತರಣೆ
11. ಶಾಲೆಗೆ ಹಾಜರಾಗಲು ಸಾಧ್ಯವಾಗದ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ
12. ಶಾಲಾ ಮಕ್ಕಳಿಗೆ ರಾಷ್ಟ್ರೀಯ ಆವಿಷ್ಕಾರ ಅಭಿಯಾನ ಮತ್ತು ಬಾಲ ಸ್ವಚ್ಛ ವಿದ್ಯಾಲಯ ವ್ಯವಸ್ಥೆ
13. ರೇಡಿಯೋ ಮತ್ತು ದೂರದರ್ಶನದ ಮೂಲಕ ಮಕ್ಕಳು ಶಿಕ್ಷಣ ಪಡೆಯಲು ವ್ಯವಸ್ಥೆ
14. ಶಾಲೆಗೆ ಬನ್ನಿ ಶನಿವಾರ, ಸಮುದಾಯ ದೀಪ ಮುಂತಾದ ಕಾರ್ಯಕ್ರಮಗಳ ಮೂಲಕ ಮಕ್ಕಳೊಂದಿಗೆ ತಮ್ಮಅನುಭವ ಹಂಚಿಕೊಳ್ಳಲು ಆಸಕ್ತರಿಗೆ ಅವಕಾಶ
15. ಶೈಕ್ಷಣಿಕ ಜ್ಞಾನಧಾರ, ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದ ಮೂಲಕ ಮಾರ್ಗದರ್ಶಕರು ಹಾಗೂ ಅಧಿಕಾರಿಗಳಿಗೆ ಮಾಹಿತಿ ಹಂಚಿಕೆ ಹಾಗೂ ಸಂವಾದ
16. ಕ್ರೀಡೆ ಮತ್ತು ಸೈನಿಕ ಶಾಲಾ ವ್ಯವಸ್ಥೆ
17. ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಫಿಸಿಯೋಥೆರೆಪಿಗಾಗಿ ಸಾರಿಗೆ, ಎಸ್ಕಾರ್ಟ್ ಹಾಗೂ ಸಾಧನ ಸಲಕರಣೆಗಳ ಸೌಲಭ್ಯ
18. ಎಲ್ಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ
19. ಎಲ್ಲಾ ಮಕ್ಕಳಿಗೂ ಉಚಿತ ಮಧ್ಯಾಹ್ನದ ಬಿಸಿಯೂಟ, ಹಾಲು ವಿತರಣೆ ಮತ್ತು ವಿಟಮಿನ್ ಹಾಗೂ ಜಂತು ನಿವಾರಣಾ ಮಾತ್ರೆಗಳು
20. ಕ್ರೀಡೆ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಪಡೆದವರಿಗೆ ಪ್ರೋತ್ಸಾಹಧನ.
21. ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಕ್ಷೇಮಾಭಿವೃದ್ಧಿ ನಿಧಿಯಿಂದ ನಗದು ಬಹುಮಾನ
22. ಕೆ.ಜಿ.ಬಿ.ವಿ. ಶಾಲೆಗಳಿಗೆ ಟ್ಯಾಬ್‌ಗಳ ವಿತರಣೆ
23. ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಸ್ವ–ರಕ್ಷಣಾ ಕರಾಟೆ ತರಗತಿಗೆ 3,000/– ಅನುದಾನ
24. ಪ್ರತಿ ಶಾಲೆಗೆ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಶಾಲಾ ನಿರ್ವಹಣಾ ಅನುದಾನ

***ಈಗಾಗಲೇ ಎಸ್.ಡಿ.ಎಂ.ಸಿ.ಯವರು ಮಾಡಿರುವ ಕೆಲವು ಆವಿಷ್ಕೃತ ಚಟುವಟಿಕೆಗಳು***

1. ಆಂಗ್ಲ ಮಾಧ್ಯಮ ಬೋಧನೆಗೆ ಬೇಕಾದ ಹೆಚ್ಚುವರಿ ಶಿಕ್ಷಕರನ್ನು ಒದಗಿಸಿರುವುದು
2. ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳನ್ನು ಪ್ರಾರಂಭಿಸಿರುವುದು
3. ತರಗತಿ ಕೊಠಡಿ ಕಲಿಕೆ ಉತ್ತಮಪಡಿಸಲು ಎಲ್.ಸಿ.ಡಿ. ಪ್ರೊಜೆಕ್ಟರ್, ಗಣಕಯಂತ್ರ, ಸ್ಮಾರ್ಟ್ ತರಗತಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿರುವುದು
4. ವಿದ್ಯಾರ್ಹತೆ ಹೊಂದಿರುವ ಪೋಷಕರು ಬಿಡುವಿನ ವೇಳೆಯಲ್ಲಿ ತರಗತಿ ಬೋಧನೆಯಲ್ಲಿ ಪಾಲ್ಗೊಳ್ಳುತ್ತಿರುವುದು
5. ಬಿಸಿಯೂಟಕ್ಕೆ ತರಕಾರಿ ಒದಗಿಸುತ್ತಿರುವುದು (ಅಕ್ಷಯ ಪಾತ್ರೆ)
6. ಶಾಲೆಯ ಆಸ್ತಿಯನ್ನು ಸಮಾಜದ ಆಸ್ತಿಯೆಂದು ರಕ್ಷಿಸಿರುವುದು
7. ಸ್ಥಳ ದಾನ ನೀಡಿರುವುದು ಮತ್ತು ಕಟ್ಟಡ ನಿರ್ಮಿಸಿ ಕೊಟ್ಟಿರುವುದು
8. ಶಾಲೆಯ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹಿಸುತ್ತಿರುವುದು

ಈ ಎಲ್ಲಾ ಸೌಲಭ್ಯಗಳು ಇರುವುದು ನಮ್ಮ ದೇಶದ ಮಕ್ಕಳ ಏಳ್ಗೆಗಾಗಿ. ನಮ್ಮ ಮಕ್ಕಳು ಸಂತೋಷದಾಯಕವಾಗಿ ಕಲಿಕೆಯಲ್ಲಿ ಪಾಲ್ಗೊಂಡು, ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡು ಗುಣಾತ್ಮಕ ಶಿಕ್ಷಣದ ಮೂಲಕ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಆ ಮೂಲಕ ಭವ್ಯ ಭಾರತದ ನಿರ್ಮಾಣಕ್ಕೆ ಅತ್ಯುತ್ಕೃಷ್ಟ ಮಾನವ ಸಂಪನ್ಮೂಲವನ್ನು ಪೂರೈಸಬೇಕಾದ ಜವಾಬ್ದಾರಿ ನಮ್ಮದಾಗಿದೆ.

Kiran Raghupathi

# ಅಧ್ಯಾಯ-8

## ರಾಷ್ಟ್ರೀಯ ಶಿಕ್ಷಣ ನೀತಿ, 2020 – ಮುನ್ನೋಟ

### ಉದ್ದೇಶಗಳು

**ಈ ಅಧ್ಯಾಯದ ನಂತರ ಸದಸ್ಯರು;**

- ರಾಷ್ಟ್ರೀಯ ಶಿಕ್ಷಣ ನೀತಿ, 2020ರ ಉದ್ದೇಶಗಳನ್ನು ತಿಳಿದುಕೊಳ್ಳುವರು
- ರಾಷ್ಟ್ರೀಯ ಶಿಕ್ಷಣ ನೀತಿ, 2020ರ ಮುಖ್ಯಾಂಶಗಳನ್ನು ಪಟ್ಟಿ ಮಾಡುವರು
- ರಾಷ್ಟ್ರೀಯ ಶಿಕ್ಷಣ ನೀತಿ, 2020ನ್ನು ಜಾರಿಗೊಳಿಸುವ ಅಗತ್ಯವನ್ನು ಮನಗಾಣುವರು

ರಾಷ್ಟ್ರೀಯ ಶಿಕ್ಷಣ ನೀತಿ 2020 ಭಾರತ ಕೇಂದ್ರಿತ ಶಿಕ್ಷಣ ವ್ಯವಸ್ಥೆಯೊಂದಿಗೆ ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ನಮ್ಮ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುವುದು.

### ಉದ್ದೇಶ

ರಾಷ್ಟೀಯ ಶಿಕ್ಷಣ ನೀತಿಯು ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣ ಮಹತ್ವಕ್ಕೆ ಬಹಳ ಒತ್ತು ನೀಡುತ್ತದೆ. 2030ರ ವೇಳೆಗೆ 3 ರಿಂದ 18 ವರ್ಷ ವಯಸ್ಸಿನವರೆಗಿನ ಎಲ್ಲಾ ವಿದ್ಯಾರ್ಥಿಗಳು 100ಕ್ಕೆ 100 ರಷ್ಟು ದಾಖಲಾತಿಯನ್ನು ಹೊಂದುವುದು ಮತ್ತು ಕಂಠಪಾಠದ ಕಲಿಕೆಯನ್ನು ತಪ್ಪಿಸಲು ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನೆರವಾಗುವ ಹಾಗೂ 21ನೇ ಶತಮಾನದಲ್ಲಿ ಅಗತ್ಯವಿರುವ ಕೌಶಲಗಳಾದ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಬಿಡಿಸುವ ಕಲೆ, ವೈಜ್ಞಾನಿಕ ಮನೋಭಾವ, ಸಂವಹನ ಕಲೆ, ಸಹವರ್ತನೆ, ಬಹುಭಾಷಾ ಕೌಶಲ, ನೈತಿಕತೆ, ಸಾಮಾಜಿಕ ಜವಾಬ್ದಾರಿ ಮತ್ತು ಡಿಜಿಟಲ್ ಸಾಕ್ಷರತೆಯನ್ನು ಪ್ರೋತ್ಸಾಹಿಸುವ ಉಚಿತ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು, ಆ ಮೂಲಕ ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಸುಭದ್ರಗೊಳಿಸುವ ಧ್ಯೇಯವನ್ನು ಹೊಂದಿದೆ.

ಈ ಮೇಲ್ಕಂಡ ಉದ್ದೇಶದ ಈಡೇರಿಕೆಯ ಹಿನ್ನೆಲೆಯಲ್ಲಿ 34 ವರ್ಷಗಳ ಬಳಿಕ ದೇಶದ ಇತಿಹಾಸದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದೊಡ್ಡ ಬದಲಾವಣೆ ಇದಾಗಿದ್ದು, ಇಂದಿನ ಹಾಗೂ ಭವಿಷ್ಯದ ಶೈಕ್ಷಣಿಕ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಈ ನೂತನ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ. ಸ್ವಾತಂತ್ರ್ಯದ ನಂತರ ಜಾರಿಗೆ ಬರುತ್ತಿರುವ ಮೂರನೇ ಪರಿಷ್ಕೃತ ಶಿಕ್ಷಣ ನೀತಿ ಇದಾಗಿದೆ. ಈ ಗುರಿಯನ್ನು ಸಾಧಿಸಲು ಬಂಡವಾಳ ಹೂಡಿಕೆ ಮತ್ತು ಹೊಸ ಯೋಜನೆಗಳನ್ನು ರೂಪಿಸಿದ್ದು. ಈ ಕೆಳಕಂಡ ಅಂಶಗಳಿಗೆ ಒತ್ತುಕೊಡಲಾಗಿದೆ. ಆ ಎಲ್ಲಾ ಅಂಶಗಳು ಮತ್ತು ವಿವರ ಈ ಕೆಳಕಂಡಂತಿದೆ.

### ರಾಷ್ಟ್ರೀಯ ಶಿಕ್ಷಣ ನೀತಿ, 2020ರ ಮುಖ್ಯಾಂಶಗಳು

**1. ಪ್ರಾರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಬಲಪಡಿಸುವುದು**

- 3 ರಿಂದ 6 ವರ್ಷದೊಳಗಿನ ಪ್ರತಿ ಮಗುವಿಗೆ 2025ರ ವೇಳೆಗೆ ಉಚಿತ, ಸುರಕ್ಷಿತ, ಉತ್ತಮ ಗುಣಮಟ್ಟದ ಅಭಿವೃದ್ಧಿಗೆ ಸೂಕ್ತವಾದ ಆರೈಕೆ ಮತ್ತು ಶಿಕ್ಷಣವನ್ನು ನೀಡುವುದು.
- ಪೋಷಕರು ತಮ್ಮ ಮಕ್ಕಳ ಕಲಿಕೆಯ ಅಗತ್ಯಗಳನ್ನು ಸಕ್ರಿಯವಾಗಿ ಬೆಂಬಲಿಸಲು ಅನುವು ಮಾಡಿಕೊಡಲು ದೊಡ್ಡ ಪ್ರಮಾಣದ ಮತ್ತು ವ್ಯಾಪಕವಾದ ಮಾಹಿತಿಯನ್ನು ಪ್ರಸಾರದ ಮೂಲಕ ಭಾಗೀದಾರರಿಂದ ಬೇಡಿಕೆಯನ್ನು ಸೃಷ್ಟಿಸಲಾಗುತ್ತದೆ.
- 3 ರಿಂದ 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಲಭ್ಯಗೊಳಿಸಲು ಶಿಕ್ಷಣ ಹಕ್ಕು ಕಾಯಿದೆ 2009ನ್ನು ವಿಸ್ತರಿಸಲಾಗುವುದು.

Kiran Raghupathi

**2. ಎಲ್ಲಾ ಮಕ್ಕಳಲ್ಲೂ ಸಾಕ್ಷರತೆ ಮತ್ತು ಗಣಿತದ ಕೌಶಲಗಳ ಭದ್ರ ಬುನಾದಿ ರೂಪಿಸುವುದು**

- 1–5ನೇ ತರಗತಿ ಮಕ್ಕಳಿಗೆ ಪ್ರಾರಂಭಿಕ ಮಟ್ಟದ ಭಾಷಾ ಕಲಿಕೆ ಮತ್ತು ಗಣಿತದ ಕೌಶಲಗಳ ಕಲಿಕೆಗೆ ವಿಶೇಷ ಗಮನ ನೀಡುವುದು. ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡಲು ಮತ್ತು ಅವರಿಗೆ ಸೂಕ್ತ ಗುಣಮಟ್ಟದ ಸಂಪನ್ಮೂಲಗಳನ್ನು ಒದಗಿಸಲು ಸಮರ್ಪಕವಾದ ಸೂಕ್ತ ವ್ಯವಸ್ಥೆಯನ್ನು ರೂಪಿಸುವುದು.
- ಶಿಕ್ಷಕರಿಗೆ ಕಲಿಸುವ ಪ್ರಕ್ರಿಯೆಯಲ್ಲಿ ನೆರವಾಗಲು ತಾಂತ್ರಿಕ ಸಾಧನಗಳನ್ನು ರೂಪಿಸುವುದು ಮತ್ತು ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಮತ್ತು ಸಂವಹನ ಕೌಶಲತೆಯನ್ನು ಕಲಿಸಲು ಶಾಲಾ ಗ್ರಂಥಾಲಯವನ್ನು ಬಲಪಡಿಸುವುದು.
- 1ನೇ ತರಗತಿಯಲ್ಲಿ ಓದುತ್ತಿರುವ ಎಲ್ಲಾ ಮಕ್ಕಳನ್ನು ಪ್ರಾರಂಭದ 3 ತಿಂಗಳು ಶಾಲಾ ತಯಾರಿ ಮಾಡ್ಯೂಲ್‌ಗೆ ಒಳಪಡಿಸುವುದು.
- ಭಾಷಾ ಕಲಿಕೆ ಮತ್ತು ಗಣಿತದ ಕೌಶಲಗಳ ಕಲಿಕೆಗೆ ಭದ್ರ ಬುನಾದಿಯನ್ನು ಒದಗಿಸುವ ನಿಟ್ಟಿನಲ್ಲಿ ಶಿಕ್ಷಕರ ಶಿಕ್ಷಣ ಮತ್ತು ತರಬೇತಿಯನ್ನು ಮರುವಿನ್ಯಾಸಗೊಳಿಸುವುದು (ಸಮಷ್ಠಿ ಸಭೆಗಳ ಮೂಲಕ ಶಿಕ್ಷಕರನ್ನು ಸಶಕ್ತಗೊಳಿಸುವುದು)
- ಭಾಷಾ ಕಲಿಕೆ ಮತ್ತು ಗಣಿತದ ಕೌಶಲಗಳ ಕಲಿಕೆಗೆ ಭದ್ರ ಬುನಾದಿಯನ್ನು ಒದಗಿಸಲು ವಿದ್ಯಾರ್ಥಿಗಳ ಪೋಷಕರು ಮತ್ತು ಸ್ವಯಂ ಸೇವಕರ ಭಾಗವಹಿಸುವಿಕೆ ಇರುವಂತೆ ನೋಡಿಕೊಳ್ಳುವುದು.

**3. ಶಿಕ್ಷಣದ ಎಲ್ಲಾ ಮಟ್ಟದಲ್ಲೂ ಸಾರ್ವತ್ರಿಕ ಪ್ರವೇಶ ಮತ್ತು ಧಾರಣತೆಯನ್ನು ಕಾಪಾಡಿಕೊಳ್ಳುವುದು**

- ಶೇಕಡಾ 100ರಷ್ಟು ಮಕ್ಕಳು ಶಾಲೆಗೆ ದಾಖಲಾತಿ ಹೊಂದಲು ಬೆಂಬಲಿಸುವುದು.
- ಎಲ್ಲಾ ಮಕ್ಕಳ ಭಾಗವಹಿಸುವಿಕೆ ಮತ್ತು ಕಲಿಕೆಯನ್ನು ಖಾತ್ರಿಪಡಿಸುವುದು. ತಂತ್ರಜ್ಞಾನ, ಔಪಚಾರಿಕ ಮತ್ತು ಅನೌಪಚಾರಿಕ ಕಲಿಕಾ ವಿಧಾನಗಳ ಮೂಲಕ ಅನೇಕ ರೀತಿಯಲ್ಲಿ ಕಲಿಯುವ ಸಾಧ್ಯತೆಗಳನ್ನು ಬಲಪಡಿಸುವುದು.
- ಮಕ್ಕಳಿಗೆ ಆರೋಗ್ಯ ತಪಾಸಣೆ ಕಾರ್ಯಕ್ರಮಗಳನ್ನು ಏರ್ಪಡಿಸುವುದು. ವಿದ್ಯಾರ್ಥಿಗಳಲ್ಲಿ ಮತ್ತು ಪೋಷಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಮಾಡುವುದು.

**4. ಶಾಲಾ ಶಿಕ್ಷಣಕ್ಕಾಗಿ ಹೊಸ ಪಠ್ಯಕ್ರಮ ಮತ್ತು ಬೋಧನಾ ಕ್ರಮ**

- ಕಂಠಪಾಠದ ಕಲಿಕೆಯನ್ನು ತಪ್ಪಿಸಲು ಮತ್ತು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ನೆರವಾಗುವ ಹಾಗೂ 21ನೇ ಶತಮಾನದಲ್ಲಿ ಅಗತ್ಯವಿರುವ ಕೌಶಲಗಳಾದ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಬಿಡಿಸುವ ಕಲೆ, ವೈಜ್ಞಾನಿಕ ಮನೋಭಾವ, ಸಂವಹನ ಕಲೆ, ಸಹವರ್ತನೆ, ಬಹುಭಾಷಾ ಕೌಶಲ, ನೈತಿಕತೆ, ಸಾಮಾಜಿಕ ಜವಾಬ್ದಾರಿ ಮತ್ತು ಡಿಜಿಟಲ್ ಸಾಕ್ಷರತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಬೋಧನಾ ಕ್ರಮಗಳನ್ನು ಮಾರ್ಪಡಿಸುವುದು.
- ಮಕ್ಕಳ ಕಲಿಯುವ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಅವರ ಕಲಿಕೆಯ ಅಗತ್ಯಗಳಿಗೆ ತಕ್ಕಂತೆ ಮತ್ತು ಅವರ ಆಸಕ್ತಿಗಳನ್ನು ಬೆಳೆಸುವ ನಿಟ್ಟಿನಲ್ಲಿ ಸ್ಪಂದನಾಶೀಲ ಪಠ್ಯಕ್ರಮ ಮತ್ತು ಬೋಧನಾ ಕ್ರಮವನ್ನು ರೂಪಿಸುವುದು.
- 5+3+3+4 ವಿನ್ಯಾಸದ ಆಧಾರದ ಮೇಲೆ ಪಠ್ಯಕ್ರಮ ಮತ್ತು ಬೋಧನಾಕ್ರಮ ಹಾಗೂ ಶಾಲಾ ಶಿಕ್ಷಣದ ಪಠ್ಯಕ್ರಮದ ಚೌಕಟ್ಟನ್ನು ರೂಪಿಸಲಾಗಿದೆ.
  - ✓ **ಬುನಾದಿ ಹಂತ :** 3–8 ವರ್ಷಗಳು– ಮೆದುಳಿನ ತೀವ್ರ ವೇಗದ ಬೆಳವಣಿಗೆ : ಆಟದ ಮತ್ತು ಹೊಸದನ್ನು ಹುಡುಕುವ ಆಧಾರದ ಮೇಲೆ ಕಲಿಕೆ
  - ✓ **ಪೂರ್ವ ಸಿದ್ಧತಾ ಹಂತ :** 8 ರಿಂದ 11 ವರ್ಷಗಳು – ಆಟಗಳ ಮೂಲಕ ಮತ್ತು ಹೊಸತನ್ನು ಕಂಡುಹಿಡಿಯುವ ಮೂಲಕ ಬೆಳವಣಿಗೆ : ರಚನಾತ್ಮಕ ಕಲಿಕೆಗೆ ಪರಿವರ್ತನೆ ಪ್ರಾರಂಭ.
  - ✓ **ಮಧ್ಯಮ ಹಂತ :** 11 ರಿಂದ 14 ವರ್ಷಗಳು– ವಿಷಯಗಳಲ್ಲಿ ಪರಿಕಲ್ಪನೆಗಳ ಕಲಿಕೆ, ಹದಿಹರೆಯದ ಅನುಭವಗಳು.
  - ✓ **ಪ್ರೌಢ ಹಂತ :** 14 ರಿಂದ 18 ವರ್ಷಗಳು – ಜೀವನೋಪಾಯ ಮತ್ತು ಉನ್ನತ ಶಿಕ್ಷಣಕ್ಕಾಗಿ ತಯಾರಿ ಮತ್ತು ಯೌವನಕ್ಕೆ ಪಾದಾರ್ಪಣೆ.

Kiran Raghupathi

- ಸರ್ವತೋಮುಖ ಕಲಿಕೆಯನ್ನು ಸಾಧ್ಯಗೊಳಿಸಲು ತರಗತಿ ಪ್ರಕ್ರಿಯೆಯನ್ನು ಮರುರೂಪಿಸುವುದು. ಆಳವಾದ ಮತ್ತು ಅನುಭವ ಆಧಾರಿತ ಕಲಿಕೆಗಾಗಿ ಮುಖ್ಯ ವಿಷಯಗಳು, ಮುಖ್ಯ ವಿಚಾರಗಳನ್ನು ಕಲಿಸುವ ಮೂಲಕ ಪಠ್ಯಕ್ರಮದ ಹೊರೆಯನ್ನು ಇಳಿಸುವ ಪ್ರಯತ್ನವನ್ನು ಮಾಡುವುದು.
- ವಿದ್ಯಾರ್ಥಿಗಳ ಅಭಿವೃದ್ಧಿಯನ್ನು ಬೆಂಬಲಿಸುವಂತೆ ಮೌಲ್ಯಮಾಪನವನ್ನು ಪರಿವರ್ತಿಸಲಾಗುತ್ತದೆ. ಎಲ್ಲಾ ಪರೀಕ್ಷೆಗಳೂ (ಬೋರ್ಡ್ ಪರೀಕ್ಷೆಗಳು ಸೇರಿದಂತೆ) ವಿದ್ಯಾರ್ಥಿಗಳ ವಿಷಯ ಗ್ರಹಿಕೆ ಮತ್ತು ಕೌಶಲಗಳನ್ನು ಮತ್ತು ಇನ್ನಿತರ ಕೌಶಲಗಳನ್ನು ಪರೀಕ್ಷಿಸುತ್ತವೆ. 2025ರ ವೇಳೆಗೆ ಮಾಧ್ಯಮಿಕ ಹಂತ ಮತ್ತು ಅದಕ್ಕಿಂತ ಮೇಲಿನ ತರಗತಿಗಳ ಮೌಲ್ಯಮಾಪನವು ಕಂಪ್ಯೂಟರ್ ಅಳವಡಿತ ಪರೀಕ್ಷೆಗಳ ಮೂಲಕ ನಡೆಯುತ್ತವೆ. 2020–2021 ರಿಂದ ಸ್ವಾಯತ್ತ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (National Testing Agency) ಯೋಗ್ಯತಾ (ಆ್ಯಪ್ಟಿಟ್ಯೂಡ್)ಪರೀಕ್ಷೆಗಳನ್ನು ಮತ್ತು ವಿವಿಧ ವಿಷಯಗಳಲ್ಲಿ ಪರೀಕ್ಷೆಗಳನ್ನು ನಿರ್ವಹಿಸುತ್ತದೆ. ಇದನ್ನು ವರ್ಷದಲ್ಲಿ ಅನೇಕ ಸಂದರ್ಭಗಳಲ್ಲಿ ತೆಗೆದುಕೊಳ್ಳಬಹುದು.

**5. ಶಿಕ್ಷಕರು ಬದಲಾವಣೆಯ ಹರಿಕಾರರು**

- ಶಾಲಾ ಶಿಕ್ಷಣದ ಎಲ್ಲಾ ಹಂತದ ಎಲ್ಲಾ ವಿದ್ಯಾರ್ಥಿಗಳೂ ವಿಷಯಾಸಕ್ತ ಪ್ರೇರಿತ, ಹೆಚ್ಚು ಅರ್ಹತೆಯನ್ನು ಹೊಂದಿರುವ ವೃತ್ತಿಪರವಾಗಿ ತರಬೇತಿ ಪಡೆದ ಮತ್ತು ಸುಸಜ್ಜಿತ ಶಿಕ್ಷಕರಿಂದ ಕಲಿಸುವುದನ್ನು ಖಚಿತಪಡಿಸಿಕೊಳ್ಳುವುದು.
- ಶಿಕ್ಷಕರ ಕೆಲಸವನ್ನು ಸುಗಮಗೊಳಿಸಲು ಕಲಿಕಾ ಸಂಪನ್ಮೂಲಗಳನ್ನು ಒದಗಿಸುವುದು.

**6. ದೇಶದ ಪ್ರತಿ ಮಗುವಿಗೂ ಸಮಾನ ಮತ್ತು ಅಂತರ್ಗತ ಶಿಕ್ಷಣ**

- ಒಂದು ಅಂತರ್ಗತ ಮತ್ತು ಸಮಾನ ಶಿಕ್ಷಣ ವ್ಯವಸ್ಥೆಯನ್ನು ಸಾಧಿಸುವುದರಿಂದ ಪ್ರತಿಯೊಂದು ಮಗುವಿನ ಕಲಿಕೆಗೆ ಮತ್ತು ಬೆಳವಣಿಗೆಗೆ ಸಮಾನ ಅವಕಾಶಗಳನ್ನು ಒದಗಿಸಿದಂತಾಗುತ್ತದೆ ಹಾಗೂ ಸಹಭಾಗಿತ್ವ ಮತ್ತು ಕಲಿಕೆಯ ಫಲಿತಾಂಶಗಳನ್ನು 2030ರ ವೇಳೆಗೆ ಎಲ್ಲಾ ಲಿಂಗ ಮತ್ತು ಸಾಮಾಜಿಕ ವರ್ಗಗಳಲ್ಲಿ ಸಮಾನಗೊಳಿಸುವುದು.
- ಶಿಕ್ಷಕರನ್ನು ನಿರಂತರವಾಗಿ ಸಂವೇದನಾಶೀಲಗೊಳಿಸುವ ಮೂಲಕ ಸಾಮರ್ಥ್ಯವರ್ಧನೆ ಮಾಡುವುದು.

**7. ಶಾಲಾ ಸಂಕೀರ್ಣಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಆಡಳಿತ**

- ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಅನುಕೂಲವಾಗುವಂತೆ ಮತ್ತು ಶಾಲಾ ಆಡಳಿತವನ್ನು ಹೆಚ್ಚು ಸ್ಥಳೀಯವಾಗಿ, ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ನೀಡಲು ಶಾಲೆಗಳನ್ನು ಶಾಲಾ ಸಂಕೀರ್ಣಗಳಾಗಿ ಗುಂಪು ಮಾಡುವುದು.

**8. ಶಾಲಾ ಶಿಕ್ಷಣದ ನಿಯಂತ್ರಣ**

- ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಪರಿಣಾಮಕಾರಿ ನಿಯಂತ್ರಣ ಮತ್ತು ಮಾನ್ಯತಾ ಕಾರ್ಯವಿಧಾನಗಳ ಮೂಲಕ ಉತ್ತೇಜಿಸಲಾಗುತ್ತದೆ ಮತ್ತು ಅದರ ಸಮಗ್ರತೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ಶೈಕ್ಷಣಿಕ ಫಲಿತಾಂಶವನ್ನು ನಿರಂತರವಾಗಿ ಸುಧಾರಿಸಲು ಗುಣಮಟ್ಟ ಮತ್ತು ನಾವೀನ್ಯತೆಯನ್ನು ಪ್ರೋತ್ಸಾಹಿಸುವುದು.

ಭಾರತ ದೇಶದ ಶಿಕ್ಷಣ ವ್ಯವಸ್ಥೆ ಸುಧಾರಣೆಗಾಗಿ ರೂಪಿಸಲಾಗಿರುವ ಈ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಆದರ್ಶ ಶಿಕ್ಷಣ ನೀತಿಯಾಗಿದ್ದು, ದೇಶದ ಶಿಕ್ಷಣವನ್ನು ಸದೃಢಗೊಳಿಸುವ ಪ್ರಯತ್ನದ ಜತೆಗೆ ಶಿಕ್ಷಣ ಕ್ಷೇತ್ರದ ವ್ಯವಸ್ಥಿತ ಸುಧಾರಣೆಗೂ ಮುನ್ನುಡಿ ಬರೆಯಲಿದೆ.  21ನೇ ಶತಮಾನಕ್ಕೆ ತಕ್ಕಂತೆ ಹೊಸ ಕಲಿಕೆಗೆ ಅವಕಾಶ ಒದಗಿಸಲು ಇದು 2021ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರಲಿದೆ..

Kiran Raghupathi

# ಅಧ್ಯಾಯ–9

# ಶಿಕ್ಷಕರ ತರಬೇತಿ – ಅಗತ್ಯ – ಅನುಪಾಲನೆ

## ಉದ್ದೇಶಗಳು

**ಈ ಅಧ್ಯಾಯದ ನಂತರ ಸದಸ್ಯರು;**

- ಶಿಕ್ಷಕರಿಗೆ ನೀಡುವ ತರಬೇತಿಗಳ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳುವರು.
- ಶಾಲೆಗಳಲ್ಲಿ ತರಬೇತಿಯ ಅಂಶಗಳನ್ನು ಅನುಷ್ಠಾನಗೊಳಿಸಲು ಪ್ರೋತ್ಸಾಹಿಸುವರು.



ಶಾಲೆಯಲ್ಲಿ ಶಿಕ್ಷಕರು ಕೈಗೊಳ್ಳಬೇಕಾದ ವಿವಿಧ ರೀತಿಯ ಕಾರ್ಯಚಟುವಟಿಕೆಗಳು, ಬೋಧನಾ ಪ್ರಕ್ರಿಯೆ, ಪಠ್ಯ–ಸಹಪಠ್ಯ ಚಟುವಟಿಕೆಗಳು, ವಿದ್ಯಾರ್ಥಿಗಳ ಸುರಕ್ಷತೆ, ಶಾಲಾ ಸಂಪನ್ಮೂಲಗಳ ಬಳಕೆ ಮತ್ತು ಸಂರಕ್ಷಣೆ ಇತ್ಯಾದಿ ಅಂಶಗಳ ಬಗ್ಗೆ ಇಲಾಖೆಯಿಂದ ಶಿಕ್ಷಕರಿಗೆ ಸೇವಾನಿರತ ತರಬೇತಿಗಳನ್ನು ಏರ್ಪಡಿಸಲಾಗುತ್ತದೆ. ಇದರ ಪೂರ್ಣ ಪ್ರಯೋಜನ ಪಡೆಯಲು ಶಿಕ್ಷಕರ ಕ್ರಿಯಾಶೀಲ ಭಾಗವಹಿಸುವಿಕೆ, ಸಕಾಲಿಕ ಅನುಷ್ಠಾನ, ನಿರಂತರ ಅನುಪಾಲನೆಗಳ ಅಗತ್ಯವಿದೆ.

## ತರಬೇತಿಗಳು ಅಗತ್ಯತೆ

- ಶಿಕ್ಷಕರ ವಿಷಯ ಜ್ಞಾನವನ್ನು ಹೆಚ್ಚಿಸಲು
- ಶಾಲಾ ಕಾರ್ಯಚಟುವಟಿಕೆಗಳ ವೇಗ ವರ್ಧಿಸಲು
- ಶಾಲಾ ಕಾರ್ಯಚಟುವಟಿಕೆಗಳನ್ನು ಕಾಲಕಾಲಕ್ಕೆ ಮಾರ್ಪಡಿಸಲು ಮತ್ತು ಸುಧಾರಿಸಲು
- ಸಮುದಾಯದ ಇಂದಿನ ಅಗತ್ಯಗಳಿಗೆ ಅನುಸಾರವಾಗಿ ಬೋಧನಾ–ಕಲಿಕಾ ಪ್ರಕ್ರಿಯೆ ನಡೆಸಲು
- ಸಮಾಜದಲ್ಲಿನ ಬದಲಾವಣೆಗಳಿಗೆ ಅನುಗುಣವಾಗಿ ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ನಿರೂಪಿಸಲು
- ಶಿಕ್ಷಣ ವ್ಯವಸ್ಥೆ ನಿಂತ ನೀರಾಗುವುದನ್ನು ತಪ್ಪಿಸಲು
- ಚಲನಶೀಲ ಮತ್ತು ಚಿಂತನಶೀಲ ವ್ಯವಸ್ಥೆಗೆ ಸ್ಪಂದಿಸಲು
- ಶಿಕ್ಷಣ, ಬೋಧನೆ, ಕಲಿಕಾ ಕ್ಷೇತ್ರಗಳಲ್ಲಿ ಆಗುವ ಸಮಕಾಲೀನ ಬೆಳವಣಿಗೆಗಳನ್ನು ಗುರುತಿಸಿ ಅಳವಡಿಸಿಕೊಳ್ಳಲು
- ಶಾಲಾ ಕಾರ್ಯಚಟುವಟಿಕೆಗಳು ಯಾಂತ್ರಿಕವಾಗುವುದನ್ನು ತಪ್ಪಿಸಲು
- ವಿವಿಧ ಕ್ಷೇತ್ರಗಳ ಸಮಕಾಲೀನ ಬೆಳವಣಿಗೆಗಳನ್ನು ಸಂಯೋಜಿಸಿ, ಸಮನ್ವಯಗೊಳಿಸಲು

ಪ್ರಕ್ರಿಯೆ

- ತರಬೇತಿಯ ಅಗತ್ಯತೆಗಳನ್ನು ಗುರುತಿಸುವುದು
- ಅಗತ್ಯತೆಗಳಿಗೆ ಅನುಗುಣವಾಗಿ ಪರಿಣತರಿಂದ ಸಾಹಿತ್ಯ ರಚನೆ
- ಸಾಹಿತ್ಯ ಮುದ್ರಿಸಿ ಸರಬರಾಜು ಮಾಡುವುದು
- ರಾಜ್ಯಮಟ್ಟದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ
- ಜಿಲ್ಲಾ ಹಂತದಲ್ಲಿ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ
- ಬ್ಲಾಕ್ ಹಂತದಲ್ಲಿ ಶಿಕ್ಷಕರಿಗೆ ತರಬೇತಿ
- ತರಬೇತಿಯ ನಂತರ ಬ್ಲಾಕ್ ಹಾಗೂ ಜಿಲ್ಲಾ ಹಂತದಿಂದ ಅನುಪಾಲನೆ

Kiran Raghupathi

### ಸಮಗ್ರ ಶಿಕ್ಷಣ – ಕರ್ನಾಟಕ – ಪ್ರಾಥಮಿಕ ಶಿಕ್ಷಣ (ಒಟ್ಟು 10 ದಿನಗಳು)

- 1–3ನೇ ತರಗತಿಯಲ್ಲಿ ನಲಿಕಲಿ ಪದ್ಧತಿ ನಿರ್ವಹಿಸುವ ಎಲ್ಲಾ ಶಿಕ್ಷಕರಿಗೆ 5 ದಿನಗಳ ವಿಷಯಾಧಾರಿತ ತರಬೇತಿ ***ಸಂಭ್ರಮ***
- 4–5ನೇ ತರಗತಿ ನಿರ್ವಹಿಸುವ ಶಿಕ್ಷಕರಿಗೆ 5 ದಿನಗಳ ವಿಷಯಾಧಾರಿತ ತರಬೇತಿ
- 6–8ನೇ ತರಗತಿ 5 ದಿನಗಳ ವಿಷಯಾಧಾರಿತ ತರಬೇತಿ
- ಎಲ್ಲಾ ಶಿಕ್ಷಕರಿಗೆ 5 ದಿನಗಳ ***ಕ್ಲಸ್ಟರ್ ಮಟ್ಟದ ಮಾಸಿಕ ಸಮಾಲೋಚನಾ ಸಭೆಗಳು***

### ಸಮಗ್ರ ಶಿಕ್ಷಣ – ಕರ್ನಾಟಕ ಪ್ರೌಢ ಶಿಕ್ಷಣ (ಒಟ್ಟು 10 ದಿನಗಳು)

- ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ 5 ದಿನಗಳ ತರಬೇತಿ
- ವಿಷಯವಾರು 5 ದಿನಗಳ ವಿಷಯಾಧಾರಿತ ತರಬೇತಿ

### ನಿಷ್ಠಾ – ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ – ಆನ್‌ಲೈನ್ ತರಬೇತಿ

**(NISHTHA – National Initiative for School Heads and Teachers Holistic Advancement)**

ನಿಷ್ಠಾ ತರಬೇತಿ ಕಾರ್ಯಕ್ರಮವು ಎನ್‌ಸಿಇಆರ್‌ಟಿಯ ಉಪಕ್ರಮವಾಗಿದ್ದು, ಶಿಕ್ಷಕರ ಸಮಗ್ರ ತರಬೇತಿಯ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ. ಪ್ರಾಥಮಿಕ ಹಂತದಲ್ಲಿ ಎಲ್ಲಾ ಶಿಕ್ಷಕರ ಮತ್ತು ಶಾಲಾ ಮುಖ್ಯಸ್ಥರ ವೃತ್ತಿಪರ ಸಾಮರ್ಥ್ಯಗಳನ್ನು ಬೆಳೆಸುವ ಗುರಿ ಹೊಂದಿದೆ. ಈ ಕಾರ್ಯಕ್ರಮದಲ್ಲಿ 18 ಮಾಡ್ಯೂಲ್‌ಗಳಿದ್ದು, ಪ್ರತಿ 15 ದಿನಗಳಿಗೆ 3 ಮಾಡ್ಯೂಲ್‌ಗಳನ್ನು ಪ್ರತಿ ಶಿಕ್ಷಕರೂ ಪೂರ್ಣಗೊಳಿಸಬೇಕು. 2020ರ ನವೆಂಬರ್ 3ರಿಂದ ನಮ್ಮ ರಾಜ್ಯದ 1,52,733 ಶಿಕ್ಷಕರಿಗೆ ನಿಷ್ಠಾ – ಆನ್‌ಲೈನ್ ತರಬೇತಿ ನೀಡಲಾಗುತ್ತಿದೆ.

### ತರಬೇತಿ ಒಳಗೊಂಡಿರುವ 18 ಮಾಡ್ಯೂಲ್‌ಗಳು

| ಮಾಡ್ಯೂಲ್ | ವಿಷಯ |
|---|---|
| 1 | ಪಠ್ಯಕ್ರಮ ಮತ್ತು ಸಮನ್ವಯ ತರಗತಿ ಕೋಣೆಗಳು |
| 2 | ಸುರಕ್ಷಿತ ಮತ್ತು ಆರೋಗ್ಯಕರ ಶಾಲಾ ಪರಿಸರ ನಿರ್ಮಾಣಕ್ಕಾಗಿ ವೈಯಕ್ತಿಕ–ಸಾಮಾಜಿಕ ಗುಣಗಳ (ವೈ.ಸಾ.ಗು) ಅಭಿವೃದ್ಧಿ |
| 3 | ಶಾಲೆಗಳಲ್ಲಿ ಆರೋಗ್ಯ ಮತ್ತು ಯೋಗಕ್ಷೇಮ |
| 4 | ಬೋಧನೆ–ಕಲಿಕಾ ಪ್ರಕ್ರಿಯೆಯಲ್ಲಿ ಲಿಂಗ ಸೂಕ್ಷ್ಮತೆ |
| 5 | ಐಸಿಟಿ ಸಮ್ಮಿಳಿತ ಬೋಧನೆ, ಕಲಿಕೆ ಮತ್ತು ಮೌಲ್ಯಾಂಕನ |
| 6 | ಕಲಾ ಸಮ್ಮಿಳಿತ ಕಲಿಕೆ |
| 7 | ಶಾಲಾ ಆಧಾರಿತ ಮೌಲ್ಯಾಂಕನ |
| 8 | ಪರಿಸರ ಅಧ್ಯಯನ ಶಿಕ್ಷಣಶಾಸ್ತ್ರ |
| 9 | ಗಣಿತದ ಶಿಕ್ಷಣಶಾಸ್ತ್ರ |
| 10 | ಸಮಾಜ ವಿಜ್ಞಾನದ ಶಿಕ್ಷಣಶಾಸ್ತ್ರ (ಉನ್ನತ ಪ್ರಾಥಮಿಕ ಹಂತ) |
| 11 | ಭಾಷಾ ಶಿಕ್ಷಣಶಾಸ್ತ್ರ |
| 12 | ವಿಜ್ಞಾನದ ಶಿಕ್ಷಣಶಾಸ್ತ್ರ (ಉನ್ನತ ಪ್ರಾಥಮಿಕ ಹಂತ) |
| 13 | ಶಾಲಾ ನಾಯಕತ್ವ: ಪರಿಕಲ್ಪನೆ ಮತ್ತು ಅನ್ವಯ |
| 14 | ಶಾಲಾ ಶಿಕ್ಷಣದ ಉಪಕ್ರಮಗಳು |
| 15 | ಶಾಲಾಪೂರ್ವ ಶಿಕ್ಷಣ |
| 16 | ವೃತ್ತಿಪೂರ್ವ ಶಿಕ್ಷಣ |
| 17 | ಕೋವಿಡ್ – 19ರ ಸನ್ನಿವೇಶ : ಶಾಲಾ ಶಿಕ್ಷಣದಲ್ಲಿನ ಸವಾಲುಗಳನ್ನು ಎದುರಿಸುವುದು |
| 18 | ಮಕ್ಕಳ ಹಕ್ಕುಗಳು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ (CSA) ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಟ್ಟುವಿಕೆ ಕಾಯ್ದೆ–2012 (POCSO) |

Kiran Raghupathi

# ಅಧ್ಯಾಯ-10

## ಶಾಲೆಗಳಲ್ಲಿ 'ಸಂಭ್ರಮ ಶನಿವಾರ' – ಬ್ಯಾಗ್ ರಹಿತ ದಿನಾಚರಣೆ

### ಉದ್ದೇಶಗಳು

### ಈ ಅಧ್ಯಾಯದ ನಂತರ ಸದಸ್ಯರು;

- ಬ್ಯಾಗ್‌ರಹಿತ ದಿನದ ಉದ್ದೇಶಗಳನ್ನು ತಿಳಿದುಕೊಳ್ಳುವರು.
- ಸಂಭ್ರಮ ಶನಿವಾರದ ವಿಷಯಗಳನ್ನು ಅರಿತುಕೊಳ್ಳುವರು.
- ಪ್ರತಿ ಶನಿವಾರದಂದು ಶಾಲೆಗಳಲ್ಲಿ ಮಾಡಬಹುದಾದ ಕಲಿಕಾ ಮತ್ತು ಮನೋರಂಜನಾ ಚಟುವಟಿಕೆಗಳನ್ನು ತಿಳಿದುಕೊಳ್ಳುವರು.

ಶಿಕ್ಷಣವು ಸಂತಸಮಯವಾದ ಚಟುವಟಿಕೆಗಳಿಂದ ಕೂಡಿರಬೇಕು. ವಿದ್ಯಾರ್ಥಿಗಳು ನಲಿಯುತ ಒತ್ತಡರಹಿತವಾಗಿ ಕಲಿಯಲು ತಮ್ಮ ಹೆಚ್ಚಿನ ಸಮಯವನ್ನು ಲ್ಯಾಬ್‌ಗಳಲ್ಲಿ, ಗ್ರಂಥಾಲಯಗಳಲ್ಲಿ, ಆಟದ ಮೈದಾನಗಳಲ್ಲಿ ಮತ್ತು ಚಟುವಟಿಕೆ ಆಧಾರಿತ ತರಗತಿ ಕೋಣೆಗಳಲ್ಲಿ ಕಳೆಯಬೇಕು. ಆದ್ದರಿಂದ ಅವರಿಗೆ ಹೆಚ್ಚಿನ ಸಹಪಠ್ಯ ಚಟುವಟಿಕೆಗಳನ್ನು ಒದಗಿಸುವ ಅವಶ್ಯಕತೆ ಇದೆ. 2020–21ನೇ ಸಾಲಿನಿಂದ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಿರುವ 'ಸಂಭ್ರಮ ಶನಿವಾರ'–ಬ್ಯಾಗ್‌ರಹಿತ ದಿನಗಳಂದು (No Bag Day) ಸಹಪಠ್ಯ ಚಟುವಟಿಕೆಗಳನ್ನು ಆಯೋಜಿಸಲಾಗುವುದು.

ಬ್ಯಾಗ್‌ರಹಿತ ದಿನದಂದು ಮಕ್ಕಳು ಶಾಲೆಗೆ ಬ್ಯಾಗನ್ನು ತರಬಾರದು. ಮಕ್ಕಳು ತಮ್ಮ ದಿನನಿತ್ಯದ ತರಗತಿಗಳಲ್ಲಿ ಕಲಿಯುವ ಪಠ್ಯಕ್ಕೆ ಸಂಬಂಧಿಸಿದ ಸಾಮಾಜಿಕ, ಭಾವನಾತ್ಮಕ ಮತ್ತು ನೈತಿಕ ಮೌಲ್ಯಗಳ ಕುರಿತು ಚಟುವಟಿಕೆಗಳನ್ನು ಬ್ಯಾಗ್ ರಹಿತದ ದಿನದಂದು ಆಯೋಜಿಸುವುದರಿಂದ ಕಲಿಕೆಯಲ್ಲಿ ವಿವಿಧತೆಯನ್ನು ಕಂಡುಕೊಳ್ಳಲು ಸಹಾಯಕವಾಗುತ್ತದೆ. ಅಂತಹ ಚಟುವಟಿಕೆಗಳನ್ನು ರೂಪಿಸಲು ನಿರ್ದಿಷ್ಟ ವಿಷಯಗಳನ್ನು ಗುರುತಿಸಿ, ಆ ವಿಷಯಗಳಿಗೆ ಸಂಬಂಧಿಸಿದಂತೆ ಮೇಲ್ಕಂಡ ಮೌಲ್ಯಗಳನ್ನು ಒಳಗೊಂಡಂತೆ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 8ನೇ ತರಗತಿ ಮಕ್ಕಳಿಗೆ ವಿದ್ಯಾರ್ಥಿ ಕೈಪಿಡಿಗಳನ್ನು ತಯಾರಿಸಿದೆ.

### 'ಸಂಭ್ರಮ ಶನಿವಾರ' – ಬ್ಯಾಗ್‌ರಹಿತದ ದಿನದ ಉದ್ದೇಶಗಳು

- ಮಕ್ಕಳಲ್ಲಿ ನಾಗರಿಕ ಪ್ರಜ್ಞೆಯನ್ನು ಬೆಳೆಸುವುದು.
- ಸಹಪಠ್ಯ ಮತ್ತು ಪಠ್ಯ ಚಟುವಟಿಕೆಗಳ ನಡುವೆ ಸಹಸಂಬಂಧ ಕಲ್ಪಿಸುವುದು.
- ಚಟುವಟಿಕೆ ಆಧಾರಿತ, ಅಧ್ಯಯನಕ್ಕೆ ಸಂಬಂಧಿಸಿದ ಕಲಿಕೆಯನ್ನು ಪ್ರೋತ್ಸಾಹಿಸುವುದು.
- ಮಕ್ಕಳಲ್ಲಿ ಸರ್ವತೋಮುಖ ಬೆಳವಣಿಗೆಯನ್ನು ಉಂಟು ಮಾಡುವುದು.
- ಸಮಾಜದ ಉತ್ತಮ ಪ್ರಜೆಗಳಾಗಲು ಮಕ್ಕಳ ವರ್ತನೆಯಲ್ಲಿ ಬದಲಾವಣೆ ತರುವುದು.

### ಸಂಭ್ರಮ ಶನಿವಾರದ ವಿಷಯಗಳು

1. ಸಾರ್ವಜನಿಕ ಸೌಕರ್ಯಗಳು ಮತ್ತು ನನ್ನ ಜವಾಬ್ದಾರಿ
2. ಲಿಂಗ ಸಮಾನತೆಗೆ ಪ್ರೋತ್ಸಾಹ
3. ಪೌಷ್ಟಿಕತೆ, ಸ್ವಾಸ್ಥ್ಯ ಮತ್ತು ನೈರ್ಮಲೀಕರಣ
4. ಮಾದಕ ವಸ್ತುಗಳ ದುರ್ಬಳಕೆ ತಡೆಗಟ್ಟುವಿಕೆ
5. ಆರೋಗ್ಯಕರಜೀವನ ಶೈಲಿ
6. ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭಗಳಲ್ಲಿ ರಕ್ಷಣೆ ಹಾಗೂ ಭದ್ರತೆ
7. ಮಾಧ್ಯಮ ಮತ್ತು ಅಂತರ್ಜಾಲದ ಸದ್ಬಳಕೆ
8. ಸಾರ್ವಜನಿಕ ನೈರ್ಮಲ್ಯ–ಘನತ್ಯಾಜ್ಯದ ನಿರ್ವಹಣೆ
9. ರಸ್ತೆ ಸುರಕ್ಷತೆ
10. ವಿಶೇಷ ಅಗತ್ಯವುಳ್ಳ ವ್ಯಕ್ತಿಗಳೊಂದಿಗೆ ಸಂವಹನ

Kiran Raghupathi

ಮೇಲ್ಕಂಡ ವಿಷಯಗಳಲ್ಲಿ ವಿದ್ಯಾರ್ಥಿ ಕೈಪಿಡಿಯನ್ನು ತಯಾರಿಸಿದೆ. ಪಠ್ಯಚೀಲ ರಹಿತ ದಿನದಂದು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸದರಿ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳೇ ಇಡೀ ಚಟುವಟಿಕೆಯನ್ನು ನಿರ್ವಹಿಸಬೇಕಾಗಿರುವುದರಿಂದ, ವಿದ್ಯಾರ್ಥಿಗಳಿಗಾಗಿ ಸ್ವಯಂ ವಿವರಣಾತ್ಮಕ ಮಾಡ್ಯೂಲನ್ನು ತಯಾರಿಸಿದೆ.

ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಹಾಗೂ ಮಕ್ಕಳಲ್ಲಿ ಸರ್ವತೋಮುಖ ಬೆಳವಣಿಗೆಗೆ ಅವಶ್ಯವಾಗಿರುವ ಮೌಲ್ಯಗಳನ್ನು ಅಭಿವೃದ್ಧಿಪಡಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ ದೇಶದ ಉತ್ತಮ ನಾಗರೀಕರಾಗಲು ಅವಶ್ಯವಿರುವ ವಿಷಯಗಳ ಬಗ್ಗೆ ಆ ದಿನಗಳಂದು ಮಕ್ಕಳಿಗೆ ಚಟುವಟಿಕೆಗಳ ಮೂಲಕ ಅರಿವು ಮೂಡಿಸಲಾಗುವುದು. ಬೇರೆ ಬೇರೆ ತರಗತಿಗಳಿಗೆ ಕಲಿಕಾ ವೇಗ ಬೇರೆ ಬೇರೆಯಾಗಿರುವುದರಿಂದ 1 ರಿಂದ 3, 4 ಮತ್ತು 5 ಹಾಗೂ 6ರಿಂದ 8ನೇ ತರಗತಿಗಳಿಗೆ ಮೂರು ಹಂತಗಳಲ್ಲಿ ವಯೋಮಾನಕ್ಕನುಗುಣವಾಗಿ ಹಾಗೂ ನಿರ್ದಿಷ್ಟ ಕಲಿಕಾ ಉದ್ದೇಶಗಳು ಹಾಗೂ ಕಲಿಕಾಫಲಗಳಿಗೆ ಅನುಗುಣವಾಗಿ ವಿಭಿನ್ನ ಚಟುವಟಿಕೆಗಳನ್ನು ರೂಪಿಸಲಾಗಿದೆ.

ಪ್ರತಿ ಶನಿವಾರದಂದು ಒಂದು ವಿಷಯದ ಕುರಿತು ಸುಲಭವಾಗಿ ಲಭ್ಯವಾಗುವ ಸಾಧನಗಳನ್ನು ಬಳಸಿ ಮಾಡಬಹುದಾದ ಕಲಿಕಾ ಮತ್ತು ಮನೋರಂಜನಾ ಚಟುವಟಿಕೆಗಳನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ನಡೆಸಲಾಗುವುದು.

- ಮಕ್ಕಳು ಚಟುವಟಿಕೆಗಳ ಮೂಲಕ ತಮ್ಮ ದಿನನಿತ್ಯದ ಜೀವನಕ್ಕೆ ವಿಷಯದ ಸಹಸಂಬಂಧ ಕಲ್ಪಿಸುತ್ತಾರೆ.
- ವಿಷಯಗಳ ಎಲ್ಲಾ ಉದ್ದೇಶಗಳು/ಚಟುವಟಿಕೆಗಳು ಈ ಉಪಕ್ರಮದ ಮುಖ್ಯಗುರಿಯನ್ನು ಅವಲಂಬಿಸಿರುತ್ತವೆ.
- ಸ್ಥಳೀಯವಾಗಿ ಲಭ್ಯವಾಗುವಂತಹ ಸಾಧನಗಳನ್ನು ಬಳಸಿ ಮಕ್ಕಳಲ್ಲಿ ಆಸಕ್ತಿಯನ್ನು ಮೂಡಿಸುವಂತಹ, ಆಲೋಚನಾ ಶಕ್ತಿಯನ್ನು ಪ್ರೇರೇಪಿಸುವಂತಹ, ಸೃಜನಶೀಲತೆಯನ್ನು ಪ್ರದರ್ಶಿಸಲು ಮತ್ತು ಮಾಡಿಕಲಿಯಲು ಅವಕಾಶವಿರುವಂತಹ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ಪೋಸ್ಟರ್‌ತಯಾರಿಕೆ, ಸಿನಿಮಾ ವೀಕ್ಷಣೆ, ಚಿಕ್ಕ ಪ್ರಾಜೆಕ್ಟ್, ಕ್ವಿಜ್‌ಕಾರ್ಯಕ್ರಮ, ಆಶು ಭಾಷಣ, ಯುವ ಸಂಸತ್, ಚರ್ಚೆಗಳು, ಕಸದಿಂದ ಸಾಧನಗಳ ತಯಾರಿಕೆ, ಗ್ರಂಥಾಲಯದ ಬಳಕೆ, ಕಂಪ್ಯೂಟರ್ ಕಲಿಕೆ, ಕಥೆ ಹೇಳುವುದು, ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳು ಇತ್ಯಾದಿ ಚಟುವಟಿಕೆಗಳನ್ನು ಬಳಸಲು ಪ್ರೋತ್ಸಾಹಿಸಲಾಗುವುದು.
- ಕೊನೆಯಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ಸಮಾಜದಲ್ಲಿ ಅಪೇಕ್ಷಿತ ಬದಲಾವಣೆಗಳನ್ನು ತರುವುದು ತಮ್ಮ ಕರ್ತವ್ಯವೆಂದು ಮತ್ತು ತಾವು ಶ್ರಮಿಸುವುದಾಗಿ ಪ್ರತಿಜ್ಞಾವಿಧಿಯನ್ನು ಬರೆಯುವುದು.

## ಪರಿಣಾಮಕಾರಿ ಅನುಷ್ಠಾನ

ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗಾಗಿ ಸ್ವಯಂ ವಿವರಣಾತ್ಮಕ ಮಾಡ್ಯೂಲನ್ನು ತಯಾರಿಸಲಾಗಿದೆ. ಆಯಾ ವಿಷಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರ್ವಹಿಸುವ ವಿಧಾನವನ್ನು ಸುಲಭ ಭಾಷೆಯನ್ನು ಬಳಸಿ ವಿವರಣೆ ನೀಡಲಾಗಿದೆ.

ಪ್ರತಿ ಶಾಲೆಗೆ 5 ಮಾಡ್ಯೂಲ್‌ಗಳನ್ನು ವಿತರಿಸಲು ಕ್ರಮವಹಿಸಲಾಗುವುದು. ಶಾಲಾ ಶಿಕ್ಷಕರು ಸಂಭ್ರಮ ಶನಿವಾರವನ್ನು ಅಳವಡಿಸುವ ಕುರಿತು ಪ್ರತಿ ಶಾಲೆಯ ಶಿಕ್ಷಕರಿಗೆ ಎಂ.ಆರ್.ಪಿ.ಗಳಿಂದ ತರಬೇತಿ ಆಯೋಜಿಸಲಾಗುವುದು. ಮಕ್ಕಳು ನಿರ್ವಹಿಸುವ ಚಟುವಟಿಕೆಗಳನ್ನು ಇಲಾಖೆಯ ಅಧಿಕಾರಿಗಳು ವೀಕ್ಷಿಸಿ ಹಿಮ್ಮಾಹಿತಿ ನೀಡುವುದು. ಪರಿಣಾಮಕಾರಿ ಅನುಷ್ಠಾನವನ್ನು ದೃಢಪಡಿಸಿಕೊಳ್ಳಲು ಡಯಟ್ ಉಪನ್ಯಾಸಕರು, ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು ಶಾಲೆಗಳಿಗೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡುವುದು.

Kiran Raghupathi

## ಅಧ್ಯಾಯ–11

## ನಲಿ–ಕಲಿ ಇಂಗ್ಲಿಷ್

### ಉದ್ದೇಶಗಳು

### ಈ ಅಧ್ಯಾಯದ ನಂತರ ಸದಸ್ಯರು

- ಇಂಗ್ಲಿಷ್ ನಲಿ–ಕಲಿ ಕಲಿಕಾ ಪದ್ಧತಿಯ ಅನುಷ್ಠಾನದ ಉದ್ದೇಶಗಳನ್ನು ಅರ್ಥೈಸಿಕೊಳ್ಳುವರು.
- ಇಂಗ್ಲಿಷ್ ನಲಿ–ಕಲಿ ವಿಧಾನದಲ್ಲಿ ಬಳಸಲಾಗುವ ಕಲಿಕಾ ಸಾಮಗ್ರಿಗಳ ಬಗ್ಗೆ ತಿಳಿದುಕೊಳ್ಳುವರು.

ಇಂಗ್ಲಿಷ್ ನಲಿ–ಕಲಿ ಕಲಿಕಾ ಪದ್ಧತಿಯು ಕರ್ನಾಟಕ ರಾಜ್ಯದ ನಾವೀನ್ಯಯುತ ಕಾರ್ಯಕ್ರಮವಾಗಿದೆ. 2017–18ನೇ ಸಾಲಿನಲ್ಲಿ ಯುನಿಸೆಫ್ ಸಹಯೋಗದೊಂದಿಗೆ ತುಮಕೂರು, ರಾಮನಗರ, ಮೈಸೂರು ಹಾಗೂ ದಕ್ಷಿಣಕನ್ನಡ ಜಿಲ್ಲೆಗಳಲ್ಲಿ 1ನೇ ತರಗತಿಗೆ ಈ ಪದ್ಧತಿಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದ್ದು, ಸದರಿ ಜಿಲ್ಲೆಗಳ 75 ಶಾಲೆಗಳ ಒಟ್ಟು 100 ನಲಿ–ಕಲಿ ಘಟಕಗಳಲ್ಲಿ ಶಿಕ್ಷಕರು ಈ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಅನುಸರಿಸುತ್ತಿದ್ದಾರೆ. 2019–20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದ 276 ಕರ್ನಾಟಕ ಪಬ್ಲಿಕ್ ಶಾಲೆಗಳು (ಏಕಖ), ಆಂಗ್ಲ ವಿಭಾಗ ತೆರೆದಿರುವ 724 ಶಾಲೆಗಳಲ್ಲಿ ಮತ್ತು 612 ಉತ್ತಮ ನಲಿ–ಕಲಿ ಶಾಲೆಗಳಲ್ಲಿ 2ನೇ ಹಂತದಲ್ಲಿಯೂ ಈ ಕಲಿಕಾ ಪದ್ಧತಿಯನ್ನು ಪ್ರಯೋಗಕ್ಕೆ ಒಳಪಡಿಸಲಾಗಿರುತ್ತದೆ.

ಯುನಿಸೆಫ್ ಸಂಪನ್ಮೂಲ ತಂಡದ ನೇತೃತ್ವದಲ್ಲಿ ಸದರಿ ವಿಷಯದ ಪಠ್ಯವನ್ನು ಅಭಿವೃದ್ಧಿಪಡಿಸಲಾಗಿದ್ದು, ಭಾಷಾ ಕಲಿಕೆಯ ಕೌಶಲಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರೆಯುವಿಕೆಯಲ್ಲಿ ವಿದ್ಯಾರ್ಥಿಯು ಅಪೇಕ್ಷಿತ ಕಲಿಕೆಯ ಫಲಗಳನ್ನು ಸಾಧಿಸಲು ನೆರವಾಗುವಂತೆ ಪಠ್ಯದಲ್ಲಿ ಸಾಕಷ್ಟು ಶಿಶುಸ್ನೇಹಿ ಚಟುವಟಿಕೆಗಳನ್ನು ಅಳವಡಿಸಲಾಗಿರುತ್ತದೆ. ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಭಾಷೆಯ ಪರಿಣಾಮಕಾರಿ ಕಲಿಕೆಗೆ ವಿಫುಲವಾದ ಅವಕಾಶಗಳನ್ನು ಕಲ್ಪಿಸಲಾಗಿದೆ.

### ನಲಿ–ಕಲಿ ಇಂಗ್ಲಿಷ್ ಬೋಧನಾ ಕಲಿಕಾ ಪದ್ಧತಿಯ ಉದ್ದೇಶಗಳು

- ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಭಾಷೆಯು ಕೇವಲ ಪರಿಚಯಾತ್ಮಕ ಭಾಷೆಯಾಗಿರದೆ, ಕಲಿಕೆಯ ವಿಷಯವಾಗಿದ್ದು, ಪ್ರತೀ ವಿದ್ಯಾರ್ಥಿಯು ತನ್ನ ದೈನಂದಿನ ಜೀವನದಲ್ಲಿ ಇಂಗ್ಲಿಷ್ ಭಾಷಾ ಕಲಿಕೆಯ ಮೂಲಕ ಸರಳವಾಗಿ ಸಂವಹನವನ್ನು ಕೈಗೊಳ್ಳುವಂತೆ ಸಹಕರಿಸಲು ಕಲಿಕಾ ಅವಕಾಶವನ್ನು ಒದಗಿಸುವುದು.
- ನಲಿ–ಕಲಿ ತರಗತಿಗಳ ಕನ್ನಡ ಭಾಷೆ ಹಾಗೂ ಕೋರ್ ವಿಷಯಗಳ ಕಲಿಕಾ ಪ್ರಕ್ರಿಯೆಯಂತೆಯೇ, ಇಂಗ್ಲಿಷ್ ಭಾಷಾ ಕಲಿಕೆಯನ್ನು ಸಹ ಅದೇ ರೀತಿಯ ಕಲಿಕಾ ಪ್ರಕ್ರಿಯೆಗೆ ಸಮನ್ವಯಗೊಳಿಸುವುದು.
- ನಲಿ–ಕಲಿ ಕಲಿಕಾ ಪ್ರಕ್ರಿಯೆಯಂತೆ ಮೆಟ್ಟಿಲು–ಮೈಲುಗಲ್ಲುವಾರು, ವಿದ್ಯಾರ್ಥಿಸ್ನೇಹಿ ಚಟುವಟಿಕೆಗಳ ಮೂಲಕ ಇಂಗ್ಲಿಷ್ ವಿಷಯದ ಕಲಿಕೆಯನ್ನು ಸಂತಸದಾಯಕ ವಾತಾವರಣದೊಂದಿಗೆ ಬಲವರ್ಧನೆಗೊಳಿಸುವುದು.
- ಸಮುದಾಯದ (ಎಸ್‌ಡಿಎಂಸಿ ಮತ್ತು ಶಾಲಾ ಮಕ್ಕಳ ತಂದೆತಾಯಿಯರು) ಬೇಡಿಕೆಯ ಸ್ಪಂದನೆಗೆ ಒತ್ತಾಸೆಯಾಗುವುದು ಮತ್ತು ಈ ಮೂಲಕ ಶಾಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಮತ್ತಷ್ಟು ಕ್ರಿಯಾಶೀಲಗೊಳಿಸುವುದು.
- ಶಾಲೆಗಳ ಶಿಕ್ಷಣ ಗುಣಮಟ್ಟ ಸುಧಾರಣೆಯ ಭಾಗವಾಗಿ ಇಂಗ್ಲಿಷ್ ವಿಷಯದ ಕಲಿಕೆಯನ್ನು ಎಲ್ಲಾ ಹಂತದ ತರಗತಿಗಳಲ್ಲೂ ಹೆಚ್ಚು ಪರಿಣಾಮಕಾರಿಗೊಳಿಸುವುದು.

Kiran Raghupathi

## ಇಂಗ್ಲಿಷ್ ನಲಿ–ಕಲಿ ಅನುಷ್ಠಾನ

2020–21ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳ ಕನ್ನಡ ಮಾಧ್ಯಮದ 1ರಿಂದ 3ನೇ ತರಗತಿವರೆಗಿನ 53,000 ಹಾಗೂ ಉರ್ದು ಮಾಧ್ಯಮದ 1ರಿಂದ 2ನೇ ತರಗತಿವರೆಗಿನ 4,500 ನಲಿ–ಕಲಿ ಘಟಕಗಳಲ್ಲಿ **'ಇಂಗ್ಲಿಷ್ ನಲಿ–ಕಲಿ ತರಗತಿ–01'**ನ್ನು ನೂತನವಾಗಿ ಜಾರಿಗೊಳಿಸಲಾಗುತ್ತಿದ್ದು, ನಲಿ–ಕಲಿ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತರಬೇತಿ ನೀಡಲಾಗುವುದು.

## ಇಂಗ್ಲಿಷ್ ನಲಿ–ಕಲಿ ವಿಧಾನದಲ್ಲಿ ಬಳಸಲಾಗುವ ಕಲಿಕಾ ಸಾಮಗ್ರಿಗಳು

- ✓ ಇಂಗ್ಲಿಷ್ ಕಾರ್ಡ್‌ಗಳು
- ✓ ಬರವಣಿಗೆ ಅಭ್ಯಾಸಕ್ಕಾಗಿ ಚಪ್ಪಟೆಯಾದ ಬಣ್ಣದ ಮಣಿಗಳು
- ✓ ಇಂಗ್ಲಿಷ್ ವರ್ಣಮಾಲೆಯ ರಬ್ಬರ್ ಅಕ್ಷರಗಳು (ಕ್ಯಾಪಿಟಲ್ ಮತ್ತು ಸ್ಮಾಲ್ ಲೆಟರ್ಸ್)
- ✓ ಚಿಕ್ಕ ಚಿಕ್ಕ ಪುಸ್ತಕಗಳು
- ✓ ವರ್ಕ್‌ಶೀಟ್ಸ್
- ✓ ಪ್ರತಿ ಮಗುವಿಗೊಂದು ಬಾಕ್ಸ್‌ಫೈಲ್

## ಬೋಧನಾ–ಕಲಿಕಾ ಪರಿಕರಗಳು (ಟಿ.ಎಲ್.ಎಂ.)

ಶಾಲಾ ಹಂತದಲ್ಲಿ ಕಲಿಕೆಗೆ ಪೂರಕವಾದ ಸಾಮಗ್ರಿಗಳನ್ನು ಶಿಕ್ಷಕರೇ ಸ್ವತಃ ತಯಾರಿಸಿಕೊಳ್ಳಲು ಕೆ.ಜಿ.ಶೀಟ್ಸ್, ಕ್ರೆಯಾನ್ಸ್, ಸ್ಕೆಚ್‌ಪೆನ್ಸ್, ಮಾರ್ಕರ್, ಕಲರ್ ಪೆನ್ಸಿಲ್ಸ್ ಮತ್ತು ಇತರೆ ವಸ್ತುಗಳನ್ನು ನೀಡಲಾಗುವುದು.

'ಇಂಗ್ಲಿಷ್ ನಲಿ–ಕಲಿ ತರಗತಿ–1'ರ ಕಾರ್ಯಕ್ರಮವು ಕರ್ನಾಟಕ ರಾಜ್ಯದ ಬಹು ನಿರೀಕ್ಷಿತ ಶೈಕ್ಷಣಿಕ ಕಾರ್ಯಕ್ರಮವಾಗಿದ್ದು, ರಾಜ್ಯದ ಎಲ್ಲಾ ಕನ್ನಡ ಮತ್ತು ಉರ್ದು ಮಾಧ್ಯಮದ ನಲಿ–ಕಲಿ ಘಟಕಗಳಲ್ಲಿ ಇದರ ಯಶಸ್ವಿ ಅನುಷ್ಠಾನಕ್ಕೆ ಸೂಕ್ತ ರೀತಿಯಲ್ಲಿ ಕ್ರಮ ವಹಿಸುತ್ತಾ, ನಿರಂತರ ಅನುಪಾಲನೆ ಕೈಗೊಳ್ಳುತ್ತಾ, ಪ್ರಗತಿಯೆಡೆಗೆ ಎಲ್ಲರೂ ಒಟ್ಟಾಗಿ ಶ್ರಮಿಸಬೇಕಾಗಿದೆ. ಈ ಬಗ್ಗೆ ಕ್ಷೇತ್ರದಲ್ಲಿ ಎದುರಾಗುವ ಸಮಸ್ಯೆ ಮತ್ತು ಸವಾಲುಗಳನ್ನು ಮುಕ್ತವಾಗಿ ಇಲಾಖೆಯೊಂದಿಗೆ ಹಂಚಿಕೊಳ್ಳುತ್ತಾ, ಹಿಮ್ಮಾಹಿತಿ ಮತ್ತು ಸಲಹೆಗಳನ್ನು ನೀಡುತ್ತಾ, ಪರಿಹಾರ ಕ್ರಮಗಳ ಮೂಲಕ ಸದರಿ ಕಾರ್ಯಕ್ರಮದ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸೋಣ.

Kiran Raghupathi

# ಅಧ್ಯಾಯ-12

## ಮಕ್ಕಳ ಕಲಿಕಾ ಫಲಗಳು

**ಉದ್ದೇಶಗಳು**

**ಈ ಅಧ್ಯಾಯದ ನಂತರ ಸದಸ್ಯರು;**

- ಪಢೇ ಭಾರತ್ ಬಢೇ ಭಾರತ್ ಕಾರ್ಯಕ್ರಮದ ಅನುಷ್ಠಾನ ಕುರಿತು ಸಮುದಾಯದಲ್ಲಿ ಜಾಗೃತಿಮೂಡಿಸುವರು.
- ಶಾಲಾ ಸ್ವಚ್ಛತೆ ಮತ್ತು ನೈರ್ಮಲ್ಯ ನಿರ್ವಹಣೆಗೆ ಅಗತ್ಯ ಕ್ರಮಕೈಗೊಳ್ಳುವರು.
- ನಲಿಕಲಿ ವಿಧಾನದ ಚಿತ್ರಣ ಪಡೆಯುವರು.
- ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ ಎಂದರೇನೆಂಬುದನ್ನು ಅರಿಯುವರು.
- ಕಲಿವಿನ ಫಲಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆಯನ್ನು ಅರಿಯುವರು.
- ಪ್ರೇರಣಾ ಕಾರ್ಯಕ್ರಮದ ಪರಿಚಯ ಮಾಡಿಕೊಳ್ಳುವರು.

### ಪಢೇ ಭಾರತ್ ಬಢೇ ಭಾರತ್ – ಅರ್ಥಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ ಮತ್ತು ಪ್ರಾರಂಭಿಕ ಗಣಿತ ಕಾರ್ಯಕ್ರಮ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮತ್ತು ಆರ್‌ಟಿಇ ಕಾಯ್ದೆ-2009ರಲ್ಲಿ ಓದುವ ಮತ್ತು ಬರೆಯುವ ಪ್ರಕ್ರಿಯೆಗಳು ಪಠ್ಯಪುಸ್ತಕವನ್ನು ಮೀರಿ ನಿಲ್ಲಬೇಕು ಎನ್ನುವುದನ್ನು ಒತ್ತಿ ಹೇಳಲಾಗಿದೆ. ತರಗತಿಗಳಲ್ಲಿ ಓದುವುದು ಮತ್ತು ಬರೆಯುವುದನ್ನು ಅರ್ಥಪೂರ್ಣ ಮತ್ತು ಪರಿಣಾಮಕಾರಿಯಾಗಿಸದೇ ಬರೀ ಪಠ್ಯಪುಸ್ತಕಗಳಿಗೆ ಸೀಮಿತಗೊಳಿಸುವುದರಿಂದ ವಿದ್ಯಾರ್ಥಿಯ ಜ್ಞಾನದ ಸಂರಚನೆಯನ್ನು ಸೀಮಿತಗೊಳಿಸಿದಂತಾಗುತ್ತದೆ. ಅಲ್ಲದೇ ಸ್ಪಷ್ಟವಾಗಿ ಅರ್ಥದೊಂದಿಗೆ ಓದುವುದು ಮತ್ತು ಅರ್ಥಪೂರ್ಣವಾಗಿ ಬರೆಯುವುದರಿಂದ ವಿದ್ಯಾರ್ಥಿಯು ಉತ್ತಮ ಓದುಗ ಮತ್ತು ಬರಹಗಾರನಾಗಿ ರೂಪಗೊಳ್ಳುತ್ತಾನೆ. ಇದು ಭಾಷಾ ಬೆಳವಣಿಗೆ ಮತ್ತು ಸಂವಹನ ಕೌಶಲಗಳು ವಿದ್ಯಾರ್ಥಿಗಳಲ್ಲಿ ಬೆಳೆಯಲು ಸಹಕಾರಿ.

> *'ಅರ್ಥಗ್ರಹಿಕೆಯೊಂದಿಗೆ ಓದು-ಬರಹ' ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ಹೊಂದಿದ್ದರೂ ಸಹ ಭಾರತೀಯ ಶಾಲಾ ವ್ಯವಸ್ಥೆಯಲ್ಲಿ ಇದು ಪರಿಣಾಮಕಾರಿಯಾಗಿಲ್ಲದಿರುವ ಬಗ್ಗೆ 1993ರ ಯಶಪಾಲ್ ಸಮಿತಿಯು ಆತಂಕ ವ್ಯಕ್ತಪಡಿಸಿದೆ.*

ಓದುವಿಕೆ ಯಾವಾಗಲೂ ಅರ್ಥಗ್ರಹಿಕೆಯನ್ನು ಹೊಂದಿರಬೇಕಾದ ಪ್ರಕ್ರಿಯೆ. ಓದುವ ಪ್ರಕ್ರಿಯೆಯು ಓದುಗ ಮತ್ತು ಓದಬೇಕಾದ ಪಠ್ಯದೊಂದಿಗಿನ ಸಂವಹನವಾಗಿದ್ದು, ಅರ್ಥಗರ್ಭಿತ ಸರಾಗವಾದ ಓದು, ಓದುಗನ ಅನುಭವ, ಭಾಷಾ ಸಾಮರ್ಥ್ಯ, ಪೂರ್ವಜ್ಞಾನವನ್ನು ಅವಲಂಬಿಸಿರುತ್ತದೆ. ಓದುವ ಕೌಶಲ ಅರ್ಥಗರ್ಭಿತವಾಗಿದ್ದು, ಸರಾಗವಾಗಿದ್ದರೆ ಮಾತ್ರ ಬರೆಯುವಿಕೆಯೂ ಕೂಡಾ ಅರ್ಥಪೂರ್ಣವಾಗಿರುತ್ತದೆ. ಹಾಗೆಯೇ, ಮಕ್ಕಳು ಗಣಿತ ಕಲಿಕೆಯ ಕಡೆಗೆ ಒಂದು ವಿಧವಾದ ಭಯದ ವಾತಾವರಣವನ್ನು ಶಾಲೆಗಳು ಹೊಂದಿರುವುದನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-2005 ಬೆರಳು ಮಾಡಿ ತೋರಿಸಿದೆ.

1 ಮತ್ತು 2ನೇ ತರಗತಿಯ ಕಲಿಕಾರ್ಥಿಗಳ ವಯೋಮಾನವು ಭಾಷೆ ಮತ್ತು ಗಣಿತ ಕಲಿಕೆಯ ಅತೀ ಮುಖ್ಯವಾದ ಹಂತ. ಈ ಹಂತದಲ್ಲಿ ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳು ಜೀವನಪರ್ಯಂತ ಕಡಿಮೆ ಕಲಿಕಾ ಸಾಧನೆಯನ್ನು ಪ್ರದರ್ಶಿಸುವ ಸಾಧ್ಯತೆಯಿದೆ. ಮಕ್ಕಳು ಶಾಲೆ ಬಿಡುವ ಪ್ರಮಾಣವೂ ಇದರೊಂದಿಗೆ ತಳುಕು ಹಾಕಿಕೊಂಡಿದೆ. ಆದುದರಿಂದ ಈ ಹಂತದಲ್ಲಿ ಮಕ್ಕಳು ಉತ್ತಮವಾಗಿ ಓದುವ ಮತ್ತು ಬರೆಯುವ, ಸರಳ ಗಣಿತ ಮಾಡುವ ಪೂರಕವಾದ ವಾತಾವರಣವನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಆದ್ಯ ಕಾರ್ಯವಾಗಬೇಕು.

ಈ ಹಿನ್ನೆಲೆಯಲ್ಲಿ ಅರ್ಥಗರ್ಭಿತ ಓದು, ಬರಹ ಮತ್ತು ಆರಂಭಿಕ ಗಣಿತದ ಕೌಶಲಗಳನ್ನು ಕಲಿಕಾರ್ಥಿಗಳಲ್ಲಿ ಅಭಿವೃದ್ಧಿಪಡಿಸಬೇಕಾದ ಕಾರ್ಯಕ್ರಮವೊಂದರ ರಾಷ್ಟ್ರಮಟ್ಟದ ಅವಶ್ಯಕತೆಯನ್ನು ಮನಗಂಡು **"ಪಢೇ ಭಾರತ್ ಬಢೇ**

Kiran Raghupathi

**ಭಾರತ್" ಅರ್ಥಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ ಮತ್ತು ಪ್ರಾರಂಭಿಕ ಗಣಿತ ಕಾರ್ಯಕ್ರಮವನ್ನು** ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರೂಪಿಸಲಾಗಿದೆ. ಈ ಕಾರ್ಯಕ್ರಮದ ಎರಡು ಮಜಲುಗಳೆಂದರೆ;

1) ಅರ್ಥ ಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ
2) ಪ್ರಾರಂಭಿಕ ಗಣಿತ

**ಕಾರ್ಯಕ್ರಮದ ಉದ್ದೇಶಗಳು**

1. ಮಕ್ಕಳು ಸ್ವತಂತ್ರ ಕಲಿಕಾದಾರರಾಗಿ ಆಯಾ ತರಗತಿಗೆ ಅನುಗುಣವಾಗಿ, ಅರ್ಥಗ್ರಹಿಕೆಯೊಂದಿಗೆ ಓದುವ ಮತ್ತು ಬರೆಯುವ ಕೌಶಲವನ್ನು ಪಡೆಯಲು ನಿರಂತರವಾಗಿ ಕ್ರಿಯಾಶೀಲತೆಯೊಂದಿಗೆ ಕಲಿಕೆಯಲ್ಲಿ ಭಾಗವಹಿಸಲು ಪ್ರೇರೇಪಿಸುವುದು.
2. ಮಕ್ಕಳು ಗಣಿತದ ಪರಿಕಲ್ಪನೆಗಳಾದ ಸಂಖ್ಯೆಗಳು, ಅಳತೆ ಮತ್ತು ಆಕೃತಿಗಳನ್ನು ತಾರ್ಕಿಕವಾಗಿ ಅರ್ಥೈಸಿಕೊಂಡು, ಸಾಂಖ್ಯಿಕ ಮತ್ತು ಸ್ಥಳ ಸಂಬಂಧಿ ಸಮಸ್ಯೆಗಳನ್ನು ಪರಿಹರಿಸುವ ಕೌಶಲವನ್ನು ಪಡೆಯುವಂತೆ ಮಾಡುವುದು.
3. ಮಕ್ಕಳು ಓದುವ ಮತ್ತು ಬರೆಯುವಂತಹ ಅನುಭವಗಳನ್ನು ನೈಜ ಮತ್ತು ಸಂತಸದಾಯಕ ಸನ್ನಿವೇಶವನ್ನಾಗಿಸುವುದು.
4. ಮಕ್ಕಳನ್ನು ಸ್ವತಂತ್ರ ಮತ್ತು ಕ್ರಿಯಾಶೀಲ ಓದುವ ಮತ್ತು ಬರೆಯುವವರಾಗಿಸುವ ಪ್ರಕ್ರಿಯೆಯಲ್ಲಿ ಮನೆ ಮತ್ತು ಶಾಲೆಯ ಸ್ಥಿತ್ಯಂತರ ಹಾಗೂ ಮಕ್ಕಳಲ್ಲಿರುವ ಸಾಹಿತ್ಯಾಭಿರುಚಿಯ ಸಾಮಾಜಿಕ ದೃಷ್ಟಿಕೋನವನ್ನು ಗುರುತಿಸುವುದು.

**ಕಾರ್ಯತಂತ್ರಗಳು**

1. ಓದು, ಬರಹ ಮತ್ತು ಆರಂಭಿಕ ಗಣಿತದ ಕಲಿಕಾಶಾಸ್ತ್ರದೆಡೆಗೆ (ಪೆಡಗಾಜಿ) ಶಿಕ್ಷಕರು, ಮುಖ್ಯಶಿಕ್ಷಕರು, ಪೋಷಕರು, ಶಿಕ್ಷಣತಜ್ಞರು ಮತ್ತು ನೀತಿ ನಿರೂಪಕರೊಂದಿಗೆ ಸಂವಾದವನ್ನು ಹುಟ್ಟುಹಾಕುವುದು.
2. 1 ಮತ್ತು 2ನೇ ತರಗತಿಯ ಮಕ್ಕಳ ಓದು, ಬರಹ ಮತ್ತು ಆರಂಭಿಕ ಗಣಿತದ ಅರ್ಥಪೂರ್ಣ ಕಲಿಕಾ ಪ್ರಕ್ರಿಯೆಯ ಅಗತ್ಯತೆಯ ಸಂವೇದನಾಶೀಲತೆಯನ್ನು ಸೃಷ್ಟಿಸುವುದು.
3. ಓದು, ಬರಹ ಮತ್ತು ಆರಂಭಿಕ ಗಣಿತಕ್ಕೆ ಸಂಬಂಧಿಸಿದ ಕಲಿಕಾಶಾಸ್ತ್ರದಲ್ಲಿ ಪರಿಣಿತ ಶಿಕ್ಷಕರ ಹಾಗೂ ಸಂಪನ್ಮೂಲ ವ್ಯಕ್ತಿಗಳ ಗುಂಪುಗಳನ್ನು ಸೃಷ್ಟಿಸುವುದು.
4. ಓದು, ಬರಹ ಮತ್ತು ಆರಂಭಿಕ ಗಣಿತದ ಕಲಿಕೆಗೆ ಪೂರಕವಾದ ಮತ್ತು ಕ್ರಿಯಾಶೀಲವಾದ ಶಾಲಾ ಹಾಗೂ ತರಗತಿ ವಾತಾವರಣವನ್ನು ಸೃಷ್ಟಿಸುವುದು.

**ಅರ್ಥ ಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ ಹಾಗೂ ಪ್ರಾರಂಭಿಕ ಗಣಿತ ಅಧ್ಯಯನ ಕಾರ್ಯಕ್ರಮದ ಘಟಕಗಳು**

ಓದುವ, ಬರೆಯುವ, ಮಾತನಾಡುವ ಮತ್ತು ವ್ಯವಹರಿಸುವ ಸನ್ನಿವೇಶಗಳು ಅರ್ಥಪೂರ್ಣವಾಗಬೇಕಾದರೆ 'ಪಠ್ಯವಸ್ತು, ಓದುವವರು ಮತ್ತು ಸಂದರ್ಭ' ಈ ಮೂರೂ ಅಂಶಗಳು ಬಹುಮುಖ್ಯ. ಅದೇ ರೀತಿ ಓದುಗರು ಸಮಸ್ಯೆ ಪರಿಹರಿಸಬೇಕಾದ ಪ್ರಸಂಗವನ್ನು ಎದುರಿಸಿದಾಗ ಸಂಖ್ಯೆಗಳು ಮತ್ತು ಸ್ಥಾನದ ಸರಿಯಾದ ತಿಳುವಳಿಕೆ ಮೂಡುತ್ತದೆ. ಈ ಎಲ್ಲಾ ಅಂಶಗಳನ್ನು ಸಂಯೋಜಿಸಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಈ ಕೆಳಕಂಡ ಘಟಕಗಳನ್ನು ರಚಿಸಲಾಗಿದೆ;

**ಎ) ವ್ಯವಸ್ಥಾ ಹಂತದ ಘಟಕಗಳು**

1. ಶೈಕ್ಷಣಿಕ ಪ್ರಾಧಿಕಾರದಿಂದ ವಿನ್ಯಾಸ, ಪಠ್ಯವಸ್ತು ಮತ್ತು ಸಾಹಿತ್ಯ ಅಭಿವೃದ್ಧಿ
2. ಬೋಧನಾ ಮಾಧ್ಯಮದ ಕುರಿತು ರಾಜ್ಯ ಹಂತದ ನೀತಿಶಾಸ್ತ್ರದ ಸ್ಪಷ್ಟತೆ
3. ಅರ್ಥ ಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ ಹಾಗೂ ಪ್ರಾರಂಭಿಕ ಗಣಿತದ ಅಧ್ಯಯನ ಘಟಕಗಳ ಸಂಬಂಧ ಸೇವಾನಿರತ ಹಾಗೂ ಸೇವಾಪೂರ್ವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
4. ಎಸ್.ಸಿ.ಇ.ಆರ್.ಟಿ., ಡಯಟ್‌ಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳಿಗೆ ಶಿಕ್ಷಣತಜ್ಞರಿಂದ ಸಾಮರ್ಥ್ಯ ಅಭಿವೃದ್ಧಿ
5. ನಿರ್ದೇಶಕರು(ಇಇ), ಡಿಇಓಗಳು, ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಶಿಕ್ಷಣ ಆಡಳಿತಗಾರರಿಂದ ಸಾಮರ್ಥ್ಯ ಅಭಿವೃದ್ಧಿ
6. ಅರ್ಥಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ ಹಾಗೂ ಪ್ರಾರಂಭಿಕ ಗಣಿತದ ಅಧ್ಯಯನದ ಕುರಿತು ಮುಖ್ಯಶಿಕ್ಷಕರಿಗೆ ಸಾಮರ್ಥ್ಯ ಅಭಿವೃದ್ಧಿ

Kiran Raghupathi

7. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಾಮರ್ಥ್ಯ ಅಭಿವೃದ್ಧಿ
8. ಸ್ಥಳೀಯ ಭಾಷೆಯಲ್ಲಿ ಸರಳವಾದ, ಪ್ರಾದೇಶಿಕ ನಿರ್ದಿಷ್ಟ, ಆಸಕ್ತಿದಾಯಕ ಶ್ರೇಣೀಕೃತ ಮಕ್ಕಳ ಸಾಹಿತ್ಯ ಮತ್ತು ಗಣಿತದ ಸಂಪನ್ಮೂಲಗಳನ್ನು ರೂಪಿಸುವುದು
9. ನಿಯಮಿತ ಅಂತರಗಳಲ್ಲಿ ಅರ್ಥಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹ ಹಾಗೂ ಪ್ರಾರಂಭಿಕ ಗಣಿತದ ಅಧ್ಯಯನದ ಕುರಿತು ಸಂಶೋಧನೆ ಮತ್ತು ಮೌಲ್ಯಮಾಪನ ಹಾಗೂ ಆವರ್ತಕ ವಿಧಾನದಲ್ಲಿ ಕಾರ್ಯಕ್ರಮದ ವಿಮರ್ಶೆ

**ಬಿ) ಶಾಲೆ–ತರಗತಿ ಹಂತದ ಘಟಕಗಳು**

**1. ಕಲಿಕೆಯ ವಾತಾವರಣ:**

**1.1 ಬೋಧನಾ–ಕಲಿಕಾ ಸಮಯ:**

- ವಾರ್ಷಿಕ 200 ಶಾಲಾ ಕಾರ್ಯನಿರ್ವಹಣಾ ಅವಧಿಗಳು.
- ವಾರ್ಷಿಕ 800 ಬೋಧನಾ ಅವಧಿಗಳಲ್ಲಿ ಭಾಷೆಗಾಗಿ 500 ಅವಧಿಗಳು ಮತ್ತು ಪ್ರಾರಂಭಿಕ ಗಣಿತ ಕಲಿಕೆಗಾಗಿ 300 ಅವಧಿಗಳು.
- ದಿನದ 4 ಬೋಧನಾ ಅವಧಿಗಳಲ್ಲಿ 2 1/2 ಗಂಟೆಗಳನ್ನು ಓದಲು ಮತ್ತು ಬರೆಯಲು ಹಾಗೂ 1 1/2 ಗಂಟೆಗಳನ್ನು ಪ್ರಾರಂಭಿಕ ಗಣಿತ ಕಲಿಕೆಗಾಗಿ ಮೀಸಲಿಡುವುದು.

**1.2 ಶಿಕ್ಷಕರು:**

| **ಕ್ರಸಂ** | **ಅಂಶಗಳು** | **ಪ್ರಮಾಣಗಳು ಮತ್ತು ನಿಯಮಗಳು** | |
|---|---|---|---|
| 1 | **ಶಿಕ್ಷಕರ ಸಂಖ್ಯೆ** | **ಶಾಲೆಗೆ ಸೇರಿರುವ ಮಕ್ಕಳ ಸಂಖ್ಯೆ** | **ಶಿಕ್ಷಕ / ಶಿಕ್ಷಕಿಯರ ಸಂಖ್ಯೆ** |
| | (a) 1–5 ನೇ ತರಗತಿಯವರೆಗೆ | 60 ಮಕ್ಕಳ ತನಕ | ಇಬ್ಬರು |
| | | 60 – 90 | ಮೂವರು |
| | | 90 – 120 | ನಾಲ್ವರು |
| | | 120 – 150 | ಐವರು |
| | | 150ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು | 5 ಶಿಕ್ಷಕರು ಮತ್ತು ಒಬ್ಬ ಮುಖ್ಯ ಶಿಕ್ಷಕರು |
| | | 200 ಹೆಚ್ಚಿನ ವಿದ್ಯಾರ್ಥಿಗಳು | ವಿದ್ಯಾರ್ಥಿ ಶಿಕ್ಷಕ ಪರಿಮಾಣ (ಮುಖ್ಯ ಶಿಕ್ಷಕರನ್ನೂ ಒಳಗೊಂಡಂತೆ) 40ನ್ನು ಮೀರುವಂತಿಲ್ಲ |
| | (b) 6–8ನೇ ತರಗತಿಯವರೆಗೆ | 1) ಪ್ರತಿ ತರಗತಿಗೊಬ್ಬ ಶಿಕ್ಷಕರು, ಅಂದರೆ ಈ ಮುಂದಿನವುಗಳಿಗೆ ಕನಿಷ್ಟ ಒಬ್ಬ ಶಿಕ್ಷಕರು<br>(i) ವಿಜ್ಞಾನ ಮತ್ತು ಗಣಿತ<br>(ii) ಸಮಾಜ ಶಾಸ್ತ್ರ<br>(iii) ಭಾಷೆಗಳು<br>2) ಪ್ರತಿ ಮುವತ್ತೈದು ವಿದ್ಯಾರ್ಥಿಗಳಿಗೆ<br>3) ಎಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಒಂದು ನೂರಕ್ಕಿಂತಲೂ ಹೆಚ್ಚಿರುತ್ತದೋ ಅಲ್ಲಿ, ಪೂರ್ಣಾವಧಿ ಮುಖ್ಯ ಶಿಕ್ಷಕರು,<br>ಈ ಮುಂದಿನವುಗಳಿಗೆ ಅರೆಕಾಲಿಕ ಬೋಧಕರು,<br>a) ಕಲಾ ಶಿಕ್ಷಣ | |

Kiran Raghupathi

| | | |
|---|---|---|
| | | b) ಆರೋಗ್ಯ ಮತ್ತು ದೈಹಿಕ ಶಿಕ್ಷಣ<br><br>c) ವೃತ್ತಿ ಶಿಕ್ಷಣ |

-
- 1 ಮತ್ತು 2ನೇ ತರಗತಿಗಳಿಗೆ ಒಬ್ಬರು ಶಿಕ್ಷಕರನ್ನು ಮೀಸಲಿಡುವುದು.
- ಶಿಕ್ಷಕರ ಹಾಜರಿ ಶೇ.95ರಷ್ಟು ಇರುವಂತೆ ನೋಡಿಕೊಳ್ಳುವುದು.
- ಸಿದ್ಧತೆ ಮತ್ತು ಬೋಧನೆ ಸೇರಿ ವಾರದಲ್ಲಿ 45 ಗಂಟೆಗಳು ಶಿಕ್ಷಕರ ಕಾರ್ಯನಿರ್ವಹಿಸುವುದು.

**1.3 ವಿದ್ಯಾರ್ಥಿಗಳು**

- ವಿದ್ಯಾರ್ಥಿಗಳ ಹಾಜರಾತಿಯನ್ನು ಕನಿಷ್ಠ ಶೇ.75ರಷ್ಟು ಸಾಧಿಸುವುದು.
- ಕಲಿಕಾ ಅನುಭವಗಳ ದೃಢೀಕರಣದ ಮೂಲಕ ಆತ್ಮವಿಶ್ವಾಸ ಮತ್ತು ಸ್ವ-ಚಿತ್ರ ಅಭಿವೃದ್ಧಿಗೆ ನೆರವಾಗುವುದು.

**1.4 ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿ**

- ಅರ್ಥಗ್ರಹಿಕೆಯೊಂದಿಗೆ ಪ್ರಾರಂಭಿಕ ಓದು ಮತ್ತು ಬರಹದ ವಿಷಯದ ಕುರಿತಂತೆ ಶಿಕ್ಷಕರಿಗೆ ತರಬೇತಿ ನೀಡುವುದು.
- 1 ರಿಂದ 3ನೇ ತರಗತಿಯ ಪ್ರಾರಂಭಿಕ ಗಣಿತ ವಿಷಯದ ಕುರಿತು ಶಿಕ್ಷಕರಿಗೆ ತರಬೇತಿ ನೀಡುವುದು.

**1.5 ಶಿಕ್ಷಕರ ಮಾರ್ಗದರ್ಶನ ಮತ್ತು ಬೆಂಬಲ ವ್ಯವಸ್ಥೆ**

–ಶಿಕ್ಷಕರಿಗೆ ಅಭ್ಯಾಸ ಮತ್ತು ಪ್ರಾತ್ಯಕ್ಷಿಕೆಗಳಿಗೆ ಅವಕಾಶ ನೀಡುವುದು.
– ಸಂಪನ್ಮೂಲ ವ್ಯಕ್ತಿಗಳಿಂದ ಶೈಕ್ಷಣಿಕ ಬೆಂಬಲ
– ಕ್ಲಸ್ಟರ್ ಸಮಾಲೋಚನಾ ಸಭೆಗಳು
– ಸಂಪನ್ಮೂಲಗಳ ಪೂರೈಕೆ

**1.6 ತರಗತಿ ಸ್ಥಿತಿ**

**1.6.1 ಭೌತಿಕ ಸ್ಥಿತಿ**

- ಓದಲು ಬರೆಯಲು ಪೂರಕವಾದ, ಸರಾಗ ಗಾಳಿ ಬೆಳಕು, ಆಸನ ವ್ಯವಸ್ಥೆ ಇರುವ ಕೊಠಡಿಗಳನ್ನು ಒದಗಿಸುವುದು.
- ಕಪ್ಪುಹಲಗೆ, ಚಟುವಟಿಕೆ ಮೂಲೆ, ಓದುವ ಮೂಲೆ, ಅಭಿವ್ಯಕ್ತಿ ಬೋರ್ಡ್‌ಗಳಿಗೆ ಅವಕಾಶ.

**1.6.2 ಮುದ್ರಣಭರಿತ ಚಿತ್ರಗಳಿಂದ ಕೂಡಿದ ವಾತಾವರಣ.**

- ಸರಿಯಾದ ಸಮಯಕ್ಕೆ ಪಠ್ಯಪುಸ್ತಕ ಪೂರೈಕೆ.
- ಮಕ್ಕಳ ಸಾಹಿತ್ಯ ಪ್ರದರ್ಶನ, ಬರೆದ ಚಿತ್ರಗಳು, ಫೋಟೋಗಳು, ಬರ್ತ್‌ಡೇ ಚಾರ್ಟ್ ಇತ್ಯಾದಿ ಅಭಿವ್ಯಕ್ತಿಗಳಿಗೆ ಮುಕ್ತ ಅವಕಾಶ.

**1.6.3 ಧನಾತ್ಮಕ ಶಾಲಾ ಸಾಮಾಜಿಕ ಪರಿಸರ**

- ಶಾಲೆಯಲ್ಲಿ ಭಾವನಾತ್ಮಕ, ಪ್ರೀತಿಪೂರ್ವಕ, ಸ್ಪಂದನಾಶೀಲ, ವಾತಾವರಣ ಸೃಷ್ಟಿಸುವುದು.
- ಭಯರಹಿತವಾದ ಮತ್ತು ಪಕ್ಷಪಾತರಹಿತ ಶಿಶು ಸ್ನೇಹಿ ವಾತಾವರಣ.

**2. ತರಗತಿ ಚಲನವಲನವನ್ನು ಪ್ರೇರೇಪಿಸುವುದು**

Kiran Raghupathi

- ಭಾಷಾ ಕಲಿಕೆಯನ್ನು ಉತ್ತೇಜಿಸುವುದು.
- ಭಾಷಾ ಕಲಿಕೆಯನ್ನು ತರಗತಿ ವಾತಾವರಣ ಮತ್ತು ಸಮುದಾಯದ ಜೊತೆಗೆ ಸಂಪರ್ಕಿಸುವುದು.
- ತರಗತಿಗಳಲ್ಲಿ ಮಕ್ಕಳು ಭಯರಹಿತರಾಗಿ, ಓಡಾಡುತ್ತಾ, ಅಭಿವ್ಯಕ್ತಿಸುತ್ತಾ ಮುಕ್ತವಾಗಿ ಕಲಿಯಲು ಅವಕಾಶ ಮಾಡಿಕೊಡುವುದು.
- ಚಟುವಟಿಕೆ ಆಧಾರಿತ, ಚಿಂತನಶೀಲ ಆಚರಣೆಗಳುಳ್ಳ, ಚಿಂತನೆಗೆ ಹಚ್ಚುವಂತಹ, ಎಲ್ಲರನ್ನೂ ತೊಡಗಿಸಿಕೊಳ್ಳುವ ತರಗತಿ ಪ್ರಕ್ರಿಯೆಗಳನ್ನು ಆಯೋಜಿಸುವುದು.

**3. ತರಗತಿ ಕೊಠಡಿಗಳನ್ನು ಸಮುದಾಯದೊಂದಿಗೆ ಜೋಡಿಸುವುದು**

- ಓದುವುದು ಮತ್ತು ಬರೆಯುವುದನ್ನು ಸಾಮುದಾಯಿಕ ಜೀವನ, ಆಚರಣೆಗಳು, ಹಬ್ಬಗಳು, ಸ್ಥಳೀಯ ಸನ್ನಿವೇಶಗಳಿಗನುಗುಣವಾಗಿ ಜೋಡಿಸುವುದು.
- ಸಮುದಾಯದ ತೊಡಗಿಸಿಕೊಳ್ಳುವಿಕೆ, ಅಂಚೆ ಕಛೇರಿ, ಆರಕ್ಷಕ ಠಾಣೆ ಇತ್ಯಾದಿ ಭೇಟಿಗಳನ್ನು ಆಯೋಜಿಸುವುದು.

**4. ಕಲಿಕೆಯ ಮೌಲ್ಯಮಾಪನ**

- ಪೋಷಕರಿಗೆ ಕಲಿಕಾ ಸೂಚಕಗಳ ಪರಿಚಯ
- ಸಾಧನಾ ಪರೀಕ್ಷೆಗಳನ್ನು ಆಯೋಜಿಸುವುದು.
- ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳನ್ನು ಆಯೋಜಿಸುವುದು.
- ಸಾಧನೆಗಳ ದಾಖಲೀಕರಣ ಮತ್ತು ಚೈಲ್ಡ್ ಪ್ರೊಫೈಲ್ ಇಡುವುದು.

**5. ವ್ಯವಸ್ಥೆಯ ಮೇಲ್ವಿಚಾರಣೆ ಮಾಡುವುದು**

- ಉತ್ತಮ ಉಸ್ತುವಾರಿ ತಂತ್ರಗಳು
- ಕ್ಯು ಎಂ ಟಿ ಸಾಧನಗಳ ಬಳಕೆ
- ಶಿಕ್ಷಕರ ಸಾಮರ್ಥ್ಯ ಸೂಚಕಗಳ ಬಳಕೆ
- ಕಲಿಕಾ ಸಾಧನ ಸಮೀಕ್ಷೆಗಳ ಅನುಷ್ಠಾನ


ಯಾವುದೇ ಕಾರ್ಯಕ್ರಮದ ಯಶಸ್ಸು ಆ ಕಾರ್ಯಕ್ರಮದ ಯೋಜನೆಯ ರೂಪುರೇಷೆಗಳನ್ನು ಆಧರಿಸಿರುತ್ತದೆ. ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ಭಾಗೀದಾರರಿಗೂ ಸಕಾಲಿಕವಾಗಿ ಕಾರ್ಯಕ್ರಮದ ಪಕ್ಷಿನೋಟ/ ಮುನ್ನೋಟವನ್ನು ಕೊಟ್ಟಾಗ ಅದರ ಪರಿಣಾಮ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು ಹಲವಾರು ಕ್ರಮಗಳನ್ನು ಕೈಗೊಂಡಿದೆ. ಉದಾಹರಣೆಗೆ, ಆಕಾಶವಾಣಿಯಲ್ಲಿ ಸರ್ವಶಿಕ್ಷಣ ಸಂಚಲನ, ದೂರದರ್ಶನದಲ್ಲಿ ವಿಡಿಯೋ ಕ್ಲಿಪ್‌ಗಳ ಪ್ರದರ್ಶನ, ಶಿಕ್ಷಣ ವಾರ್ತೆ ಮಾಸಪತ್ರಿಕೆ, ಇತ್ಯಾದಿ ಮುಖ್ಯವಾಗಿವೆ. ಇವುಗಳಲ್ಲಿ ದೊರೆಯುವ ಮಾಹಿತಿಗಳನ್ನು ಎಸ್.ಡಿ.ಎಂ.ಸಿ.ಸದಸ್ಯರು ಪಡೆದು ಶಾಲಾ ಕಾರ್ಯಗಳ ನಿರ್ವಹಣೆಯಲ್ಲಿ ಸಹಕರಿಸುವುದು.

**ಶಾಲಾ ಹಂತದ ಅನುಪಾಲನೆಗಾಗಿ**

- ಕಾಲಕಾಲಕ್ಕೆ ಪ್ರಕಟವಾಗುವ ಸುತ್ತೋಲೆ ಹಾಗೂ ದಿನಪತ್ರಿಕೆಗಳಲ್ಲಿ ಬರುವ ಪ್ರಕಟಣೆಗಳನ್ನು ಮುಖ್ಯ ಶಿಕ್ಷಕರು ಸಂಗ್ರಹಿಸಿ, ಶಾಲಾ ಸೂಚನಾಫಲಕದಲ್ಲಿ ಪ್ರಕಟಿಸುವುದು ಹಾಗೂ ಎಸ್.ಡಿ.ಎಂ.ಸಿ. ಸಭೆಯಲ್ಲಿ ಚರ್ಚಿಸುವುದು.
- ಎಸ್.ಡಿ.ಎಂ.ಸಿ. ಪದಾಧಿಕಾರಿಗಳು ಶಾಲೆಯಲ್ಲಿ ಕಾರ್ಯಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಪರಿಶೀಲಿಸಿ, ಅಗತ್ಯ ಸಹಕಾರ ಮತ್ತು ಮಾರ್ಗದರ್ಶನ ನೀಡುವುದು.
- ತಂದೆ–ತಾಯಿ/ಪೋಷಕರ ಸಭೆಗಳಲ್ಲಿ ಈ ಬಗ್ಗೆ ಪ್ರಸ್ತಾಪಿಸಿ ಚರ್ಚಿಸುವುದು.

Kiran Raghupathi

## ಚಟುವಟಿಕಾಧಾರಿತ ಕಲಿಕಾ ವಿಧಾನ–ನಲಿಕಲಿ



ಪ್ರತಿಯೊಂದು ಮಗುವೂ ಅನನ್ಯ. ಪ್ರತಿ ಮಗುವಿನ ಕಲಿಕೆಯೂ ವ್ಯಕ್ತಿಗತ. ವ್ಯಕ್ತಿಗತ ಕಲಿಕೆಯಲ್ಲಿ ಕಲಿಕೆಯ ರೀತಿ, ಕಲಿಕೆಯ ಶೈಲಿ, ಕಲಿಕಾ ವೇಗ ಮಗುವಿನಿಂದ ಮಗುವಿಗೆ ಭಿನ್ನವಾಗಿರುತ್ತದೆ. ಈ ಅಂಶಗಳನ್ನು ಪರಿಗಣಿಸಿ ಕಲಿಕೆಯನ್ನು ವೈಯಕ್ತಿಕಗೊಳಿಸುವುದರ ಜೊತೆಗೆ ಕಲಿಕೆ ಆಪ್ತವಾಗಲು ಅದನ್ನು ಸಂತಸದಾಯಕಗೊಳಿಸುವ ನಿಮಿತ್ತ ಆಯ್ದುಕೊಂಡ ವಿಧಾನವೇ ನಲಿಕಲಿ.

ಬಹುವರ್ಗ ಹಾಗೂ ಬಹುಹಂತದ ಕಲಿಕೆ ಎಂಬ ಸಾರ್ವತ್ರಿಕ ಸಮಸ್ಯೆಗೆ ಪರಿಹಾರವಾಗಿ ಕಾರ್ಯಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದವರಿಂದಲೇ ಸಿದ್ಧಗೊಂಡ ವಿಧಾನ ನಲಿಕಲಿಯಾಗಿದ್ದು, ಇದು ಶಿಕ್ಷಕ ಹಾಗೂ ಶಿಶುಸ್ನೇಹಿ ಚಟುವಟಿಕೆ ಆಧಾರಿತ ವಿಧಾನವಾಗಿದೆ.

ದೇಶದಲ್ಲಿಯೇ ಮೊದಲ ಬಾರಿಗೆ ಪ್ರಾಥಮಿಕ ಹಂತದಲ್ಲಿ ಮಕ್ಕಳ ಸ್ವ ವೇಗದ ಕಲಿಕೆಗೆ, ಸ್ವಕಲಿಕೆಗೆ ಮತ್ತು ಸಂತಸದ ಕಲಿಕೆಗೆ ಈ ಪದ್ಧತಿಯಲ್ಲಿ ಅವಕಾಶ ಮಾಡಿಕೊಟ್ಟಿರುವುದು ನಮ್ಮರಾಜ್ಯದ ಹೆಗ್ಗಳಿಕೆ. ಕರ್ನಾಟಕದಂತೆ ಭಾರತದ ಹಲವು ರಾಜ್ಯಗಳು ಈ ಪದ್ಧತಿಯನ್ನು ಅಳವಡಿಸಿಕೊಂಡಿವೆ ಮತ್ತು ಅವರದ್ದೇ ಆದ ಹೆಸರಿನಲ್ಲಿ ಕಲಿಕಾ ಪ್ರಕ್ರಿಯೆ ಸಾಗುತ್ತಿದೆ.

ಮೊದಲು ಈ ಪದ್ಧತಿ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ ಜನ್ಮ ತಾಳಿ, ನಂತರ ಡಿ.ಪಿ.ಇ.ಪಿ.ಜಿಲ್ಲೆಗಳ ಆಯ್ದ ಕೆಲವು ತಾಲ್ಲೂಕು, ಕ್ಲಸ್ಟರ್‌ಗಳಲ್ಲಿ ಅಳವಡಿಸಲ್ಪಟ್ಟಿತು. 1999–2000ನೇ ಸಾಲಿನಲ್ಲಿ ಜನಶಾಲಾ ಕಾರ್ಯಕ್ರಮದಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಆಯ್ದ 10 ತಾಲ್ಲೂಕುಗಳಿಗೆ ವಿಸ್ತರಿಸಲ್ಪಟ್ಟಿತು. 2008–2009ನೇ ಸಾಲಿನಲ್ಲಿ ರಾಜ್ಯದ 30ಕ್ಕಿಂತ ಕಡಿಮೆ ಸಂಖ್ಯೆಯ ಮಕ್ಕಳನ್ನು ಹೊಂದಿರುವ 13,691 ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ತರಲ್ಪಟ್ಟಿತು. 2009–10ನೇ ಸಾಲಿನಿಂದ

ರಾಜ್ಯದ ಎಲ್ಲಾ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ 1 ಮತ್ತು 2ನೇ ತರಗತಿಗಳಿಗೆ ವಿಸ್ತರಿಸಲ್ಪಟ್ಟಿತು. 2010–11ನೇ ಸಾಲಿನಲ್ಲಿರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ 1ರಿಂದ 3ನೇ ತರಗತಿಯವರೆಗೆ ವಿಸ್ತರಿಸಲ್ಪಟ್ಟಿದೆ. 2012–13ನೇ ಸಾಲಿನಲ್ಲಿ ರಾಜ್ಯಾದ್ಯಂತ ಎಲ್ಲ ಸರಕಾರಿ ಉರ್ದು ಮಾಧ್ಯಮ ಶಾಲೆಗಳಲ್ಲಿ ಈ ಪದ್ಧತಿಯನ್ನು ಜಾರಿಗೊಳಿಸಲಾಯಿತು.

## ನಲಿಕಲಿ ಕಲಿಕಾ ವಿಧಾನದ ಪ್ರಮುಖ ಅಂಶಗಳು

- ಶಿಶುಕೇಂದ್ರಿತ ಶಿಕ್ಷಣಕ್ಕೆ ಪ್ರಥಮಾದ್ಯತೆ ನೀಡಲಾಗಿದೆ.
- ಬಹುವರ್ಗ ಮತ್ತು ಬಹುಹಂತದ ಕಲಿಕಾ ಪ್ರಕ್ರಿಯೆಗೆ ಮುಕ್ತ ಅವಕಾಶ.

Kiran Raghupathi

- ಅರ್ಥಪೂರ್ಣ ಹಾಗೂ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಕಲಿಕೆ.
- ಚಟುವಟಿಕೆಯ ಕ್ರಮಬದ್ಧ ನಿರ್ವಹಣೆಯ(ಒಂದು ಮೆಟ್ಟಿಲಿನ ನಂತರ ಮತ್ತೊಂದು ಮೆಟ್ಟಿಲು) ಮೂಲಕ ಕಲಿಕೆಯನ್ನು ಸ್ಥಿರಗೊಳಿಸಲು ಅವಕಾಶ.
- ಮಗು ತನ್ನದೇ ಆದ ವೇಗದಲ್ಲಿ ಕಲಿಯಲು ಮುಕ್ತ ಅವಕಾಶ.
- ಗೊತ್ತುಪಡಿಸಿದ ಕಲಿಕಾಂಶದ ಕಲಿಕೆಯ ನಂತರವೇ ಮುಂದಿನ ಕಲಿಕಾಂಶದ ಕಲಿಕೆ.
- ಒಂದು ಶೈಕ್ಷಣಿಕ ವರ್ಷಕ್ಕೆ ಗೊತ್ತುಪಡಿಸಿದ ಕಲಿಕೆಯನ್ನು ಪೂರ್ಣಗೊಳಿಸಿದ ನಂತರವೇ ಮುಂದಿನ ವರ್ಷದ ಕಲಿಕೆಗೆ ತೊಡಗಲು ಅವಕಾಶ.
- ಕಲಿಕಾರ್ಥಿಯು ಸುಗಮಕಾರರ ಮಾರ್ಗದರ್ಶನದಲ್ಲಿ ಕಲಿಕೆಯನ್ನು ಆರಂಭಿಸಿದ ನಂತರ ಗೆಳೆಯರ ಸಹಾಯದಲ್ಲಿ ಪುನರ್ಬಲನಗೊಂಡು ಅಂತಿಮವಾಗಿ ಸ್ವತಂತ್ರ ಕಲಿಕಾಕಾರರಾಗಲು ಅವಕಾಶ.
- ನಲಿಕಲಿ ಪದ್ಧತಿಯು ರಚನಾವಾದದ ತತ್ವವನ್ನಾಧರಿಸಿ, ಗೆಳೆಯರ ಸಹಾಯದಿಂದ ಕಲಿಯುವ ಮೂಲಕ ಸಹಭಾಗಿತ್ವದ ಕಲಿಕೆಗೆ ಅವಕಾಶ.
- ಪ್ರಗತಿ ನೋಟದ ಮೂಲಕ ಕಲಿಕಾರ್ಥಿಯು ತನ್ನ ಕಲಿಕೆಯ ಗುರಿಯನ್ನು ತಿಳಿಯುವ ಜೊತೆಗೆ ಕಲಿಕೆಯಲ್ಲಿ ತನ್ನ ಸ್ಥಾನವನ್ನು ತಿಳಿಯಲು ಸ್ವಾವಲೋಕನ ವ್ಯವಸ್ಥೆ.
- ಕಲಿಕಾ ಗುಂಪುಗಳು ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಆಧರಿಸಿ ರಚನೆಯಾಗುವ ಬದಲಿಗೆ ಅವರು ಭಾಗವಹಿಸುವ ಚಟುವಟಿಕೆಯನ್ನು ಆಧರಿಸಿ ರಚನೆಯಾಗುವುದರಿಂದ ಯಾವುದೇ ಅಸಮಾನತೆಗೆ ಅವಕಾಶವಿಲ್ಲ.
- ಕಲಿಕಾರ್ಥಿಯು ಸ್ವವೇಗದಲ್ಲಿ ಕಲಿಯುತ್ತಾ ಹೋಗುವುದರಿಂದ ಇದು ಕಲಿಕೆಯ ಆಧಾರಿತವಾಗಿದೆಯೇ ಹೊರತು ಸುಗಮಕಾರರ ಬೋಧನೆ ಆಧಾರವಾಗಿರುವುದಿಲ್ಲ.
- ಬಹುಪಾಲು ಕಲಿಕಾ ಸಾಮಗ್ರಿಗಳು ಬದಲಾಯಿಸಬಹುದಾದ ಕಾರ್ಡು/ವಸ್ತುಗಳ ರೂಪದಲ್ಲಿರುವುದರಿಂದ ಚಟುವಟಿಕೆಗಳಲ್ಲಿ ನಿರಂತರವಾಗಿ ಪರಿವರ್ತನೆ ತರಲು ಸಾಧ್ಯ.
- ಮೌಲ್ಯಮಾಪನ ಚಟುವಟಿಕೆಗಳು ವಿದ್ಯಾರ್ಥಿಯ ಗಮನಕ್ಕೆ ಬಾರದೇ ನಿರಂತರವಾಗಿ ಆಟಗಳ ಮೂಲಕ ನಡೆಯುವುದರಿಂದ ಕಲಿಕಾರ್ಥಿಗೆ ಮೌಲ್ಯಮಾಪನ ಎಂಬುದು ಸಂತಸದ ಅನುಭವವಾಗಿರುತ್ತದೆ.
- ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಅವಕಾಶ. ಭೌತಿಕ ಹಾಗೂ ಬೌದ್ಧಿಕ ಪೂರ್ವ ಸಿದ್ಧತೆಗಳನ್ನು ಒಳಗೊಂಡಿದೆ.
- ಗೈರುಹಾಜರಿ ಮತ್ತು ದೀರ್ಘ ಗೈರುಹಾಜರಿ ಕಲಿಕಾರ್ಥಿಗಳು ತರಗತಿಗೆ ಪುನಃ ಶಾಲೆಗೆ ಹಾಜರಾದಾಗ ತಮ್ಮ ಕಲಿಕೆ ನಿಂತಲ್ಲಿಂದಲೇ ಪ್ರಾರಂಭಿಸಲು ಅವಕಾಶವಿದೆ.
- ಪ್ರತಿ ಸಾಮರ್ಥ್ಯ/ ಪರಿಕಲ್ಪನೆಗಳ ಕಲಿಕೆಗೆ ಪ್ರತ್ಯೇಕ ಕಲಿಕಾ ಸಾಮಗ್ರಿಗಳನ್ನು ಸಿದ್ಧಪಡಿಸಿ, ನೀಡಿರುವುದರಿಂದ ಶಿಕ್ಷಕರ ಹೊರೆ ಕಡಿಮೆ ಆಗಿದೆ.
- ಕಲಿಕೆಯ ಪುನರ್ಬಲನಕ್ಕಾಗಿ ಪ್ರತಿ ಕಲಿಕಾರ್ಥಿಗೆ ಪ್ರತಿ ವಿಷಯದ ಅಭ್ಯಾಸ ಪುಸ್ತಕವನ್ನು ನೀಡಲಾಗಿದೆ.
- ಕಲಿಕಾ ಸಾಮಗ್ರಿಯನ್ನು ತಾನೇ ಬಳಸಲು, ನಿರ್ವಹಿಸಲು ಅವಕಾಶವಿದೆ.
- ಕಲಿಕಾರ್ಥಿಗಳ ಸೃಜನಾತ್ಮಕ ಚಿಂತನೆ ಮತ್ತು ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲು ಕ್ರಾಫ್ಟ್, ಆಟಗಳು, ಹಾಡು, ಕಥೆ ಮುಂತಾದ ಚಟುವಟಿಕೆಗಳನ್ನು ಅಳವಡಿಸಲಾಗಿದೆ.
- ಸಾಂಪ್ರದಾಯಿಕ ಪದ್ಧತಿಯಿಂದ ಹೊರತಾದ ತರಗತಿ ವಾತಾವರಣ ನಿರ್ಮಿಸಲಾಗಿದೆ.
- ಕಲಿತ ಕಲಿಕಾಂಶವನ್ನು ಬರವಣಿಗೆಯ ಮೂಲಕ ವ್ಯಕ್ತಪಡಿಸಲು ವಾಲ್‌ಸ್ಲೇಟ್ ವ್ಯವಸ್ಥೆ ಮಾಡಲಾಗಿದೆ.
- ಸಾಂಪ್ರದಾಯಿಕ ಬೋಧನೆಯು ಶಿಕ್ಷಕ ಕೇಂದ್ರಿತವಾಗಿದ್ದರೆ ನಲಿ–ಕಲಿ ಪದ್ಧತಿಯು ಶಿಶು ಕೇಂದ್ರಿತ ಕಲಿಕೆಯಾಗಿದೆ. ಚಟುವಟಿಕೆ ಆಧಾರಿತ ಕಲಿಕೆಗೆ ಸಂಪೂರ್ಣ ಒತ್ತು ಕೊಡಲಾಗಿದೆ. ಮಗು ವಿಷಯವನ್ನು ಸ್ವತಃ ಅನುಭವಿಸಿ ಅರ್ಥೈಸಿಕೊಂಡು ಅನ್ವಯಿಸಿಕೊಳ್ಳುತ್ತದೆ. ಈ ವಿಧಾನದಲ್ಲಿ ಚಿಕ್ಕ ಚಿಕ್ಕ ಘಟಕಗಳ ಮೂಲಕ ಕಲಿಕೆ ಸಾಗುತ್ತದೆ. ಉದಾಹರಣೆ: ಸಾಂಪ್ರದಾಯಿಕ ಬೋಧನೆಯಲ್ಲಿ ಭಾಷಾ ವಿಷಯವು ಎಲ್ಲ ಸ್ವರ ಮತ್ತು ವ್ಯಂಜನಗಳನ್ನು ಕಲಿತ ನಂತರವೇ ಪದಗಳನ್ನು ವಾಕ್ಯಗಳನ್ನು ರಚನೆ ಮಾಡುತ್ತಿದ್ದರು. ಆದರೆ ನಲಿ–ಕಲಿಯಲ್ಲಿ ಐದು ಅಕ್ಷರಗಳನ್ನು ಕಲಿತ ನಂತರ ಪದಗಳನ್ನು ರಚಿಸಬಹುದು. 1ನೇ ತರಗತಿ ಮುಗಿಸುವಷ್ಟರಲ್ಲಿ ಸುಮಾರು 1500 ಪದಗಳನ್ನು ಮಗು ಗ್ರಹಿಸುವ ಸಾಮರ್ಥ್ಯ ಪಡೆದುಕೊಳ್ಳುವುದು. 2ನೇ ತರಗತಿ ಮುಗಿಸುವಷ್ಟರಲ್ಲಿ ಸುಮಾರು 2000 ಪದಗಳನ್ನು

Kiran Raghupathi

ಮಗು ಗ್ರಹಿಸುವ ಸಾಮರ್ಥ್ಯ ಪಡೆದುಕೊಳ್ಳುವುದು. 3ನೇ ತರಗತಿ ಮುಗಿಸುವಷ್ಟರಲ್ಲಿ ಸುಮಾರು 3000 ಪದಗಳನ್ನು ಮಗು ಗ್ರಹಿಸುವ ಸಾಮರ್ಥ್ಯ ಪಡೆದುಕೊಳ್ಳುವುದು.

- ಸಾಂಪ್ರದಾಯಕ ಬೋಧನೆಯ ಗಣಿತ ವಿಷಯದಲ್ಲಿ 1ರಿಂದ 100 ಸಂಖ್ಯೆಗಳನ್ನು ಕಲಿತ ನಂತರವೇ ಮೂಲಕ್ರಿಯೆಗಳನ್ನು ಮಾಡಲು ಅವಕಾಶವಿತ್ತು. ಆದರೆ ಇಲ್ಲಿ 1ರಿಂದ5 ಅಂಕಿಗಳನ್ನು ಕಲಿತ ನಂತರವೇ ಕಲಿತ ಅಂಕಿಗಳ ಸಹಾಯದಿಂದ ಸರಳ ಮೂಲಕ್ರಿಯೆಗಳನ್ನು ಮಾಡಲು ಮಗು ಪ್ರಾರಂಭಿಸುವುದು.

ಹೀಗೆ ನಲಿ–ಕಲಿ ಪದ್ಧತಿಯಲ್ಲಿ ಮಗು ಚಿಕ್ಕ ಚಿಕ್ಕ ಘಟಕಗಳ ಮೂಲಕ ಮಗುವಿನ ಕಲಿಕೆ ಪ್ರಾರಂಭವಾಗಿ ಹಲವಾರು ಚಟುವಟಿಕೆಗಳ ಮೂಲಕ ಮಗುವಿನ ಮೌಲ್ಯಮಾಪನ ಮಗುವಿಗೆ ಗೊತ್ತಾಗದಂತೆ ಸಂತಸಕಲಿಕೆಯ ಮೂಲಕ ನಡೆದು ಕಲಿಕೆ ಗಟ್ಟಿಗೊಳ್ಳುತ್ತಾ ಸಾಗುತ್ತದೆ.

## ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆ (SATS)

ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆಯು (SATS)ಕರ್ನಾಟಕ ಸರ್ಕಾರ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಮ್ಮೆ. ಇದನ್ನು 'ಶಿಕ್ಷಣ ಕಿರಣ' ಎಂದೂ ಕರೆಯಲಾಗುತ್ತದೆ.ಕರ್ನಾಟಕದ 77905 ಶಾಲೆಗಳ ಒಂದು ಕೋಟಿಗೂ ಹೆಚ್ಚು ಮಕ್ಕಳ ಸಮಗ್ರ ಮಾಹಿತಿಯನ್ನು ಈ ತಂತ್ರಾಂಶದಲ್ಲಿ ಇಂದೀಕರಿಸಲಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಶಾಲಾ ವ್ಯವಸ್ಥೆಯ ಮಾಹಿತಿಯನ್ನು ತಂತ್ರಾಂಶವೊಂದರಲ್ಲಿ ಇಂದೀಕರಿಸಿರುವುದು ಕರ್ನಾಟಕ ಸರ್ಕಾರದ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಹೆಮ್ಮೆ.

## ಯೋಜನೆಯ ಮುಖ್ಯ ಉದ್ದೇಶಗಳು

- ಶಾಲೆಗೆ ದಾಖಲಾಗಲು ಅರ್ಹರಿರುವ ಮಕ್ಕಳ ಶೇ.100ರಷ್ಟು ದಾಖಲಾತಿಯನ್ನು ಸಾಧಿಸುವಲ್ಲಿ ಮತ್ತು ದಾಖಲಾಗುವ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಅಗತ್ಯವಾಗಿರುವ ಪೂರಕ ಮಾಹಿತಿಯನ್ನು ಆನ್‌ಲೈನ್ ಮೂಲಕ ಸಂಗ್ರಹಿಸುವುದು.
- ದಾಖಲಾಗುವ ಎಲ್ಲಾ ಮಕ್ಕಳ ಹಾಜರಾತಿ ಮತ್ತು ಕಲಿಕೆಯನ್ನು ಟ್ರ್ಯಾಕಿಂಗ್ ಮಾಡುವ ಮೂಲಕ ಎಲ್ಲ ಮಕ್ಕಳೂ ಶಾಲೆಯಲ್ಲಿರುವುದನ್ನು ಮತ್ತು ಗುಣಮಟ್ಟದ ಶಿಕ್ಷಣ ಪಡೆಯುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಶಾಲೆಗಳ ಸಮಗ್ರ ಮಾಹಿತಿಯನ್ನು ಬಳಸಿಕೊಂಡು ವಿವಿಧ ಕಾರ್ಯಕ್ರಮಗಳು, ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ಎಲ್ಲರನ್ನೂ ಒಳಗೊಳ್ಳುವ ಗುಣಮಟ್ಟದ ಶಿಕ್ಷಣವನ್ನು ನೀಡಲು ಬೆಂಬಲವನ್ನು ನೀಡುವುದು.

## ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆಯ ಮುಖ್ಯಾಂಶಗಳು

1. ಎಲ್ಲಾ ಶಾಲೆಗಳಿಗೂ ನೋಂದಣಿಗೆ ಅವಕಾಶ ನೀಡಲಾಗಿದೆ. ನೋಂದಣಿ ಮಾಡಿಕೊಂಡ ಎಲ್ಲಾ ಶಾಲೆಗಳೂ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಮೂಲಕ ತಮ್ಮ ಶಾಲೆಯ ಪುಟವನ್ನು ತೆರೆದು ಮಾಹಿತಿಗಳನ್ನು ಇಂದೀಕರಿಸಲಾಗುತ್ತದೆ.
2. ಶಾಲೆಗೆ ಸಂಬಂಧಿಸಿದ ಮೂಲಭೂತ ಸೌಲಭ್ಯಗಳು, ಶಿಕ್ಷಕರ ವಿವರಗಳು, ವಿಳಾಸ ಇತ್ಯಾದಿ ವಿವರಗಳನ್ನು ಸಮಗ್ರವಾಗಿ ತಂತ್ರಾಂಶದಲ್ಲಿ ಕಾಲಕಾಲಕ್ಕೆ ಇಂದೀಕರಿಸಲು ಅವಕಾಶ ನೀಡಲಾಗಿದೆ.
3. ವಿದ್ಯಾರ್ಥಿಗಳಿಗೆ 9 ಅಂಕಿಗಳ ಗುರುತಿನ ಸಂಖ್ಯೆಯನ್ನು ನೀಡುವ ಮೂಲಕ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ವಿದ್ಯಾರ್ಥಿ ಮತ್ತು ಪೋಷಕರ ಸಮಗ್ರ ಮಾಹಿತಿಯನ್ನು ದಾಖಲಿಸಲು ಅವಕಾಶ ನೀಡಿದೆ. ಈ ಮಾಹಿತಿಯು ಮಗು ಮತ್ತು ಪೋಷಕರ ವಿಳಾಸ, ಜಾತಿ/ಧರ್ಮ, ಆಧಾರ್, ಬ್ಯಾಂಕ್ ಖಾತೆ ವಿವರಗಳು, ಜಾತಿ ಮತ್ತು ಆದಾಯ ಪ್ರಮಾಣಪತ್ರಗಳ ವಿವರಗಳು, ಅಂಗವೈಕಲ್ಯದ ಮಾಹಿತಿ ಇತ್ಯಾದಿ ವಿವರಗಳನ್ನು ಹೊಂದಿದೆ.
4. ವಿದ್ಯಾರ್ಥಿಯ ಕಲಿಕಾ ಸಾಧನೆ, ಹಾಜರಾತಿಯನ್ನು, ಉತ್ತೀರ್ಣತೆ ಇತ್ಯಾದಿಗಳನ್ನು ಕಾಲಕಾಲಕ್ಕೆ ಇಂದ್ರೀಕರಿಸಲು ಅವಕಾಶ ನೀಡಿದೆ.

Kiran Raghupathi

5. ವಿದ್ಯಾರ್ಥಿಯ ಗುರುತಿನ ಸಂಖ್ಯೆಯನ್ನು ಬಳಸಿ ತಂತ್ರಾಂಶದ ಸಹಾಯದಿಂದ ವಿದ್ಯಾರ್ಥಿಯ ವಿವರಗಳನ್ನು ಹುಡುಕಲು ಅವಕಾಶವಿದೆ.
6. ಶಾಲೆ, ಕ್ಲಸ್ಟರ್, ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ಪ್ರತ್ಯೇಕ ಲಾಗಿನ್ ನೀಡಲಾಗಿದ್ದು, ಎಲ್ಲಾ ಹಂತಗಳಲ್ಲಿಯೂ ಅನೇಕ ರೀತಿಯ ವರದಿಗಳನ್ನು, ಅಂಕಿಅಂಶಗಳನ್ನು ಪಡೆಯಲು ಅವಕಾಶ ನೀಡಲಾಗಿದೆ.
7. ವಿದ್ಯಾರ್ಥಿಯ ವರ್ಗಾವಣೆ ಪತ್ರಗಳನ್ನು ಆನ್‌ಲೈನ್ ಮೂಲಕವೇ ನೀಡುವ ಮತ್ತು ದಾಖಲಾತಿ ಮಾಡಿಕೊಳ್ಳುವ ಅವಕಾಶ ನೀಡಿದೆ.
8. ಶಾಲೆ ಬಿಟ್ಟ ಮಕ್ಕಳ ವಿವರಗಳನ್ನು ದಾಖಲಿಸಲು ಮತ್ತು ಅವರನ್ನು ಗುರುತಿಸಿ ಪುನಃ ಶಾಲೆಗೆ ಬರುವಂತೆ ಮಾಡಲು ತಂತ್ರಾಂಶದ ನೆರವು ಪಡೆಯಬಹುದು.
9. ವಿಶೇಷ ಅಗತ್ಯವುಳ್ಳ ಮಕ್ಕಳ ಸಮಗ್ರ ವಿವರಗಳು ಇಲ್ಲಿ ಲಭ್ಯವಿದ್ದು ಅವರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲು ನೆರವಾಗುತ್ತದೆ.
10. ಶಾಲಾ ಮಕ್ಕಳಿಗೆ ಸರ್ಕಾರದಿಂದ ದೊರೆಯುವ ಪ್ರೋತ್ಸಾಹಕಗಳು ಮತ್ತು ಸೌಲಭ್ಯಗಳಾದ ಪಠ್ಯಪುಸ್ತಕ, ಸಮವಸ್ತ್ರ, ವಿದ್ಯಾರ್ಥಿ ವೇತನ, ಬೈಸಿಕಲ್ ಇತ್ಯಾದಿ ಮಾಹಿತಿಗಳನ್ನು ನಿರ್ವಹಣೆ ಮಾಡಲೂ ಕೂಡಾ ಅವಕಾಶ ನೀಡಿದೆ.
11. ಎಸ್.ಎಸ್.ಎಲ್.ಸಿ. ಪರೀಕ್ಷಾ ಕಾರ್ಯವನ್ನು ಈ ತಂತ್ರಾಂಶದ ಮೂಲಕವೇ ನಿರ್ವಹಿಸಲಾಗುತ್ತಿದೆ.
12. ಶಾಲೆಗಳಿಗೆ ಅನುದಾನ ನೀಡಲು, ವಿವಿಧ ಸೌಲಭ್ಯಗಳನ್ನು ಒದಗಿಸಲು ಖಂಖಿಖ ಅಂಕಿಅಂಶಗಳನ್ನೇ ಬಳಸಿಕೊಳ್ಳಲಾಗುತ್ತಿದೆ.
13. ಖಂಖಿಖನಲ್ಲಿ ಲಭ್ಯವಿರುವ ಮಾಹಿತಿಗಳನ್ನಾಧರಿಸಿ ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಅನುಕೂಲವಾಗುತ್ತಿದೆ.
14. SATS ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಪಡಿಸುವುದು ಮತ್ತು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ದೈನಂದಿನ ಹಾಜರಾತಿಯನ್ನು ದಾಖಲಿಸುವ ಭವಿಷ್ಯದ ದೂರದೃಷ್ಟಿಯನ್ನೂ ಕೂಡಾ ಹೊಂದಿದೆ.

## ಕಲಿವಿನ ಫಲಗಳು

ಪ್ರತಿಯೊಂದು ಮಗುವೂ ಗುಣಮಟ್ಟದ ಶಿಕ್ಷಣವನ್ನು ಪಡೆಯಲು, ಮಕ್ಕಳ ಅವಶ್ಯಕ ಕಲಿಕಾಮಟ್ಟವನ್ನು ಗುರುತಿಸಿ ಅವರ ಸಾಧನೆಯನ್ನು ಕಾಲಕಾಲಕ್ಕೆ ಅಳೆಯಬೇಕೆಂಬುದನ್ನು ರಾಷ್ಟ್ರೀಯ ಶಿಕ್ಷಣ ನೀತಿ 1986ರ ವರದಿಯಲ್ಲಿ ಮತ್ತು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005ರಲ್ಲಿ ಪ್ರತಿಪಾದಿಸಲಾಗಿದೆ. ಪಠ್ಯಕ್ರಮದ ಆಶಯಗಳು ಮತ್ತು ಪಠ್ಯವಸ್ತುವನ್ನು ವಿವರವಾಗಿ ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು 2005ರಲ್ಲಿ ಪ್ರಸ್ತಾಪಿಸಿದರೂ ತರಗತಿವಾರು ಕಲಿಕಾ ಫಲಗಳನ್ನು ಹಾಗೂ ಪಠ್ಯಕ್ರಮದ ಆಶಯಗಳ ಬಗ್ಗೆ ಹೆಚ್ಚಿನ ಬೆಳಕನ್ನು ಹರಿಸಲು ಎನ್.ಸಿ.ಇ.ಆರ್.ಟಿ.ಯು 2016ರಲ್ಲಿ ಒಂದರಿಂದ ಎಂಟನೇ ತರಗತಿಗಳಿಗೆ ತರಗತಿವಾರು, ವಿಷಯವಾರು ಕಲಿಕಾ ಫಲಗಳನ್ನು ಹೊರತಂದಿದೆ. ಇದನ್ನಾದರಿಸಿ ಪ್ರಸ್ತುತ ರಾಜ್ಯ ಪಠ್ಯಕ್ರಮಕ್ಕನುಗುಣವಾಗಿ ಕಲಿಕಾ ಫಲಗಳನ್ನು ಪೋಷಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಪರಿಚಯಿಸುವಂತೆ ಪ್ರತ್ಯೇಕವಾಗಿ ಸಿದ್ಧಪಡಿಸಲಾಗಿದೆ. ಇವು ಡಿ.ಎಸ್.ಇ.ಆರ್.ಟಿ.ವೆಬ್‌ಸೈಟ್‌ನಲ್ಲಿ ಲಭ್ಯವಿವೆ.

ಕಲಿಕೆಯ ನಂತರ ಹೊರಹೊಮ್ಮಬೇಕೆಂದು ಅಪೇಕ್ಷಿಸಬಹುದಾದ ವರ್ತನಾ ಹೇಳಿಕೆಗಳನ್ನು ಕಲಿಕಾಫಲಗಳೆಂದು ಕರೆಯಬಹುದು ಅಥವಾ ವಿಷಯದ ಕಲಿಕೆಯ ನಂತರ ವಿದ್ಯಾರ್ಥಿಯು ಏನನ್ನು ತಿಳಿಯುತ್ತಾನೆ, ಯಾವ ಸಾಮರ್ಥ್ಯಗಳನ್ನು ಗಳಿಸುತ್ತಾನೆ ಎಂಬುದರ ಕುರಿತ ಹೇಳಿಕೆಗಳನ್ನು ಕಲಿಕಾ ಫಲಗಳು ಎಂದು ಕರೆಯಬಹುದು. ಶೈಕ್ಷಣಿಕ ಕಾರ್ಯಕ್ರಮಗಳ ಯಶಸ್ಸು ಪೋಷಕರ ಬೆಂಬಲ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಅವಲಂಬಿಸಿದೆ. ಆದ್ದರಿಂದ ಪೋಷಕರಿಗೆ ಶಾಲೆಯಲ್ಲಿ ನಡೆಯುವ ಚಟುವಟಿಕೆಗಳ ಸ್ಪಷ್ಟ ಅರಿವಿರಬೇಕಾಗುತ್ತದೆ.

## ಕಲಿಕಾ ಫಲಗಳ ಅರಿವು ಪೋಷಕರಿಗೆ ಏಕೆ?

- ಮಕ್ಕಳು ಶಾಲೆಯಲ್ಲಿ ಕಳೆಯುವ ಸಮಯಕ್ಕಿಂತ ಹೆಚ್ಚಿನ ವೇಳೆಯನ್ನು ಮನೆ ಮತ್ತು ಸಮುದಾಯದಲ್ಲಿ ಕಳೆಯುವುದರಿಂದ ಮಕ್ಕಳ ಕಲಿಕೆಯಲ್ಲಿ ಶಾಲೆಯ ಪಾತ್ರಕ್ಕಿಂತ ಪೋಷಕರ ಪಾತ್ರ ಮುಖ್ಯವಾದದ್ದು ಎಂಬುದರ ಅರಿವು ಮೂಡಿಸಲು;
- ಮಕ್ಕಳೊಂದಿಗೆ ಸೇರಿ ಶೈಕ್ಷಣಿಕ ಗುರಿಗಳನ್ನು ಸಾಧಿಸಲು ಮಾರ್ಗೋಪಾಯಗಳನ್ನು ಕಂಡುಕೊಳ್ಳಲು;

Kiran Raghupathi

- ಕಲಿಕಾ ಸಾಧನೆಯ ಅಂಕಿ ಅಂಶಗಳನ್ನು ತಿಳಿಯುವುದರ ಮೂಲಕ ವಿದ್ಯಾರ್ಥಿಗಳು ಕಲಿಕಾಮಾರ್ಗದಲ್ಲಿ ಇದ್ದಾರೆಯೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು;
- ಶಾಲೆ ಮತ್ತು ಶಿಕ್ಷಕರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಳ್ಳಲು;
- ಮಕ್ಕಳ ಕಲಿಕಾ ಸಾಮರ್ಥ್ಯಗಳು ಮತ್ತು ನ್ಯೂನ್ಯತೆಗಳನ್ನು ಅರಿತುಕೊಂಡು ಸೂಕ್ತ ಬೆಂಬಲ ನೀಡಲು;
- ಪೋಷಕರು ಮನೆಗಳಲ್ಲಿ ಕಲಿಕೆಗೆ ಪೂರಕವಾದ ಪರಿಸರವನ್ನು ಮತ್ತು ಅವಕಾಶಗಳನ್ನು ನಿರ್ಮಿಸಲು;
- ಕಲಿಕೆಯನ್ನು ಮೇಲ್ವಿಚಾರಣೆ ಮಾಡಲು, ಪ್ರೋತ್ಸಾಹಿಸಲು ಮತ್ತು ದೃಢೀಕರಿಸಲು;
- ಕಲಿಕೆಗೆ ಪೂರಕವಾಗುವ ಮಾನವ ಸಂಪನ್ಮೂಲವನ್ನು ಶಿಕ್ಷಕರು ಮತ್ತು ಶಾಲೆಗೆ ಒದಗಿಸಲು ಪೋಷಕರಿಗೆ ನೆರವಾಗಲು;
- ಶೈಕ್ಷಣಿಕ ಯೋಜನೆ/ ಚಟುವಟಿಕೆಗಳ ಯೋಜನೆ ತಯಾರಿಸುವಲ್ಲಿ ಸಹಕಾರವನ್ನು ನೀಡಲು
- ಶಿಕ್ಷಕರು ಮತ್ತು ಶಾಲೆಗೆ ಪೋಷಕರು ನೆರವಾಗುವಂತೆ ಮಾಡಲು;

**1ನೇ ತರಗತಿ ಕನ್ನಡ ವಿಷಯದ ಕಲಿಕಾ ಫಲಗಳು (ಉದಾಹರಣೆಗೆ)**

1. ಕನ್ನಡದಲ್ಲಿ ಪದ್ಯಗಳನ್ನು ಹಾಡುವರು ಮತ್ತು ಕಥೆಗಳನ್ನು ನಿರೂಪಣೆ ಮಾಡುವರು.
2. ಅಕ್ಷರಗಳ ಶಬ್ದಗಳನ್ನು ಗುರುತಿಸುವುದು ಮತ್ತು ಸಂತಸದಿಂದ ಪದಗಳನ್ನು ರಚಿಸುವರು.
3. ಪುಸ್ತಕಗಳಲ್ಲಿ, ತರಗತಿ ಕೋಣೆಗಳ ಗೋಡೆಗಳ ಮೇಲೆ ಸೂಚನಾ ಫಲಕಗಳಲ್ಲಿನ ಚಿತ್ರಗಳಲ್ಲಿ ಮುದ್ರಿತವಾದ ಸಾಹಿತ್ಯವನ್ನು ಓದುವರು.
4. ಕಥೆಗಳಿಗೆ ಪ್ರಶ್ನೆಗಳನ್ನು ಕೇಳುವರು ಮತ್ತು ಸರಳ ಪ್ರಶ್ನೆಗಳಿಗೆ ಉತ್ತರಿಸುವರು.
5. ಮಾರ್ಗದರ್ಶಿತ ಬರವಣಿಗೆಯನ್ನು ಕಲಿಯುವರು.

**ಪ್ರೇರಣಾ ಕಾರ್ಯಕ್ರಮ**

2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪ್ರಕಾರ ಜ್ಞಾನವನ್ನು ಪಡೆದುಕೊಳ್ಳಲು ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಾಗುವಲ್ಲಿ ಅವರು ಸೃಜನಶೀಲತೆಯೊಂದಿಗೆ ತೊಡಗುವಿಕೆ ಮುಖ್ಯವಾಗಿದೆ.ಪಠ್ಯಕ್ರಮದ ಆಚರಣೆಗಳಲ್ಲಿ ಮಕ್ಕಳ ಆಲೋಚನೆಗಳಿಗೆ, ಅವರ ಕುತೂಹಲ ಮತ್ತು ಪ್ರಶ್ನೆಗಳಿಗೆ ಧ್ವನಿಯೆತ್ತಲು ಸಮರ್ಪಕ ಅವಕಾಶ ಒದಗಿಸುವಂತೆ ಪ್ರಸ್ತಾಪಿಸಿದೆ. ಶಾಲೆಗಳಲ್ಲಿ ಭಾಷೆ ಮತ್ತು ಗಣಿತದ ಕಲಿಕೆಯ ಕುರಿತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005ರಲ್ಲಿ ಭಾಷಾ ಕೌಶಲಗಳ ಬೆಳವಣಿಗೆ, ಶಾಲಾ ವಿಷಯಗಳ ಕಲಿಕೆ, ಶಿಸ್ತು, ಚೌಕಟ್ಟಿನ ಆಚೆಗೆ ಮಾತನಾಡುವುದು ಹಾಗೂ ಆಲಿಸುವುದು, ಓದುವುದು ಮತ್ತು ಬರೆಯುವುದು, ಮೂಲ ಶಿಕ್ಷಣದ ತರಗತಿಗಳಿಂದ ಪ್ರೌಢಶಿಕ್ಷಣದ ತರಗತಿಗಳವರೆಗೆ ಮಕ್ಕಳ ಜ್ಞಾನವನ್ನು ಕಟ್ಟಿಕೊಳ್ಳುವಿಕೆಯಲ್ಲಿ ಭಾಷೆಯ ಅಡಿಪಾಯದ ಪಾತ್ರವನ್ನು ಗುರುತಿಸಿದೆ.

**ಈ ನಿಟ್ಟಿನಲ್ಲಿ ಪ್ರೇರಣಾ ಕಾರ್ಯಕ್ರಮವು ವಿದ್ಯಾರ್ಥಿಗಳ ಆಸಕ್ತಿಯನ್ನು ಹೆಚ್ಚಿಸಲು ಮತ್ತು ಇನ್ನಷ್ಟು ದೃಢಪಡಿಸಲು;**

- **"ಪುರಸ್ಕಾರ ಮತ್ತು ಪ್ರೇರಕ"ಗಳ** ಪ್ರಶಂಸೆಯ ಬುನಾದಿಯೊಂದಿಗೆ ನಿರಂತರವಾಗಿ ಶಾಲೆಗೆ ಹಾಜರಾಗಿ, ತರಗತಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಶ್ಯವಿರುವ ನಿರ್ಭಯ ವಾತಾವರಣ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಉದಾಹರಣೆಗೆ: ಮೂರು ಬಣ್ಣದ ಸ್ಟಾರ್‌ಗಳನ್ನು ನೀಡುವುದು.
  - **ಹಸಿರು ಬಣ್ಣದ ಸ್ಟಾರ್**– ವೈಯಕ್ತಿಕ ಸ್ವಚ್ಛತೆ, ತರಗತಿ ಸ್ವಚ್ಛತೆ, ಶಾಲಾ ಆವರಣದ ಸ್ವಚ್ಛತೆ, ಶಿಸ್ತು ಮತ್ತು ಪರಿಸರದ ಬಗೆಗಿನ ಕಾಳಜಿಗಾಗಿ
  - **ಬೆಳ್ಳಿ ಬಣ್ಣದ ಸ್ಟಾರ್ –** ಕಲಿಕಾ ಚಟುವಟಿಕೆಗಳು, ಭಾಗವಹಿಸುವಿಕೆ ಮತ್ತು ಮನೆ ಪಾಠಗಳ ನಿರ್ವಹಣೆಗಾಗಿ
  - **ಗುಲಾಬಿ ಬಣ್ಣದ ಸ್ಟಾರ್ –** ಸಹಪಠ್ಯದ ಚಟುವಟಿಕೆಗಳಲ್ಲಿ ಉತ್ತಮ ಸಾಧನೆಗಾಗಿ

Kiran Raghupathi

- ಸಹಪಾಠಿ ಕಲಿಕೆಯ ಸಿದ್ಧಾಂತದೊಂದಿಗೆ ಸುವೇಗ, ಸುಮೇರು ಮತ್ತು ರೈನ್‌ಬೋ ಅಭ್ಯಾಸ ಪುಸ್ತಕಗಳ ಸಹಾಯದಿಂದ ವಿದ್ಯಾರ್ಥಿಗಳಿಗೆ ಬರೆಯುವ ಕೌಶಲ್ಯವನ್ನು ಹೆಚ್ಚಿಸುವುದು, ದಿನನಿತ್ಯದ ಸನ್ನಿವೇಶಗಳಿಗೆ ಸಂಬಂಧಿಸಿದ ಲೆಕ್ಕಾಚಾರಗಳನ್ನು ಬಿಡಿಸುವ ಸಾಮರ್ಥ್ಯ ಮತ್ತು ಶಬ್ದಕೋಶ, ವ್ಯಾಕರಣ, ಭಾಷೆಯ ಬಳಕೆಯನ್ನು ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗಿದೆ.
- "ಕಲಿಕಾ ಪ್ರಯಾಣ–ಸಚಿತ್ರ ಪ್ರಗತಿ ನೋಟ"ದ ಹಾದಿಯಲ್ಲಿ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಗುರುತಿಸಿ, ಪೋಷಕರಿಗೆ ನಿರ್ದಿಷ್ಟ ಹಿಮ್ಮಾಹಿತಿಯನ್ನು ನೀಡುವಲ್ಲಿ ಸಹಕಾರಿಯಾಗಿದೆ.
- ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ವೃದ್ಧಿಸಲು ಶಿಕ್ಷಕರ ಮಾರ್ಗದರ್ಶನದೊಂದಿಗೆ ಜವಾಬ್ದಾರಿಮನೋಭಾವವನ್ನು ಬೆಳೆಸುವ ನಿಟ್ಟಿನಲ್ಲಿ **"ಪ್ರೇರಣಾ ಕ್ಲಬ್"** ಅನ್ನು ರಚಿಸಿರುವುದು ಈ ಕಾರ್ಯಕ್ರಮದ ಒಂದು ಅಂಗವಾಗಿದೆ.



## ಸ್ವಚ್ಛ ಭಾರತ ಸ್ವಚ್ಛ ವಿದ್ಯಾಲಯ

'ಸ್ವಚ್ಛ ಭಾರತ ಸ್ವಚ್ಛ ವಿದ್ಯಾಲಯ' ಒಂದು ರಾಷ್ಟ್ರೀಯ ಆಂದೋಲನ. ಯೂನಿಸೆಫ್‌ನ ನೆರವಿನೊಂದಿಗೆ ಈ ಕಾರ್ಯಕ್ರಮವು 2014ರಿಂದ ಪ್ರಾರಂಭವಾಯಿತು. ಭಾರತದಾದ್ಯಂತ ಹೆಚ್ಚಿನ ಮಕ್ಕಳು ಈ ಸೌಲಭ್ಯವನ್ನು ಪಡೆದುಕೊಂಡು ಯಶಸ್ಸನ್ನು ಗಳಿಸಬೇಕೆಂಬುದು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಆಶಯವಾಗಿದೆ. 1.3 ಮಿಲಿಯನ್ ಶಾಲೆಗಳಲ್ಲಿ 110 ಮಿಲಿಯನ್ ಮಕ್ಕಳು ಊಟಕ್ಕೆ ಮೊದಲು ಹಾಗೂ ಶೌಚಾಲಯದ ಬಳಕೆಯ ನಂತರ ಸಾಬೂನನ್ನು ಉಪಯೋಗಿಸಿ ಕೈ ತೊಳೆಯುವ ಅಭ್ಯಾಸವನ್ನು ಬೆಳೆಸಿಕೊಳ್ಳುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.

ಶಾಲೆಯು ಮಕ್ಕಳಿಗೆ ಜ್ಞಾನವನ್ನು ನೀಡುವುದಲ್ಲದೆ ಮಕ್ಕಳು, ಪೋಷಕರು ಮತ್ತು ಸಮುದಾಯ ಒಂದು ಕಡೆ ಸೇರಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಮಕ್ಕಳು ವಯಸ್ಕರಿಗಿಂತ ಬೇಗ ಕಲಿಯುತ್ತಾರೆ ಮತ್ತು ಸುಲಭವಾಗಿ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುತ್ತಾರೆ ಹಾಗೂ ಆದರ್ಶಪ್ರಾಯರಾಗುತ್ತಾರೆ. ಶಾಲೆಯಲ್ಲಿ ಕಲಿತ ನೈರ್ಮಲ್ಯದ ಅಭ್ಯಾಸಗಳನ್ನು ಸಮಾನ ವಯಸ್ಕರಿಗೆ, ಸಂಬಂಧಿಕರಿಗೆ ಮತ್ತು ಅವರು ಪೋಷಕರಾದ ಸಂದರ್ಭದಲ್ಲಿ ತಮ್ಮ ಮಕ್ಕಳಿಗೂ ವರ್ಗಾಯಿಸುತ್ತಾರೆ. ಸ್ವಚ್ಛ ವಿದ್ಯಾಲಯ ಕಾರ್ಯಕ್ರಮವು ಸರಳವಾದ ಮತ್ತು ಮಾಡಬಹುದಾದ ಪ್ರಕ್ರಿಯೆಯಾಗಿದ್ದು, ಶಾಲೆಯಲ್ಲಿ ಅನುಷ್ಠಾನಗೊಳ್ಳಲು ನೀತಿನಿರೂಪಕರು, ಜನಪ್ರತಿನಿಧಿಗಳು, ನಾಗರೀಕರು, ಪೋಷಕರು, ಸಮುದಾಯ, ಎಸ್.ಡಿ.ಎಂ.ಸಿ., ಸ್ಥಳೀಯ ಸರ್ಕಾರ, ಶಿಕ್ಷಕರು ಮತ್ತು ಸರ್ಕಾರೇತರ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಬೇಕಾದ ಅವಶ್ಯಕತೆಯಿದೆ.

ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ (RTE) 2009 ಅನ್ವಯ ಎಲ್ಲಾ ಶಾಲೆಗಳು ಕಡ್ಡಾಯವಾಗಿ ಶುದ್ಧವಾದ ಕುಡಿಯುವ ನೀರು ಮತ್ತು ಹೆಣ್ಣುಮಕ್ಕಳ ಪ್ರತ್ಯೇಕ ಶೌಚಾಲಯದ ಸೌಲಭ್ಯಗಳನ್ನು ಹೊಂದಿರಬೇಕು.

Kiran Raghupathi

## ಉದ್ದೇಶಗಳು

1. ಪ್ರತಿಯೊಂದು ಶಾಲೆಯಲ್ಲಿಯೂ ಮಧ್ಯಾಹ್ನದ ಊಟಕ್ಕಿಂತ ಮೊದಲು, ಶೌಚಾಲಯದ ಬಳಕೆಯ ನಂತರ ಹಾಗೂ ಇತರೆ ಸಂದಿಗ್ಧ ಪರಿಸ್ಥಿತಿಗಳಲ್ಲಿ ಸಾಬೂನನ್ನು ಬಳಸಿ ಕೈ ತೊಳೆಯುವುದನ್ನು ಸಂಸ್ಥಾ ಕಲಿಕೆಯಾಗಿ ಮಾಡುವುದು.
2. ಮಕ್ಕಳು ಉತ್ತಮ ನೈರ್ಮಲ್ಯದ ಅಭ್ಯಾಸಗಳನ್ನು ಬೆಳೆಸಿಕೊಂಡು ಆರೋಗ್ಯವಂತರಾಗಲು ಶಾಲೆಗಳಲ್ಲಿ ಚಟುವಟಿಕೆಗಳನ್ನು ಉತ್ತಮಪಡಿಸುವುದು.
3. ಶಾಲೆಯಲ್ಲಿ ಸ್ವಚ್ಛತೆ ಮತ್ತು ಕೈ ತೊಳೆಯುವ ಸೌಲಭ್ಯಗಳ ನಿರ್ಮಾಣ, ದುರಸ್ಥಿ ಮತ್ತು ನಿರ್ವಹಣೆಯ ಸಾಮರ್ಥ್ಯವನ್ನು ಹೆಚ್ಚಿಸುವುದು ಹಾಗೂ ಅಗತ್ಯ ಪರಿಕರಗಳನ್ನು ಒದಗಿಸುವುದು.
4. ಮಕ್ಕಳಲ್ಲಿ ನೈರ್ಮಲ್ಯಕ್ಕೆ ಸಂಬಂಧಿಸಿದ ಜೀವನಶೈಲಿಯನ್ನು ಬದಲಾಯಿಸುವುದರ ಮೂಲಕ ಅವರ ಕುಟುಂಬ ಮತ್ತು ಸಮುದಾಯದ ಆರೋಗ್ಯವನ್ನು ಕಾಪಾಡುವುದು.

## ಮಕ್ಕಳಿಗೆ ನೀರು, ಸ್ವಚ್ಛತೆ ಮತ್ತು ನೈರ್ಮಲ್ಯದಿಂದಾಗುವ ಅನುಕೂಲಗಳು

- ಸ್ವಚ್ಛ ಶಾಲೆಯು ಮಗು, ಶಾಲೆ ಮತ್ತು ಸಮುದಾಯದ ಘನತೆಯನ್ನು ಹೆಚ್ಚಿಸುತ್ತದೆ ಹಾಗೂ ಆರೋಗ್ಯಕರವಾದ ವಾತಾವರಣವನ್ನು ಕಾಪಾಡುತ್ತದೆ.
- ಶಾಲೆಯಲ್ಲಿ ಹೆಣ್ಣುಮಕ್ಕಳು ಮತ್ತು ವಿಶೇಷ ಚೇತನವುಳ್ಳ ಮಕ್ಕಳು ಪ್ರತ್ಯೇಕ ಹಾಗೂ ಸುರಕ್ಷಿತ ಶೌಚಾಲಯಗಳನ್ನು ಹೊಂದಲು ಸಹಾಯಕವಾಗುತ್ತದೆ.
- ಶಾಲೆಯಲ್ಲಿ ಹೆಣ್ಣುಮಕ್ಕಳ ಗೌರವ ಮತ್ತು ಗೌಪ್ಯತೆ ಹೆಚ್ಚಾಗುತ್ತದೆ ಹಾಗೂ ಋತುಚಕ್ರದ ಸಂದರ್ಭದಲ್ಲಿ ಬಳಸುವ ವಸ್ತುಗಳನ್ನು ಸರಿಯಾದ ಕ್ರಮದಲ್ಲಿ ವಿಲೇವಾರಿ ಮಾಡಲು ಸಹಾಯಕವಾಗುತ್ತದೆ.
- ಮಧ್ಯಾಹ್ನದ ಉಪಾಹಾರ ಸೇವನೆಯ ಮುಂಚೆ ಸಾಬೂನನ್ನು ಬಳಸಿಕೊಂಡು ಸೂಕ್ತ ವಿಧಾನದಲ್ಲಿ ಕೈಗಳನ್ನು ತೊಳೆಯುವುದರಿಂದ ಮಕ್ಕಳಿಗೆ ರೋಗ ಹರಡುವುದನ್ನು ನಿಯಂತ್ರಿಸಬಹುದಾಗಿದೆ.
- ಮಕ್ಕಳನ್ನು ರೋಗಗಳಿಂದ ಸಂರಕ್ಷಿಸುತ್ತದೆ ಹಾಗೂ ಸೂಕ್ಷ್ಮ ರೋಗಾಣುಗಳಿಂದಾಗುವ ಪೌಷ್ಟಿಕಾಂಶಗಳ ನಷ್ಟವನ್ನು ತಪ್ಪಿಸಿ ಮಕ್ಕಳು ಉತ್ತಮ ಪೋಷಕಾಂಶಗಳನ್ನು ಪಡೆಯಲು ಸಹಾಯಕವಾಗುತ್ತದೆ.
- ಶಾಲೆಯಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಉತ್ತಮಗೊಳ್ಳಲು ಸಹಾಯಕವಾಗುತ್ತದೆ ಮತ್ತು ಕಲಿಕೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗುತ್ತದೆ.
- ಶಾಲೆಯ ನೀರು ಮತ್ತು ನೈರ್ಮಲ್ಯದ ಕ್ಲಬ್‌ಗಳು, ಮಕ್ಕಳಲ್ಲಿ ಶೌಚಾಲಯ ಮತ್ತು ಕೈ ತೊಳೆಯುವ ಕೇಂದ್ರಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಕರ್ತವ್ಯವನ್ನು ಬೆಳೆಸುತ್ತದೆ ಹಾಗೂ ಲಿಂಗತಾರತಮ್ಯವನ್ನು ಹೋಗಲಾಡಿಸಲು ಸಹಾಯಕವಾಗುತ್ತದೆ.
- ನೀರು, ಶೌಚಾಲಯ ಮತ್ತು ನೈರ್ಮಲ್ಯದ ಸೌಲಭ್ಯಗಳನ್ನು ಬಳಸಲು ಸಹಾಯಕವಾದ ಶಿಶುಸ್ನೇಹಿ ವ್ಯವಸ್ಥೆಯನ್ನು ಒದಗಿಸುತ್ತದೆ ಹಾಗೂ ಆರ್ಥಿಕ ಮಿತವ್ಯಯ ಸಾಧಿಸಲು ಸಹಾಯಕವಾಗುತ್ತದೆ.
- ಕುಟುಂಬ ಮತ್ತು ಸಮುದಾಯದಲ್ಲಿ ಸ್ವಚ್ಛತೆಯ ಬದಲಾವಣೆಗೆ ಸ್ವಚ್ಛ ಶಾಲೆಯ ಪ್ರತಿಯೊಂದು ಮಗುವೂ ಮಧ್ಯವರ್ತಿಯಾಗುತ್ತದೆ.

## ಶಾಲಾ ಆಧಾರಿತ ಜೀವನಶೈಲಿಯ ಬದಲಾವಣೆ

- ಮಕ್ಕಳಿಗೆ ನೈರ್ಮಲ್ಯದ ನಿರ್ವಹಣೆಯ ಜ್ಞಾನವನ್ನು ನೀಡುವುದರಿಂದ ಜೀವನ ಶೈಲಿಯ ಬದಲಾವಣೆಗೆ ಸಹಾಯಕವಾಗುತ್ತದೆ. ನೈರ್ಮಲ್ಯದ ಜ್ಞಾನವು ನೈರ್ಮಲ್ಯದ ಕೌಶಲ್ಯವಾಗಿ ಮಾರ್ಪಾಡಾಗುವಂತೆ ಮಾಡುವ ಮೂಲಕ ಅವರ ಮನೋಧೋರಣೆಯನ್ನು ಬದಲಾಯಿಸಬಹುದು.
- ಶಾಲೆಯಲ್ಲಿ ಮಕ್ಕಳಿಂದ–ಮಕ್ಕಳಿಗೆ ನೈರ್ಮಲ್ಯ ಕುರಿತಾದ ತಿಳುವಳಿಕೆಯನ್ನು ನೀಡುವ ಕಾರ್ಯತಂತ್ರಗಳನ್ನು ರೂಪಿಸಬಹುದು. ಮಕ್ಕಳನ್ನು ಶಾಲೆ ಮತ್ತು ಮನೆಯಲ್ಲಿ ನೈರ್ಮಲ್ಯದ ವಾತಾವರಣವನ್ನು ಸುಧಾರಿಸುವ ಕೊಂಡಿಗಳಾಗಿ ಮಾರ್ಪಡಿಸಬಹುದು.

Kiran Raghupathi

- ಶಾಲೆಯಲ್ಲಿ ಸಾಂಪ್ರದಾಯಿಕ ರೀತಿಯ ನೈರ್ಮಲ್ಯ ಶಿಕ್ಷಣ ನೀಡುವುದಕ್ಕೆ ಬದಲಾಗಿ, ಜೀವನ ಕೌಶಲ್ಯಕ್ಕೆ ಸಂಬಂಧಿಸಿದಂತೆ ನೈರ್ಮಲ್ಯ ಶಿಕ್ಷಣ ನೀಡಿದಾಗ ಮಕ್ಕಳು ಉತ್ತಮ ನೈರ್ಮಲ್ಯ ಅಭ್ಯಾಸಗಳನ್ನು ಬೆಳೆಸಿಕೊಳ್ಳಲು ಸಹಾಯಕವಾಗುತ್ತದೆ.
- ಶಾಲೆಯಲ್ಲಿ ಮಕ್ಕಳಿಗೆ ಪರಸ್ಪರ ಪ್ರತಿಕ್ರಿಯಿಸುವ (interaction) ಅವಧಿಗಳನ್ನು ಏರ್ಪಡಿಸಿದಾಗ, ಜೀವನ ಕೌಶಲ್ಯಗಳು ಮಕ್ಕಳ ಮೂಲಕ ಗುಂಪಿನಲ್ಲಿ ಹಂಚಿಕೆಯಾಗಲು ನೆರವಾಗುತ್ತದೆ.
- ಮಕ್ಕಳ ಒಂದು ಗುಂಪಿಗೆ ಕೈತೊಳೆಯಲು ಸೋಪನ್ನು ನೀಡಿ, ಕೈತೊಳೆಯುವ ಅಭ್ಯಾಸವನ್ನು ಮಾಡಿಸಬಹುದು. ಹಾಗೆಯೇ ಶೌಚಾಲಯದ ನಿರ್ವಹಣೆಯ ಅಭ್ಯಾಸವನ್ನು ಮಕ್ಕಳಿಂದಲೇ ಶಾಲೆಯಲ್ಲಿ ಮಾಡಿಸಬಹುದು.
- ನೀರು, ಶುಚಿತ್ವ ಮತ್ತು ನೈರ್ಮಲ್ಯದ ವಿಚಾರಗಳನ್ನು ಪಠ್ಯಕ್ರಮದಲ್ಲಿ ಸೇರಿಸಿ, ಶಾಲೆಯಲ್ಲಿ ಇದನ್ನು ಶಿಕ್ಷಣದ ಭಾಗವಾಗಿ ಬೋಧನೆ ಮಾಡಬಹುದು. ಶಾಲೆಯ ಬೆಳಗಿನ ಪ್ರಾರ್ಥನಾ ವೇಳೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ/ ಹಾಡು/ಕಿರುನಾಟಕಗಳ ಮೂಲಕ ಅರಿವು ಮೂಡಿಸಬಹುದು.

ವಿದ್ಯಾರ್ಥಿಗಳ ಗುಂಪು ಮತ್ತು ಶಾಲಾ ಆರೋಗ್ಯ ಕ್ಲಬ್‌ಗಳು, ಸ್ವಚ್ಛತೆಯ ಸಂದೇಶಗಳನ್ನು ಬೇರೆ ವಿದ್ಯಾರ್ಥಿಗಳಿಗೆ ಮತ್ತು ಸಮುದಾಯಕ್ಕೆ ರವಾನೆ ಮಾಡುತ್ತವೆ. ಶಾಲೆಗಳಲ್ಲಿ ಶಾಲಾ ಸಂಸತ್ತು ಸ್ಥಾಪನೆಯಾಗಿದ್ದು, ಅಲ್ಲಿಯ ಸದಸ್ಯರು, ನಾಯಕರಾಗಿ ಸ್ವಚ್ಛತೆ ಮತ್ತು ನೈರ್ಮಲ್ಯದ ಬಗ್ಗೆ ಶಾಲೆಯಲ್ಲಿ ಇತರ ಮಕ್ಕಳಿಗೆ ಅರಿವನ್ನುಂಟು ಮಾಡುವ ಮೂಲಕ ಶಾಲೆಯ ಸ್ವಚ್ಛತೆ ಮತ್ತು ಪರಿಸರವನ್ನು ಕಾಪಾಡಿಕೊಳ್ಳಲು ಗಮನ ನೀಡುತ್ತದೆ.

## ಶಾಲಾ ಹಂತದಲ್ಲಿ ಶಿಕ್ಷಕರ ಬೆಂಬಲ

1) ದಿನನಿತ್ಯ ತರಗತಿಯಲ್ಲಿ ಬೋಧಿಸುವ ಪಠ್ಯಕ್ರಮದ ಜೊತೆಗೆ ನೈರ್ಮಲ್ಯದ ಸಂದೇಶಗಳನ್ನು ಸಂಯೋಜಿಸುವುದು. ಬೆಳಗಿನ ಪ್ರಾರ್ಥನಾ ವೇಳೆಯಲ್ಲಿ ಮತ್ತು ತರಗತಿಯಲ್ಲಿ ವಿಷಯಗಳನ್ನು ಬೋಧಿಸುವಾಗ ನೈರ್ಮಲ್ಯದ ಮಾಹಿತಿಯನ್ನು ತಿಳಿಸುವುದು.
2) ಕ್ರಮಬದ್ಧವಾಗಿ ಶೌಚಾಲಯ ಬಳಸುವ ಬಗ್ಗೆ, ಶುದ್ಧವಾದ ಕುಡಿಯುವ ನೀರಿನ ಬಗ್ಗೆ, ಮಧ್ಯಾಹ್ನದ ಊಟಕ್ಕೆ ಮುಂಚೆ ಮತ್ತು ಶೌಚಾಲಯದ ಬಳಕೆಯ ನಂತರ ಕೈ ತೊಳೆಯುವಂತೆ ಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡುವುದು.
3) ವಿದ್ಯಾರ್ಥಿಗಳಿಗೆ ಪ್ರೌಢಾವಸ್ಥೆಯ ಅವಧಿಯಲ್ಲಿ ಆಗುವ ಬದಲಾವಣೆಯ ಕುರಿತು ಮಾಹಿತಿಯನ್ನು ನೀಡುವುದು ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ತಮ್ಮ ಋತುಚಕ್ರದ ಅವಧಿಯಲ್ಲಿ ಶುಚಿಯಾಗಿರುವ ಬಗ್ಗೆ ಮಾಹಿತಿ ನೀಡುವುದು.
4) ಶಾಲೆಯ ನೀರು, ಸ್ವಚ್ಛತೆ ಮತ್ತು ನೈರ್ಮಲ್ಯದ ಸೌಲಭ್ಯಗಳ ಕ್ರಮಬದ್ಧ ಬಳಕೆ ಹಾಗೂ ನಿರ್ವಹಣೆ ಮಾಡಲು ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು. ಅಗತ್ಯ ನೈರ್ಮಲ್ಯದ ಪರಿಕರಗಳನ್ನು ಒದಗಿಸುವುದು ಹಾಗೂ ಸೂಕ್ತ ಮೇಲ್ವಿಚಾರಣೆ ಮಾಡುವುದು.
5) ಮಕ್ಕಳು ನೈರ್ಮಲ್ಯಕ್ಕೆ ಸಂಬಂಧಪಟ್ಟ ಉತ್ತಮ ಅಭ್ಯಾಸಗಳನ್ನು ಶಾಲೆ ಹಾಗೂ ಮನೆಯಲ್ಲಿ ಅನುಸರಿಸುವುದನ್ನು ಬೆಂಬಲಿಸುವುದು ಹಾಗೂ ಅವರನ್ನು ಗೌರವಿಸಿ ಆದರ್ಶಪ್ರಾಯ ಮಾದರಿಗಳಾಗಿ ಬಿಂಬಿಸುವುದು.
6) ಶಾಲೆಯಲ್ಲಿ ನೀರು, ಸ್ವಚ್ಛತೆ ಮತ್ತು ನೈರ್ಮಲ್ಯದ ಚಟುವಟಿಕೆಗಳ ನಿರ್ವಹಣೆಯ ಕುರಿತು ಶಿಕ್ಷಕರ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳುವುದು.
7) ನೀರು, ಸ್ವಚ್ಛತೆ ಮತ್ತು ನೈರ್ಮಲ್ಯದ ಕಾರ್ಯಕ್ರಮಗಳನ್ನು ಕುರಿತು ಯೋಜನೆಗಳನ್ನು ರೂಪಿಸುವಾಗ, ದೈನಂದಿನ ನಿರ್ವಹಣೆ ಮಾಡುವಾಗ ವಿದ್ಯಾರ್ಥಿಗಳು ಹಾಗೂ ಪೋಷಕರೊಡನೆ ಸಮಾಲೋಚನೆ ಮಾಡುವುದು ಹಾಗೂ ಅವರು ಮೇಲುಸ್ತುವಾರಿಯಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವುದು.
8) ವಿದ್ಯಾರ್ಥಿಗಳಿಗೆ ಪ್ರತಿವರ್ಷ ಆರೋಗ್ಯ ತಪಾಸಣೆಯನ್ನು ಆಯೋಜಿಸುವುದು ಮತ್ತು ಜಂತುಹುಳು ನಿವಾರಣಾ ಔಷಧಿಗಳ ನಿರ್ವಹಣೆ ಮಾಡುವುದು ಹಾಗೂ ಅಡುಗೆಕೋಣೆಯ ನೈರ್ಮಲ್ಯ ಉತ್ತಮ ಗುಣಮಟ್ಟದಲ್ಲಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

## ಪೋಷಕರು, ಎಸ್.ಡಿ.ಎಂ.ಸಿ. ಮತ್ತು ಸಮುದಾಯದ ಸದಸ್ಯರ ಬೆಂಬಲ

1) ಶಾಲೆಯ ಸ್ವಚ್ಛ ವಿದ್ಯಾಲಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಮತ್ತು ಕೊಡುಗೆ ನೀಡುವುದು ಹಾಗೂ ಈ ಕುರಿತು ಯೋಜನೆ ತಯಾರಿಸುವಾಗ ಸಹಾಯ ಮಾಡುವುದು.

Kiran Raghupathi

2) ನೀರು, ಸ್ವಚ್ಛತೆ ಮತ್ತು ನೈರ್ಮಲ್ಯದ ಸೌಲಭ್ಯಗಳನ್ನು ಶಾಲೆಗಳಿಗೆ ಒದಗಿಸಲು ಗ್ರಾವ ಪಂಚಾಯತ್/ಸಮುದಾಯ/ಸಂಘಸಂಸ್ಥೆ/ಇತರರ ಸಹಾಯವನ್ನು ಪಡೆಯುವುದು. ಇವುಗಳ ಅಳವಡಿಕೆ, ಕಾಯನಿರ್ವಹಣೆ, ಮತ್ತು ಮೇಲುಸ್ತುವಾರಿ ಮಾಡುವುದು.
3) ಶಾಲೆಗಳಲ್ಲಿ ಮಕ್ಕಳ ನಿರಂತರ ಹಾಜರಾತಿ, ವಿಶೇಷವಾಗಿ ಹೆಣ್ಣುಮಕ್ಕಳು, ವಿಶೇಷ ಚೇತನ ಮಕ್ಕಳು ಹಾಗೂ ವಿವಿಧ ಸಮುದಾಯದ ಮಕ್ಕಳ ಹಾಜರಾತಿಯನ್ನು ಉತ್ತೇಜಿಸುವುದು.
4) ಶಾಲೆ, ಮನೆ ಮತ್ತು ಸಮುದಾಯದಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಅಭ್ಯಾಸಗಳು, ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು ಹಾಗೂ ಜಾಗೃತಿ ಮೂಡಿಸುವುದು.
5) ಶಾಲೆಯಲ್ಲಿ ನೀರು, ಸ್ವಚ್ಛತೆ ಮತ್ತು ನೈರ್ಮಲ್ಯದ ಚಟುವಟಿಕೆಗಳ ಕಾರ್ಯನಿರ್ವಹಣೆ ಮತ್ತು ಇವುಗಳನ್ನು ಸದಾ ಸ್ವಚ್ಛವಾಗಿಡಲು ಪೋಷಕರು, ಸಮುದಾಯ ಮತ್ತು ಸರ್ಕಾರಿ ಅಧಿಕಾರಿಗಳು ಜೊತೆಗೂಡಿ ನಿಧಿಯನ್ನು ಸ್ಥಾಪಿಸುವುದು.

Kiran Raghupathi

# ಅಧ್ಯಾಯ–13

## ಸಂವೇದ – ವೀಡಿಯೋ ತರಗತಿಗಳು

(2020–21ನೇ ಸಾಲಿನಲ್ಲಿ 4ರಿಂದ 10ನೇ ತರಗತಿಯವರೆಗೆ ವೀಡಿಯೋ ಪಾಠಗಳನ್ನು ಸಿದ್ಧಪಡಿಸಿ, ದೂರದರ್ಶನ ಚಂದನವಾಹಿನಿಯಲ್ಲಿ ಪ್ರಸಾರ ಮತ್ತು ಯೂ–ಟ್ಯೂಬ್‌ನಲ್ಲಿ ಲಭ್ಯತೆ)

### ಉದ್ದೇಶಗಳು

**ಈ ಅಧ್ಯಾಯದ ನಂತರ ಸದಸ್ಯರು;**

- ಸಂವೇದ– ವೀಡಿಯೋ ತರಗತಿಗಳ ಅಗತ್ಯವನ್ನು ಅರ್ಥ ಮಾಡಿಕೊಳ್ಳುವರು
- ತರಗತಿ–ಪ್ರಸಾರದ ದಿನಗಳು ಮತ್ತು ವೇಳೆ/ಅವಧಿ ಕುರಿತು ತಿಳಿದುಕೊಳ್ಳುವರು
- ಪ್ರಸಾರವಾದ ಪಾಠಗಳ ಲಭ್ಯತೆಯ ಕುರಿತು ಮಾಹಿತಿ ಹೊಂದುವರು


ಕೋವಿಡ್ – 19ರಿಂದಾಗಿ ಶಾಲೆಗಳು 2020–21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭಗೊಳ್ಳದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಸ್ವಕಲಿಕಾ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ವೀಡಿಯೋ ಪಾಠಗಳನ್ನು ಸಿದ್ಧಪಡಿಸಿ, ವಿದ್ಯಾರ್ಥಿಗಳೆಲ್ಲರಿಗೂ ದೊರಕುವಂತೆ ದೂರದರ್ಶನ ಚಂದನವಾಹಿನಿ ಮೂಲಕ ಪ್ರಸಾರಗೊಳಿಸುವ ಕಾರ್ಯಕ್ರಮವನ್ನು ಆರಂಭಿಸಲಾಯಿತು.




8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ವೀಡಿಯೋ ಪಾಠಗಳನ್ನು ದಿನಾಂಕ: 20/07/2020ರಿಂದ ಪ್ರತಿ ದಿನ 4 ಗಂಟೆಗಳ ಅವಧಿಯಲ್ಲಿ 8 ಪಾಠಗಳನ್ನು ಪ್ರಸಾರ ಮಾಡಲಾಗುತ್ತಿದೆ. ಪ್ರತಿ ಪಾಠದಅವಧಿ 30 ನಿಮಿಷಗಳು. ಬೆಳಗಿನ ಅಧಿವೇಶನ 9.30ರಿಂದ 11.00 ಮತ್ತು 11.30ರಿಂದ 12.00 ಗಂಟೆ, ಮಧ್ಯಾಹ್ನದ ಅಧಿವೇಶನ 3.00ರಿಂದ 4.30 ಮತ್ತು 5.00ರಿಂದ 5.30, ವಾರದಲ್ಲಿ 5 ದಿನ **ಸೋಮವಾರದಿಂದ ಶುಕ್ರವಾರದವರೆಗೆ** ಪ್ರಸಾರ ಮಾಡಲಾಗುತ್ತಿದೆ.




5ರಿಂದ 7ನೇ ತರಗತಿವರೆಗೆ ದೂರದರ್ಶನ ಚಂದನವಾಹಿನಿಯಲ್ಲಿ ಪ್ರತಿ ದಿನ 2 ಗಂಟೆಗಳ ಅವಧಿಯಲ್ಲಿ 4 ಪಾಠಗಳನ್ನು ಪ್ರಸಾರ ಮಾಡಲು ಕ್ರಮ ವಹಿಸಲಾಗುತ್ತಿದೆ. ಪ್ರತಿ ಪಾಠದ ಅವಧಿ 30 ನಿಮಿಷಗಳು. ಸೋಮವಾರದಿಂದ ಶುಕ್ರವಾರದವರೆಗೆ 20 ಪಾಠಗಳನ್ನು ಪ್ರಸಾರ ಮಾಡಲಾಗುವುದು.




1. 8, 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳಿಗೆ ಇಲ್ಲಿಯವರೆಗೆ ನಡೆದಿರುವ ಪಾಠಗಳನ್ನು ದೀಕ್ಷಾ ಪೋರ್ಟಲ್‌ನಲ್ಲಿ, ಮಕ್ಕಳವಾಣಿ, ಡಿಡಿ ಚಂದನವಾಹಿನಿಯ ಯೂ–ಟ್ಯೂಬ್ ಮತ್ತು ಡಿ.ಎಸ್.ಇ.ಆರ್.ಟಿ. ಯೂ–ಟ್ಯೂಬ್‌ಚಾನಲ್ ಜ್ಞಾನದೀಪದಲ್ಲಿ ಸಹ ಅಪ್‌ಲೋಡ್ ಮಾಡಲಾಗಿದೆ.

2. 4, 5, 6 ಮತ್ತು 7ನೇ ತರಗತಿಯಒಟ್ಟು 121 ವೀಡಿಯೋ ಪಾಠಗಳು ಡಿ.ಎಸ್.ಇ.ಆರ್.ಟಿ. ಯೂ–ಟ್ಯೂಬ್‌ಚಾನಲ್ ಜ್ಞಾನದೀಪ, ಮಕ್ಕಳವಾಣಿ ಯೂ–ಟ್ಯೂಬ್ ಹಾಗೂ ದೀಕ್ಷಾ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ.




Kiran Raghupathi

# ಅಧ್ಯಾಯ 14

## ಸಮನ್ವಯ ಶಿಕ್ಷಣ – ಉದ್ದೇಶ ಮತ್ತು ಪ್ರಾಮುಖ್ಯತೆ

### ಉದ್ದೇಶಗಳು

### ಈ ಅಧ್ಯಾಯದ ನಂತರ ಸದಸ್ಯರು;

- ಸಮನ್ವಯ ಶಿಕ್ಷಣದ ಅರ್ಥ ಮತ್ತು ಪ್ರಾಮುಖ್ಯತೆಯನ್ನುತಿಳಿದುಕೊಳ್ಳುವರು.
- ಶಾಲೆಗಳು ಒದಗಿಸಬೇಕಾದ ಸೌಲಭ್ಯಗಳನ್ನು ಅರಿತುಕೊಳ್ಳುವರು.
- ಸರ್ಕಾರದಿಂದ ವಿಶೇಷ ಅಗತ್ಯವುಳ್ಳವರಿಗೆ ದೊರೆಯುವ ಸೌಲಭ್ಯಗಳ ಮಾಹಿತಿ ಹೊಂದುವರು.

### ಸಮನ್ವಯ ಶಿಕ್ಷಣದ ಅರ್ಥ

ಸಾಮಾನ್ಯ ಶಾಲೆಯಲ್ಲಿ ಸಾಮಾನ್ಯ ಮಕ್ಕಳೊಂದಿಗೆ ಮತ್ತು ಸಾಮಾನ್ಯ ಪಠ್ಯಕ್ರಮದೊಂದಿಗೆ ವಿಶೇಷ ಅಗತ್ಯವುಳ್ಳ ಮಗು ಕಲಿಯುವ ಎಲ್ಲಾ ಚಟುವಟಿಕೆಯೇ ಸಮನ್ವಯ ಶಿಕ್ಷಣ.

ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಸಾಮಾನ್ಯ ಶಾಲಾ ತರಗತಿಗಳಲ್ಲಿ ಇತರ ಮಕ್ಕಳಿಗೆ ನೀಡುವ ಶೈಕ್ಷಣಿಕ ಅನುಭವಗಳನ್ನು ಒದಗಿಸುವುದು. ಕೆಲವು ವಿಶೇಷ ಕ್ರಮಗಳು ಮತ್ತು ನಿಯಮಗಳನ್ನು ಅನುಸರಿಸಿ ಪೂರಕ ಚಟುವಟಿಕೆಗಳನ್ನು ಕೈಗೊಂಡು ಇತರೆ ಮಕ್ಕಳಂತೆಯೇ ಈ ಮಕ್ಕಳೂ ಸಹ ಕಲಿಯಲು ಸಾಧ್ಯವಾಗುವಂತೆ ಮಾಡುವ ಪ್ರಯತ್ನವೇ ಸಮನ್ವಯ ಶಿಕ್ಷಣ.

ನ್ಯೂನತೆಯುಳ್ಳ ಮಕ್ಕಳು ಸಹ ಇತರೆ ಮಕ್ಕಳಂತೆ ಬೆಳೆಯಲು, ವಿಕಾಸ ಹೊಂದಲು, ಸಹಾಯಕವಾಗಲು, ಕನಿಷ್ಠತಮ ನಿಬಂಧನೆಗಳನ್ನು, ಪರಿಸರವನ್ನು ಒದಗಿಸುವುದೇ ಸಮನ್ವಯ ಶಿಕ್ಷಣ.

ಸಮನ್ವಯ ಶಿಕ್ಷಣವು ಎಲ್ಲಾ ರೀತಿಯ ಮಕ್ಕಳನ್ನು ಒಳಗೊಂಡಿರುತ್ತದೆ. ಆದರೆ ತೀವ್ರ ಬುದ್ಧಿಮಾಂದ್ಯ, ಮೆದುಳಿನ ಪಾರ್ಶ್ವವಾಯು, ಆಟಿಸಂ ಮತ್ತು ಬಹುವಿಧದ ಅಂಗವಿಕಲತೆ ಹೊಂದಿದವರನ್ನು ಸಮನ್ವಯ ಶಿಕ್ಷಣದ ಅಡಿಯಲ್ಲಿ ತರಲು ಸಾಧ್ಯವಾಗಲಾರದು. ಏಕೆಂದರೆ ಇಂತಹ ಮಕ್ಕಳ ಅಗತ್ಯ ಭಿನ್ನವಾಗಿರುತ್ತದೆ. ಇವರನ್ನು ಇತರೆ ಮಕ್ಕಳೊಂದಿಗೆ ಸಮನ್ವಯಗೊಳಿಸಿ ಶಿಕ್ಷಣ ನೀಡಲು ಸಾಧ್ಯವಿಲ್ಲ. ಆದ್ದರಿಂದ ಇಂತಹ ಮಕ್ಕಳಿಗೆ ಗೃಹಾಧಾರಿತ ಶಿಕ್ಷಣ ನೀಡುವ ಮೂಲಕ ಅವರಿಗೆ ಜೀವನದ ಕೆಲವು ಪ್ರಾಥಮಿಕ ಕೌಶಲ್ಯಗಳನ್ನು ಬೆಳೆಸಲು ಗಮನ ಹರಿಸಬಹುದಾಗಿದೆ.

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅಗತ್ಯವಾದ ಎಲ್ಲಾ ರೀತಿಯ ಕಲಿಕೋಪಕರಣ ಹಾಗೂ ಸಾಧನ ಸಾಮಗ್ರಿಗಳನ್ನು ಒದಗಿಸಲು ಸಾಧ್ಯವಾಗದಿರಬಹುದು, ಆದಾಗ್ಯೂ ಸ್ಥಳೀಯ ಲಭ್ಯ ಉಪಕರಣ ಬಳಸಿ ಎಲ್ಲಾ ಮಕ್ಕಳಿಗೆ ಕಲಿಕೆ ಉಂಟು ಮಾಡಬಹುದು. ಸ್ಥೂಲವಾಗಿ ಎಲ್ಲಾ ಚಟುವಟಿಕೆಗಳನ್ನು ಎಲ್ಲಾ ಮಕ್ಕಳಿಗೆ ಒದಗಿಸಿ ಮಗುವನ್ನು ಒಂದು ನಿರೀಕ್ಷಿತ ಮಟ್ಟಕ್ಕೆ ತಲುಪುವಂತೆ ವ್ಯವಸ್ಥೆಗೊಳಿಸುವುದು ಸಮನ್ವಯ ಶಿಕ್ಷಣದ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಮಗುವೂ ಭಾಗವಹಿಸುವಂತಹ ಚಟುವಟಿಕೆಗಳನ್ನು ರೂಪಿಸುವುದು ಸವಾಲಾದರೂ – ಕಾರ್ಯರೂಪಕ್ಕೆ ತರುವುದು ಅನಿವಾರ್ಯವಾಗಿದೆ.

Kiran Raghupathi

## ಉದ್ದೇಶಗಳು

- ವಿಶೇಷ ಅಗತ್ಯವುಳ್ಳ ಮಕ್ಕಳೂ ಸಾಮಾನ್ಯ ಮಕ್ಕಳಂತೆ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಅವಕಾಶ ಕಲ್ಪಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಮತ್ತು ಇತರ ಮಕ್ಕಳ ನಡುವೆ ಆರೋಗ್ಯಕರ ಸಾಮಾಜಿಕ ಸಂಬಂಧಗಳನ್ನು ಬೆಳೆಸುವ ಮೂಲಕ ಈ ಮಕ್ಕಳನ್ನೂ ಸಮಾಜದ ಮುಖ್ಯವಾಹಿನಿಗೆ ತರುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳ ಬಗ್ಗೆ ಎಲ್ಲರೂ ಧನಾತ್ಮಕ ಮನೋಭಾವ ಬೆಳೆಸಿಕೊಳ್ಳುವಂತೆ ಪ್ರೇರೇಪಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳ ಜೀವನಮಟ್ಟ ಉನ್ನತಗೊಳಿಸಿ, ಅವರ ಪೌರ ಹಕ್ಕುಗಳನ್ನು ಭದ್ರಪಡಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳು ಸಾಮಾನ್ಯ ಧೈರ್ಯ ಮತ್ತು ಆತ್ಮವಿಶ್ವಾಸದಿಂದ ಎದುರಿಸಿ ಸ್ವಾವಲಂಬಿ ಜೀವನ ನಡೆಸಲು ಸಾಧ್ಯವಾಗುವಂತೆ ಮಾಡುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕೇವಲ ಅನುಕಂಪ ತೋರದೆ ಸಮಾನ ಅವಕಾಶ ಕಲ್ಪಿಸುವ ಮನೋಭಾವ ಬೆಳೆಸುವುದು.
- ಪ್ರತಿ ಮಗುವು ತನ್ನಲ್ಲಿ ಹುದುಗಿರುವ ಸಾಮರ್ಥ್ಯಗಳ ಸಂಪೂರ್ಣ ಸಿದ್ಧಿಗೆ ಶಿಶು ಸ್ನೇಹಿ ಕಲಿಕೆಯ ಪರಿಸರವನ್ನು ಒದಗಿಸುವುದು.

## ಶಾಲೆಗಳು ದೊರಕಿಸಬೇಕಾದ ಸೌಲಭ್ಯಗಳು

ಶಾಲೆಯು ಎಲ್ಲಾ ಮಕ್ಕಳಿಗೂ ಅಂದರೆ, ಶ್ರವಣ ನ್ಯೂನತೆ, ದೃಷ್ಟಿ ನ್ಯೂನತೆ, ಬೌದ್ಧಿಕ ನ್ಯೂನತೆ, ಕಲಿಕಾ ನ್ಯೂನತೆ, ದೈಹಿಕ ನ್ಯೂನತೆ, ಹೀಗೆ ಅವರವರ ಅಗತ್ಯತೆಗಳನ್ನು ಆಧರಿಸಿ, ದಾಖಲಾತಿಗೆ ಅವಕಾಶ ನೀಡಿ ಸಮಾನವಾದ ಶಿಕ್ಷಣ ನೀಡುವ ಕೇಂದ್ರವಾಗಿದೆ. ವಿಶೇಷ ಅಗತ್ಯವುಳ್ಳ ಮಕ್ಕಳೂ ಸಹ ಇತರೆ ಮಕ್ಕಳೊಡನೆ ಸಮಾನವಾಗಿ ಬೆರೆತು ನಲಿಯಲು ಅವಕಾಶ ಮಾಡಿಕೊಡುವುದು. ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶೈಕ್ಷಣಿಕ ಅಗತ್ಯತೆಗಳನ್ನು ಸಾಮಾನ್ಯ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕ/ಕಿಯರಿಂದಲೇ ಪೂರೈಸುವುದರ ಮೂಲಕ ಎಲ್ಲಾ ಮಕ್ಕಳಿಗೂ ಶಿಕ್ಷಣ ನೀಡುವುದೇ ಶಾಲೆಯ ಕಾರ್ಯವಾಗಿದೆ.

- ಸ್ವತಂತ್ರವಾಗಿ ಕಲಿಯಲು ಮಕ್ಕಳ ಅವಶ್ಯಕತೆಗೆ ತಕ್ಕ ಹಾಗೆ ಸಾಧನೋಪಕರಣಗಳನ್ನು ಒದಗಿಸುವುದು.
- ಕ್ರೀಡೆ, ಚಿತ್ರಕಲೆಯಂತಹ ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳೂ ಪಾಲ್ಗೊಳ್ಳುವಂತೆ ಭೌತಿಕ ಪರಿಸರದಲ್ಲಿ ಹೊಂದಾಣಿಕೆ ಮಾಡುವುದು.
- ಎಲ್ಲಾ ಮಕ್ಕಳಿಗೂ ವೈದ್ಯಕೀಯ ಶಿಬಿರ ಏರ್ಪಡಿಸುವುದು, ತಡೆರಹಿತ ವಾತಾವರಣ ನಿರ್ಮಾಣ ಮಾಡುವುದು.
- ಮಕ್ಕಳಿಗೆ ಅಗತ್ಯವಿರುವ 'ಆರ್ಥಿಕ ನೆರವು, ಪೋಷಣೆ ಭತ್ಯೆ, ಪ್ರತಿ ವಿದ್ಯಾರ್ಥಿಗಳಿಗೆ ವೇತನ ದೊರಕಿಸಿಕೊಡುವುದು.
- ಶಾಲಾ ಸಮುದಾಯದ ಸಭೆ ಏರ್ಪಡಿಸಿ, ಮಕ್ಕಳ ಕಲಿಕೆ/ಪ್ರಗತಿ ಬಗ್ಗೆ ಚರ್ಚಿಸುವುದು.
- ಎಲ್ಲಾ ಮಕ್ಕಳಿಗೂ ಕಲಿಯಲು ಅನುಕೂಲವಾಗುವ ಕಲಿಕೋಪಕರಣಗಳ ಪಠ್ಯ ಪುಸ್ತಕ/ಪಾಠೋಪಕರಣಗಳ ವ್ಯವಸ್ಥೆ ಮಾಡುವುದು.
- ಎಲ್ಲಾ ಮಕ್ಕಳಿಗೂ ಏಕ ರೀತಿಯ ತರಗತಿಗಳು ಹಾಗೂ ಬೋಧನಾ ಅವಕಾಶ ನೀಡುವುದು.
- ವೈಯಕ್ತಿಕ ಬೋಧನೆಗೆ ಅವಕಾಶ ಬೇಕಾಗುವ ಸಂದರ್ಭದಲ್ಲಿ ವಿಶೇಷ ತರಗತಿ ವ್ಯವಸ್ಥೆ ಇರಬೇಕು.

Kiran Raghupathi

1. **ವಿಕಲಚೇತನ ಮಕ್ಕಳ ದಾಖಲಾತಿ**

- ಎಲ್ಲಾ ರೀತಿಯ ವಿಕಲತೆ ಹೊಂದಿರುವ ಮಕ್ಕಳಿಗೆ ದಾಖಲಾತಿ ಅವಕಾಶ
- ಸಾಮಾನ್ಯ ಮಕ್ಕಳಂತೆ ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಸಾಮಾನ್ಯ ಶಾಲೆಯಲ್ಲಿ ದಾಖಲಾತಿ.
- ಎಲ್ಲಾ ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಸರಕಾರಿ ಸವಲತ್ತುಗಳನ್ನು ನೀಡುವುದು.
- ಸಾಮಾನ್ಯ ಶಾಲೆಯಲ್ಲಿ ಆಸನ ವ್ಯವಸ್ಥೆ.

2. **ಕಲಿಕಾ ಸ್ನೇಹಮಯಿ ಪರಿಸರ**

- ಸಾಮಾನ್ಯ ಮಕ್ಕಳಂತೆ ಕಲಿಯಲು ಅವಕಾಶ
- ಸಂಪನ್ಮೂಲ ಶಿಕ್ಷಕರಿಂದ ಶಿಕ್ಷಣ
- ನಲಿಯುತ್ತ ಕಲಿಯಲು ಸ್ನೇಹಮಯಿ ಪರಿಸರ
- ಸಂತಸದಾಯಕ ಕಲಿಕೆಗಾಗಿ ತರಗತಿಯ ಹೊಂದಾಣಿಕೆ
- ವಿಭಿನ್ನ ಸಾಮರ್ಥ್ಯವುಳ್ಳ ಮಗುವಿಗೆ ವಿಭಿನ್ನ ಚಟುವಟಿಕೆ
- ಸ್ಥಳೀಯ ಎನ್.ಜಿ.ಓ.ಗಳ ಬೆಂಬಲ ಪಡೆಯುವುದು
- ವಿವಿಧ ನ್ಯೂನತೆಯ ಮಕ್ಕಳ ಪಟ್ಟಿ ತಯಾರಿಕೆ

3. **ವೈದ್ಯಕೀಯ ಮೌಲ್ಯಾಂಕನ ಶಿಬಿರ**

- 6ರಿಂದ 16 ವರ್ಷ ವಯೋಮಾನದ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಿಬಿರದಲ್ಲಿ ಭಾಗವಹಿಸಲು ಅವಕಾಶ
- ನುರಿತ ವೈದ್ಯರಿಂದ ಶಿಬಿರದಲ್ಲಿ ಮಾರ್ಗದರ್ಶನ
- ಸಾಧನ ಸಾಮಗ್ರಿಗಾಗಿ ಅರ್ಹ ಫಲಾನುಭವಿಗಳ ಆಯ್ಕೆ
- ಶಿಬಿರಾರ್ಥಿಗಳಿಗೆ ಊಟ, ಚಹಾ, ಪ್ರಯಾಣ ಭತ್ಯೆಗೆ ಅವಕಾಶ

4. **ಸಾಧನ ಸಾಮಗ್ರಿಗಳ ಪೂರೈಕೆ**

- ವೈದ್ಯಕೀಯ ಶಿಬಿರದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಾಧನ ಸಾಮಗ್ರಿ ಪೂರೈಕೆ
- ಮಗುವಿನ ವಿಕಲತೆ ಆಧರಿಸಿ ಸಾಮಗ್ರಿ ಪೂರೈಕೆ
- ಸಾಮಗ್ರಿ ಪೂರೈಸಿದ ಎನ್.ಜಿ.ಓ.ದಿಂದ ಸಾಮಗ್ರಿ ಬಳಕೆಗೆ ಮಾರ್ಗದರ್ಶನ
- ಪ್ರತಿ 2 ವರ್ಷಕ್ಕೊಮ್ಮೆ ನಿರ್ದಿಷ್ಟ ಸಾಮಗ್ರಿ ಪಡೆಯಲು ಅವಕಾಶ
- ವಿಶೇಷ ಅಗತ್ಯವುಳ್ಳ ಮಕ್ಕಳು ಸಾಧನ ಸಲಕರಣೆಗಳನ್ನು ಬಳಸಲು ಪ್ರೇರೇಪಣೆ

5. **ಹೆಣ್ಣು ಮಕ್ಕಳಿಗೆ ವಿಶೇಷ ಭತ್ಯೆ**

9 ಮತ್ತು 10 ನೇ ತರಗತಿಯಲ್ಲಿಕಲಿಯುತ್ತಿರುವ ಎಲ್ಲಾ ವಿಶೇಷ ಅಗತ್ಯವುಳ್ಳ ಪ್ರತಿ ವಿದ್ಯಾರ್ಥಿನಿಗೆ ತಲಾ ಮಾಹೆಗೆ ರೂ.200/–ರಂತೆ 10 ತಿಂಗಳಿಗೆ ರೂ.2000/– ಅನುದಾನ

Kiran Raghupathi

6. **ರೀಡರ್ ಭತ್ಯೆ (9 & 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ)**

- ಪೂರ್ಣ ಅಂಧ ವಿದ್ಯಾರ್ಥಿಗಳಿಗೆ ರೀಡರ್ ಭತ್ಯೆಯನ್ನು ನೀಡಲಾಗುವುದು.
- ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ.250/–ರಂತೆಒಟ್ಟು 10 ತಿಂಗಳಿಗೆ ರೂ.2500/– ಅನುದಾನವನ್ನು ವಿದ್ಯಾರ್ಥಿಯ ಖಾತೆಗೆ ಜಮಾ ಮಾಡಲಾಗುವುದು.

7. **ಸಾರಿಗೆ ಭತ್ಯೆ**

ಶಾಲೆಗೆ ಬೇರೆ ಸ್ಥಳಗಳಿಂದ ಬಸ್/ಆಟೋ/ಟೆಂಪೋಗಳಲ್ಲಿ ಬರುವ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಮಾಸಿಕ ರೂ.250/– ಒಟ್ಟು 10 ತಿಂಗಳಿಗೆ ರೂ.2500/– ಅನುದಾನವನ್ನು ವಿದ್ಯಾರ್ಥಿಯ ಖಾತೆಗೆ ಜಮಾ ಮಾಡಲಾಗುವುದು.

8. **ಬೆಂಗಾವಲು ಭತ್ಯೆ**

- ಗಂಭೀರ ನ್ಯೂನತೆಯ ವಿಕಲಚೇತನ ಮಕ್ಕಳ ಪೈಕಿ ದೃಷ್ಟಿ, ಬುದ್ಧಿ ನ್ಯೂನತೆ, ಮೆದುಳಿನ ಪಾರ್ಶ್ವವಾಯು ಮತ್ತು ಬಹುನ್ಯೂನತೆಯ ಮಕ್ಕಳಿಗೆ ರೂ. 250/–ರಂತೆ ಒಟ್ಟು 10 ತಿಂಗಳಿಗೆ ರೂ. 2500/– ಅನುದಾನವನ್ನು ಬೆಂಗಾವಲು ಭತ್ಯೆಯಾಗಿ ವಿದ್ಯಾರ್ಥಿಯ ಖಾತೆಗೆ ಜಮಾ ಮಾಡಲಾಗುವುದು.
- ಇಂತಹ ಮಕ್ಕಳನ್ನು ಶಾಲೆಗಳಿಗೆ ಅಥವಾ ಸಂಪನ್ಮೂಲ ಕೇಂದ್ರಗಳಿಗೆ ಕರೆತರುವ ಸಲುವಾಗಿ ಪೋಷಕರಿಗೆ/ಸ್ವಯಂ ಸೇವಕರಿಗೆ ಬೆಂಗಾವಲು ಭತ್ಯೆಯನ್ನು ನೇರವಾಗಿ ಆವರ ಖಾತೆಗೆ ನೀಡಲಾಗುವುದು.

## ಬಲವರ್ಧನೆ ಚಟುವಟಿಕೆಗಳು

### 1. ವಿಶ್ವ ಅಂಗವಿಕಲರ ದಿನಾಚರಣೆ

ವಿಶ್ವ ಅಂಗವಿಕಲರ ದಿನಾಚರಣೆಯನ್ನು ಆಚರಿಸಲು ಪ್ರತಿ ಶೈಕ್ಷಣಿಕ ಬ್ಲಾಕ್‌ನ ಒಂದು ಕೇಂದ್ರ ಪ್ರೌಢಶಾಲೆಯಲ್ಲಿ ಎಲ್ಲಾ ವಿಶೇಷ ಅಗತ್ಯತೆಯುಳ್ಳ ಮಕ್ಕಳು ಭಾಗವಹಿಸುವಂತೆ ರೂ.5000/– ಪ್ರತಿ ಬ್ಲಾಕ್‌ಗೆ ನೀಡಲಾಗುತ್ತದೆ.

### 2. ಸಂಪನ್ಮೂಲ ಕೊಠಡಿ ಬಲವರ್ಧನೆ

- ಬ್ಲಾಕ್‌ಗೊಂದು ಸಂಪನ್ಮೂಲ ಕೊಠಡಿಗೆ ಅವಕಾಶ
- ನಿಗದಿಪಡಿಸಿದ ವಿಶೇಷ ಮಕ್ಕಳು ಸಂಪನ್ಮೂಲ ಕೊಠಡಿಗೆ ಬರಲು ಅವಕಾಶ
- ಐ.ಇ.ಆರ್.ಟಿ. ಹಾಗೂ ನುರಿತ ವೈದ್ಯರಿಂದ ಸಂಪನ್ಮೂಲ ಕೊಠಡಿಯಲ್ಲಿ ಫಿಜಿಯೋಥೆರಪಿ

### 3. ಇತರೆ ಇಲಾಖೆಗಳಿಂದ ಸಿಗುವ ಸೌಲಭ್ಯಗಳು

**ಮಾಸಾಶನ:** ವಿಶೇಷ ಅಗತ್ಯವುಳ್ಳವರಿಗೆ ಸರ್ಕಾರದ ವತಿಯಿಂದ ಮಾಸಿಕವಾಗಿ ಅವರ ಅಂಗವೈಕಲ್ಯತೆಗೆ ಅನುಗುಣವಾಗಿ ಮಾಸಿಕ ರೂ.500/– ಹಾಗೂ ರೂ.1200/–ಗಳನ್ನು ನೀಡಲಾಗುತ್ತದೆ.

**ವಿಶೇಷ ಅಗತ್ಯವುಳ್ಳವರಿಗೆ ಗುರುತಿನ ಚೀಟಿ:** ವಿಶೇಷ ಅಗತ್ಯವುಳ್ಳವರು ಯಾವುದೇ ಸವಲತ್ತು ಪಡೆಯಬೇಕಾದರೆ ಅವರಅಂಗವೈಕಲ್ಯತೆ ಶೇ.40ಕ್ಕಿಂತ ಜಾಸ್ತಿ ಇರಬೇಕು. ಈ ದೃಢೀಕರಣ ಇಲ್ಲದೇ ಯಾವುದೇ ಸರ್ಕಾರದ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಈ ಪ್ರಮಾಣಪತ್ರವನ್ನು ಪ್ರಾಥಮಿಕ ಆರೋಗ್ಯಕೇಂದ್ರದ ವೈದ್ಯಾಧಿಕಾರಿಗಳು/ ತಾಲ್ಲೂಕು ವೈದ್ಯಾಧಿಕಾರಿಗಳ ನೇತೃತ್ವದ ತಂಡ ಮತ್ತು ಜಿಲ್ಲಾ ವೈದ್ಯಾಧಿಕಾರಿಗಳ ನೇತೃತ್ವದ ತಂಡದಿಂದ ಪರಿಶೀಲನೆಗೆ ಒಳಪಟ್ಟ ನಂತರ ಪ್ರಮಾಣಪತ್ರಗಳನ್ನು ನೀಡಲಾಗುತ್ತದೆ.

Kiran Raghupathi

**ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಹಾಗೂ ಪ್ರೋತ್ಸಾಹ ಬಹುಮಾನ ಯೋಜನೆ:** 1ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ರೂ.100/– ರಿಂದ 600/– ರವರೆಗೆ ಪ್ರತಿ ಮಾಹೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದ್ದು, ಅವರ ಬ್ಯಾಂಕ್ ಖಾತೆಗೆ ವಾರ್ಷಿಕ ಮೊತ್ತವನ್ನು ಜಮಾ ಮಾಡಲಾಗುತ್ತದೆ. ಪಬ್ಲಿಕ್ ಪರೀಕ್ಷೆಗಳಲ್ಲಿ ಶೇ.60ಕ್ಕಿಂತ ಹೆಚ್ಚಿಗೆ ಅಂಕ ಪಡೆದ ಪ್ರತಿಭಾನ್ವಿತ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

**ಉನ್ನತ ಶಿಕ್ಷಣ ಪಡೆಯುವ ವಿಶೇಷ ಅಗತ್ಯವುಳ್ಳವರಿಗೆ ಶುಲ್ಕ ಮರುಪಾವತಿ:** ಎಸ್‌ಎಸ್‌ಎಲ್‌ಸಿ ನಂತರದ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿ ಮಾಡಲಾಗುವುದು.

**ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್:** ಎಸ್‌ಎಸ್‌ಎಲ್‌ಸಿ ಹಾಗೂ ನಂತರದ ವ್ಯಾಸಂಗ ಮಾಡುವ ದೃಷ್ಟಿ ನ್ಯೂನತೆಯುಳ್ಳ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಒದಗಿಸಲಾಗುವುದು.

**ವಿಶೇಷ ಅಗತ್ಯವುಳ್ಳ ಯಂತ್ರಚಾಲಿತ ದ್ವಿಚಕ್ರವಾಹನ:** 20 ರಿಂದ 60 ವರ್ಷ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ ವಿಶೇಷ ಅಗತ್ಯವುಳ್ಳವರಿಗೆ ಅನುಕೂಲವಾಗುವಂತೆ ಜೀವಿತಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ನೀಡಲಾಗುವುದು.

**ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ:**ರಾಜ್ಯ ಸರ್ಕಾರವು ಸಿ ಮತ್ತು ಡಿ ಹುದ್ದೆಗಳಲ್ಲಿ 5 ಪ್ರತಿಶತ ಮತ್ತು ಎ ಮತ್ತು ಬಿ ಹುದ್ದೆಗಳಲ್ಲಿ 3 ಪ್ರತಿಶತ ಹುದ್ದೆಗಳನ್ನು ವಿಶೇಷ ಅಗತ್ಯವುಳ್ಳವರಿಗಾಗಿ ಮೀಸಲಿರಿಸಿದೆ.

**ನಿರುದ್ಯೋಗಿ ವಿಕಲಚೇತನರಿಗೆ ನಿರುದ್ಯೋಗ ಭತ್ಯೆ:** ಎಸ್‌ಎಸ್‌ಎಲ್‌ಸಿ ಹಾಗೂ ಹೆಚ್ಚಿನ ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿ ವಿಶೇಷ ಅಗತ್ಯವುಳ್ಳವರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಿಕೊಂಡು 2 ವರ್ಷವಾಗಿದ್ದಲ್ಲಿ ಮಾಹೆಯಾನ ರೂ.1000/–ಗಳ ನಿರುದ್ಯೋಗ ಭತ್ಯೆ ನೀಡಲಾಗುವುದು. ಮಾಸಾಶನ ಪಡೆಯುವವರು ಇದಕ್ಕೆ ಅರ್ಹರಿರುವುದಿಲ್ಲ.

**ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ/ತಾಯಿ/ಪೋಷಕರಿಗೆ ಸಾಮೂಹಿಕ ವಿಮಾಯೋಜನೆ:** ಭಾರತೀಯಜೀವ ವಿಮಾ ನಿಗಮದ ಮೂಲಕ ಬುದ್ಧಿನ್ಯೂನತೆಯುಳ್ಳ ಮಕ್ಕಳ ತಂದೆ/ತಾಯಿ/ಪೋಷಕರಿಗೆ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ನಿರಾಮಯಆರೋಗ್ಯ ವಿಮಾಯೋಜನೆಯಡಿ ನೋಂದಾಯಿಸಿಕೊಂಡ ಬುದ್ಧಿನ್ಯೂನತೆ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗನ್ಯೂನತೆಗೆ ಒಳಗಾದ ವಿಶೇಷ ಅಗತ್ಯವುಳ್ಳವರು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

Kiran Raghupathi

# ಅಧ್ಯಾಯ–15

## ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (ಟಾಲ್ಪ್)

**ಉದ್ದೇಶಗಳು**

**ಈ ಅಧ್ಯಾಯದನಂತರ ಸದಸ್ಯರು;**

- ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮದ ಉದ್ದೇಶವನ್ನು ಅರ್ಥ ಮಾಡಿಕೊಳ್ಳುವರು
- ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮದ ಉಪಕ್ರಮಗಳ ಕುರಿತು ಮಾಹಿತಿ ಹೊಂದುವರು





ಸರ್ಕಾರಿ ಪ್ರೌಢಶಾಲೆಗಳಲ್ಲಿನ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಉತ್ತಮಪಡಿಸುವ ಉದ್ದೇಶದಿಂದ ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮವನ್ನು 2016–17ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಶಿಕ್ಷಕರಿಗೆ ಮಾಹಿತಿತಂತ್ರಜ್ಞಾನದ ಅನುಕೂಲಗಳನ್ನು ಶಾಲೆಗಳಲ್ಲಿ ಬಳಸುವ ಕುರಿತುತರಬೇತಿ, ಇ–ಕಂಟೆಂಟ್‌ಗಳ ಲಭ್ಯತೆ ಮತ್ತು ಮಾಹಿತಿ ತಂತ್ರಜ್ಞಾನ ಉಪಕರಣಗಳನ್ನು ಒದಗಿಸುವುದು ಈ ಯೋಜನೆಯ ಉಪಕ್ರಮಗಳಾಗಿವೆ.

1. **ಶಿಕ್ಷಕರ ತರಬೇತಿ:–** ಮಾಹಿತಿ ತಂತ್ರಜ್ಞಾನ ಉಪಕರಣಗಳ ಬಳಕೆ, ಇ–ಕಂಟೆಂಟ್‌ಗಳನ್ನು ತರಗತಿ ಪ್ರಕ್ರಿಯೆಯಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳುವ ಕುರಿತು ಸರ್ಕಾರಿ ಪ್ರೌಢಶಾಲಾ ಶಿಕ್ಷಕರುಗಳಿಗೆ ಮೊದಲ ಹಂತದಲ್ಲಿ 10 ದಿನಗಳ ಇಂಡಕ್ಷನ್ ತರಬೇತಿ ಮತ್ತು ಎರಡನೇ ಹಂತದಲ್ಲಿ ರಿಫ್ರೆಶರ್ ತರಬೇತಿ ನೀಡಲಾಗುತ್ತಿದೆ.
2. **ಇ–ಕಂಟೆಂಟ್ ಲಭ್ಯತೆ:–** ತರಬೇತಿ ಹೊಂದಿದ ಶಿಕ್ಷಕರ ನೆರವಿನಿಂದ ಮುಕ್ತ ಮೂಲಗಳಲ್ಲಿ ಲಭ್ಯ ಇ–ಕಂಟೆಂಟ್‌ಗಳನ್ನು ತರಗತಿ ಅಗತ್ಯಗಳಿಗೆ ಅನುಗುಣವಾಗಿ ಸ್ಥಳೀಕರಣ, ಭಾಷಾಂತರಗೊಳಿಸಿ, ದೀಕ್ಷಾ ಪೋರ್ಟಲ್‌ನಲ್ಲಿ ಅಳವಡಿಸಲಾಗುತ್ತಿದೆ. ಇದುವರೆಗೆ 10,000ಕ್ಕೂ ಹೆಚ್ಚು ಇ–ಸಂಪನ್ಮೂಲಗಳನ್ನು ಬಳಕೆಗೆ ಒದಗಿಸಲಾಗಿದೆ.
3. **ಮಾಹಿತಿ ತಂತ್ರಜ್ಞಾನ ಉಪಕರಣಗಳ ಪೂರೈಕೆ:–** ತರಬೇತಿ ಹೊಂದಿದ ಶಿಕ್ಷಕರು, ತರಬೇತಿಯಲ್ಲಿ ಗಳಿಸಿದ ಕೌಶಲಗಳು ಮತ್ತು ದೀಕ್ಷಾ ಪೋರ್ಟಲ್‌ನಲ್ಲಿ ಲಭ್ಯ ಇ–ಸಂಪನ್ಮೂಲಗಳನ್ನು ತರಗತಿಗಳಲ್ಲಿ ಸಮರ್ಥವಾಗಿ ಬಳಸಿಕೊಳ್ಳಲು ಪ್ರತಿ ಶಾಲೆಗೆ ಒಂದು ಲ್ಯಾಪ್‌ಟಾಪ್, ಒಂದು ಪ್ರೊಜೆಕ್ಟರ್ ಮತ್ತು ವಿದ್ಯಾರ್ಥಿಗಳ ಬಳಕೆಗಾಗಿ ಕಂಪ್ಯೂಟರ್ ಲ್ಯಾಬ್ ಸ್ಥಾಪಿಸಲಾಗುತ್ತಿದೆ.



Kiran Raghupathi

# ಅಧ್ಯಾಯ–16

## ನೈಸರ್ಗಿಕ ವಿಪತ್ತುಗಳ ಹಿನ್ನೆಲೆಯಲ್ಲಿ ಶಾಲಾ ಸಿದ್ಧತೆ ಮತ್ತು ಮಕ್ಕಳ ಸುರಕ್ಷತೆ

**ಉದ್ದೇಶಗಳು**

**ಈ ಅಧ್ಯಾಯದನಂತರ ಸದಸ್ಯರು;**

- ಕೋವಿಡ್–19 ಹಿನ್ನೆಲೆಯಲ್ಲಿ ಶಾಲಾ ಸಿದ್ಧತಾ ಕ್ರಮಗಳನ್ನು ತಿಳಿದುಕೊಳ್ಳುವರು.
- ಶಾಲಾ ಅವಧಿ/ಪಾಳಿ ಪದ್ಧತಿಯನ್ನು ಅರ್ಥ ಮಾಡಿಕೊಳ್ಳುವರು.
- ಮಕ್ಕಳನ್ನು ಶಾಲೆಗೆ ಕಳುಹಿಸುವಾಗ ಪೋಷಕರು ವಹಿಸಬೇಕಾದ ಕ್ರಮಗಳ ಕುರಿತು ಅರಿತುಕೊಳ್ಳುವರು.
- ಕೋವಿಡ್–19 ಸೋಂಕು ತಡೆಗಟ್ಟುವ ಚಟುವಟಿಕೆಗಳ ನಿರ್ವಹಣೆ.
- ವಸತಿ ನಿಲಯ/ಶಾಲೆಗಳಲ್ಲಿ ವಹಿಸಬೇಕಾದ ಕ್ರಮಗಳ ಕುರಿತು ಮಾಹಿತಿ ಹೊಂದುವರು.
- ಕೋವಿಡ್–19 ಸೋಂಕು ತಗುಲದಂತೆ ವಹಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿದುಕೊಳ್ಳುವರು.
- ಮಧ್ಯಾಹ್ನದ ಉಪಹಾರ ಯೋಜನೆಯ ಅನುಷ್ಠಾನ ಕ್ರಮಗಳನ್ನು ಅರಿತುಕೊಳ್ಳುವರು.

ರಾಜ್ಯದಲ್ಲಿ ಶಾಲೆಗಳಿಗೆ 2020ರ ಮಾರ್ಚ್ 3ನೇ ವಾರದಿಂದ ಕೋವಿಡ್ 19 ಕಾರಣದಿಂದಾಗಿ ರಜೆ ನೀಡಿದ್ದು, ಬಹುತೇಕ ಶಾಲೆಗಳನ್ನು ಎರಡು ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಬಳಸಲಾಗಿರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಶಾಲೆಗಳನ್ನು ಕ್ವಾರಂಟೈನ್ ಕೇಂದ್ರಗಳನ್ನಾಗಿ ಸಹ ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಶಾಲೆಗಳನ್ನು ಪುನರಾರಂಭಿಸುವ ಮೊದಲು ಶಾಲೆಗಳು ಸೋಂಕಿನಿಂದ ಮುಕ್ತವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಕೋವಿಡ್–19ರ ಸೋಂಕು ನಿವಾರಣೆಗೆ ಸಂಬಂಧಿಸಿದಂತೆ ಎಲ್ಲಾ ಶಾಲೆಗಳಲ್ಲಿ ಸೋಂಕು ನಿವಾರಕ ರಾಸಾಯನಿಕಗಳನ್ನು ಬಳಸಿ ಸ್ವಚ್ಛಗೊಳಿಸಬೇಕಿರುವುದು ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸುರಕ್ಷತೆಯ ದೃಷ್ಟಿಯಿಂದ ಅಗತ್ಯವಾದ ಕ್ರಮವಾಗಿದೆ.

- ಶಾಲೆಯಲ್ಲಿನ ಕೊಠಡಿ ಹಾಗೂ ಉಪಕರಣಗಳನ್ನು ಬಳಕೆಗೆ ಮುನ್ನ ಸ್ವಚ್ಛಗೊಳಿಸುವ ಅಗತ್ಯವಿರುತ್ತದೆ. ಶಾಲಾಪ್ರಾರಂಭಕ್ಕೂ ಒಂದು ವಾರ ಮೊದಲು ಇಡೀ ಶಾಲೆಯನ್ನು ಸ್ವಚ್ಛಗೊಳಿಸುವ ಕಾರ್ಯನಿರ್ವಹಿಸಬೇಕಿರುತ್ತದೆ.
- ಶಾಲೆಯ ಇಡೀ ಆವರಣವನ್ನು, ಕಾಂಪೌಂಡ್, ಮುಖ್ಯದ್ವಾರ/ಗೇಟ್ ಮುಂತಾದವುಗಳನ್ನು ಗುಡಿಸಿ ಸ್ವಚ್ಛಗೊಳಿಸತಕ್ಕದ್ದು. ಶಾಲಾ ಕಟ್ಟಡದ ಮೇಲ್ಛಾವಣಿಯ ಮೇಲೆ ಸಂಗ್ರಹವಾಗಿರುವ ಎಲೆ ಮುಂತಾದ ಕಸಕಡ್ಡಿಗಳನ್ನು ಸಹ ಗುಡಿಸಿ, ನೀರು ನಿಲ್ಲದಂತೆ ಅಗತ್ಯ ಕ್ರಮವಹಿಸತಕ್ಕದ್ದು.
- ಮೊದಲು ಶಾಲೆಯಲ್ಲಿನ ಎಲ್ಲ ತರಗತಿ ಕೋಣೆಗಳು, ಮುಖ್ಯೋಪಾಧ್ಯಾಯರ ಕೊಠಡಿ, ಶಿಕ್ಷಕರ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್, ಕ್ರೀಡಾಕೊಠಡಿ ಇತ್ಯಾದಿಯಾಗಿ ಎಲ್ಲಾ ಕೊಠಡಿಗಳಲ್ಲಿನ ಧೂಳನ್ನು ಗುಡಿಸುವ ಮೂಲಕ ಸ್ವಚ್ಛಗೊಳಿಸಬೇಕು. ನಂತರ ಸೋಂಕು ನಿವಾರಕವನ್ನು ಬೆರಸಿದ ನೀರಿನಿಂದ ತೊಳೆದು ಸ್ವಚ್ಛಗೊಳಿಸಬೇಕು ಮತ್ತು ಶಾಲಾ ಒಳ ಆವರಣದಲ್ಲಿ ಮುಕ್ತವಾಗಿ ಗಾಳಿ ಸಂಚಾರಕ್ಕೆ ಅವಕಾಶ ಕಲ್ಪಿಸತಕ್ಕದ್ದು.
- ಕೊಠಡಿಗಳನ್ನು ಸ್ವಚ್ಛಗೊಳಿಸುವ ಜೊತೆಗೆ ಕೊಠಡಿಗಳಲ್ಲಿನ ಎಲ್ಲಾ ಪೀಠೋಪಕರಣಗಳು (ಕುರ್ಚಿ, ಮೇಜು, ಡೆಸ್ಕ್, ಬೆಂಚು ಇತ್ಯಾದಿ), ಪಾಠೋಪಕರಣಗಳು, ಬಾಗಿಲು, ಕಿಟಕಿ, ಅವುಗಳಿಗೆ ಅಳವಡಿಸಿರುವ ಹಿಡಿ, ಚಿಲಕ, ಸರಳುಗಳು, ಇತ್ಯಾದಿಗಳನ್ನು ನೀರಿನಿಂದ ತೊಳೆದು ಸ್ವಚ್ಛಗೊಳಿಸಿ ಸ್ಯಾನಿಟೈಸ್ ಮಾಡುವುದು.
- ಶಾಲೆಯಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ಭಾಗವಾದ ನೀರಿನ ಸಂಪು, ಓವರ್‌ಹೆಡ್ ಟ್ಯಾಂಕ್‌ನಲ್ಲಿ ಈಗಾಗಲೇ ಸಂಗ್ರಹವಾಗಿರುವ ನೀರನ್ನು ಖಾಲಿ ಮಾಡಿ, ಕ್ಲೋರಿನ್ ಆಧಾರಿತ ಶುಚಿಗೊಳಿಸುವ ಪೌಡರ್‌ನಿಂದ ಅವುಗಳನ್ನು ಸ್ವಚ್ಛಗೊಳಿಸತಕ್ಕದ್ದು. ಸಂಪು ಮತ್ತು ಓವರ್‌ಹೆಡ್ ಟ್ಯಾಂಕನ್ನು ಒಂದೆರಡು ದಿನ ಚೆನ್ನಾಗಿ ಒಣಗಿಸಿ ನಂತರ ಸ್ವಚ್ಛ ನೀರನ್ನು ತುಂಬಿಸುವುದು.

Kiran Raghupathi

* ಶಾಲೆಯಲ್ಲಿನ ಶೌಚಾಲಯ ಮತ್ತು ಮೂತ್ರಾಲಯಗಳನ್ನು ಸಹ ಮಾರ್ಜಕಗಳನ್ನು (ಡಿಟರ್ಜೆಂಟ್) ಬಳಸಿ ಸ್ವಚ್ಛಗೊಳಿಸತಕ್ಕದು ಮತ್ತು ಈ ಸೌಲಭ್ಯಗಳು ವಿದ್ಯಾರ್ಥಿಗಳ ಬಳಕೆಗೆ ಲಭ್ಯವಾಗುವಂತೆ ಅವುಗಳನ್ನು ಅಣಿಗೊಳಿಸತಕ್ಕದ್ದು.
* ಶಾಲೆಯನ್ನು ಪುನರಾರಂಭಿಸಲು ಶಾಲೆಯನ್ನು ಸ್ವಚ್ಛಗೊಳಿಸುವ ಕಾರ್ಯಕ್ಕಾಗಿ ಸ್ಥಳೀಯ ಗ್ರಾಮಪಂಚಾಯಿತಿ ಅಥವಾ ನಗರ ಪ್ರದೇಶಗಳಾಗಿದ್ದಲ್ಲಿ ಆಯಾ ನಗರಸಭೆಯನ್ನು ಸಂಪರ್ಕಿಸಿ ಅವರ ನೆರವನ್ನು ಪಡೆದುಕೊಳ್ಳಬಹುದು.

## ಶಾಲಾ ಅವಧಿ/ಪಾಳಿ ಪದ್ಧತಿಯನ್ನುಅನುಸರಿಸುವ ಕುರಿತು

ಕೋವಿಡ್–19 ತಡೆಗಟ್ಟಲು ನಿಗದಿತ ನಿರ್ವಹಣಾ ಪದ್ಧತಿಯ (ಎಸ್.ಓ.ಪಿ) ಪ್ರಕಾರ ವ್ಯಕ್ತಿಗಳ ನಡುವೆ ಕನಿಷ್ಠ 6 ಅಡಿಗಳ ಅಂತರ ಕಾಯ್ದುಕೊಳ್ಳುವುದು ಅಗತ್ಯವಿರುತ್ತದೆ. ಒಂದು ನಿಗದಿತ ಸಮಯದಲ್ಲಿ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಸಾಮಾಜಿಕ ಅಂತರ ಕಾಯ್ದುಕೊಂಡು ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸಬಹುದು ಎಂಬುದನ್ನುಆಯಾ ಶಾಲೆಯ ಶಿಕ್ಷಕರು ಈ ಕೆಳಗಿನ ಅಂಶಗಳನ್ನು ಆಧರಿಸಿ ನಿರ್ಧರಿಸಬಹುದಾಗಿದೆ.

* ಶಾಲೆಯಲ್ಲಿ ಒಟ್ಟು ಕೊಠಡಿಗಳ ಸಂಖ್ಯೆ
* ಪ್ರತಿ ಕೊಠಡಿಯ ವಿಸ್ತೀರ್ಣ – ಸಾಮಾಜಿಕ ಅಂತರದೊಂದಿಗೆ ಪ್ರತಿಕೊಠಡಿಯಲ್ಲಿ ಕೂಡಿಸಬಹುದಾದ ವಿದ್ಯಾರ್ಥಿಗಳ ಸಂಖ್ಯೆ
* ಶಾಲೆಯಲ್ಲಿನ ಒಟ್ಟು ತರಗತಿಗಳ ಸಂಖ್ಯೆ
* ಶಾಲಾ ಆವರಣದಲ್ಲಿ ಲಭ್ಯವಿರುವ ಇತರೆ ಶಾಲೆಯಲ್ಲಿನ ಕೊಠಡಿಗಳು
* ಶಾಲಾ ಆವರಣದಲ್ಲಿ ತೆರೆದ ಪ್ರದೇಶವನ್ನು ಸಹ ಬಳಸಿಕೊಳ್ಳಬಹುದು
* ವಿದ್ಯಾರ್ಥಿಗಳು ಶಾಲೆಗೆ ಹಾಜರಾಗಲು ಅವರ ಪಾಲಕರ ಅನುಮತಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು

ಸಾಮಾಜಿಕ ಅಂತರ ಕಾಯ್ದುಕೊಂಡು ಶಾಲೆಯನ್ನು ನಡೆಸುವ ಕುರಿತು ಈ ಕೆಳಗಿನ ಆಯ್ಕೆಗಳನ್ನು ಪರಿಗಣಿಸಬಹುದಾಗಿದೆ.

**ಮಾದರಿ 1** – ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆ ಇದ್ದು, ಅಗತ್ಯ ಸಂಖ್ಯೆಯಲ್ಲಿ ಕೋಣೆಗಳು ಲಭ್ಯವಿದ್ದಲ್ಲಿ ಮತ್ತು ಎಲ್ಲ ಮಕ್ಕಳ ನಡುವೆ ಸಾಮಾಜಿಕ ಅಂತರ ಕಾಯ್ದುಕೊಳ್ಳಬಹುದಾದಲ್ಲಿ, ಶಾಲೆಯನ್ನು ಎಂದಿನಂತೆ ಇಡೀ ದಿನ ನಡೆಸಬಹುದಾಗಿದೆ.

**ಮಾದರಿ 2** – ಶಾಲೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿ ಅಧಿಕವಾಗಿದ್ದು, ಎಲ್ಲ ಮಕ್ಕಳ ನಡುವೆ ಸಾಮಾಜಿಕಅಂತರ ಕಾಯ್ದುಕೊಳ್ಳಲು ಸಾಧ್ಯವಾಗದಿದ್ದಲ್ಲಿ ಶಾಲೆಯನ್ನು ಪಾಳಿ ಪದ್ಧತಿಯಲ್ಲಿ, ಅಂದರೆ ದಿನಕ್ಕೆ ಎರಡು ಪಾಳಿಯಲ್ಲಿ ನಡೆಸಬಹುದಾಗಿರುತ್ತದೆ. ಈ ವ್ಯವಸ್ಥೆಯಡಿ ಒಂದು ನಿರ್ದಿಷ್ಟ ತರಗತಿಯ ಅರ್ಧದಷ್ಟು ವಿದ್ಯಾರ್ಥಿಗಳನ್ನು ಬೆಳಗಿನ ಪಾಳಿಯಲ್ಲಿ ಮತ್ತು ಉಳಿದ ಅರ್ಧದಷ್ಟು ವಿದ್ಯಾರ್ಥಿಗಳನ್ನು ಮಧ್ಯಾಹ್ನದ ಪಾಳಿಯಲ್ಲಿ ತರಗತಿಗಳಿಗೆ ಹಾಜರಾಗುವಂತೆ ಸೂಚಿಸಬಹುದು.

**ಮಾದರಿ 3**–ಪಾಳಿ ಪದ್ಧತಿಯಲ್ಲಿ ಪ್ರತಿತರಗತಿಯ ಅರ್ಧದಷ್ಟು ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುವುದು ಸೂಕ್ತವೆನಿಸದಿದ್ದಲ್ಲಿ ಶಾಲೆಯ ಕೆಲವು ತರಗತಿಗಳನ್ನು ಬೆಳಗಿನ ಪಾಳಿಯಲ್ಲಿ ಮತ್ತು ಉಳಿದ ತರಗತಿಗಳನ್ನು ಮಧ್ಯಾಹ್ನದ ಪಾಳಿಯಲ್ಲಿ ನಡೆಸಬಹುದಾಗಿರುತ್ತದೆ.

ಪಾಳಿ ಪದ್ಧತಿಯಲ್ಲಿ ತರಗತಿಗಳನ್ನು ನಡೆಸುವುದಾದಲ್ಲಿ, ಪ್ರತಿ ಪಾಳಿಯಲ್ಲಿ ಕನಿಷ್ಠ 4 ಗಂಟೆಗಳ ಐದು ಬೋಧನಾ ಅವಧಿಯನ್ನು ನಿಗದಿಪಡಿಸಬೇಕು. ಮೊದಲನೇ ಪಾಳಿ ಬೆಳಗಿನ 8–00 ಗಂಟೆಯಿಂದ ಮಧ್ಯಾಹ್ನದ 12–00 ಗಂಟೆಯವರೆಗೆ. ಎರಡನೇ ಪಾಳಿ ಮಧ್ಯಾಹ್ನದ 1–00 ಗಂಟೆಯಿಂದ ಸಂಜೆ 5–00 ಗಂಟೆಯವರೆಗೆ ನಡೆಸಬೇಕಿರುತ್ತದೆ.

1. ಪ್ರತಿ ಪಾಳಿಯಲ್ಲಿ ಕನಿಷ್ಠ 5 ತರಗತಿ ಅವಧಿಗಳನ್ನು ನಿಗದಿಪಡಿಸತಕ್ಕದ್ದು.
2. ಪ್ರತಿ ಪಾಳಿಯಲ್ಲಿ ಅವಧಿಗಳು 40 ನಿಮಿಷಗಳಾಗಿದ್ದು, ಮೂರನೇ ಅವಧಿ ನಂತರ 30 ನಿಮಿಷಗಳ ವಿರಾಮವನ್ನು ನೀಡತಕ್ಕದ್ದು.

Kiran Raghupathi

ಮೇಲೆ ತಿಳಿಸಿದ ಯಾವುದೇ ಮಾದರಿಯು ಕಡ್ಡಾಯವೇನಲ್ಲ. ಸ್ಥಳೀಯ ಸನ್ನಿವೇಶಗಳಿಗನುಗುಣವಾಗಿ, ಲಭ್ಯವಿರುವ ಮೂಲ ಸೌಲಭ್ಯಗಳನ್ನು ಪರಿಗಣಿಸಿ, ಪ್ರತಿ ಶಾಲೆಯು ತನ್ನದೇ ಆದ ಮಾದರಿಯನ್ನು ಅನುಸರಿಸಬಹುದು. ಮೇಲಿನ ಮಾದರಿಯಲ್ಲಿ ತರಗತಿಗಳನ್ನು ನಡೆಸಲು ಶಿಕ್ಷಕರ ಕೊರತೆ ಇದ್ದಲ್ಲಿ ಆಯಾ ಶಾಲೆಗಳವರು ಅಗತ್ಯ ಸಂಖ್ಯೆಯಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಬೇಕಿರುತ್ತದೆ. ಸರ್ಕಾರಿ ಶಾಲೆಗಳವರು ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಅಗತ್ಯ ಪ್ರಸ್ತಾವನೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. ಖಾಸಗಿ ಶಾಲೆಗಳಲ್ಲಿ ಆಡಳಿತ ಮಂಡಳಿಯು ಶಿಕ್ಷಕರನ್ನು ನೇಮಿಸಿಕೊಳ್ಳಬೇಕಿರುತ್ತದೆ.

## ಮಕ್ಕಳನ್ನು ಶಾಲೆಗೆ ಕಳುಹಿಸುವಾಗ ಪೋಷಕರು ವಹಿಸಬೇಕಾದ ಕ್ರಮಗಳು

ಶಾಲೆಗೆ ಹಾಜರಾಗುವ ಪ್ರತಿ ವಿದ್ಯಾರ್ಥಿಯು ಕೋವಿಡ್ ಸೋಂಕಿನಿಂದ ರಕ್ಷಿಸಿಕೊಳ್ಳಲು ಅಗತ್ಯವಿರುವ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ವಿದ್ಯಾರ್ಥಿಯ ಪೋಷಕರು ತೆಗೆದುಕೊಳ್ಳಬೇಕು.

- ಶಾಲಾ ವಿದ್ಯಾರ್ಥಿಗೆ ಅಥವಾ ಅವರ ಮನೆಯಲ್ಲಿ ಯಾವುದೇ ವ್ಯಕ್ತಿಗೆ ಕೋವಿಡ್ ಸೋಂಕಿನ ಲಕ್ಷಣಗಳಾದ ನೆಗಡಿ, ಕೆಮ್ಮು, ಮೂಗು ಸೋರುವುದು, ಜ್ವರ ಮುಂತಾದ ಲಕ್ಷಣಗಳಿದ್ದಲ್ಲಿ ತಮ್ಮ ಮಗುವನ್ನು ಶಾಲೆಗೆ ಕಳುಹಿಸಬಾರದು. ಕೂಡಲೇ ಹತ್ತಿರದ ಅಸ್ಪತ್ರೆಗೆ ತೆರಳಿ ಅಗತ್ಯ ಚಿಕಿತ್ಸೆ ಒದಗಿಸಬೇಕು.
- ಪ್ರತಿ ವಿದ್ಯಾರ್ಥಿಯು ಮಾಸ್ಕ್ ಧರಿಸಿಯೇ ಶಾಲೆಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಮಾಸ್ಕ್‌ಗಳನ್ನು ಹತ್ತಿಯ ಬಟ್ಟೆಯಿಂದ ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದಾಗಿರುತ್ತದೆ.
- ಪ್ರತಿ ವಿದ್ಯಾರ್ಥಿಯು ಕನಿಷ್ಠ 2 ಮಾಸ್ಕ್‌ಗಳನ್ನು ಶಾಲೆಗೆ ತೆಗೆದುಕೊಂಡು ಬರಬೇಕು (ಪ್ರತಿ ಮೂರು ಗಂಟೆಗೆ ಬದಲಾಯಿಸಲು ಅನುಕೂಲವಾಗುವಂತೆ).
- ಪ್ರತಿ ದಿನ ಮಾಸ್ಕ್‌ಗಳನ್ನು ಸೋಪಿನಿಂದ ಒಗೆದು, ಸ್ವಚ್ಛಗೊಳಿಸಿ, ಬಿಸಿಲಿನಲ್ಲಿ ಒಣಗಿಸಿ, ಮಾರನೇ ದಿನದ ಬಳಕೆಗೆ ಸಿದ್ಧಪಡಿಸಿಕೊಳ್ಳಬೇಕು.
- ವಿದ್ಯಾರ್ಥಿಗಳಿಗೆ ಪ್ರತಿ ದಿನ ಅಗತ್ಯವಿರುವಷ್ಟೇ ಪುಸ್ತಕಗಳನ್ನು ಕಳುಹಿಸುವುದು.
- ಪುಸ್ತಕಗಳ ಬ್ಯಾಗಿನ ಜೊತೆಗೆ ಮತ್ತೊಂದು ಬ್ಯಾಗಿನಲ್ಲಿ ಒಂದುತಟ್ಟೆ, ನ್ಯಾಪ್‌ಕಿನ್ ಅಥವಾ ಟವಲ್ ಮತ್ತು ವಾಟರ್ ಬಾಟಲ್‌ನಲ್ಲಿ ಶುದ್ದಕುಡಿಯುವ ನೀರನ್ನು (ಕಾಯಿಸಿ ಆರಿಸಿದ) ಮತ್ತು ಸಾಧ್ಯವಿದ್ದಲ್ಲಿ ಸ್ಯಾನಿಟೈಜರ್ ಬಾಟಲನ್ನು ಕಳುಹಿಸಿಕೊಡುವುದು.
- ಊಟದ ಮೊದಲು ಮತ್ತು ನಂತರ ತಮ್ಮ ತಟ್ಟೆಗಳನ್ನು ತಾವೇ ತೊಳೆದು ತಮ್ಮ ನ್ಯಾಪ್‌ಕಿನ್‌ನಿಂದ ಒರೆಸಿಕೊಳ್ಳುವ ಅಭ್ಯಾಸ ಮಾಡಿಸಬೇಕು.
- ಪ್ರತಿ ಮಗುವಿಗೆ ವೈಯುಕ್ತಿಕ ಸ್ವಚ್ಛತೆಯ ಅಭ್ಯಾಸಗಳನ್ನು ಮಾಡಿಸತಕ್ಕದ್ದು.

## ಸಮುದಾಯದೊಂದಿಗೆ ಸಹಭಾಗಿತ್ವವನ್ನು ಸಾಧಿಸುವುದು

- ಮುಖ್ಯಶಿಕ್ಷಕರು ಶಾಲಾ ಪ್ರಾರಂಭಕ್ಕೂ ಒಂದು ವಾರ ಮೊದಲು ಎಸ್.ಡಿ.ಎಂ.ಸಿ. ಸದಸ್ಯರ ಸಭೆಯನ್ನು ಕರೆದು ಶಾಲಾ ಪ್ರಾರಂಭ ಮತ್ತು ನಂತರದಲ್ಲಿ ಕೋವಿಡ್–19ರ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಅನುಸರಿಸಲಾಗುವ ಕ್ರಮಗಳ ಕುರಿತು ಅವರಿಗೆ ಮನವರಿಕೆ ಮಾಡಿಕೊಡಬೇಕು. ಅವರೂ ಸಹ ತಮ್ಮಗ್ರಾಮದ ವಿದ್ಯಾರ್ಥಿಗಳ ಶಿಕ್ಷಣದಲ್ಲಿ ಪಾಲುದಾರರಾಗುವಂತೆ ಕೋರುವುದು.
- ಕೋವಿಡ್–19 ತಡೆಗಟ್ಟಲು ವಿದ್ಯಾರ್ಥಿಗಳು ಅನುಸರಿಸಬೇಕಾದ ಕ್ರಮಗಳು, ಶಾಲೆಯಅವಧಿ, ಶಾಲೆಯ ಸ್ವಚ್ಛತೆ ಮತ್ತು ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಸೌಲಭ್ಯಗಳ ಸವಿವರ ಮಾಹಿತಿಯನ್ನು ಎಸ್.ಡಿ.ಎಂ.ಸಿ. ಸದಸ್ಯರಿಗೆ ನೀಡಿ ಅವರ ಮೂಲಕ ವಿದ್ಯಾರ್ಥಿಗಳ ಪಾಲಕರು ಅಗತ್ಯ ಸಹಕಾರ ನೀಡುವಂತೆ ಅವರಿಗೆ ಮನವರಿಕೆ ಮಾಡಿಕೊಡಲು ಕೋರುವುದು.
- ಶಾಲಾ ಆವರಣದ ಶುಚಿತ್ವ ಮತ್ತು ಶಾಲೆಯಲ್ಲಿನ ಸೌಲಭ್ಯಗಳ ನಿರ್ವಹಣೆಗೆ ಸದಸ್ಯರ ಸಹಕಾರ ಮತ್ತು ನೆರವನ್ನು ಕೋರುವುದು.

Kiran Raghupathi

1. ವಿದ್ಯಾರ್ಥಿಗಳು ಶಾಲೆಗೆ ಹಾಜರಾಗುವಾಗ ಅನುಸರಿಸಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಅವರ ಪಾಲಕರಿಗೆ ಮನವರಿಕೆ ಮಾಡಿಕೊಡುವಂತೆ ಕೋರುವುದು.
2. ಎಸ್.ಡಿ.ಎಂ.ಸಿ. ಸಭೆಯ ನಂತರ ತರಗತಿವಾರು ವಿದ್ಯಾರ್ಥಿಗಳ ಪಾಲಕರ ಸಭೆಯನ್ನು ಕರೆದು ಕೋವಿಡ್–19 ತಡೆಗಟ್ಟುವಲ್ಲಿ ವಿದ್ಯಾರ್ಥಿಗಳು ವಹಿಸಬೇಕಾದ ಕ್ರಮಗಳ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟು ಅವರ ಸಹಕಾರವನ್ನು ಕೋರುವುದು.
3. ಮಾಸ್ಕ್, ಸ್ಯಾನಿಟೈಜರ್, ಸೋಪ್ ಇತ್ಯಾದಿಗಳನ್ನು ಸಮುದಾಯ, ಪಾಲಕರು ಮತ್ತು ದಾನಿಗಳಿಂದ ಪಡೆದುಕೊಳ್ಳಲು ಕ್ರಮವಹಿಸತಕ್ಕದ್ದು.
4. ಶಾಲೆಯಲ್ಲಿ/ಶಾಲೆಯ ಸಂಪರ್ಕಿಸಬಹುದಾದ ದೂರದಲ್ಲಿ ವೈದ್ಯಕೀಯ ಸಿಬ್ಬಂದಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಅಂತಹ ವೈದ್ಯಕೀಯ ಸಿಬ್ಬಂದಿಯ ದೂರವಾಣಿ ಸಂಖ್ಯೆಯನ್ನು ಶಾಲೆಯ ಸೂಚನಾಫಲಕದಲ್ಲಿ ಪ್ರದರ್ಶಿಸುವುದು.

## ಕೋವಿಡ್–19 ಸೋಂಕು ತಡೆಗಟ್ಟುವ ಚಟುವಟಿಕೆಗಳ ನಿರ್ವಹಣೆ

1. ಪ್ರತಿ ಶಾಲೆಯಲ್ಲಿ ಮುಖ್ಯಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿ ಪ್ರತಿನಿಧಿಗಳನ್ನೊಳಗೊಂಡ ಆರೋಗ್ಯ ಸಮಿತಿಯನ್ನು (ಹೆಲ್ತ್‌ಕ್ಲಬ್) ರಚಿಸಿ, ಕೋವಿಡ್–19 ತಡೆಗಟ್ಟುವ ಎಲ್ಲಾ ಚಟುವಟಿಕೆಗಳ ನಿರ್ವಹಣೆಯನ್ನು ಸಮಿತಿಗೆ ಹಂಚತಕ್ಕದ್ದು.
2. ಪ್ರತಿತರಗತಿಯಲ್ಲಿ ನಾಯಕತ್ವ ಗುಣಗಳನ್ನು ಹೊಂದಿರುವ ಇಬ್ಬರು ವಿದ್ಯಾರ್ಥಿಗಳನ್ನು ಗುರುತಿಸಿ, ಅವರ ಮೂಲಕ ತರಗತಿಯಲ್ಲಿ ಶಿಕ್ಷಕರು ಇಲ್ಲದ ಸಮಯದಲ್ಲಿ ಈ ಮಾರ್ಗಸೂಚಿಯಲ್ಲಿನ ಅಂಶಗಳನ್ನು ಆಯಾ ತರಗತಿಯ ಇತರೆ ವಿದ್ಯಾರ್ಥಿಗಳು ಪಾಲನೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
3. ವಿದ್ಯಾರ್ಥಿಗಳು ಶಾಲೆಗೆ ಆಗಮಿಸುವಾಗಿನಿಂದ ಶಾಲೆಯಿಂದ ನಿರ್ಗಮಿಸುವವರೆಗಿನ ಎಲ್ಲಾ ಚಟುವಟಿಕೆಗಳಲ್ಲಿ ಸಾಮಾಜಿಕ ಅಂತರ ಮತ್ತು ಕೋವಿಡ್–19 ತಡೆಗಟ್ಟುವ ಎಲ್ಲಾ ಚಟುವಟಿಕೆಗಳಲ್ಲಿ ಆರೋಗ್ಯ ಸಮಿತಿಯ ಸದಸ್ಯರು ಭಾಗೀದಾರರಾಗಬೇಕು.
4. ಮೇಲೆ ತಿಳಿಸಿದ ಚಟುವಟಿಕೆಗಳ ನಿರ್ವಹಣೆಗೆಅನುದಾನದ ಅಗತ್ಯವಿದ್ದಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅನುಮತಿ ಪಡೆದು ಶಾಲೆಯಲ್ಲಿನ ಸಂಚಿತ ನಿಧಿಯನ್ನು ಬಳಸಿಕೊಳ್ಳಬಹುದು. ಕ್ಷೇತ್ರಶಿಕ್ಷಣಾಧಿಕಾರಿಗಳು ತಮಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಮಿತಿಯೊಳಗೆ ಅನುಮತಿಸಬಹುದು.
5. ವಿದ್ಯಾರ್ಥಿಗಳು ಸಾಮಾಜಿಕ ಅಂತರ ಪಾಲಿಸಲು ಸೂಚನೆಗಳು/ಪ್ರಕಟಣೆಗಳನ್ನು ದಟ್ಟಣೆ ಉಂಟಾಗುವ ಸ್ಥಳಗಳಲ್ಲಿ (ಕುಡಿಯುವ ನೀರು, ಶೌಚಾಲಯ, ಬಿಸಿ ಊಟ ವಿತರಣೆ ಸ್ಥಳ) ಪ್ರದರ್ಶಿಸತಕ್ಕದ್ದು. ಈ ಸೂಚನೆಗಳನ್ನು ಸಂಕೇತಗಳ/ಚಿತ್ರಗಳ ಮೂಲಕವಾಗಿ ಸಹ ನೀಡಬಹುದಾಗಿದೆ.

## ವಸತಿ ನಿಲಯ/ಶಾಲೆಗಳಲ್ಲಿ ವಹಿಸಬೇಕಾದ ಕ್ರಮಗಳು

- ವಸತಿನಿಲಯಗಳನ್ನು ಪ್ರಾರಂಭಿಸುವ ಮುನ್ನ ಡೀಪ್‌ಕ್ಲೀನ್ ಮಾಡಿ ಸ್ಯಾನಿಟೈಸ್ ಮಾಡತಕ್ಕದ್ದು.
- ವಸತಿ ನಿಲಯದಲ್ಲಿ ಉಳಿದುಕೊಳ್ಳುವ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಪಾರ್ಟಿಷನ್ ಕಲ್ಪಿಸತಕ್ಕದ್ದು.
- ಹಾಸಿಗೆಗಳ ನಡುವೆ ಸಾಮಾಜಿಕಅಂತರ ನಿರ್ವಹಿಸತಕ್ಕದ್ದು.
- ರೋಗ ಲಕ್ಷಣ ಇರುವ ವಿದ್ಯಾರ್ಥಿಗಳಿಗೆ ವಸತಿ ನಿಲಯದಲ್ಲಿ ಅವಕಾಶ ಕಲ್ಪಿಸತಕ್ಕದ್ದಲ್ಲ.
- ಬೇರೆ ಕಡೆಯಿಂದ ಹಾಸ್ಟೆಲ್‌ಗೆ ಬಂದ ವಿದ್ಯಾರ್ಥಿಗಳು ಕೆಲವು ದಿನ ಇತರರೊಂದಿಗೆ ಬೆರೆಯತಕ್ಕದ್ದಲ್ಲ.
- ಹಾಸ್ಟೆಲ್‌ನಲ್ಲಿ ಇರುವವರಿಗೆ ನಿಯಮಿತವಾಗಿ ಕೌನ್ಸ್‌ಲಿಂಗ್ ನಡೆಸತಕ್ಕದ್ದು.
- ಆಗಾಗ್ಗೆ ಹಾಸ್ಟೆಲ್‌ನ ಅಡುಗೆಮನೆ ಹಾಗೂ ಭೋಜನಾಲಯವನ್ನು ವೈದ್ಯಕೀಯತಂಡದಿಂದ ತಪಾಸಣೆಗೆ ಒಳಪಡಿಸಬೇಕು.
- ಹಾಸ್ಟೆಲ್‌ನಲ್ಲಿ ರೇಡಿಯೋ, ದೂರದರ್ಶನ, ಇಂಟರ್‌ನೆಟ್ ಸೌಲಭ್ಯಗಳು ಇರುವಂತೆ ನೋಡಿಕೊಳ್ಳತಕ್ಕದ್ದು.
- ವಸತಿನಿಲಯದಲ್ಲಿನ ಎಲ್ಲಾ ವಿದ್ಯಾರ್ಥಿಗಳು ಪ್ರತಿನಿತ್ಯ ಸಾಮಾಜಿಕ ಅಂತರ ಮತ್ತು ವೈಯಕ್ತಿಕ ಶುಚಿತ್ವದ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ನೋಡಿಕೊಳ್ಳತಕ್ಕದ್ದು.

Kiran Raghupathi

- ಯಾವುದೇ ವಿದ್ಯಾರ್ಥಿಗೆ ಅನಾರೋಗ್ಯ ಅಥವಾ ರೋಗಲಕ್ಷಣ ಕಂಡುಬಂದಲ್ಲಿ ಕೂಡಲೇ ವೈದ್ಯಕೀಯ ನೆರವನ್ನು ಪಡೆದು ಅಗತ್ಯಕ್ರಮಗಳನ್ನು ನಿರ್ವಹಿಸತಕ್ಕದ್ದು.
- ವಸತಿನಿಲಯದ ಮೇಲ್ವಿಚಾರಕರು ಮೇಲಿನ ಎಲ್ಲಾ ಅಂಶಗಳ ಪಾಲನೆಗೆ ಜವಾಬ್ದಾರರಾಗಿರುತ್ತಾರೆ.

**ಕೋವಿಡ್-19 ಸೋಂಕು ತಗುಲದಂತೆ ವಹಿಸಬೇಕಾದ ಮುನ್ನೆಚ್ಚರಿಕಾ ಅಭ್ಯಾಸಗಳನ್ನು ಮಾಡಿಸುವುದು.**

- ವಿದ್ಯಾರ್ಥಿಗಳು ಸಾಮಾಜಿಕ ಅಂತರವನ್ನು ಎಲ್ಲ ಸಂದರ್ಭದಲ್ಲಿಯೂ ಕಾಪಾಡಿಕೊಳ್ಳುವಂತೆ ಅಗತ್ಯಅಭ್ಯಾಸ ಮಾಡಿಸಬೇಕು.
- ಆಗಾಗ್ಗೆ ತಮ್ಮ ಕೈಗಳನ್ನು ಸೋಪಿನಿಂದ ಅಥವಾ ಸ್ಯಾನಿಟೈಜರ್‌ನಿಂದ ಸ್ವಚ್ಛಗೊಳಿಸುವಂತೆ ಅರಿವು ಮೂಡಿಸಬೇಕು.
- ಕೆಮ್ಮುವಾಗ ಅಥವಾ ಸೀನುವಾಗ ಬಾಯಿಗೆ ಅಡ್ಡವಾಗಿ ಕರವಸ್ತ್ರವನ್ನು ಹಿಡಿಯುವುದು ಅಥವಾ ಮೊಣಕೈಯನ್ನುಅಡ್ಡ ಹಿಡಿಯುವಂತೆ ತಿಳಿಸಬೇಕು.
- ಶಾಲೆಯಲ್ಲಿ ಮತ್ತು ರಸ್ತೆಯಲ್ಲಿ ಓಡಾಡುವಾಗ ಅನಗತ್ಯವಾಗಿ ಯಾವುದೇ ವಸ್ತುಗಳನ್ನು ಮುಟ್ಟದಂತೆ ತಿಳಿಸಬೇಕು. ರಸ್ತೆ ಬದಿಯ ತೆರೆದಿಟ್ಟ ಆಹಾರಗಳನ್ನು ಸೇವಿಸದಂತೆ ಸೂಚನೆ ನೀಡಬೇಕು.
- ರಸ್ತೆಯಲ್ಲಿ/ಶಾಲಾ ಆವರಣದಲ್ಲಿ ಉಗುಳುವುದು ಮುಂತಾದವುಗಳನ್ನು ಮಾಡದಂತೆ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸುವುದು (ಶಾಲಾ ಚಾಲಕರು ಸೇರಿದಂತೆ).
- ಬಳಸಿದ ಮಾಸ್ಕ್‌ಗಳನ್ನು ಮತ್ತು ನ್ಯಾಪ್‌ಕಿನ್‌ಗಳನ್ನು ಎಲ್ಲೆಂದರಲ್ಲಿ ಎಸೆಯುವುದು ಮತ್ತು ಸ್ನೇಹಿತರೊಂದಿಗೆ ಹಂಚಿಕೊಳ್ಳುವುದನ್ನು ಮಾಡದಂತೆ ತಿಳುವಳಿಕೆ ನೀಡುವುದು.
- ವಿದ್ಯಾರ್ಥಿಗಳ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವ್ಯಾಯಾಮ, ಯೋಗ, ಸರಳ ಪ್ರಾಣಾಯಾಮಗಳನ್ನು ಸಾಮಾಜಿಕಅಂತರದೊಂದಿಗೆ ಮಾಡಿಸಬಹುದು ಹಾಗೂ ಮನೆಯಲ್ಲಿಯೂ ಮಾಡುವಂತೆ ಪ್ರೇರೇಪಿಸುವುದು.
- ದೈಹಿಕ ಸ್ವಾಸ್ಥ್ಯ ಹೆಚ್ಚಿಸುವ ಆರೋಗ್ಯಕರ ಹಾಗೂ ಬಿಸಿಯಾದ ಆಹಾರ ಪದಾರ್ಥಗಳನ್ನು ಬಳಸುವಂತೆ ವಿದ್ಯಾರ್ಥಿಗಳಿಗೆ ಸೂಚಿಸಬೇಕು. ಆರೋಗ್ಯಇಲಾಖೆಯ ಸಿಬ್ಬಂದಿಯ ಸಹಕಾರದೊಂದಿಗೆ ನಿಯಮಿತವಾಗಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಗೆ ಕ್ರಮವಹಿಸುವುದು.
- ಮಾಸ್ಕ್‌ಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಬಾರದು.
- ತಿಂಡಿ ಮಾರುವವರಿಗೆ ಅವಕಾಶ ನೀಡಬಾರದು.

**ಮಧ್ಯಾಹ್ನದಉಪಹಾರಯೋಜನೆ ಅನುಷ್ಠಾನ ಕುರಿತು**

1. ಅಕ್ಷರದಾಸೋಹ ಯೋಜನೆಯಡಿ ಒದಗಿಸಿರುವ ಅಡುಗೆಕೋಣೆ, ದಾಸ್ತಾನುಕೋಣೆಯಲ್ಲಿನ ವಸ್ತುಗಳನ್ನು ಹೊರತೆಗೆದು ಆ ಕೋಣೆಗಳನ್ನು ಸಹ ಮೇಲೆ ವಿವರಿಸಿರುವಂತೆ ಸ್ವಚ್ಛಗೊಳಿಸತಕ್ಕದ್ದು.
2. ಪಾತ್ರೆಗಳು, ಸ್ಟವ್, ಗ್ಯಾಸ್ ಸಿಲಿಂಡರ್, ಆಹಾರಧಾನ್ಯ ಸಂಗ್ರಹಣಾ ಡಬ್ಬಿಗಳು, ತರಕಾರಿ ಬುಟ್ಟಿಗಳು, ಚಾಕುಗಳು, ಅಡುಗೆ ಮಾಡಲು ಬಳಸುವ ಸೌಟುಗಳು, ತಟ್ಟೆಗಳು ಮುಂತಾದ ಪ್ರತಿಯೊಂದು ವಸ್ತುವನ್ನು ನೀರಿನಿಂದ ತೊಳೆದು, ಬಿಸಿಲಿನಲ್ಲಿ ಒಣಗಿಸಿ ಬಳಕೆಗೆ ಅಣಿಗೊಳಿಸುವುದು.
3. ಕ್ಷೀರಭಾಗ್ಯ ಯೋಜನೆಯಡಿ ಹಾಲು ಮತ್ತು ಮಧ್ಯಾಹ್ನದ ಊಟವನ್ನು ವಿತರಿಸುವಾಗ ಮತ್ತು ಸೇವಿಸುವಾಗ ವಿದ್ಯಾರ್ಥಿಗಳು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಅಗತ್ಯ ಗುರುತುಗಳನ್ನು ಮಾಡಿ ವಿದ್ಯಾರ್ಥಿಗಳು ಆ ಸಂದರ್ಭದಲ್ಲಿ ಸಹ ಸಾಮಾಜಿಕ ಅಂತರವನ್ನು ಪಾಲಿಸುವಂತೆ ನೋಡಿಕೊಳ್ಳಬೇಕು.
4. ಅಡುಗೆ ಸಿಬ್ಬಂದಿಯವರು ಕಡ್ಡಾಯವಾಗಿ ಮಾಸ್ಕ್, ಏಪ್ರಾನ್, ಗ್ಲೌಸ್, ತಲೆಗೆ ಕ್ಯಾಪ್ ಧರಿಸಿರಬೇಕು.

Kiran Raghupathi

5. ಅಡುಗೆ ಸಿಬ್ಬಂದಿಯವರಿಗೆ ಅನಾರೋಗ್ಯ, ಕೆಮ್ಮು, ನೆಗಡಿ, ಜ್ವರ ಮುಂತಾದ ಲಕ್ಷಣಗಳಿದ್ದಲ್ಲಿ ಅಡುಗೆಕಾರ್ಯದಲ್ಲಿ ಭಾಗವಹಿಸಬಾರದು ಮತ್ತು ರಜೆ ಪಡೆದುಕೊಳ್ಳುವುದು.
6. ಅಡುಗೆ ಸಿಬ್ಬಂದಿಯವರು ತಾವು ಮತ್ತು ತಮ್ಮ ಮನೆಯವರೆಲ್ಲರೂ ಆರೋಗ್ಯವಾಗಿರುವ ಕುರಿತು ಸ್ವಯಂದೃಢೀಕರಣ ಪತ್ರವನ್ನು ನೀಡಬೇಕು.
7. ಶಾಲೆ ಪ್ರವೇಶಿಸುವ ಮೊದಲು ಥರ್ಮಲ್ ಸ್ಕ್ಯಾನಿಂಗ್ (ದೇಹದಉಷ್ಣತೆ) ಒಳಪಡಬೇಕು ಮತ್ತು ಪ್ರತಿದಿನ ಅವರ ಉಷ್ಣಾಂಶವನ್ನು ದಾಖಲಿಸಬೇಕು.
8. ಶಾಲೆ ಪ್ರವೇಶಿಸಿದ ಕೂಡಲೇ 40 ಸೆಕೆಂಡುಗಳ ಕಾಲ ತಮ್ಮ ಕೈಗಳನ್ನು ತೊಳೆದುಕೊಳ್ಳಬೇಕು.
9. ಶಾಲೆಯಲ್ಲಿ ಇರುವಷ್ಟು ಸಮಯವೂ ಕಡ್ಡಾಯವಾಗಿ ಫೇಸ್ ಮಾಸ್ಕ್ ಧರಿಸಿರಬೇಕು.
10. ಅಡುಗೆ ಸಿಬ್ಬಂದಿಗೆ ಸುರಕ್ಷಿತ ಏಪ್ರಾನ್, ಶಿರಗವಸು, ಗ್ಲೌಸ್ ಮುಂತಾದವುಗಳನ್ನು ಒದಗಿಸಬೇಕು.
11. ಅಡುಗೆಮನೆಗೆ ಸಾಕಷ್ಟು ಸ್ವಾಭಾವಿಕ ಅಥವಾ ಯಾಂತ್ರಿಕ ಗಾಳಿ ಹೊರಹೋಗುವ (ವಾಯು ನಿರ್ಗಮನ) ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು.
12. ನೆಲ ಒರೆಸುವ ಬಟ್ಟೆ, ಪೊರಕೆ, ಮಾಪ್, ಬ್ರಷ್ ಇತ್ಯಾದಿಗಳನ್ನು ಪ್ರತಿದಿನ ತೊಳೆದು ಬಿಸಿಲಿನಲ್ಲಿ ಒಣಗಿಸಬೇಕು. ನೆಲ ಒರೆಸುವ ಬಟ್ಟೆಯನ್ನು ಅಡುಗೆ ಮಾಡುವ ಕೆಲಸದಲ್ಲಿ ಬಳಸಬಾರದು.
13. ಅಡುಗೆ ಮಾಡುವ ಪಾತ್ರೆ ಪರಿಕರಗಳನ್ನು ಚೆನ್ನಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಬೇಕು.
14. ತರಕಾರಿ, ಹಣ್ಣು ಮುಂತಾದವುಗಳನ್ನು ಸಾಧ್ಯವಾದಷ್ಟು ತಾಜಾ ಆಗಿ ಇರುವಂತೆ ಸಂಗ್ರಹಿಸಿ, ಉಪ್ಪು ಮತ್ತು ಹಳದಿ ಅಥವಾ 50 ಪಿ.ಪಿ.ಎಂ.ಕ್ಲೋರಿನ್ ದ್ರಾವಣದಲ್ಲಿ ತೊಳೆದು ಬಳಸಬೇಕು.
15. ಅಡುಗೆ ಮಾಡುವಾಗ ಅಡುಗೆ ಸಿಬ್ಬಂದಿಯು ತಮ್ಮೊಡನೆ ಸೂಕ್ತ ಸಾಮಾಜಿಕಅಂತರ ಕಾಪಾಡಿಕೊಳ್ಳಬೇಕು. ಅಡುಗೆ ಸಿಬ್ಬಂದಿಯು ತಮ್ಮ ಮುಖವನ್ನು ವಿರುದ್ಧ ದಿಕ್ಕಿನಲ್ಲಿ ಇರುವಂತೆ ಕಾರ್ಯನಿರ್ವಹಿಸತಕ್ಕದ್ದು.
16. ಮಧ್ಯಾಹ್ನದ ಬಿಸಿಯೂಟವನ್ನು ಬಡಿಸುವಾಗಲೂ ಸಹ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಸಾಮಾಜಿಕಅಂತರವನ್ನು ಪಾಲಿಸತಕ್ಕದ್ದು. ಒಂದೊಂದು ತರಗತಿಗೆ ಬೇರೆ ಬೇರೆ ಸಮಯದಲ್ಲಿ ಊಟ ಬಡಿಸಬಹುದು.
17. ವಿದ್ಯಾರ್ಥಿಗಳು ಊಟ ಮಾಡುವ ಸ್ಥಳವನ್ನು ಸಹ ಊಟಕ್ಕೆ ಮೊದಲು ಮತ್ತು ಊಟಕ್ಕೆ ನಂತರ ಸ್ವಚ್ಛಗೊಳಿಸತಕ್ಕದ್ದು. ವಿದ್ಯಾರ್ಥಿಗಳು ವರಾಂಡದಲ್ಲಿ ಕುಳಿತುಕೊಳ್ಳುತ್ತಿದ್ದರೆ ಅದಕ್ಕೆ ಗುರುತುಗಳನ್ನು ಮಾಡಿರಬೇಕು.
18. ಮಧ್ಯಾಹ್ನದ ಬಿಸಿಯೂಟವನ್ನು ಸಾಧ್ಯವಾದಷ್ಟು ಅಡುಗೆ ಬಿಸಿ ಇರುವಾಗಲೇ ಬಡಿಸತಕ್ಕದ್ದು.

Kiran Raghupathi

# ಅಧ್ಯಾಯ–17

## ರಸ್ತೆ ಸುರಕ್ಷತೆ

### ಉದ್ದೇಶಗಳು

**ಈ ಅಧ್ಯಾಯದ ನಂತರ ಸದಸ್ಯರು;**

- **ರಸ್ತೆ ನಿಯಮಗಳ ಪಾಲನೆಯ ಅಗತ್ಯತೆಯನ್ನು ಅರ್ಥೈಸಿಕೊಳ್ಳುವರು .**
- **ರಸ್ತೆ ಸಂಚಾರ ಸಂಕೇತಗಳನ್ನು ಅರ್ಥೈಸಿಕೊಳ್ಳುವರು .**
- **ರಸ್ತೆ ಸಂಚಾರಿ ಚಿಹ್ನೆಗಳ ಪ್ರಾಮುಖ್ಯತೆಯನ್ನು ಅರಿತುಕೊಳ್ಳುವರು .**

ನಿತ್ಯ ಜೀವನದಲ್ಲಿ ರಸ್ತೆ ಸಂಚಾರವೂ ಒಂದು ಭಾಗ. ರಸ್ತೆ ಸಂಚಾರವು ವಾಹನ ಚಾಲಕರನ್ನಷ್ಟೇ ಅಲ್ಲದೇ ಪ್ರಯಾಣಿಕರು ಹಾಗೂ ಪಾದಚಾರಿಗಳನ್ನೂ ಒಳಗೊಂಡಿರುತ್ತದೆ. ಒಮ್ಮೊಮ್ಮೆ ಕ್ಷಣ ಮಾತ್ರದಲ್ಲಿ ಅಪಘಾತಗಳು ನಡೆದು ಹೋಗುತ್ತವೆ. ಆದರೆ ಅಪಘಾತಗಳ ಭೀಕರ ಪರಿಣಾಮಗಳನ್ನು ಜೀವನ ಪರ್ಯಂತ ಸಂಚಾರ ಮಾಡುವವರು ಮತ್ತು ಅವಲಂಬಿತರೂ ಅನುಭವಿಸಬೇಕಾಗುತ್ತದೆ. ಪಾದಚಾರಿ ಮತ್ತು ವಾಹನ ಚಾಲಕರ ನಿರ್ಲಕ್ಷ್ಯತೆ, ಮೊಬೈಲ್ ಬಳಕೆ, ಅವಸರ, ಅತಿವೇಗ, ಟ್ರಾಫಿಕ್ ಸಿಗ್ನಲ್ ಜಂಪ್ ಮಾಡುವುದು, ವಿರುದ್ಧ ದಿಕ್ಕಿನಲ್ಲಿ ಚಲಿಸುವುದು, ಇಯರ್ ಫೋನ್ ಬಳಸುತ್ತಾ ಸಾಗುವುದು, ರಸ್ತೆ ನಿಯಮಗಳ ಅರಿವಿಲ್ಲದಿರುವುದು, ಮದ್ಯಪಾನ ಮತ್ತು ಕಳಪೆ ಗುಣಮಟ್ಟದ ರಸ್ತೆಗಳು ಹಾಗೂ ಅವುಗಳ ನಿರ್ವಹಣೆ ಮುಂತಾದವು ಅಪಘಾತಗಳಿಗೆ ಕಾರಣವಾಗುತ್ತವೆ.

ಭಾರತದ ರಸ್ತೆಗಳು ಈಗಾಗಲೇ ಅಪಘಾತದ ಎಚ್ಚರಿಕೆಯ ಘಂಟೆಯನ್ನು ಬಾರಿಸುತ್ತಿವೆ.  ಒಂದು ಸಮೀಕ್ಷೆಯ ಅಂದಾಜಿನ ಪ್ರಕಾರ ಭಾರತದ ರಸ್ತೆಗಳಲ್ಲಿ ಪ್ರತಿ ವರ್ಷ 3 ಲಕ್ಷ ಅಪಘಾತಗಳು ಸಂಭವಿಸುತ್ತವೆ.  80 ಸಾವಿರಕ್ಕಿಂತಲೂ ಹೆಚ್ಚು ಜನರು ಮರಣವನ್ನಪ್ಪುತ್ತಿದ್ದಾರೆ. ಅಷ್ಟೇ ಅಲ್ಲದೆ 3,600 ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ.

ನಮ್ಮ ರಾಜ್ಯದಲ್ಲಿ ಕಳೆದ 10 ವರ್ಷಗಳಲ್ಲಿ ಆಗಿರುವ ಅಪಘಾತದ ಅಂಕಿಅಂಶಗಳ ಸರಾಸರಿಯನ್ನು ಗಮನಿಸಿದಾಗ, ಪ್ರತಿ ವರ್ಷ 44449 ಅಪಘಾತಗಳು ಸಂಭವಿಸಿವೆ. 52 ಸಾವಿರಕ್ಕಿಂತಲೂ ಹೆಚ್ಚು ಜನರು ಗಾಯಗೊಂಡಿದ್ದು, 9 ಸಾವಿರಕ್ಕಿಂತಲೂ ಹೆಚ್ಚು ಜನರು ಮರಣವನ್ನಪ್ಪಿದ್ದಾರೆ. ವಿಸ್ಮಯ ಎಂದರೆ ದೇಶದಲ್ಲಿ ಸಂಭವಿಸುವ ಅಪಘಾತಗಳಲ್ಲಿ ಶೇ.65 ರಷ್ಟು ಅಪಘಾತಗಳು ವಾಹನ ಸವಾರರ ಮತ್ತು ಪಾದಚಾರಿಗಳ ನಿರ್ಲಕ್ಷ್ಯ ಹಾಗೂ ಸಂಚಾರ ನಿಯಮಗಳ ಉಲ್ಲಂಘನೆಯಿಂದಲೇ ಸಂಭವಿಸುತ್ತಿವೆ.

ರಸ್ತೆ ಸುರಕ್ಷತೆಯ ನಿಯಮಗಳು ಕೇವಲ ಕಾನೂನಿಗಾಗಿ ಅಲ್ಲ: ಬದಲಾಗಿ ಪ್ರತಿಯೊಬ್ಬ ನಾಗರಿಕರ ಮತ್ತು ಪ್ರತಿ ಜೀವಿಗಳ ಸುರಕ್ಷತೆಗಾಗಿ ಮಾತ್ರ ರೂಪಿಸಲ್ಪಟ್ಟಿವೆ.  ರಸ್ತೆ ಅಪಘಾತದಲ್ಲಿ ಕೇವಲ ಮನುಷ್ಯರು ಮಾತ್ರವಲ್ಲ ಲಕ್ಷಾಂತರ ಪ್ರಾಣಿಗಳೂ ಸಹ ಬಲಿಯಾಗುತ್ತಿರುವುದು ದುರಂತಮಯ. ಇಂತಹ ವನ್ಯ ಜೀವಿಗಳ ಪ್ರಾಣವನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಜವಾಬ್ದಾರಿಯುತ ನಾಗರಿಕರಾದ ನಾವು ಸಂಚಾರ ನಿಯಮಗಳನ್ನು ಪಾಲಿಸಿ, ರಸ್ತೆ ಸುರಕ್ಷತೆಗೆ ಹೆಚ್ಚಿನ ಗಮನ ನೀಡಬೇಕಿದೆ. ಸುರಕ್ಷತೆಯ ನಿಯಮಗಳು ಉಪಯೋಗವಿಲ್ಲದವು ಎನ್ನುವ ಭಾವನೆ ಸಾಮಾನ್ಯವಾಗಿದೆ. ರಸ್ತೆ ಸುರಕ್ಷತೆಯ ನಿಯಮಗಳು/ ಸಂಚಾರ ನಿಯಮಗಳು ನಮ್ಮ, ಬೇರೆಯವರ ಹಾಗೂ ವನ್ಯ ಸಂಕುಲಗಳ ಅಮೂಲ್ಯವಾದ ಜೀವ ಉಳಿಸುವ ಜೀವರಕ್ಷಕ ಸಾಧನಗಳು ಎನ್ನುವ ಮನೋಭಾವ, ಸಂವೇದನೆಯನ್ನು ಬೆಳೆಸಿಕೊಂಡು ಉತ್ತಮ ನಾಗರಿಕರಾಗಬೇಕಿದೆ. ನಿಯಮಗಳನ್ನು ಕಡ್ಡಾಯಗೊಳಿಸುವುದರಿಂದ, ಮತ್ತಷ್ಟು ಹೆಚ್ಚಿಸುವುದರಿಂದ ರಸ್ತೆ ನಿಯಮಗಳನ್ನು ಪಾಲಿಸುವಂತೆ ಮಾಡುವುದು ಕಷ್ಟ ಸಾಧ್ಯ.

Kiran Raghupathi

ವ್ಯಕ್ತಿಗಳ ಮನೋಭಾವ ಬದಲಾವಣೆಯಿಂದ ಮಾತ್ರ ನಿಯಮ ಪಾಲನೆ ಸಾಧ್ಯ. ಮನೋಭಾವ ಬದಲಾವಣೆಗೆ ಸರಿಯಾದ ಸಮಯ ಎಳೆಯ ವಯಸ್ಸು!

***ಇಂತಹ ಎಳೆಯ ವಯಸ್ಸಿನ, ಎಳೆಯ ಮನಸ್ಸಿನ ಮಕ್ಕಳು ನಮ್ಮ ಸುತ್ತ ಇದ್ದಾರೆ. ಬನ್ನಿ ಅವರ ಮನೋಭಾವಗಳನ್ನು ಬದಲಾಯಿಸುವ ಪ್ರಯತ್ನ ಮಾಡೋಣ; ಅಸಂಖ್ಯಾತ ಜೀವ ಸಂಕುಲಗಳನ್ನು ಉಳಿಸೋಣ.***

## ರಸ್ತೆ ಸಂಕೇತಗಳು, ಚಿಹ್ನೆಗಳು, ಸಂಚಾರ ದೀಪಗಳು ಮತ್ತು ಅವುಗಳ ಪಾತ್ರ

*ಬಹುಪಾಲು ರಸ್ತೆ ಅಪಘಾತಗಳು ನಮ್ಮ (ವಾಹನ ಚಾಲಕರ ಮತ್ತು ರಸ್ತೆಯಲ್ಲಿ ನಡೆಯುವವರ) ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯ ಮನೋಧೋರಣೆಯಿಂದ ಸಂಭವಿಸುತ್ತವೆ. ನಮ್ಮ ಬೇಜವಾಬ್ದಾರಿಗಳನ್ನು ರಸ್ತೆ ಸಂಕೇತಗಳು ಎಚ್ಚರಿಸುತ್ತವೆ. ಈ ನಿಯಮಗಳು ಮತ್ತು ಸಂಕೇತಗಳು ಕಾಲಕಾಲಕ್ಕೆ, ಅವಶ್ಯಕತೆಗೆ ತಕ್ಕಂತೆ ಅಭಿವೃದ್ಧಿ ಹೊಂದುತ್ತಾ ಬಂದಿವೆ. ಎಲ್ಲ ರಾಷ್ಟ್ರಗಳಲ್ಲೂ ಏಕತರನಾದ ಸಂಚಾರ ಚಿಹ್ನೆಗಳ ಬಳಕೆಯಿದ್ದು, ವಿದೇಶಿಯರು ಹಾಗೂ ಅನಕ್ಷರಸ್ಥರೂ ಸಹ ಇವುಗಳನ್ನು ಅರ್ಥೈಸಿಕೊಳ್ಳಲು ಅನುಕೂಲವಾಗುವಂತೆ ಸಂಕೇತ ಹಾಗೂ ಚಿಹ್ನೆಗಳನ್ನು ರೂಪಿಸಿ, ಬಳಸಲಾಗುತ್ತದೆ.*

### ರಸ್ತೆ ಚಿಹ್ನೆಗಳು (Road Signs)

ರಸ್ತೆ ಚಿಹ್ನೆಗಳು ಸಾಮಾನ್ಯವಾಗಿ ರಸ್ತೆಯ ಎಡ ಭಾಗದಲ್ಲಿ ಅಥವಾ ಸೆಂಟರ್ ಮೀಡಿಯನ್‌ಗಳ ಮಧ್ಯೆ ಹಾಕಲಾಗುತ್ತದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಾಗೂ ಮುಖ್ಯರಸ್ತೆಗಳಲ್ಲಿ ಬಹಳ ದೂರದಿಂದಲೇ ಕಾಣುವಂತೆ ಸೂಚನೆಗಳನ್ನು ರಸ್ತೆಯ ಮೇಲ್ಭಾಗದಲ್ಲಿ ಅಳವಡಿಸಲಾಗಿರುತ್ತದೆ.

### ಚಿಹ್ನೆಗಳ ಆಕಾರ ಮತ್ತು ಬಣ್ಣ (Shapes and colour of Signs)

ಚಿಹ್ನೆಗಳ ವಿವಿಧ ಆಕಾರ ಮತ್ತು ವಿವಿಧ ಬಣ್ಣಗಳು ವಿಭಿನ್ನ ಅರ್ಥವನ್ನು ಕೊಡುತ್ತವೆ. ಏಕರೂಪದ ಅರ್ಥವನ್ನು ಕೊಡುವ ಚಿಹ್ನೆಗಳನ್ನು ಆಕಾರ ಮತ್ತು ಬಣ್ಣದ ಆಧಾರವಾಗಿ ವರ್ಗೀಕರಿಸಿರುವುದು ಅವುಗಳನ್ನು ನೋಡಿದಾಕ್ಷಣ ಏನನ್ನು ಸೂಚಿಸುತ್ತದೆಂದು ಅನಕ್ಷರಸ್ಥರೂ ಸಹ ತಿಳಿದುಕೊಳ್ಳಲು ಹೆಚ್ಚು ಸಹಾಯಕ.

ಉದಾಹರಣೆಗೆ ;

### ನಿಲ್ಲಿ (Stop)




**'ನಿಲ್ಲಿ'** ಎಂದು ಸೂಚನೆ ನೀಡುವ ಅಷ್ಟಭುಜ ಕೆಂಪು ಹಿನ್ನೆಲೆಯನ್ನು ಹೊಂದಿದ್ದು ಬಿಳಿ ಬಣ್ಣದ ಅಂಚನ್ನು ಹೊಂದಿರುತ್ತದೆ.

### ದಾರಿಕೊಡಿ (Give Way)

**'ದಾರಿಕೊಡಿ'** ಎಂದು ಸೂಚನೆ ನೀಡುವ ತಲೆಕೆಳಗಾದ ತ್ರಿಭುಜ ಅಥವಾ ದಿಕ್ಕು ನಿರ್ದೇಶಿಸುವ ಚಿಹ್ನೆಗಳು ಆಯಾತಾಕೃತಿ/ಚೌಕ/ಉದ್ದನೆಯ ಪಂಚಭುಜಾಕೃತಿ ಆಕಾರ ಹೊಂದಿರುತ್ತದೆ. ಇವು ಕೆಂಪು ಬಣ್ಣದ ಅಂಚನ್ನು ಹೊಂದಿರುತ್ತದೆ.








### ರಸ್ತೆ ಚಿಹ್ನೆಗಳು

ರಸ್ತೆ ಚಿಹ್ನೆಗಳನ್ನು ಈ ಕೆಳಕಂಡಂತೆ 3 ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳನ್ನು ಒಂದೊಂದಾಗಿ ಗಮನಿಸೋಣ.

## *1. ಕಡ್ಡಾಯವಾಗಿ ಪಾಲಿಸಲೇಬೇಕಾದ ಚಿಹ್ನೆಗಳು (Obligatory signs)*

ನೀಲಿ ವೃತ್ತದ ಚಿಹ್ನೆಗಳು ಸಕಾರಾತ್ಮಕ ಆದೇಶವಾಗಿದ್ದು, ಮೋಟಾರು ವಾಹನ ಚಾಲಕರು ಮತ್ತು ಸವಾರರು ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಪಾಲಿಸಲೇಬೇಕಾದ ನಿಯಮಗಳಾಗಿರುತ್ತವೆ.

| 1.ಕಡ್ಡಾಯವಾಗಿ ಎಡಕ್ಕೆ | 2.ಕಡ್ಡಾಯವಾಗಿ ಮುಂದಕ್ಕೆ | 3.ಕಡ್ಡಾಯವಾಗಿ ಬಲಕ್ಕೆ |
|---|---|---|
|  |  |  |
| 4. ಕಡ್ಡಾಯವಾಗಿ ನೇರ ಅಥವಾ ಬಲಕ್ಕೆ ತಿರುಗುವುದು | 5.ಕಡ್ಡಾಯವಾಗಿ ನೇರವಾಗಿ ಅಥವಾ ಎಡಕ್ಕೆ ತಿರುಗುವುದು | 6.ಕಡ್ಡಾಯವಾಗಿ ಸೈಕಲ್‌ಗಳಿಗೆ ಮಾತ್ರ |
|  |  |  |



7. ಕಡ್ಡಾಯವಾಗಿ ಹಾರ್ನ್ ಮಾಡುವುದು.

ನಿಷೇಧಿತ / ನಿರ್ಬಂಧಿತ ಚಿಹ್ನೆಗಳು



ಪ್ರವೇಶ ನಿಷಿದ್ಧ



ಎರಡೂ ಕಡೆಗಳಿಂದ ವಾಹನ ಸಂಚಾರ ನಿರ್ಬಂಧಿಸಿದೆ



ಏಕ ಮುಖ ಸಂಚಾರ ರಸ್ತೆ

### ವಾಹನ ನಿಲುಗಡೆ ನಿರ್ಬಂಧ ಚಿಹ್ನೆ (Vehicle Parking Restriction Signs)

ವಾಹನ ಚಾಲಕರು ತಮ್ಮ ವಾಹನಗಳನ್ನು ಇತರೆ ರಸ್ತೆ ಬಳಕೆದಾರರಿಗೆ ಅನಾನುಕೂಲವಾಗುವಂತೆ/ ಅಪಾಯವಾಗದಂತೆ ನಿಲುಗಡೆ ಮಾಡದೆ ಎಚ್ಚರಿಕೆ ವಹಿಸಬೇಕು. ಈ ಬೋರ್ಡ್‌ಗಳಿದ್ದಲ್ಲಿ ನಿಲುಗಡೆ ನಿಷೇಧವಿದ್ದಂತೆ.





### ಹಾರ್ನ್‌ಗಳ ನಿರ್ಬಂಧನೆ (Prohibiton of Horns)

ಈ ಸೂಚನೆಯು ವಾಹನ ಚಾಲಕರು ನಿರ್ದಿಷ್ಟ ಕಾರ್ಯವಿಲ್ಲದೆ ಒಂದೇ ಸಮನೆ ಅಥವಾ ಅಗತ್ಯಕ್ಕಿಂತ ಹೆಚ್ಚಾಗಿ ಹಾರ್ನ್ ಬಳಸುವುದನ್ನು ನಿರ್ಬಂಧಿಸುತ್ತದೆ.

Kiran Raghupathi

### ವೇಗ ನಿರ್ಬಂಧನೆ ಚಿಹ್ನೆ

ಕೆಂಪು ವೃತ್ತಚಿಹ್ನೆಯು ಗರಿಷ್ಠ ಮಟ್ಟದ ವೇಗಮಿತಿಯನ್ನು ಸೂಚಿಸಿದರೆ, ನೀಲಿವೃತ್ತದಲ್ಲಿರುವ ಚಿಹ್ನೆಯು ಕನಿಷ್ಠ ವೇಗದ ಸೂಚಕವಾಗಿದೆ. ಎಲ್ಲಾ ವಾಹನಗಳೂ ಸುಗಮವಾಗಿ ಸಾಗಲು ಈ ವೇಗದಲ್ಲೇ ಸಾಗಬೇಕು.

### ನಿಷೇಧ ಮುಕ್ತಾಯ ಚಿಹ್ನೆ (Restricition End Signs)

ಈ ಚಿಹ್ನೆಯು ನಿಷೇಧ ಮುಕ್ತಾಯಗೊಂಡಿರುವ ಬಗ್ಗೆ ತಿಳಿಸುತ್ತದೆ.



2. ***ಎಚ್ಚರಿಕೆ ಚಿಹ್ನೆಗಳು*** **(Warning signs)**

ಎಲ್ಲಾ ಎಚ್ಚರಿಕೆ ಚಿಹ್ನೆಗಳು ಕೆಂಪು ಬಣ್ಣದಿಂದ ಕೂಡಿದ್ದು, ತ್ರಿಭುಜಾಕಾರವಾಗಿದ್ದು, ಮೇಲ್ಮುಖವಾಗಿರುತ್ತವೆ. ರಸ್ತೆಯ ಮೇಲೆ ನಿರ್ದಿಷ್ಟ ಅಂತರದಲ್ಲಿ ಸಂದರ್ಭಕ್ಕೆ ತಕ್ಕಂತೆ ಎಚ್ಚರಿಕೆಗಾಗಿ ಹಾಕಲಾಗಿರುವ ಚಿಹ್ನೆಗಳಾಗಿವೆ.

### ಕೂಡುರಸ್ತೆಗಳಲ್ಲಿ ರಸ್ತೆಯ ಪ್ರಾಧಾನ್ಯತೆ

ಈ ಕೆಳಗಿನ ಸಂಚಾರ ಚಿಹ್ನೆಗಳು ಕೂಡುರಸ್ತೆಗಳ ಇರುವಿಕೆಯನ್ನು ಸೂಚಿಸುತ್ತವೆ. ಇದರಲ್ಲಿ ದಪ್ಪ ಗೆರೆಗಳು ಮುಖ್ಯರಸ್ತೆಯನ್ನು ಸೂಚಿಸುತ್ತಿದ್ದು, ಮುಖ್ಯರಸ್ತೆಯ ವಾಹನಗಳ ಸಂಚರಣೆಗೆ ಮೊದಲ ಆದ್ಯತೆಯನ್ನು ನೀಡುವುದು ಈ ಸಂಚಾರ ನಿಯಮದ ಮುಖ್ಯ ಉದ್ದೇಶವಾಗಿರುತ್ತದೆ.

| Y-ಜಂಕ್ಷನ್ | T-ಜಂಕ್ಷನ್ | X-ಜಂಕ್ಷನ್ | ಬಲಭಾಗದಿಂದ ಸಂಧಿಸುವ ಅಡ್ಡರಸ್ತೆ | ಸ್ಟಾಗರ್ಡ್ ಜಂಕ್ಷನ್ | ರಸ್ತೆ ವಿಭಜಕದಲ್ಲಿನ ತೆರವು | ಎಡಭಾಗದಿಂದ ಸಂಧಿಸುವ ಅಡ್ಡರಸ್ತೆ |
|---|---|---|---|---|---|---|
|  |  |  |  |  |  |  |

### ತಿರುವು ಚಿಹ್ನೆಗಳು

ಈ ಕೆಳಗಿನ ಸಂಚಾರ ಚಿಹ್ನೆಗಳು ರಸ್ತೆಯಲ್ಲಿ ವಾಹನ ಚಾಲನೆ ಮಾಡುವಾಗ ಮುಂದೆ ತಿರುವುಗಳಿರುವುದನ್ನು ಮುಂಜಾಗ್ರತೆಯಾಗಿ ಸೂಚಿಸುತ್ತವೆ.

ತಿರುವು ಚಿಹ್ನೆಗಳು

| ಎಡಕ್ಕೆ ತೀವ್ರ ತಿರುವು | ಬಲಕ್ಕೆ ತೀವ್ರ ತಿರುವು | ಬಲ ತಿರುವು | ಎಡ ರಿವರ್ಸ್ ತಿರುವು | ಬಲ ರಿವರ್ಸ್ ತಿರುವು | ವೃತ್ತ/ಸರ್ಕಲ್ |
|---|---|---|---|---|---|
|  |  |  |  |  |  |

Kiran Raghupathi

**ಜನರು ಕಾರ್ಯನಿರತರಾಗಿದ್ದಾರೆ (ರಸ್ತೆ ಕಾಮಗಾರಿ ಚಿಹ್ನೆ)**
ಈ ಚಿಹ್ನೆಗಳು ಚಾಲಕರುಗಳಿಗೆ, ರಸ್ತೆಯಲ್ಲಿ / ರಸ್ತೆಯ ಬದಿಯಲ್ಲಿ ನಿರ್ಮಾಣ ಅಥವಾ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುವುದನ್ನು ಸೂಚಿಸುತ್ತವೆ.




| **ಹೆಚ್ಚು ಆತಂಕದ ಪರಿಸ್ಥಿತಿಯಲ್ಲಿ ರಸ್ತೆಯನ್ನು ದಾಟುವ ಸಂದರ್ಭಗಳು** |
|---|

| | |
|---|---|
| **ಪಾದಚಾರಿಗಳ ರಸ್ತೆ ದಾಟುವಿಕೆ**<br>ಈ ಚಿಹ್ನೆಯು ವಾಹನ ಚಾಲಕರಿಗೆ, ಮುಂದೆ ಪಾದಚಾರಿಗಳು ರಸ್ತೆ ದಾಟುತ್ತಿರುವುದನ್ನು ಸೂಚಿಸುತ್ತದೆ. |  |
| **ಅಶಕ್ತರು ರಸ್ತೆ ದಾಟುವಿಕೆ**<br>ಈ ಚಿಹ್ನೆಯು ವಾಹನ ಚಾಲಕರಿಗೆ, ಮುಂದೆ ವಯೋವೃದ್ಧರು ಮತ್ತು ಅಶಕ್ತ ಪಾದಚಾರಿಗಳು ರಸ್ತೆ ದಾಟುತ್ತಿರುವುದನ್ನು ಸೂಚಿಸುತ್ತದೆ. |  |
| **ಸೈಕಲ್ ರಸ್ತೆ ದಾಟುವಿಕೆ**<br>ಈ ಚಿಹ್ನೆಯು ವಾಹನ ಚಾಲಕರಿಗೆ, ಮುಂದೆ ಸೈಕಲ್ ಸವಾರರು ರಸ್ತೆ ದಾಟುತ್ತಿರುವುದನ್ನು ಅಥವಾ ಯಾವುದೇ ಸಂಚಾರ ಸಿಗ್ನಲ್‌ಗಳ ಮೂಲಕ ನಿಯಂತ್ರಿಸದಿರುವ ಮಾರ್ಗ ಇರುವುದನ್ನು ಸೂಚಿಸುತ್ತದೆ. |  |
| **ಪ್ರಾಣಿಗಳ ಬಗ್ಗೆ ಎಚ್ಚರಿಕೆ**<br>ಈ ಚಿಹ್ನೆಯು ಮುಂದೆ ಪ್ರಾಣಿಗಳು ರಸ್ತೆಯಲ್ಲಿ ಓಡಾಡುವ ಬಗೆಗಿನ ಸೂಚನೆಗಳನ್ನು ನೀಡುತ್ತದೆ. |  |
| **ರೈಲ್ವೆ ಲೆವೆಲ್ ಕ್ರಾಸಿಂಗ್**<br>ಈ ಚಿಹ್ನೆಯು ವಾಹನ ಚಾಲಕರುಗಳಿಗೆ, ಮುಂದೆ ರಸ್ತೆಯಲ್ಲಿ ರೈಲ್ವೆ ಮತ್ತು ಟ್ರ್ಯಾಮ್ ಕ್ರಾಸ್‌ಗಳಿರುವುದನ್ನು ಸೂಚಿಸುತ್ತದೆ. ಸದರಿ ಕ್ರಾಸ್‌ಗಳಿರುವ ಅಂತರವನ್ನು ನಮೂದಿಸಲಾಗಿರುತ್ತದೆ. |  |
| **ಗಾರ್ಡ್‌ಗಳಿಲ್ಲದ ರೈಲ್ವೆ ಕ್ರಾಸಿಂಗ್**<br>ಮುಂದೆ ರಸ್ತೆಯಲ್ಲಿ ಗೇಟ್/ಬ್ಯಾರಿಕೇಡ್ಸ್ ಅಳವಡಿಸಿಲ್ಲದ ರೈಲ್ವೆ ಕ್ರಾಸಿಂಗ್ ಇರುವುದನ್ನು ಚಾಲಕರಿಗೆ ಈ ಚಿಹ್ನೆಯು ಸೂಚಿಸುತ್ತದೆ. |   |

Kiran Raghupathi

### 3. ಉಪಯುಕ್ತ ಮಾಹಿತಿ ನೀಡುವ ಚಿಹ್ನೆಗಳು (Information signs)

ಚಾಲಕರಿಗೆ/ರಸ್ತೆ ಬಳಕೆದಾರರಿಗೆ ಅಗತ್ಯ ಮಾಹಿತಿಗಳನ್ನು ಮಾಹಿತಿ ಸೂಚನಾ ಫಲಕಗಳು ಒದಗಿಸುತ್ತವೆ.




## ಸಂಚಾರ ಸಿಗ್ನಲ್ ದೀಪಗಳು

ಸಂಚಾರ ಸಿಗ್ನಲ್‌ದೀಪಗಳು ಸಂಚಾರ ನಿಯಂತ್ರಣದ ಒಂದು ಪ್ರಮುಖ ಯಂತ್ರವಾಗಿದೆ. ವಾಹನ ಸಂಚಾರಕ್ಕೆ ಮತ್ತು ಪಾದಚಾರಿಗಳ ಓಡಾಟದ ನಿರ್ವಹಣೆಗೆ ಸಿಗ್ನಲ್‌ಗಳು ಇರುತ್ತವೆ. ಸಾಮಾನ್ಯವಾಗಿ ಜಂಕ್ಷನ್‌ಗಳಲ್ಲಿ ಸಂಚಾರ ಸಿಗ್ನಲ್ ವ್ಯವಸ್ಥೆಯನ್ನು ಕೆಂಪು–ಹಸಿರು–ಹಳದಿ ಬಣ್ಣದ ದೀಪಗಳಿಂದ ನಿರ್ವಹಣೆ ಮಾಡಲಾಗುತ್ತಿದೆ.

1. **ಕೆಂಪು ಸಿಗ್ನಲ್ ದೀಪ:** ಕೆಂಪು ಸಿಗ್ನಲ್‌ದೀಪದ ಸೂಚನೆ ಬಂದಾಗ ವಾಹನಗಳು ಚಲಿಸಕೂಡದು. ಸ್ಟಾಪ್‌ಲೈನನ್ನು ಕ್ರಾಸ್ ಮಾಡಬಾರದು.

2. **ಹಳದಿ ಸಿಗ್ನಲ್ ದೀಪ:** ಹಳದಿ ಸಿಗ್ನಲ್ ದೀಪವು ಚಲಿಸುತ್ತಿರುವ ವಾಹನಗಳನ್ನು ನಿಲ್ಲಿಸಲು ಮತ್ತು ನಿಂತಿರುವ ವಾಹನಗಳನ್ನು ಚಲಿಸಲು ಸಿದ್ಧಗೊಳಿಸಿಕೊಳ್ಳುವುದನ್ನು ಸೂಚಿಸುತ್ತದೆ.

**ನಿಲುಗಡೆ ಗೆರೆ** (Stop line)

ನಿಲುಗಡೆ ಗೆರೆಗಳಿರುವೆಡೆಗಳಲ್ಲಿ, ಸಂಚಾರ ಸಿಗ್ನಲ್ ದೀಪದಲ್ಲಿ ನಿಲ್ಲುವ ಸೂಚನೆ ಬಂದಾಗ ಅಥವಾ ಅಧಿಕೃತ ಪೊಲೀಸ್ ಅಧಿಕಾರಿಯು ನಿಲ್ಲುವಂತೆ ಸೂಚನೆ ನೀಡಿದಾಗ, ಪ್ರತಿಯೊಬ್ಬ ಚಾಲಕರು ತಮ್ಮ ವಾಹನವನ್ನು ಸ್ಟಾಪ್ ಲೈನ್‌ಗಿಂತ ಹಿಂದೆಯೇ ಹಾಗೂ ವಾಹನದ ಯಾವೊಂದು ಭಾಗವೂ ಸಹ ಸ್ಟಾಪ್ ಲೈನ್‌ಗಿಂತ ಮುಂದೆ ಹೋಗದಂತೆ ನಿಲ್ಲಿಸುವುದು.



Kiran Raghupathi

3. **ಹಸಿರು ಸಿಗ್ನಲ್ ದೀಪ:** ಹಸಿರು ಸಿಗ್ನಲ್ ದೀಪದ ಸೂಚನೆ ಬಂದಾಗ ವಾಹನಗಳು ಅಗತ್ಯ ಎಚ್ಚರಿಕೆಯೊಡನೆ ಚಲಿಸಬಹುದು.

**ಪಾದಚಾರಿ ಸಿಗ್ನಲ್ ದೀಪಗಳು**




ಜಂಕ್ಷನ್‌ಗಳಲ್ಲಿ ಮತ್ತು ರಸ್ತೆ ದಾಟುವ ಸ್ಥಳಗಳಲ್ಲಿ ಕೆಂಪು ಮತ್ತು ಹಸಿರು ಬಣ್ಣದಲ್ಲಿ ನಿಂತಿರುವ ವ್ಯಕ್ತಿಯ ಚಿತ್ರವನ್ನೊಳಗೊಂಡಿರುತ್ತವೆ. ಪಾದಚಾರಿ ಸಿಗ್ನಲ್‌ನಲ್ಲಿ ಕೆಂಪು ಬ್ಲಿಂಕರ್ ಬರುತ್ತಿದ್ದರೆ ಆ ದಿಕ್ಕಿನಲ್ಲಿ ಪಾದಚಾರಿಗಳು ರಸ್ತೆಯನ್ನು ದಾಟಕೂಡದು. ಹಸಿರು ಪಾದಚಾರಿ ಸಿಗ್ನಲ್ ದೀಪ ಬಂದಾಗ ಮಾತ್ರ ರಸ್ತೆ ದಾಟಬೇಕಾಗುತ್ತದೆ.

**ಸಂಚಾರ ಸುರಕ್ಷತೆಯ ನಿಯಮಗಳ ಪಾಲನೆ**

ಸಾರಿಗೆ ವ್ಯವಸ್ಥೆ ಯಾವುದೇ ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುವಂಥದ್ದು. ಮಾನವನ ಬದುಕಿನಲ್ಲಿ ಸೀಮಿತ ಅಗತ್ಯವಾಗಿದ್ದ ಸಾರಿಗೆ ವ್ಯವಸ್ಥೆಗೆ ಕೈಗಾರಿಕೀಕರಣ ಆರಂಭವಾಗಿ, ತೀವ್ರಗತಿಯಲ್ಲಿ ಮುಂದುವರೆದಂತೆ ಅತ್ಯಂತ ಮಹತ್ವ ಪ್ರಾಪ್ತಿಯಾಯಿತು. ಉತ್ಪಾದನೆ ವೇಗ ಹೆಚ್ಚಾದಂತೆ ಉತ್ಪನ್ನಗಳ ಸರಬರಾಜೂ ವೇಗವಾಗಿ ಆಗುವ ಅಗತ್ಯ ತಲೆದೋರಿತು. ಇದರಿಂದ ವಾಹನಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಬೆಳವಣಿಗೆಗಳು ತೀವ್ರವಾಗುತ್ತಾ, ಸಾರಿಗೆ ವ್ಯವಸ್ಥೆಗೆ ಹೆಚ್ಚೆಚ್ಚು ವೇಗ ದಕ್ಕಿದಂತೆ ಅಪಘಾತಗಳೂ ಸಹ ಹೆಚ್ಚಾಗತೊಡಗಿದವು. ಅಪಘಾತಗಳ ಹೆಚ್ಚಳದ ಜತೆ ಜತೆಯಲ್ಲೇ ರಸ್ತೆ ಸುರಕ್ಷತೆ ಮತ್ತು ಅಪಘಾತಗಳ ನಿಯಂತ್ರಣಕ್ಕೆ ಅನೇಕ ಕಾನೂನುಗಳು ಜಾರಿಗೆ ಬಂದವು. ಸ್ಥಳೀಯ ಅನಿವಾರ್ಯತೆ ಮತ್ತು ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಕಾಲಕಾಲಕ್ಕೆ ರಸ್ತೆಸುರಕ್ಷತೆಯ ನಿಯಮಗಳು ಬದಲಾವಣೆಯಾಗುತ್ತಿವೆ.

***ರಸ್ತೆ ಅಪಘಾತಗಳಿಗೆ ಕಾರಣಗಳು***

| | |
|---|---|
| • ಕಟ್ಟುನಿಟ್ಟಾದ ನಿಯಮ ಪಾಲನೆಯ ಕೊರತೆ | • ಹವಾಮಾನ ವೈಪರೀತ್ಯಗಳು |
| • ನುರಿತ ವಾಹನ ಚಾಲಕರ ಕೊರತೆ | • ಕಾನೂನು ಉಲ್ಲಂಘನೆ |
| • ಉತ್ತಮ ಸ್ಥಿತಿಯಲ್ಲಿಲ್ಲದ ರಸ್ತೆಗಳು | • ಇನ್ನಿತರೆ ಕಾರಣಗಳು |
| • ವಾಹನಗಳ ನಿರ್ವಹಣೆಯ ಕೊರತೆ | |

***ಅಪಘಾತವಾದ ಸ್ಥಳದಲ್ಲಿ ನಾವು ಹೀಗೆ ಮಾಡೋಣವೇ?***

1. ಅಪಘಾತ ಸ್ಥಳದಲ್ಲಿ ಸಂಚಾರ ಮಾರ್ಪಾಡುಗಳೇನಾದರೂ ಇದ್ದಲ್ಲಿ ಚಾಚೂ ತಪ್ಪದೆ ಅನುಸರಿಸೋಣ.
2. ಸಂಚಾರ ಪೊಲೀಸರು ನೀಡಿರುವ ಸೂಚನೆಗಳನ್ನು ಪಾಲಿಸೋಣ.
3. ಅಪಘಾತ ಸ್ಥಳಕ್ಕೆ ಧಾವಿಸುವ ಅಥವಾ ಸ್ಥಳದಿಂದ ಹೊರಗೆ ಹೋಗುವ ತುರ್ತು ವಾಹನಗಳು ಮತ್ತು ಪೊಲೀಸ್ ವಾಹನಗಳಿಗೆ ಪ್ರಾಮುಖ್ಯತೆ ಕೊಡೋಣ.
4. ನಾವು ಅಪಘಾತದ ಸಾಕ್ಷಿಯಾಗಿದ್ದರೆ ತನಿಖಾಧಿಕಾರಿಗಳಿಗೆ ಸಹಕರಿಸೋಣ. ಅಂತಹವರಿಗೆ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ಕೇಸುಗಳಲ್ಲಿ ಹೊಣೆಗಾರಿಕೆ ಇರುವುದಿಲ್ಲ.
5. ಯಾವುದಾದರೂ ವಾಹನ ಬೇರೆ ಯಾರಿಗಾದರೂ ಡಿಕ್ಕಿ ಮಾಡಿ ನಿಲ್ಲಿಸದೇ ಹೋಗುತ್ತಿದ್ದರೆ 100ಕ್ಕೆ ಕರೆ ಮಾಡಿ ಪೊಲೀಸ್ ಕಂಟ್ರೋಲ್ ರೂಂಗೆ ಮಾಹಿತಿ ಕೊಡೋಣ.
6. ನಾವೇ ಅಪಘಾತ ಮಾಡಿದ್ದಲ್ಲಿ, ಗಾಯಾಳುಗಳನ್ನು ಮೊದಲು ಆಸ್ಪತ್ರೆಗೆ ಸೇರಿಸುವ ಮತ್ತು ಠಾಣೆಗೆ 24 ಗಂಟೆಯೊಳಗೆ ವಿಷಯ ತಿಳಿಸುವ ಜವಾಬ್ದಾರಿ ನಮ್ಮದೇ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ.

Kiran Raghupathi

***ಚಾಲನಾ ಪರವಾನಗಿ* (Driving License)**

ಕರ್ನಾಟಕದಲ್ಲಿ ಚಾಲನಾ ಪರವಾನಗಿಯನ್ನು ಪಡೆಯಲಿಚ್ಛಿಸುವವರು ಮೊದಲಿಗೆ ಕಲಿಯುವವರ ಪರವಾನಗಿಯನ್ನು ಪಡೆಯಬಹುದಾಗಿದ್ದು, ನಂತರ 6 ತಿಂಗಳ ಕಾಲಾವಧಿಯ ಒಳಗೆ ಚಾಲನಾ ಪರವಾನಗಿಯನ್ನು ಪಡೆಯಬಹುದಾಗಿರುತ್ತದೆ. ಕಲಿಯುವ ಪರವಾನಗಿಯನ್ನು ಪಡೆದ 1 ತಿಂಗಳ ಅವಧಿಯ ನಂತರ ಪರವಾನಗಿ ಪಡೆಯಲು ಪರೀಕ್ಷೆಗಾಗಿ ಸಮಯ ನಿಗದಿ ಮಾಡಲಾಗುತ್ತದೆ.

**ವಾಹನ ಚಾಲಕರು ಈ ಮುಂದಿನ ದಾಖಲೆಗಳನ್ನು ತಮ್ಮ ವಾಹನದೊಂದಿಗೆ ಸದಾ ಇಟ್ಟುಕೊಂಡಿರುವುದು ಅತೀ ಅಗತ್ಯ. ಆವಶ್ಯಕತೆಯಿದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಈ ದಾಖಲೆಗಳನ್ನು ತೋರಿಸಬೇಕಾಗಿರುತ್ತದೆ.**

| | |
|---|---|
| 1. ವಾಹನ ಚಾಲನಾ ಪರವಾನಗಿ (Driving Licence)<br>2. ವಾಹನ ನೋಂದಣಿ ಪತ್ರ (Registration Certificate)<br>3. ವಾಹನದ ವಿಮಾ ಪತ್ರ (Insurance Certificate)<br>4. ವಾಯು ಮಾಲಿನ್ಯ ತಪಾಸಣಾ ಪತ್ರ (Emission Test Certificate)<br>5. ವಾಹನ ದೃಢತೆಯ ಪ್ರಮಾಣ ಪತ್ರ (Fitness Certificate)<br>6. ವಾಹನದ ಪರ್ಮಿಟ್ (Mandatory for all types of Commercial Transport Vehicle only) | **ಇ–ಡಾಕ್ಯುಮೆಂಟ್:** ಪೊಲೀಸರು ಮೂಲ ದಾಖಲೆಗಳನ್ನು ತೋರಿಸಲು ಕೇಳಿದಾಗ ಅವುಗಳನ್ನು ಇ– ಡಾಕ್ಯುಮೆಂಟ್‌ನಲ್ಲಿ ಸಹ ತೋರಿಸಬಹುದು. ಇದಕ್ಕೆ ಭಾರತ ಸರ್ಕಾರದ ಡಿಜಿಲಾಕರ್ ಆಪ್ ಅಥವಾ ಪರಿವಾಹನ್ ಆಪ್‌ನ್ನು ಮೊಬೈಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ದಾಖಲೆಗಳನ್ನು ಸಂರಕ್ಷಿಸಿಕೊಳ್ಳಿ. |

***ರಸ್ತೆ ಬಳಕೆದಾರರಿಗೆ ಸುರಕ್ಷತೆಯ ಬಗ್ಗೆ ಸಲಹೆಗಳು***
**ವಾಹನ ಚಾಲಕರು/ಸಹ ಪ್ರಯಾಣಿಕರು**

- ದ್ವಿಚಕ್ರ ವಾಹನ ಚಾಲಕರು ಮತ್ತು ಹಿಂಬದಿ ಸವಾರರು ಯಾವಾಗಲೂ ಹೆಲ್ಮೆಟ್ ಧರಿಸಿರಬೇಕು
- ವಾಹನ ಚಾಲಕರು ಮತ್ತು ಮುಂದಿನ ಆಸನದಲ್ಲಿ ಕುಳಿತುಕೊಳ್ಳುವ ಪ್ರಯಾಣಿಕರು ಸೀಟ್ ಬೆಲ್ಟ್ ಧರಿಸಿರಬೇಕು. ಚಿಕ್ಕ ಮಕ್ಕಳಿಗೆ ಸೀಟ್ ಕ್ರಾಡಲ್(Cradle) ಬಳಸಿ ಸೀಟ್ ಬೆಲ್ಟ್ ಹಾಕಬೇಕು.
- ವಾಹನ ಚಾಲನೆಯಲ್ಲಿರುವಾಗ ಚಾಲಕರನ್ನು ಮಾತನಾಡಿಸಬಾರದು ಮತ್ತು ಚಾಲಕರೂ ಮಾತನಾಡಬಾರದು ಹಾಗೂ ಮೊಬೈಲ್ ಬಳಸಬಾರದು.
- 12 ವರ್ಷದ ಒಳಗಿನ ಮಕ್ಕಳು ಮುಂದಿನ ಆಸನಗಳಲ್ಲಿ ಕುಳಿತುಕೊಳ್ಳದೆ ಹಿಂಬದಿಯ ಆಸನಗಳಲ್ಲಿಯೇ ಕುಳಿತುಕೊಳ್ಳುವುದು ಒಳಿತು.
- ವಾಹನ ನಿಲುಗಡೆ ಮಾಡುವಾಗ ಹಿಂದಿನ ಮತ್ತು ಮುಂದಿನ ವಾಹನಗಳ ನಡವಿನ ಅಂತರ 3 ಅಡಿಗಳಷ್ಟಿರಬೇಕು.

***ರಸ್ತೆ ಸಂಚಾರದ ನೀತಿ ನಿಯಮಗಳು ಮತ್ತು ರಸ್ತೆ ಬಳಕೆದಾರರ ಉತ್ತಮ ವರ್ತನೆಗಳು***

ರಸ್ತೆ ಇರುವುದು ಎಲ್ಲರ ಉಪಯೋಗಕ್ಕಾಗಿಯಲ್ಲವೇ? ರಸ್ತೆ ಬಳಕೆ ಮಾಡುವಾಗ ನಾವು ಪಾದಚಾರಿಗಳಾಗಿರಲೀ, ಸೈಕಲ್ ಸವಾರರಾಗಿರಲೀ, ವಾಹನ ಚಾಲಕರಾಗಿರಲೀ/ಸಹ ಪ್ರಯಾಣಿಕರಾಗಿರಲೀ ರಸ್ತೆಯ ಸಹಬಳಕೆದಾರರ ಬಗ್ಗೆ ಕಳಕಳಿಯಿಂದ ವರ್ತಿಸಬೇಕು. ರಸ್ತೆಯನ್ನು ಅತ್ಯುತ್ತಮವಾಗಿ ಬಳಸುವ ಸತ್ಪ್ರಜೆಯಾಗಿ ರಸ್ತೆ ಸಂಚಾರದ ನೀತಿ ನಿಯಮಗಳನ್ನು ಅನುಸರಿಸಬೇಕು ಮತ್ತು ನಮ್ಮೊಂದಿಗೆ ರಸ್ತೆಯನ್ನು ಉಪಯೋಗಿಸಿಕೊಳ್ಳುವ ರಸ್ತೆಯ ಸಹಬಳಕೆದಾರರಿಗಿರುವ ಹಕ್ಕನ್ನೂ ಗೌರವಿಸಬೇಕು.

Kiran Raghupathi

<table>
<tr>
<td><br>ಮಕ್ಕಳಿಗೆ, ವಿಕಲಾಂಗಚೇತನರಿಗೆ, ವಯಸ್ಸಾದವರಿಗೆ, ಮೊದಲು ಅವಕಾಶ ನೀಡಬೇಕು.</td>
<td><br>ಹೆಚ್ಚು ಜನಸಂದಣಿಯ ಟ್ರಾಫಿಕ್ ಇರುವಲ್ಲಿ ಜನರಿಗೆ ರಸ್ತೆ ಬಲಭಾಗದಲ್ಲಿ ಚಲಿಸಲು ಅವಕಾಶ ಮಾಡಿಕೊಡಬೇಕು.</td>
</tr>
<tr>
<td><br>ಅಗ್ನಿಶಾಮಕವಾಹನ, ಆಂಬ್ಯುಲೆನ್ಸ್, ಪೊಲೀಸ್ ಇಂತಹ ಅತಿ ತುರ್ತು ವಾಹನಗಳು ಸಾಗಲು ದಾರಿ ಮಾಡಿಕೊಡಬೇಕು.</td>
<td><br>ಪಾದಚಾರಿಗಳು ಝೀಬ್ರಾ ಕ್ರಾಸಿಂಗ್ ಮೂಲಕವೇ ರಸ್ತೆ ದಾಟಬೇಕು. ರಸ್ತೆ ಮೇಲ್ಸೇತುವೆ ಅಥವಾ ರಸ್ತೆ ಸುರಂಗ ಮಾರ್ಗಗಳಿದ್ದಲ್ಲಿ ಅವುಗಳನ್ನು ಉಪಯೋಗಿಸಿಕೊಂಡೇ ರಸ್ತೆಗಳನ್ನು ದಾಟಬೇಕು.</td>
</tr>
<tr>
<td><br>ವಾಹನ ಚಾಲನೆಯಲ್ಲಿ ವೇಗದ ಮಿತಿಯಿರಬೇಕು.</td>
<td><br>ಸೈಕಲ್/ದ್ವಿಚಕ್ರ ವಾಹನ ಚಾಲಕರು ರಸ್ತೆಯ ಎಡಬದಿಯಲ್ಲಿ ಅವುಗಳಿಗಾಗಿಯೇ ಇರುವ ಪಥಗಳಲ್ಲಿಯೇ ಸಂಚರಿಸಬೇಕು.</td>
</tr>
</table>

Kiran Raghupathi

| | |
|---|---|
| <br>ಮೊಬೈಲ್‌ನಲ್ಲಿ ಮಾತನಾಡುವ ಸಂದರ್ಭ ಬಂದಲ್ಲಿ ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಿ ಮಾತನಾಡಬೇಕು. | <br><br>ಇತರೆ ರಸ್ತೆ ಬಳಕೆದಾರರೊಂದಿಗೆ ರಸ್ತೆಯನ್ನು ಅವಶ್ಯಕತೆಗೆ ತಕ್ಕಂತೆ ಹಂಚಿಕೊಳ್ಳಬೇಕು. |
| <br>ವಾಹನ ಚಾಲಕರನ್ನೊಳಗೊಂಡಂತೆ ಪ್ರಯಾಣಿಕರೂ ಸಹ ಸೀಟ್ ಬೆಲ್ಟನ್ನು ಕಡ್ಡಾಯವಾಗಿ ಉಪಯೋಗಿಸಬೇಕು. | <br>ರಸ್ತೆಯ ಸ್ವಚ್ಛತೆಯನ್ನು ಕಾಪಾಡಲು ರಸ್ತೆ ಬದಿಯಲ್ಲಿರುವ ಕಸದ ಬುಟ್ಟಿಯಲ್ಲೇ ಕಸವನ್ನು ಹಾಕಬೇಕು. |
| <br><br>ಪಾದಚಾರಿಗಳು, ಸೈಕಲ್ ಸವಾರರು, ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನಗಳ ಚಾಲಕರನ್ನೊಳಗೊಂಡಂತೆ ಎಲ್ಲರೂ ರಸ್ತೆ ಟ್ರಾಫಿಕ್ ಸಿಗ್ನಲ್ ದೀಪದ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು. | <br>ವಾಹನವನ್ನು ಹತ್ತುವಾಗ ಮತ್ತು ಇಳಿಯುವಾಗ ಸರತಿಯ ಸಾಲಿನಲ್ಲಿ ನಿಂತು ಶಿಸ್ತಿನಿಂದ ವರ್ತಿಸಬೇಕು. |
| <br>ಬೆಟ್ಟ–ಗುಡ್ಡಗಳ ಕಡಿದಾದ ರಸ್ತೆಗಳಲ್ಲಿ ಮೇಲಕ್ಕೆ ಹೋಗುತ್ತಿರುವ ವಾಹನಗಳಿಗೆ ಮೊದಲು ಚಲಿಸಲು ಅವಕಾಶ ಮಾಡಿಕೊಡಬೇಕು. | <br>ರಸ್ತೆ ಛೇದಕಗಳಲ್ಲಿ, ರಸ್ತೆ ತಿರುವುಗಳಲ್ಲಿ ಪಾದಚಾರಿಗಳಿಗೆ, ಸೈಕಲ್ ಸವಾರರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. |

Kiran Raghupathi

## ರಸ್ತೆ ಸಂಚಾರ ನಿಯಮಗಳ ಪಾಲನೆ ಮಾಡದಿರುವುದರಿಂದ ಆಗುವ ಪರಿಣಾಮಗಳು

| | | |
|---|---|---|
| 1. ಗಾಯವಾಗುವುದರೊಂದಿಗೆ ಅಂಗಾಂಗ ಊನತೆ ಅಥವಾ ಪ್ರಾಣ ಹಾನಿ  | 2. ವಾಹನ ಹಾನಿ  | 3. ಮಾನಸಿಕ ಒತ್ತಡ /ಜಗಳಗಳು  |
| 4. ದಂಡ/ಜುಲ್ಮಾನೆ/ಜೈಲು ಶಿಕ್ಷೆ  | 5. ಸಮಯ ವ್ಯಯ  | 6. ಹಣದ ನಷ್ಟ   |

Kiran Raghupathi

# ಅಧ್ಯಾಯ–18

## ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ(ಕೆಎಸ್‌ಸಿಪಿಪಿ)

### ಉದ್ದೇಶಗಳು

**ಈ ಅಧ್ಯಾಯದ ನಂತರ ಸದಸ್ಯರು;**

- ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಪ್ರಮುಖಾಂಶಗಳನ್ನು ತಿಳಿಯುವರು.
- ನೀತಿ ನಿರೂಪಣೆಯ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳನ್ನು ಅರ್ಥೈಸಿಕೊಂಡು ಅನುಷ್ಠಾನಕ್ಕೆ ಕ್ರಮವಹಿಸುವರು.
- ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಸಮಿತಿ ಮತ್ತು ಮಕ್ಕಳ ಕ್ಲಬ್‌ಗಳನ್ನು ರಚಿಸಲು ಬೆಂಬಲ ನೀಡುವರು.
- ಪೋಕ್ಸೋ (POCSO)ಕಾಯಿದೆ ಮತ್ತು ಮಕ್ಕಳ ಸಹಾಯವಾಣಿಯ ಪರಿಚಯ ಮಾಡಿಕೊಳ್ಳುವರು.

### 1.1 ರಾಜ್ಯದ ದೃಷ್ಟಿಕೋನ

ರಾಜ್ಯದಲ್ಲಿನ ಪ್ರತಿ ಮಗುವು ಸುರಕ್ಷಿತ, ರಕ್ಷಣಾತ್ಮಕ ಮತ್ತು ಸಶಕ್ತ ಪರಿಸರದಲ್ಲಿ ಬೆಳೆಯುವುದರೊಂದಿಗೆ, ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಮಗುವು ತನ್ನ ಸಾಮರ್ಥ್ಯವನ್ನು ತಲುಪಲು ಅವಕಾಶಗಳನ್ನು ಒದಗಿಸುತ್ತದೆ. ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಮತ್ತು ಆನಂದಿಸಲು ಅನುಕೂಲಕರವಾದ ಪರಿಸರವನ್ನು ನಿರ್ಮಿಸಲು ರಾಜ್ಯದಲ್ಲಿನ ಎಲ್ಲಾ ಭಾಗೀದಾರರು ಅಂದರೆ, ಪೋಷಕರು, ಆರೈಕೆ ಸೇವೆಗಳನ್ನು ನೀಡುವವರು ಮತ್ತು ಸಮುದಾಯ ಒಟ್ಟುಗೂಡಿ ಕೆಲಸ ಮಾಡುವುದರೊಂದಿಗೆ ಮಕ್ಕಳ ಕುರಿತಾದ ತಾರತಮ್ಯಗಳನ್ನು ನಿವಾರಿಸುವ ಹಾಗೂ ಮಕ್ಕಳ ಭಾಗವಹಿಸುವಿಕೆ ಸಂಭಾಷಣೆ ಮತ್ತು ಅಭಿಪ್ರಾಯಗಳನ್ನು ಗೌರವಿಸುವುದರೊಂದಿಗೆ ಮಗುವಿನ ಘನತೆಯನ್ನು ಎತ್ತಿ ಹಿಡಿಯುವುದಾಗಿದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ (ಕೆಎಸ್‌ಸಿಪಿಪಿ)ಯು ಮಕ್ಕಳ ಅಧಿಪತ್ಯದ ತತ್ವವನ್ನಾಧರಿಸಿದ ಮಕ್ಕಳ ರಕ್ಷಣೆಯ ಒಂದು ಸಮಗ್ರ ಭಾಗವಾಗಿದೆ.

### 1.2 ನೀತಿಯ ನಿರೂಪಣೆ

ಕರ್ನಾಟಕ ರಾಜ್ಯ ಸರ್ಕಾರವು ಮಕ್ಕಳ ಹಕ್ಕುಗಳನ್ನು ಜಾರಿಗೊಳಿಸಲು ಬಾಧ್ಯಸ್ಥವಾಗಿರುವುದಲ್ಲದೆ, ರಾಜ್ಯದಲ್ಲಿನ ಪ್ರತಿಯೊಂದು ಮಗುವಿಗೂ (ಮಗುವು ಕರ್ನಾಟಕ ರಾಜ್ಯದ ಅಥವಾ ಭಾರತ ದೇಶದ ಅಥವಾ ಹೊರದೇಶದ ನಿವಾಸಿಯಾಗಿರಲಿ) ಎಲ್ಲಾ ಬಗೆಯ ದುರುಪಯೋಗ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ನೀಡುತ್ತದೆ. ಮಕ್ಕಳ ಭಾಗವಹಿಸುವಿಕೆಯೊಂದಿಗೆ ಅವರು ಗೌರವಯುತ ಮತ್ತು ಅವರ ಸಾಮರ್ಥ್ಯವನ್ನು ಪೂರ್ಣಪ್ರಮಾಣದಲ್ಲಿ ಬೆಳೆಸಲು ಪೂರಕವಾದ ಪರಿಸರವನ್ನು ಒದಗಿಸುವುದರೊಂದಿಗೆ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಮತ್ತು ಪ್ರಚಾರ ಮಾಡಲು ಸರ್ಕಾರವು ಬದ್ಧವಾಗಿದೆ.

### 1.3 ರಾಜ್ಯದ ಧ್ಯೇಯ

ಸರ್ಕಾರವು ರಾಜ್ಯದಲ್ಲಿನ ಮಕ್ಕಳ ರಕ್ಷಣೆಯನ್ನು ಹಕ್ಕುಗಳ ಆಧಾರಿತ ವಿಧಾನದಲ್ಲಿ ಒದಗಿಸಲು ಬದ್ಧವಾಗಿರುವುದರೊಂದಿಗೆ, ಕಾನೂನಾತ್ಮಕವಾಗಿ ಗುರುತಿಸಲ್ಪಟ್ಟ ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಭಾಗವಹಿಸುವಿಕೆಯನ್ನು ಒಳಗೊಂಡಂತೆ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಕುರಿತಂತೆ ಪ್ರಚಾರ ಮಾಡುವುದಾಗಿದೆ. ರಾಜ್ಯದಲ್ಲಿನ ಪ್ರತಿಯೊಂದು ಮಗುವು ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ರೀತಿಯ ಹಿಂಸೆ, ನಿರ್ಲಕ್ಷ್ಯ ಮತ್ತು

Kiran Raghupathi

ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ಹೊಂದಬೇಕಾಗಿದೆಯಲ್ಲದೇ, ಎಲ್ಲಾ ಸಾಮಾಜಿಕ ವಲಯಗಳ ವಿಶೇಷವಾಗಿ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಭದ್ರತೆ ಮತ್ತು ಸಾಮಾಜಿಕ ನ್ಯಾಯ ಮಕ್ಕಳಿಗೆ ದೊರೆಯುವಂತಾಗಬೇಕು. ರಾಜ್ಯದಲ್ಲಿ ಲಿಂಗತ್ವ, ನಾಗರೀಕತೆಯೂ ಸೇರಿದಂತೆ, ಎಲ್ಲಾ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಥವಾ ಭೌಗೋಳಿಕ ತಾರತಮ್ಯಗಳನ್ನು ತೊಡೆದುಹಾಕಿ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯು ಮಕ್ಕಳ ರಕ್ಷಣಾ ಸೇವೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತದೆ.

ರಾಜ್ಯವು ಯಾವುದೇ ಮಗು, ಯಾವುದೇ ರೀತಿಯ ದೈಹಿಕ ಅಥವಾ ಮಾನಸಿಕ ಹಿಂಸೆ, ದೌರ್ಜನ್ಯ, ನಿರ್ಲಕ್ಷ್ಯ ಅಥವಾ ಶೋಷಣೆಗೆ ಸಿಲುಕಿರುವವರನ್ನು ಅಥವಾ ಒಳಗಾಗಬಹುದಾದವರನ್ನು ರಕ್ಷಿಸಲು ಮುಂಜಾಗ್ರತಾ ಮತ್ತು ಸುಧಾರಣೆಯ ಎರಡು ರೀತಿಯ ಕ್ರಮಗಳನ್ನು ಅನುಷ್ಠಾನಗೊಳಿಸುತ್ತದೆ.

ಸರ್ಕಾರವು ರಾಜ್ಯದಲ್ಲಿನ ಎಲ್ಲಾ ಮಕ್ಕಳ ಕಾನೂನಾತ್ಮಕ ಹಕ್ಕುಗಳನ್ನು ರಕ್ಷಿಸುವುದರೊಂದಿಗೆ ಅವರ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಅಗತ್ಯಗಳನ್ನು ಒಳಗೊಂಡಂತೆ ಅವರ ಸುರಕ್ಷತೆಯನ್ನು ಖಚಿತಪಡಿಸಲು ಸೂಕ್ತಕ್ರಮಗಳನ್ನು ಕೈಗೊಳ್ಳುತ್ತದೆ.

ರಾಜ್ಯವು ವಿಶೇಷವಾಗಿ ದೌರ್ಜನ್ಯಕ್ಕೊಳಗಾದ ಮಕ್ಕಳು, ತುಳಿತಕ್ಕೊಳಗಾದ ಮತ್ತು ದುರ್ಬಲ ವರ್ಗದ ಮಕ್ಕಳು, ಅಂದರೆ ಹೆಣ್ಣು ಮಕ್ಕಳು, ಮೂರನೇ ಲಿಂಗದ ಮಕ್ಕಳು, ವಿಕಲಚೇತನ ಮಕ್ಕಳು, ವಿಶೇಷ ಅಗತ್ಯತೆಯುಳ್ಳ ಮಕ್ಕಳು, ವಸತಿ ರಹಿತ ಮಕ್ಕಳು ನೈಸರ್ಗಿಕ / ಮಾನವ ನಿರ್ಮಿತ ಅವಘಡ ಮತ್ತು ಸಂಘರ್ಷಗಳಿಂದಾಗಿ ತೊಂದರೆಗೆ ಒಳಗಾದ ಮಕ್ಕಳು, ಹೆಚ್.ಐ.ವಿ. ಸೋಂಕಿತ ಅಥವಾ ಬಾಧಿತ ಮಕ್ಕಳು ಅಥವಾ ದೀರ್ಘಾವಧಿ ಕಾಯಿಲೆಯಿಂದ ನರಳುವ ಮಕ್ಕಳ ಅಗತ್ಯತೆಗಳ ಬಗ್ಗೆ ಗಮನಿಸುವುದು.

ರಾಜ್ಯವು ಮಕ್ಕಳ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳುವ (ಮಗುವಿನ ವಯಸ್ಸು ಮತ್ತು ತಿಳುವಳಿಕೆಯನ್ನು ಆಧರಿಸಿ) ಹಾಗೂ ಹಿರಿಯರು ಮತ್ತು ಮಕ್ಕಳ ನಡುವೆ ಪರಸ್ಪರ ಗೌರವಯುತ ಸಂವಹನಕ್ಕೆ ಅವಕಾಶ ನೀಡುವ ವಾತಾವರಣವನ್ನು ಕಲ್ಪಿಸಿಕೊಡುತ್ತದೆ.

ರಾಜ್ಯವು ಮಕ್ಕಳ ಸುರಕ್ಷತೆ ಮತ್ತು ರಕ್ಷಣೆಗಾಗಿ ಕಾನೂನು ಹಾಗೂ ನೀತಿಗಳ ಸುಧಾರಣೆ, ಸಾಮರ್ಥ್ಯಾಭಿವೃದ್ಧಿ, ಯೋಜನೆ ಮತ್ತು ಅನುಷ್ಠಾನ, ಆಯವ್ಯಯ, ಮೇಲ್ವಿಚಾರಣೆ ಮತ್ತು ಮಕ್ಕಳ ಕುರಿತು ಮಾಹಿತಿ ವ್ಯವಸ್ಥೆಯನ್ನು ರೂಪಿಸಲು ಬದ್ಧವಾಗಿದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಮೂಲಕ ಕರ್ನಾಟಕ ಸರ್ಕಾರವು ಈ ಕೆಳಗಿನ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ;

- ಪ್ರಸುತ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಯಲ್ಲಿನ ಕೊರತೆಗಳನ್ನು ನಿವಾರಿಸುವುದು
- ಮಗುವಿನ ಕುರಿತಾದ ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತಕ್ಕೆ ಪೂರಕವಾದ ಸಾಂಸ್ಥಿಕ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವುದು.
- ಇಲಾಖೆ ಮತ್ತು ಸಂಸ್ಥೆಗಳ ನಡುವೆ ವಿವಿಧ ಚಟುವಟಿಕೆಗಳ ಸಂಯೋಜನೆ ಹಾಗೂ ಸಂಪರ್ಕಗಳನ್ನು ಬಲಪಡಿಸಲು ಉತ್ತೇಜಿಸುವುದು.

## 1.4 ಸಹಭಾಗಿತ್ವದ ತತ್ವಗಳು

ಸಮರ್ಥ ಮಕ್ಕಳ ರಕ್ಷಣಾ ವ್ಯವಸ್ಥೆಯು, ಮಕ್ಕಳ ಸಂಪರ್ಕವಿರುವ ಎಲ್ಲಾ ಭಾಗೀದಾರರಿಂದ ಮಕ್ಕಳಿಗೆ ರಕ್ಷಣೆಯನ್ನು ಒದಗಿಸುವ ವಾತಾವರಣ ಪರಿಕಲ್ಪನೆಯ ಬಗ್ಗೆ ಬದ್ಧತೆಯನ್ನು ನಿರೀಕ್ಷಿಸುತ್ತದೆ. ಇದಕ್ಕೆ ಸರ್ಕಾರದ ಇಲಾಖೆಗಳು, ಚುನಾಯಿತ ಪ್ರತಿನಿಧಿಗಳು ಮತ್ತು ಸಂಬಂಧಿತ ಸರ್ಕಾರೇತರ ಪ್ರತಿನಿಧಿಗಳು ಹಾಗೂ ಸ್ವತಃ ಮಕ್ಕಳನ್ನು ಒಳಗೊಂಡಂತೆ ಮಕ್ಕಳ ಒಳಿತಿಗಾಗಿ ಕಾರ್ಯನಿರ್ವಹಿಸುತ್ತಿರುವವರ ಮಧ್ಯೆ ಸಹಭಾಗಿತ್ವದ ಅವಶ್ಯಕತೆ ಇದೆ.

ರಾಜ್ಯ ಮಕ್ಕಳ ರಕ್ಷಣಾ ನೀತಿಯು, ಮಕ್ಕಳ ಸಂರಕ್ಷಣೆಯಲ್ಲಿ ನಿರತರಾಗಿರುವ ಭಾಗೀದಾರರ ಪಾತ್ರ ಮತ್ತು ಜವಾಬ್ದಾರಿಗಳು ಮತ್ತು ಸಾಂಸ್ಥಿಕ ಹಾಗೂ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವ ಕುರಿತು

Kiran Raghupathi

ತಿಳಿಸುವುದರೊಂದಿಗೆ ಅದಕ್ಕಾಗಿ ರಾಜ್ಯವು ಒದಗಿಸಿದ ವಿವಿಧ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು ರಾಜ್ಯದಲ್ಲಿನ ವಿವಿಧ ಇಲಾಖೆಗಳ ನಡುವೆ ಸಮಾಂತರ ಸಂಪರ್ಕಗಳು ಹಾಗೂ ಕೇಂದ್ರ, ಜಿಲ್ಲೆ ಮತ್ತು ಪಂಚಾಯಿತಿ, ಗ್ರಾಮ / ಪುರಸಭೆ ಮಟ್ಟಗಳಲ್ಲಿ ಲಂಬಾಂತರ ಸಂಪರ್ಕಗಳ ನಿರ್ಮಾಣದ ಸಹಭಾಗಿತ್ವ ತತ್ವದ ಆಧಾರದಲ್ಲಿ ರಚಿಸಲಾಗಿದೆ. ಸ್ಥಳೀಯ ಸಂಸ್ಥೆಗಳಾದ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಗ್ರಾಮ / ವಾರ್ಡ್ ಸಭೆಗಳ ಮೂಲಕ ಅದರಲ್ಲೂ ವಿಶೇಷವಾಗಿ ಮಕ್ಕಳ ಗ್ರಾಮಸಭೆಗಳ ಮೂಲಕ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಲ್ಲದೆ, ಮಗುವನ್ನು ಒಬ್ಬ ವ್ಯಕ್ತಿಯನ್ನಾಗಿ ಮತ್ತು ಅವರ ಹಕ್ಕುಗಳನ್ನು ಗುರುತಿಸಿ, ಗೌರವಿಸಬೇಕು.

ರಾಜ್ಯ ಮಕ್ಕಳ ರಕ್ಷಣಾ ನೀತಿಯನ್ನು, ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಧಿಸೂಚಿಸುತ್ತದೆ ಮತ್ತು ಈ ನೀತಿಯನ್ನು ಸಾರ್ವಜನಿಕ ಶಿಕ್ಷಣ, ಪೊಲೀಸ್, ಸಮಾಜ ಕಲ್ಯಾಣ, ನ್ಯಾಯಾಂಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಇಲಾಖೆಗಳು, ಜಿಲ್ಲಾಡಳಿತ ಹಾಗೂ ಸಂಬಂಧಿಸಿದ ಇತರೆ ಇಲಾಖೆ ಮತ್ತು ಸಂಸ್ಥೆಗಳು ಅಳವಡಿಸಿಕೊಂಡು ಅನುಷ್ಠಾನಗೊಳಿಸುತ್ತವೆ.

**ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯಡಿ ಶೈಕ್ಷಣಿಕ ಸಂಸ್ಥೆಗಳಿಗಾಗಿ ರೂಪಿಸಲಾಗಿರುವ ಕಾರ್ಯನಿರ್ವಹಣಾ ಮಾರ್ಗಸೂಚಿಗಳು ಮತ್ತು ಕಾರ್ಯವಿಧಾನಗಳು**

**1.1 ಸುರಕ್ಷಿತ ಶಾಲೆಯ ಪರಿಕಲ್ಪನೆ**

ಮಗು ಎದುರಿಸುತ್ತಿರುವ ಮಾನಸಿಕ, ಭಾವನಾತ್ಮಕ, ಗ್ರಹಿಕಾತ್ಮಕ, ಸಾಮಾಜಿಕ, ಸಾಂಸ್ಕೃತಿಕ, ಭೌಗೋಳಿಕ ಅಥವಾ ಭೌತಿಕ ಸಂಕಷ್ಟಗಳನ್ನು ವಿವಿಧ ಆಯಾಮಗಳಡಿ ತುಲನೆ ಮಾಡಿ, ಶೈಕ್ಷಣಿಕ ಸಂಸ್ಥೆಗಳು ಮಕ್ಕಳಿಗೆ ಸುರಕ್ಷಿತ ಪರಿಸರದ ರಕ್ಷಣೆ ನೀಡುವುದನ್ನು ಖಾತರಿಪಡಿಸಿಕೊಳ್ಳಲು ಸಮಗ್ರ ವಿಧಾನವನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಮಕ್ಕಳ ರಕ್ಷಣೆಯ ವಿಧಾನವು ಮಗುವಿನ ಶೈಕ್ಷಣಿಕ ಪರಿಸರ ಹಾಗೂ ಸಮಗ್ರವಾಗಿ ತೊಡಗಿಸಿಕೊಳ್ಳುವಿಕೆಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿರ್ವಹಿಸಬೇಕಾಗಿದೆ.

ಸದೃಢ ಮತ್ತು ಪೂರ್ವಭಾವಿ ಸುರಕ್ಷಿತ ಶಾಲಾ ವಾತಾವರಣದ ನಿರ್ಮಾಣವು ಭಾರತದ ಸಂವಿಧಾನ ಮತ್ತು ಶಾಸನಗಳಡಿಯಲ್ಲಿ ಮಕ್ಕಳು ಮತ್ತು ಅವರ ಹಕ್ಕುಗಳ ಕುರಿತಂತೆ ತಿಳಿಸಿರುವ ಅಂಶಗಳನ್ನು ಗೌರವಿಸುವುದರ ಆಧಾರದ ಮೇಲೆ ನಿಂತಿದೆ ಮತ್ತು ಹಲ್ಲೆ, ಕಿರುಕುಳ ಮತ್ತು ನಿಂದನೆಯಿಂದ ಮುಕ್ತವಾಗಿದೆ. ಶಿಕ್ಷಕರು, ಪೋಷಕರು, ಸಮುದಾಯ, ಇತರೆ ಶಾಲೆಗಳು ಮತ್ತು ಪ್ರಮುಖವಾಗಿ ಮಕ್ಕಳೂ ಸೇರಿದಂತೆ ಇತರೆ ಭಾಗೀದಾರರ ಜೊತೆಗೂಡಿ ಕಾರ್ಯನಿರ್ವಹಿಸುವುದಾಗಿದೆ. ವಿವಿಧ ಭಾಗೀದಾರರು ಒಟ್ಟಾಗಿ ಪೂರ್ವಾಗ್ರಹಗಳನ್ನು ತೊಡೆದುಹಾಕುವ ಮೂಲಕ ಹಾಗೂ ಮಗುವಿನ ಘನತೆಯನ್ನು ಎತ್ತಿಹಿಡಿದು ಮಕ್ಕಳ ಹಕ್ಕುಗಳನ್ನು ವಾಸ್ತವವಾಗಿ ಸಾಕಾರಗೊಳಿಸಬೇಕಾಗಿದೆ. ಸುರಕ್ಷಿತ ಶಾಲಾ ಪರಿಸರವು, ಮಗುವಿನ ಸಕಾರಾತ್ಮಕ ಹಾಗೂ ಒಟ್ಟಾರೆ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸುವುದಾಗಿದೆ.

ಸುರಕ್ಷಾ ಶಾಲಾ ಪರಿಸರದ ಕಲ್ಪನೆಯು, ಒಂದು ಸಮರ್ಥ ಮತ್ತು ಸಬಲಗೊಳಿಸುವಿಕೆಯ ಪ್ರಕ್ರಿಯೆಯಾಗಿದ್ದು, ನಿರ್ಬಂಧಿತ ಕ್ರಮಗಳಾದ ಸದಾ ನಿಗಾ ವಹಿಸುವಿಕೆ ಮತ್ತು ನಿಯಂತ್ರಣ ಆಧಾರಿತ ವಿಧಾನವಾಗಿರುವುದಿಲ್ಲ ಎಂಬುದನ್ನು ನಿರ್ದೇಶಿಸುತ್ತದೆ. ಇದು ಮಗುವಿನ ಭಾಗವಹಿಸುವಿಕೆಯನ್ನು ಕೇಂದ್ರೀಕರಿಸುವುದನ್ನು ತಿಳಿಸುತ್ತದೆ ಹಾಗೂ ಈ ಮೂಲಕ ಎಲ್ಲಾ ಹಕ್ಕುಗಳು ಮತ್ತು ಮಕ್ಕಳನ್ನು ಕೇಂದ್ರೀಕರಿಸಿದ ಆಶಾದಾಯಕ ಶಾಲೆಯ ಅವಶ್ಯಕತೆಗಳನ್ನು ಹೊಂದಲು ಅನುವು ಮಾಡಿಕೊಡುವುದು. ಇದು ಮಗು ಸುರಕ್ಷಿತವಾಗಿದೆ ಎಂದು ಭಾವಿಸಿ ಪ್ರತಿಕ್ರಿಯಿಸುವ ವಾತಾವರಣವನ್ನು ನಿರ್ಮಿಸುವ ತತ್ತ್ವದಡಿ ಮಕ್ಕಳೂ ಸೇರಿದಂತೆ ಎಲ್ಲಾ ಭಾಗೀದಾರರು ಭಾಗವಹಿಸಬೇಕಾಗಿದೆ ಎಂಬುದನ್ನು ಆಶಿಸುತ್ತದೆ.

Kiran Raghupathi

**1.2 ಸುರಕ್ಷಿತ ಶಾಲೆಯ ಮೌಲ್ಯಗಳು**

**1.2.1 ಮಗು ಕೇಂದ್ರಿತ ವಿಧಾನ**

ಇದು ಮಕ್ಕಳನ್ನು ಸಮಗ್ರವಾಗಿ ನೋಡಿ ಗುರುತಿಸುವ ಒಂದು ಪ್ರಮುಖ ಮೌಲ್ಯವಾಗಿದ್ದು, ಪ್ರತಿಯೊಂದು ಮಗುವು ತನ್ನ ಅನುಭವಗಳು ಮತ್ತು ಅಭಿಪ್ರಾಯಗಳ ಮೂಲಕ ಕೊಡುಗೆ ನೀಡುವುದಾಗಿದೆ. ಮಗು ಕೇಂದ್ರಿತ ವಿಧಾನಗಳು ಮುಖ್ಯವಾಗಿ ಮಗುವಿನ ಅತ್ಯುತ್ತಮ ಹಿತಾಸಕ್ತಿಗಳಾದ ಅನಿಸಿಕೆ, ಇಚ್ಛೆ ಮತ್ತು ಕಾಳಜಿಯನ್ನು ಪರಿಗಣಿಸಿ ನಿರ್ಧರಿಸಬಹುದು. ಇದರಿಂದ ಎಲ್ಲಾ ಮಕ್ಕಳಿಗೆ ಭಾಗವಹಿಸಲು ಮತ್ತು ಕಲಿಕೆಯ ಅವಕಾಶಗಳಿಂದ ಎಲ್ಲಾ ಪ್ರಯೋಜನಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಈ ವಿಧಾನವು ಒಂದು ವೇಳೆ ಮಗುವೇ ಹಲ್ಲೆ ನಡೆಸಿದ್ದಲ್ಲಿ, ಮಕ್ಕಳ ಕುರಿತಾಗಿ ಇರುವಂತಹ ಸುಧಾರಣಾತ್ಮಕ ಮತ್ತು ಪುನರ್ವಸತಿಯು ಸೇವೆಗಳಡಿಯಲ್ಲಿ ಪರಿಗಣಿಸುವ ಬಗ್ಗೆ ತಿಳಿಸುತ್ತದೆ.

**1.2.2 ಸ್ವ–ನಿರ್ಧಾರ**

ಮಕ್ಕಳು ತಮ್ಮ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲಾ ವಿಷಯಗಳು ಹಾಗೂ ಅವರ ಸ್ವಂತ ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ಸ್ವಯಂ ನಿರ್ಧಾರ ತೆಗೆದುಕೊಳ್ಳುವ ಮತ್ತು ಸಂಬಂಧಿಸಿದ ತೀರ್ಮಾನಗಳಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ. ಸ್ವ–ನಿರ್ಧಾರವು ಸುರಕ್ಷಿತ ಶಾಲಾ ಪರಿಸರದಲ್ಲಿ ಮಗುವು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಮತ್ತು ಕಾಳಜಿವಹಿಸಬೇಕಾದ ವಿಷಯಗಳ ಕುರಿತು ವರದಿ ಮಾಡಲು ಸಮರ್ಥವಾಗಿಸುತ್ತದೆ. ಆದುದರಿಂದ, ವಯಸ್ಕರ ಅಭಿಪ್ರಾಯಗಳಿಗಿಂತ ಮಕ್ಕಳ ಅಭಿಪ್ರಾಯಗಳು ಭಿನ್ನವಾಗಿದ್ದಾಗಲೂ ಮಕ್ಕಳ ಅಭಿಪ್ರಾಯಗಳನ್ನು ಗೌರವಿಸುವ, ಆಲಿಸುವ ಮತ್ತು ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪ್ರೋತ್ಸಾಹದಾಯಕ ವಾತಾವರಣ ನಿರ್ಮಿಸುವುದಾಗಿದೆ.

**1.2.3 ಮಗುವಿನ ಭಾಗವಹಿಸುವಿಕೆ**

ಮಗುವಿನ ಭಾಗವಹಿಸುವಿಕೆಯು ಶಾಲೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳಲ್ಲಿ ಮಕ್ಕಳು ಸಕ್ರಿಯವಾಗಿ ಭಾಗವಹಿಸುವುದಾಗಿದೆ. ಮಕ್ಕಳ ಮಾತನ್ನು ಆಲಿಸುವ ಮತ್ತು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಗಳನ್ನು ನೀಡಿ ಶಾಲೆಯ ಒಳಗೆ ಮತ್ತು ಹೊರಗೆ ಶೈಕ್ಷಣಿಕ ಚಟುವಟಿಕೆಗಳ ಯೋಜನೆ, ಸಂಘಟನೆ ಮತ್ತು ಶೈಕ್ಷಣಿಕ ಚಟುವಟಿಕೆಗಳ ಮೌಲ್ಯಮಾಪನದಲ್ಲಿ ತೊಡಗಿಸಿಕೊಂಡು ಅವರ ಪ್ರೌಢತೆ ಮತ್ತು ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುವುದು.

**1.2.4 ಮಕ್ಕಳ ಸ್ನೇಹಿ ಭಾಷೆ**

ಮಕ್ಕಳೊಂದಿಗೆ ನಡೆಸುವ ಎಲ್ಲಾ ಸಂವಹನವು ಮಕ್ಕಳ ಸ್ನೇಹಿಯಾಗಿದ್ದು, ಅವರ ವಯಸ್ಸಿಗೆ ಅನುಗುಣವಾಗಿರಬೇಕು ಮತ್ತು ಸಂವಹನವು ಮಗುವಿನ ಭಯ ಹುಟ್ಟಿಸುವಿಕೆ ಅಥವಾ ಮುಜುಗರ, ಅವಮಾನ ಅಥವಾ ಅವರ ಸ್ವಾಭಿಮಾನ ಮತ್ತು ಘನತೆಯನ್ನು ಕೆಳಮಟ್ಟಕ್ಕೆ ಇಳಿಸುವಂತಿರಬಾರದು.

**1.2.5 ತಾರತಮ್ಯರಹಿತ ಅವಕಾಶ ಕಲ್ಪಿಸುವಿಕೆ**

ಸುರಕ್ಷಿತ ಶಾಲೆಗಳು, ಬದಲಿಸಲಾಗದ ತತ್ವಗಳಾದ ಸಮಾನತೆ, ನ್ಯಾಯ ಮತ್ತು ತಾರತಮ್ಯರಹಿತ ಆಧಾರಿತವಾಗಿರುತ್ತವೆ. ಶಾಲೆಗಳು ಎಲ್ಲಾ ಮಕ್ಕಳಿಗೆ ಸಮಾನ ಕಲಿಕೆ ಮತ್ತು ಬೆಳವಣಿಗೆ ಅವಕಾಶಗಳನ್ನು ಒದಗಿಸುವುದನ್ನು ಖಚಿತಪಡಿಸಿಕೊಳ್ಳುವುದು. ಶಾಲೆಯಲ್ಲಿ ಇತರೆ ಮಕ್ಕಳಿಂದ ಅಥವಾ ವಯಸ್ಕರಿಂದ ಮಕ್ಕಳಿಗೆ ಯಾವುದೇ ರೀತಿಯ ತಾರತಮ್ಯ ಮಾಡಿರುವುದು ಕಂಡುಬಂದಲ್ಲಿ, ಅಂತಹ ವಿಷಯಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದು.

**1.3 ಸುರಕ್ಷಿತ ಶಾಲೆಯ ಉತ್ತೇಜನಕ್ಕೆ ಕಾರ್ಯತಂತ್ರಗಳು**

Kiran Raghupathi

**1.3.1 ಮಕ್ಕಳ ಸ್ವಯಂ ರಕ್ಷಣೆಗೆ ಮಕ್ಕಳನ್ನೇ ಪ್ರಾಥಮಿಕ ಘಟಕಗಳಾಗಿ ಗುರುತಿಸುವುದು**

ಮಕ್ಕಳನ್ನು ಇಂದು ಹಕ್ಕುಗಳ ವಿಷಯವನ್ನಾಗಿ ಗುರುತಿಸಲಾಗಿದೆಯೇ ಹೊರತು ಅವರು ಕೇವಲ "ಸಂರಕ್ಷಣೆಯ ವಸ್ತುಗಳಲ್ಲ" ಎನ್ನುವುದನ್ನು ಶಾಲೆಗಳು ಒಪ್ಪಿಕೊಳ್ಳುವ ಅವಶ್ಯಕತೆ ಇದೆ. ಆದುದರಿಂದ ಮಕ್ಕಳ ರಕ್ಷಣಾ ನೀತಿ ಮತ್ತು ಕಾರ್ಯವಿಧಾನಗಳನ್ನು ಸಿದ್ಧಪಡಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ಮಗುವಿನ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳುವುದು.

**ಮಕ್ಕಳ ಭಾಗವಹಿಸುವಿಕೆಯನ್ನು ಖಾತರಿಪಡಿಸುವಿಕೆಯಲ್ಲಿ ಕೆಳಕಂಡ ಅಂಶಗಳು ಪ್ರಮುಖವಾಗಿವೆ;**

- ಮಕ್ಕಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳು ಗೋಚರಿಸದೆ ಇರಬಹುದು ಅಥವಾ ಗೋಚರಿಸಬಹುದು. ಆದರೆ ಅವುಗಳು ಅತ್ಯಂತ ಸೂಕ್ಷ್ಮವಾಗಿದ್ದು, ಅವುಗಳಿಗೆ ಸುತ್ತಲಿನ ವಯಸ್ಕರು ಸೂಕ್ಷ್ಮವಾಗಿ ಗ್ರಹಿಸಬೇಕಾದ ಅವಶ್ಯಕತೆಯನ್ನು ಗುರುತಿಸುವುದು.
- ಕೆಲವೊಮ್ಮೆ ಮಕ್ಕಳು ಅದರಲ್ಲೂ ವಿಶೇಷವಾಗಿ, ಬಲವಂತದ ಸಂದರ್ಭಗಳಲ್ಲಿ ಮುಕ್ತವಾಗಿ ಸಂವಹನ ನಡೆಸುವುದು ಬಹಳ ಕಷ್ಟಕರ ಎನ್ನುವುದು ಸರ್ವೇ ಸಾಮಾನ್ಯವಾಗಿದೆ. ಆದುದರಿಂದ ಎಲ್ಲಾ ಶಾಲಾ ಚಟುವಟಿಕೆಗಳಲ್ಲಿ ಮಕ್ಕಳ ಕ್ರಿಯಾಶೀಲ ಭಾಗವಹಿಸುವಿಕೆಯನ್ನು ಉತ್ತೇಜಿಸುವ ದೃಷ್ಟಿಯಿಂದ, ಪ್ರತಿಯೊಬ್ಬರೂ ನೈತಿಕ ಭಾಗವಹಿಸುವಿಕೆಯ ಮೂರು ಅವಶ್ಯಕತೆಗಳನ್ನು ಕಡ್ಡಾಯವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಈ ಅವಶ್ಯಕತೆಗಳನ್ನು ಮಕ್ಕಳ ಹಕ್ಕುಗಳ ಸಮಿತಿಯ ಸಾಮಾನ್ಯ ಅಭಿಪ್ರಾಯ ಸಂಖ್ಯೆ 12 (Committee on the Rights of the Child General Comment, no.12) ರಲ್ಲಿ ಅಹವಾಲನ್ನು ಹೇಳಿಕೊಳ್ಳುವ ಮಕ್ಕಳ ಹಕ್ಕುಗಳನ್ನು ನಿರೂಪಿಸಲಾಗಿದ್ದು, ಕೆಳಗಿನ ಅಂಶಗಳನ್ನು ಗಮನಿಸುವುದು.

**ಅ. ಪಾರದರ್ಶಕ ಮತ್ತು ಉಪಯುಕ್ತ ಮಾಹಿತಿ**

ಮಕ್ಕಳು ತಮ್ಮ ಹಕ್ಕುಗಳನ್ನು ಕುರಿತ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಂಪೂರ್ಣವಾದ ಹಾಗೂ ವಯಸ್ಸಿಗೆ ಅನುಗುಣವಾಗಿ ಮಾಹಿತಿಯನ್ನು (ಮಕ್ಕಳ ವೈವಿಧ್ಯತೆಯ ಸಂವೇದನೆಯೂ ಸಹ ಆಗಿರಬಹುದು) ಕಡ್ಡಾಯವಾಗಿ ಒದಗಿಸುವುದು. ಮಾಹಿತಿಯಲ್ಲಿ ಅವರ ಅಭಿಪ್ರಾಯಗಳಿಗೆ ಹೇಗೆ ಹೆಚ್ಚಿನ ಮನ್ನಣೆ ನೀಡುವುದು, ಭಾಗವಹಿಸುವಿಕೆಯ ಕ್ರಮ ಹೇಗೆ ಇರುತ್ತದೆ, ಅದರ ವ್ಯಾಪ್ತಿ, ಉದ್ದೇಶ ಮತ್ತು ಸಂಭವನೀಯ ಪರಿಣಾಮ ಮುಂತಾದವುಗಳನ್ನು ಅದು ಒಳಗೊಂಡಿರುವುದು.

**ಆ. ಸ್ವ–ಇಚ್ಛೆಯಿಂದ ಭಾಗವಹಿಸುವಿಕೆ**

ಮಕ್ಕಳು ತಮ್ಮ ಇಚ್ಛೆಗಳನ್ನು ವ್ಯಕ್ತಪಡಿಸುವುದಕ್ಕೆ ನಿರ್ಬಂಧಗಳನ್ನು ಹೇರಬಾರದು ಮತ್ತು ಇದು ಅವರ ಭಾಗವಹಿಸುವಿಕೆಗೆ ಅಡ್ಡಿಯಾಗುತ್ತದೆ ಎನ್ನುವುದರ ಬಗ್ಗೆ ಅವರಿಗೆ ಮಾಹಿತಿ ನೀಡುವುದು.

**ಇ. ಪಾರದರ್ಶಕ ಮತ್ತು ಉಪಯುಕ್ತ ಮಾಹಿತಿ**

ಮಕ್ಕಳ ಅಭಿಪ್ರಾಯಗಳನ್ನು ಗೌರವದಿಂದ ಸ್ವೀಕರಿಸುವುದು ಮತ್ತು ಮಕ್ಕಳಿಗೆ ಚರ್ಚೆ ಹಾಗೂ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ನೀಡಲು ಪ್ರಾರಂಭಿಸುವುದು.

**ಈ. ಪ್ರಸ್ತುತತೆ**

ಮಕ್ಕಳು ಯಾವ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಹೊಂದಿರುತ್ತಾರೋ ಅವು ಜೀವನದ ನೈಜ ಮತ್ತು ವಾಸ್ತವದ ಬದುಕಿಗೆ ಹತ್ತಿರವಾಗಿರಬೇಕು ಮತ್ತು ಅವರ ಜ್ಞಾನ, ಕೌಶಲ್ಯಗಳು ಮತ್ತು ಸಾಮರ್ಥ್ಯಗಳನ್ನು ಪಡೆಯಲು ಸಮರ್ಥವಾಗಿರುವಂತಿರಬೇಕು. ಮುಂದುವರೆದು ಮಕ್ಕಳು ಸ್ವತಃ ಗುರುತಿಸಿರುವ ನೈಜ ಮತ್ತು ಪ್ರಮುಖ ಸಮಸ್ಯೆಗಳನ್ನು ಗುರುತಿಸಿ, ಬಗೆಹರಿಸುವ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸುವ ಅಗತ್ಯವಿದೆ.

**ಉ. ಮಕ್ಕಳ ಸ್ನೇಹಿ ವಾತಾವರಣ**

ಮಕ್ಕಳ ಸಾಮರ್ಥ್ಯಕ್ಕೆ ತಕ್ಕಂತೆ ಪರಿಸರ ಮತ್ತು ಕಾರ್ಯನಿರ್ವಹಣಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು. ಮಕ್ಕಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವರಿಗೆ ಸಾಕಷ್ಟು ಸಮಯ ಮತ್ತು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಅವರು ಸಮರ್ಪಕರಾಗಿ ಸಿದ್ಧರಾಗುವಂತೆ ಆತ್ಮಸ್ಥೈರ್ಯ ಬೆಳೆಸಿಕೊಳ್ಳಲು ಅವಕಾಶಗಳನ್ನು ನೀಡುವುದು.

Kiran Raghupathi

**ಊ. ಮುಕ್ತ ಪ್ರಕ್ರಿಯೆ**

ಭಾಗವಹಿಸುವಿಕೆಯು ಎಲ್ಲರನ್ನು ಒಳಗೊಂಡಿರುವುದಾಗಿದ್ದು, ಈಗಿರುವ ತಾರತಮ್ಯ ಮಾದರಿಗಳಿಂದ ಮುಕ್ತವಾಗಿರುವುದಾಗಿದೆ ಮತ್ತು ಸಂಕಷ್ಟದಲ್ಲಿರುವ ಹುಡುಗಿಯರು, ಹುಡುಗರು ಮತ್ತು ಲಿಂಗಪರಿವರ್ತನೆಗೊಂಡ ಮಕ್ಕಳಿಗೆ ಅವಕಾಶಗಳನ್ನು ನೀಡುವ ಮೂಲಕ ಪಾಲ್ಗೊಳ್ಳುವಂತೆ ಉತ್ತೇಜಿಸುವುದು. ಎಲ್ಲಾ ಸಮುದಾಯಗಳ ಮಕ್ಕಳಿಗೆ ಸಾಂಸ್ಕೃತಿಕವಾಗಿ ಸಂವೇದನಾತ್ಮಕವಾಗಿರುವಂತೆ ಕಾರ್ಯಕ್ರಮಗಳನ್ನು ರೂಪಿಸುವುದು.

**ಋ. ತರಬೇತಿ ಮೂಲಕ ಬೆಂಬಲ ನೀಡುವುದು**

ಮಕ್ಕಳ ಪರಿಣಾಮಕಾರಿ ಭಾಗವಹಿಸುವಿಕೆಗೆ ಅನುಕೂಲ ಕಲ್ಪಿಸಲು ಹಿರಿಯರಿಗೆ ತಯಾರಿ, ಕೌಶಲ್ಯಗಳು ಮತ್ತು ಬೆಂಬಲದ ಅಗತ್ಯವಿದೆ. ಉದಾ: ಮಕ್ಕಳನ್ನು ಆಲಿಸುವ, ಅವರೊಂದಿಗೆ ತೊಡಗಿಸಿಕೊಳ್ಳುವ ಮತ್ತು ಅವರ ವಿಕಸನದ ಸಾಮರ್ಥ್ಯಕ್ಕೆ ತಕ್ಕಂತೆ ಮಕ್ಕಳೊಂದಿಗೆ ಕಾರ್ಯನಿರ್ವಹಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುವುದು.

**ಎ. ಸುರಕ್ಷತೆ ಮತ್ತು ಅಪಾಯದ ಸನ್ನಿವೇಶಗಳಲ್ಲಿ ಸೂಕ್ಷ್ಮಗ್ರಾಹಿಯಾಗಿರುವಿಕೆ**

ಮಕ್ಕಳು ಅಪಾಯಗಳಿಂದ ರಕ್ಷಿಸಿಕೊಳ್ಳುವ ಹಕ್ಕುಗಳ ಬಗ್ಗೆ ಅರಿವನ್ನು ಹೊಂದಿರುವುದು ಮತ್ತು ಅವರಿಗೆ ಸಹಾಯದ ಅವಶ್ಯಕತೆಯ ಸಂದರ್ಭಗಳಲ್ಲಿ ಯಾವಾಗ, ಎಲ್ಲಿ ಮತ್ತು ಯಾರನ್ನು ಸಂಪರ್ಕಿಸಬೇಕೆಂಬುದನ್ನು ತಿಳಿದುಕೊಂಡಿರುವುದು.

**ಏ. ಉತ್ತರದಾಯಿತ್ವ / ಹೊಣೆಗಾರಿಕೆ**

ನಿರಂತರ ಅನುಸರಣೆಯನ್ನು ಕೈಗೊಳ್ಳುವ ಮತ್ತು ಭಾಗವಹಿಸುವಿಕೆಯ ಚಟುವಟಿಕೆಗಳ ಮೌಲ್ಯಮಾಪನ ಮಾಡುವ ಬದ್ಧತೆಯ ಅಗತ್ಯವಿದೆ. ಮಕ್ಕಳ ಅಭಿಪ್ರಾಯಗಳನ್ನು ಯಾವ ರೀತಿ ಅರ್ಥೈಸಲಾಗಿದೆ ಮತ್ತು ಅವರ ಭಾಗವಹಿಸುವಿಕೆಯು ಫಲಿತಾಂಶಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಮಕ್ಕಳಿಗೆ ತಿಳಿಸುವುದು. ಮಕ್ಕಳ ಭಾಗವಹಿಸುವಿಕೆಯ ಅವಶ್ಯಕತೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಕೇಂದ್ರೀಕೃತ ಪ್ರಕ್ರಿಯೆಯ ಮೂಲಕ ಮಕ್ಕಳ ಸಹಭಾಗಿತ್ವದೊಂದಿಗೆ ಕೈಗೊಳ್ಳುವುದು.

### 1.3.2 ಸುರಕ್ಷಾ ವಿಧಾನಗಳ ಸ್ಥಾಪನೆ

**ಸುರಕ್ಷತೆಯನ್ನು ಖಾತರಿಪಡಿಸುವ ವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ;**

**a. ಶೈಕ್ಷಣಿಕ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರೂಪಿಸಿ ಅಧಿಸೂಚನೆ ಹೊರಡಿಸುವುದು(ಇಋಅಕಕ)**

ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯು (ಶೈಕ್ಷಣಿಕ ಸಂಸ್ಥೆಯ ವ್ಯಾಖ್ಯಾನವನ್ನು 2.1 ಅ ನಲ್ಲಿ ಉಲ್ಲೇಖಿಸಿದಂತೆ) ಅನುಬಂಧದಲ್ಲಿರುವಂತೆ ಮಕ್ಕಳ ರಕ್ಷಣಾ ನೀತಿಯನ್ನು ಸಿದ್ಧಪಡಿಸುವುದು. ಶೈಕ್ಷಣಿಕ ಸಂಸ್ಥೆಗಳ ಎಲ್ಲಾ ಭಾಗೀದಾರರೊಂದಿಗೆ ಪೋಷಕರು, ಮಕ್ಕಳು ಮತ್ತು ನೀತಿಯಡಿ ಒಳಗೊಳ್ಳುವ ಎಲ್ಲರಿಗೂ ನೀತಿಯನ್ನು ಅಧಿಸೂಚಿಸುವುದು.

**b. ಹೊಂದಿಕೆಯಾಗಿರುವ ಮಾದರಿ ಸುರಕ್ಷಾ ಗಮನಿಕೆ ಪಟ್ಟಿಯನ್ನು ಹೊಂದಿರುವುದು**

ಪ್ರಸ್ತಾವಿತ ಮಾರ್ಗಸೂಚಿಯ ಭಾಗವಾಗಿ ಸುರಕ್ಷತೆಯ ಚೆಕ್‌ಲಿಸ್ಟನ್ನು ಅನುಬಂಧದಲ್ಲಿ ಲಗತ್ತಿಸಲಾಗಿದ್ದು, ಇದನ್ನು ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಯು ಅಳವಡಿಸಿಕೊಳ್ಳುವುದು. ಚೆಕ್‌ಲಿಸ್ಟ್‌ನಲ್ಲಿ ಕಡ್ಡಾಯವಾಗಿರುವ ಕಲಂಗಳನ್ನು ಹಾಗೆಯೇ ಉಳಿಸಿಕೊಂಡು, ಸುರಕ್ಷತಾ ಮೇಲ್ವಿಚಾರಣೆಗೆ ಪರಿಣಾಮಕಾರಿ ಸಾಧನವಾಗಿ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳು ವಿಶಿಷ್ಟ ಸನ್ನಿವೇಶಗಳಿಗೆ ಅನುಗುಣವಾಗಿ ಕೆಲವು ಮಾರ್ಪಾಟುಗಳನ್ನು ಮಾಡಿಕೊಳ್ಳಬಹುದಾಗಿದೆ.

**c. ವಿಪತ್ತಿನ ಅಪಾಯವನ್ನು ತಗ್ಗಿಸುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವಿಕೆ**

ಮಕ್ಕಳಿಗೆ ಲಭ್ಯವಿರುವ ಶಿಕ್ಷಣದ ಹಕ್ಕಿನಡಿಯಲ್ಲಿ ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳು ಮಕ್ಕಳು ಎಲ್ಲಾ ರೀತಿಯ ಅಪಾಯದಿಂದ ಸುರಕ್ಷಿತವಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು. ಬೃಹತ್ ಪ್ರಮಾಣದ ನೈಸರ್ಗಿಕ ವಿಪತ್ತುಗಳಾದ ಭೌಗೋಳಿಕ / ಹವಾಮಾನ ಆಧಾರಿತ ವಿಕೋಪಗಳು, ಮಾನವ ನಿರ್ಮಿತ ಅಪಾಯಗಳು, ಪಿಡುಗುಗಳು, ನಾಗರೀಕ ಅಶಾಂತಿ, ಉಗ್ರಗಾಮಿ ಪ್ರವೃತ್ತಿ, ಭಯೋತ್ಪಾದನೆ, ಸಾಮಾನ್ಯವಾಗಿ ಅಥವಾ ಸಣ್ಣ ಪ್ರಮಾಣದಲ್ಲಿ ಸಂಭವಿಸುವ ಬೆಂಕಿ ಅನಾಹುತಗಳು, ಸಾರಿಗೆ, ಇತರೆ ತುರ್ತುಪರಿಸ್ಥಿತಿಗಳು ಮತ್ತು ಮಕ್ಕಳ ಜೀವದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಪರಿಸರಾತ್ಮಕ ಅಪಾಯಗಳಿಂದ ಸುರಕ್ಷತೆಯನ್ನು ಹೊಂದುವುದು.

Kiran Raghupathi

**d. ಮಕ್ಕಳ ಹಕ್ಕುಗಳ ಕ್ಲಬ್ಬುಗಳ ರಚನೆ**

ಮಕ್ಕಳ ಹಕ್ಕುಗಳ ಕ್ಲಬ್ಬುಗಳನ್ನು ರಚಿಸಲು ಮಕ್ಕಳಿಗೆ ಸಹಕರಿಸುವುದರಿಂದ ಮಕ್ಕಳು ತಮ್ಮ ಹಕ್ಕುಗಳು ಮತ್ತು ಜವಾಬ್ದಾರಿಗಳು, ವರದಿ ಮಾಡುವ ವಿಧಾನಗಳು ಹಾಗೂ ಕಾಳಜಿಯ ವಿಷಯಗಳ ಜೊತೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಸುರಕ್ಷತೆಯಡಿ ಪೋಷಕರನ್ನು ತೊಡಗಿಸಿಕೊಳ್ಳುವಿಕೆಯ ಕುರಿತು ಚರ್ಚಿಸಬಹುದಾಗಿದೆ.

**e. ಸಿಬ್ಬಂದಿಗಳ ಮೌಲ್ಯಮಾಪನದಲ್ಲಿ ಮಗುವಿನ ಸುರಕ್ಷತೆಯ ಸೇರ್ಪಡೆ**

ಸಿಬ್ಬಂದಿಗಳ ಔಪಚಾರಿಕ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯಲ್ಲಿ ಮಗುವಿನ ಸುರಕ್ಷತೆಯ ವಿಷಯಗಳು ನಿಯಮಿತವಾಗಿ ಒಳಗೊಂಡಿರುವುದನ್ನು ಖಾತರಿಪಡಿಸಿಕೊಳ್ಳುವುದು.

**f. ಅರಿವು, ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ ಕಾರ್ಯಕ್ರಮಗಳ ಆಯೋಜನೆ**

ಮಕ್ಕಳ ರಕ್ಷಣೆ ಮತ್ತು ಸುರಕ್ಷತೆಯ ಕುರಿತು ಮಕ್ಕಳು, ಪೋಷಕರು ಮತ್ತು ಪಾಲಕರಿಗೆ ಅರಿವು, ಮಾರ್ಗದರ್ಶನ ಮತ್ತು ಆಪ್ತಸಮಾಲೋಚನೆ ಕಾರ್ಯಕ್ರಮಗಳನ್ನು ಸಂಘಟಿಸಲು ಒತ್ತು ನೀಡಿರುವುದನ್ನು ಖಚಿತಪಡಿಸುವುದು.

**g. ವರದಿ ಮಾಡುವ ವಿಧಾನಗಳನ್ನು ಸೃಜಿಸುವುದು**

ಸದೃಢ ಮತ್ತು ನಿರ್ದಿಷ್ಟವಾದ ವರದಿ ವಿಧಾನಗಳನ್ನು ಸೃಜಿಸುವುದು ಮತ್ತು ಅವುಗಳು ಶಾಲಾ ನಿರ್ವಹಣಾ ಸಮಿತಿ (ಖಒಅ)/ಪೋಷಕರು–ಶಿಕ್ಷಕರ ಸಂಘ (ಕಖಿಂ), ಸಲಹೆ ಪೆಟ್ಟಿಗೆ, ಮಕ್ಕಳ ಸಭೆಗಳು, ಸಾಮಾನ್ಯ ಸಭೆಗಳು ಇತ್ಯಾದಿಗಳ ಮೂಲಕ ಅರ್ಥಪೂರ್ಣವಾಗಿ ಬಳಕೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.

## ಶೈಕ್ಷಣಿಕ ಸಂಸ್ಥೆಗಳು

## ವ್ಯಾಖ್ಯಾನಗಳು ಮತ್ತು ವ್ಯಾಪ್ತಿ

### 2.1 ವ್ಯಾಖ್ಯಾನಗಳು

**ಅ. ಶೈಕ್ಷಣಿಕ ಸಂಸ್ಥೆ** ಎಂದರೆ ಕೆಳಕಂಡ ಅರ್ಥ ಮತ್ತು ಅಂಶಗಳನ್ನು ಒಳಗೊಂಡಿರುವುದು.

ಸಂಸ್ಥೆಯು ಯಾವುದೇ ಹೆಸರಿನಿಂದ ಕರೆಯಲ್ಪಡುವ ಅಂದರೆ, ಪೂರ್ವಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ, ಸೆಕೆಂಡರಿ, ಹೈಯರ್ ಸೆಕೆಂಡರಿ ಶಾಲೆಗಳು, ಆಪ್ರೆಂಟೀಸ್ ತರಬೇತಿ ಕೇಂದ್ರಗಳು, ಔದ್ಯೋಗಿಕ ಕೌಶಲ್ಯ ತರಬೇತಿ ಕೇಂದ್ರಗಳು ಮತ್ತು ಅದಕ್ಕೆ ಹೊಂದಿಕೆಯಾಗಿರುವ ಎಲ್ಲಾ ಪ್ರದೇಶ, ಅದು ಪ್ರತ್ಯೇಕವಾಗಿ ನಿರ್ವಹಿಸುತ್ತಿರುವ ಅಥವಾ ಇತರೆ ಚಟುವಟಿಕೆಗಳಡಿ 2.5 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳನ್ನು ಶೈಕ್ಷಣಿಕ ಸಂಸ್ಥೆಗಳೆಂದು ಕರೆಯಬಹುದು.

ಶಿಕ್ಷಣವನ್ನು ನೀಡುತ್ತಿರುವ ಯಾವುದೇ ಸಂಸ್ಥೆ ಅಥವಾ ಪದವಿಗಿಂತ ಕೆಳಹಂತದಲ್ಲಿ ತರಬೇತಿಯನ್ನು ನೀಡುತ್ತಿರುವ ಟ್ಯುಟೋರಿಯಲ್‌ಗಳನ್ನು ಒಳಗೊಂಡಿರುವುದು ಸಹ ಶಿಕ್ಷಣ ಸಂಸ್ಥೆ ಎಂದೆನಿಸುತ್ತದೆ. ಯಾವುದೇ ರಾಜ್ಯ / ಕೇಂದ್ರ / ಶೈಕ್ಷಣಿಕ ಮಂಡಳಿ ಅಥವಾ ಕೆಳಗೆ ತಿಳಿಸಿರುವ ಸೂಕ್ತ ಪ್ರಾಧಿಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಸಂಸ್ಥೆಗಳು ಇದರಡಿ ಸೇರಿರುತ್ತವೆ.

a. ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿತವಾಗಿ, ಮಾಲೀಕತ್ವಹೊಂದಿ ನಿಯಂತ್ರಿಸಲ್ಪಟ್ಟಿರುವ ಅಥವಾ ನಿರ್ವಹಿಸಲ್ಪಟ್ಟಿರುವ ಅಥವಾ ನಿರ್ವಹಿಸಲ್ಪಡುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆ.

b. ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಭಾಗಶಃ ಅಥವಾ ಪೂರ್ಣಪ್ರಮಾಣದ ನೆರವು ಅಥವಾ ಅನುದಾನ ಪಡೆಯುತ್ತಿರುವ ಯಾವುದೇ ಅನುದಾನಿತ ಸಂಸ್ಥೆ.

c. ಖಾಸಗಿ ಮಂಡಳಿಯಿಂದ ನಿರ್ವಹಿಸಲ್ಪಡುತ್ತಿರುವ ಮತ್ತು ಆಡಳಿತಕ್ಕೊಳಪಟ್ಟಿರುವ, ಯಾವುದೇ ಸ್ಥಾಪಿತ ಶಿಕ್ಷಣ ಸಂಸ್ಥೆ.

Kiran Raghupathi

d. ಸಂವಿಧಾನ ಪರಿಚ್ಛೇದ 30ರ ಕಲಂ(1)ರನ್ವಯ ಸ್ಥಾಪಿತವಾಗಿರುವ ಮತ್ತು ಆಡಳಿತಕ್ಕೊಳಪಟ್ಟಿರುವ, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅನುದಾನ ಪಡೆಯುತ್ತಿರುವ ಅಥವಾ ಪಡೆಯದೇ ಇರುವ ಯಾವುದೇ ಅಲ್ಪಸಂಖ್ಯಾತ ಶಾಲೆ, ವೇದ ಶಾಲೆ, ಮದರಸಾ ಅಥವಾ

e. ವೆಚ್ಚಗಳನ್ನು ಸರಿದೂಗಿಸಲು, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ರೀತಿಯ ಅನುದಾನ ಅಥವಾ ನಿಧಿಯನ್ನು ಪಡೆಯದೇ ಇರುವ ಅನುದಾನರಹಿತ ಶಿಕ್ಷಣ ಸಂಸ್ಥೆ.

**ಆ. ಶೈಕ್ಷಣಿಕ ಸಂಸ್ಥೆಗಳ ವರ್ಗೀಕರಣ**

ಕಲಂ 2.1ಎ ಅನ್ವಯ ವ್ಯಾಖ್ಯಾನಿಸಿರುವಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ಕೆಳಗಿನಂತೆ ವರ್ಗೀಕರಿಸುವುದು ಮತ್ತು ಗುಂಪುಗಳನ್ನಾಗಿಸುವುದು.

a. ಪ್ರಾಥಮಿಕ ಪೂರ್ವ ಶಿಕ್ಷಣವು; ನರ್ಸರಿ, ಎಲ್‌ಕೆಜಿ & ಯುಕೆಜಿ ಶಿಕ್ಷಣವನ್ನು ಮತ್ತು 2.5 ವರ್ಷದಿಂದ 5 ವರ್ಷಗಳವರೆಗಿನ ಮಕ್ಕಳನ್ನು ಒಳಗೊಂಡಿರುವುದು.
b. ಪ್ರಾಥಮಿಕ ಶಾಲೆಯು 1ರಿಂದ 5ನೇ ತರಗತಿಯವರೆಗೆ ಹೊಂದಿರುವುದು.
c. ಮಾಧ್ಯಮಿಕ ಶಾಲೆಯು 1ರಿಂದ 8 ಅಥವಾ 6ರಿಂದ 8ನೇ ತರಗತಿಗಳನ್ನು ಹೊಂದಿರುವುದು.
d. ಪ್ರೌಢಶಾಲೆಯು 1ರಿಂದ 10 ಅಥವಾ 6ರಿಂದ 10 ಅಥವಾ 9ರಿಂದ 10ರವರೆಗೆ ತರಗತಿಗಳನ್ನು ಹೊಂದಿರುವುದು.
e. ಪದವಿ ಪೂರ್ವ ಶಿಕ್ಷಣವು 1ರಿಂದ 12 ಅಥವಾ 6ರಿಂದ 12 ಅಥವಾ 11 ಮತ್ತು 12ರವರೆಗೆ ತರಗತಿಗಳನ್ನು ಹೊಂದಿರುವುದು.
f. ಟ್ಯುಟೋರಿಯಲ್ ಒಳಗೊಂಡಂತೆ ಶಿಕ್ಷಣ ಅಥವಾ ತರಬೇತಿಯನ್ನು ನೀಡುತ್ತಿರುವ ಯಾವುದೇ ಇತರೆ ಸಂಸ್ಥೆ.

**ಇ. ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ನೇರ ಸಂಪರ್ಕ ಹೊಂದಿರುವ ವ್ಯಕ್ತಿಗಳು**

ಮಗು ಅಥವಾ ಮಕ್ಕಳೊಂದಿಗೆ ಭೌತಿಕವಾಗಿ ಉಪಸ್ಥಿತರಿರುವ ವ್ಯಕ್ತಿಗಳು ಅಥವಾ ಅವರ ವೃತ್ತಿಯ ಭಾಗವಾಗಿ ಅಥವಾ ಶಿಕ್ಷಣ / ಶಾಲೆಗೆ ಸಂಬಂಧಿಸಿದ ಪೂರ್ಣಕಾಲಿಕ, ಅರೆಕಾಲಿಕ, ತಾತ್ಕಾಲಿಕ ಅಥವಾ ದೀರ್ಘಾವಧಿಯಲ್ಲಿ ಕೆಲಸ ಮಾಡುವ ವ್ಯಕ್ತಿಗಳು.

**ಈ. ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ಪರೋಕ್ಷ ಸಂಪರ್ಕ ಹೊಂದಿರುವ ವ್ಯಕ್ತಿಗಳು**

ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ಪರೋಕ್ಷವಾಗಿ ಭೌತಿಕವಾಗಿ ಉಪಸ್ಥಿತಿಯ ಅವಶ್ಯಕತೆಯಿಲ್ಲದ ವ್ಯಕ್ತಿಗಳು, ಮಗುವಿನ ವೈಯಕ್ತಿಕ ವಿವರಗಳು ಮತ್ತು ಇತರೆ ಮಾಹಿತಿಗಳಾದ ಛಾಯಾಚಿತ್ರಗಳು, ವೈಯಕ್ತಿಕ ಕಡತಗಳು ಇತ್ಯಾದಿ ಮಾಹಿತಿಯನ್ನು ನಿರ್ವಹಿಸುವ ವ್ಯಕ್ತಿಗಳು.

**2.2 ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳೊಂದಿಗೆ ನೇರ ಸಂಪರ್ಕ ಹೊಂದಿರುವ ವ್ಯಕ್ತಿಗಳು**

ಈ ಮಾರ್ಗಸೂಚಿಗಳು ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಅನ್ವಯವಾಗಲಿದ್ದು, ಕೆಳಗಿನ ಸನ್ನಿವೇಶ ಮತ್ತು ಸಂದರ್ಭಗಳನ್ವಯ ವ್ಯಾಖ್ಯಾನಿಸಲಾಗಿದೆ.

**ಅ.**ಶೈಕ್ಷಣಿಕ ಸಂಸ್ಥೆಯ ಆವರಣದೊಳಗೆ, ಮಕ್ಕಳು ಒಳಗೊಳ್ಳುವ ಎಲ್ಲಾ ಅವಧಿಗಳಲ್ಲಿ, ಶೈಕ್ಷಣಿಕ ಸಂಸ್ಥೆಗೆ ಸಂಬಂಧಿಸಿದ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷವಾದ ಚಟುವಟಿಕೆಗಳಿಗೆ ಸಂಬಂಧಿಸಿದ, ಶಾಲಾ ಪೂರ್ವ ಮತ್ತು ನಂತರದ ಅವಧಿಗಳು ಮತ್ತು ರಜಾದಿನಗಳು ಸೇರಿರುತ್ತವೆ.

**ಆ.**ಶೈಕ್ಷಣಿಕ ಸಂಸ್ಥೆಯ ವಿಸ್ತರಣೆಗೊಂಡ ಪರಿಸರದಲ್ಲಿ ಒಂದು ವೇಳೆ ಶೈಕ್ಷಣಿಕ ಸಂಸ್ಥೆಯೊಂದಿಗೆ ಯಾವುದೇ ಸಂಬಂಧವಿರುವ, ಉದಾ: ನಿಲುಗಡೆ ಪ್ರದೇಶಗಳು, ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯಕ್ರಮಗಳ ಸ್ಥಳಗಳು ಅಥವಾ ಪ್ರವಾಸಗಳು, ಸಂಸ್ಥೆಗೆ ಸಂಬಂಧಿಸಿದ ಪ್ರಯಾಣ ಮತ್ತು ಸಾರಿಗೆ ವ್ಯವಸ್ಥೆಗಳನ್ನು ಶೈಕ್ಷಣಿಕ ಸಂಸ್ಥೆಯು ಮಕ್ಕಳಿಗೆ ಏರ್ಪಡಿಸಿದಲ್ಲಿ.

Kiran Raghupathi

ಈ ಮಾರ್ಗಸೂಚಿಗಳು ಮೇಲೆ ತಿಳಿಸಿರುವ ಸಂದರ್ಭಗಳಲ್ಲಿ, ಮಕ್ಕಳೊಂದಿಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಪರ್ಕದಲ್ಲಿರುವ ಎಲ್ಲಾ ವ್ಯಕ್ತಿಗಳಿಗೂ ಸಹ ಅನ್ವಯವಾಗುತ್ತವೆ.

ಅ. ಶೈಕ್ಷಣಿಕ ಸಂಸ್ಥೆಯ ಮಂಡಳಿ ಮತ್ತು ನಿರ್ವಹಣಾ ಸಮಿತಿ

ಆ. ಖಾಯಂ, ತಾತ್ಕಾಲಿಕ ಮತ್ತು ಗುತ್ತಿಗೆ ಸಿಬ್ಬಂದಿ

ಇ. ಸ್ವಯಂ ಸೇವಕರು, ಸಮಾಲೋಚಕರು, ತಜ್ಞರು, ಹೊರಗುತ್ತಿಗೆ ಸಂಸ್ಥೆಗಳ ಕೆಲಸಗಾರರು, ಸೇವೆಯನ್ನು ಒದಗಿಸುವವರು ಮತ್ತು ಶೈಕ್ಷಣಿಕ ಸಂಸ್ಥೆಗೆ ಸೇವೆ ಹಾಗೂ ಸಾಮಗ್ರಿಗಳನ್ನು ಪೂರೈಸುವವರು.

ಈ. ಶೈಕ್ಷಣಿಕ ಸಂಸ್ಥೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಗಳು ಮತ್ತು ಸಂಪರ್ಕದಲ್ಲಿರುವವರು.

ಉ. ಶೈಕ್ಷಣಿಕ ಸಂಸ್ಥೆಯೊಂದಿಗೆ ಸಂಬಂಧವಿರುವ ಯಾವುದೇ ವ್ಯಕ್ತಿ ಹಾಗೂ ಮಗುವಿನ ಮೇಲೆ ಅಧಿಕಾರ ಹೊಂದಿರುವ ಮತ್ತು / ಅಥವಾ ಸಂಪರ್ಕದಲ್ಲಿರುವ ವ್ಯಕ್ತಿ ಮತ್ತು / ಅಥವಾ ಮಗುವಿನ ನಂಬಿಕೆ ಗಳಿಸಿರುವ ಇತರೆ ಯಾವುದೇ ವ್ಯಕ್ತಿ.

ಊ. ಪ್ರಸ್ತಾವಿತ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಯಾವುದೇ ಇತರೆ ವ್ಯಕ್ತಿಯನ್ನು ಒಳಗೊಂಡಿರುತ್ತದೆ.

## ಮುಂಜಾಗ್ರತಾ ಕ್ರಮಗಳು

ಸುರಕ್ಷಿತ ಶಾಲಾ ಪರಿಸರವು ಮಗುವಿನ ಮೇಲಾಗುವ ಹಲ್ಲೆ, ನಿರ್ಲಕ್ಷ್ಯ ಮತ್ತು ಶೋಷಣೆಯನ್ನು ತಡೆಗಟ್ಟುವ ಕ್ರಮಗಳನ್ನು ಹೊಂದಿರುವುದು ಮತ್ತು ಬಲವಾಗಿ ನಿವಾರಿಸುವುದು. ಮಗುವಿನ ಸುರಕ್ಷತೆಯ ಉಲ್ಲಂಘನೆಗಳಿಗೆ ತ್ವರಿತವಾಗಿ ಪ್ರತಿಕ್ರಿಯಿಸುವ ಮತ್ತು ಪ್ರಾಮಾಣಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಬಗೆಹರಿಸುವ ಕಾರ್ಯವಿಧಾನಗಳನ್ನು ನಿವಾರಣಾ ಪ್ರಕ್ರಿಯೆಗಳಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ. ಕೈಗೊಳ್ಳುವ ಪ್ರತಿಯೊಂದು ಕ್ರಮವು ಮಗುವಿನ ಅತ್ಯುತ್ತಮ ಹಿತಾಸಕ್ತಿಯನ್ನು ಹೊಂದಿರುವುದು ಮತ್ತು ಮಕ್ಕಳ ಅಭಿಪ್ರಾಯಗಳನ್ನು ತೆಗೆದುಕೊಂಡು ಪರಿಗಣಿಸುವುದು. ಪ್ರತಿಯೊಂದು ಶಿಕ್ಷಣಸಂಸ್ಥೆಗಳು ಕೆಳಕಂಡ ರಚನೆ ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳುವುದು.

### 3.1 ಶೈಕ್ಷಣಿಕ ಸಂಸ್ಥೆಗಳಲ್ಲಿಜಾರಿಯಲ್ಲಿರುವ ಮಗುವಿನ ರಕ್ಷಣಾ ನಿಯಮ, (EICPP)

ಮಾದರಿ ಮಕ್ಕಳ ರಕ್ಷಣಾ ನೀತಿಯನ್ವಯ ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಲಿಖಿತವಾಗಿ ಮಕ್ಕಳ ರಕ್ಷಣಾ ನೀತಿಯನ್ನು ಕಡ್ಡಾಯವಾಗಿ ಹೊಂದಿರುವುದು. ಶಿಕ್ಷಣ ಸಂಸ್ಥೆಯ ಗಾತ್ರ**ದನ್ವಯ,** ಅವುಗಳು ನಗರ, ಗ್ರಾಮೀಣ ಅಥವಾ ದೂರದ ಪ್ರದೇಶದಲ್ಲಿರಲಿ ಅಥವಾ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ, ಪ್ರಥಮ ದರ್ಜೆ ಕಾಲೇಜು ಅಥವಾ ವೃತ್ತಿ ತರಬೇತಿ ಸಂಸ್ಥೆಗಳಾದ ಐಟಿಐ ಅಥವಾ ಡಿಪ್ಲೋಮಾ ಮುಂತಾದ ಸಂಸ್ಥೆಗಳು ಮಗುವಿನ ರಕ್ಷಣಾ ನೀತಿಯನ್ನು ರೂಪಿಸಿಕೊಳ್ಳುವುದು.

ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿಯ ಪ್ರಮುಖ ತತ್ತ್ವಗಳೊಂದಿಗೆ ಹೆಚ್ಚುವರಿಯಾಗಿ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಒಳಗೊಂಡಿರುವುದು.

ಅ. ಮಕ್ಕಳ ರಕ್ಷಣೆಯನ್ನು ಗುರುತಿಸುವುದು ಮತ್ತು ಸುರಕ್ಷಿತ ಪರಿಸರಕ್ಕೆ ಬದ್ಧರಾಗಿರುವುದು.

ಆ. ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಅಪಾಯಕಾರಿ ಸನ್ನಿವೇಶಗಳೂ ಮತ್ತು ಮಕ್ಕಳಿಗೆ ಸಂಭವಿಸಬಹುದಾದ ಅಪಘಾತಗಳನ್ನು ಕಡಿಮೆಗೊಳಿಸುವುದು.

ಇ. ಮಕ್ಕಳ ರಕ್ಷಣಾ ವಿಷಯಗಳನ್ನು ನಿರ್ವಹಿಸುವಲ್ಲಿ ಗೌಪ್ಯ ಅವಶ್ಯಕತೆಗಳಿಗೆ ಗೌರವ ನೀಡುವುದು.

ಈ. ಸಿಬ್ಬಂದಿಗಳು, ಬೋಧಕರು ಮತ್ತು ಆಡಳಿತ ನಿರ್ವಾಹಕರ ಮೇಲೆ ಬರುವ ತಪ್ಪು ಆಪಾದನೆಗಳನ್ನು ತಪ್ಪಿಸಲು ಸುರಕ್ಷತಾ ವಿಧಾನಗಳನ್ನು ಜಾರಿಗೊಳಿಸುವುದು.

Kiran Raghupathi

ಉ. ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ನೀತಿಗಳು, ಆಚರಣೆಗಳು ಮತ್ತು ಶಿಕ್ಷಣ ಸಂಸ್ಥೆಯ ಚಟುವಟಿಕೆಗಳಾದ ಸಿಬ್ಬಂದಿಯ ನೀತಿ ಸಂಹಿತೆ, ಬೆದರಿಕೆ ವಿರೋಧಿ ನೀತಿ (Anti-bullying policy), ಸೈಬರ್ ಸಂರಕ್ಷಣಾ ನೀತಿ ಮುಂತಾದವುಗಳನ್ನು ಪಟ್ಟಿ ಮಾಡುವುದು.

**ಪ್ರತಿಯೊಂದು ಶಿಕ್ಷಣ ಸಂಸ್ಥೆಯು ಕೆಳಕಂಡ ಅಂಶಗಳನ್ನು ಖಾತರಿಪಡಿಸಿಕೊಳ್ಳುವುದು.**

ಅ. ಶಿಕ್ಷಣ ಸಂಸ್ಥೆಗಳು ಮಕ್ಕಳ ರಕ್ಷಣಾ ನೀತಿಯ ಪ್ರತಿಯನ್ನು ಸುಲಭವಾಗಿ ಲಭ್ಯವಿರುವ ಸ್ಥಳದಲ್ಲಿರಿಸುವುದು.

ಆ. ಮಕ್ಕಳ ರಕ್ಷಣಾ ನೀತಿಯನ್ನು ಶಾಲಾ ದಿನಚರಿ, ಶಾಲೆಯ ಸೂಚನಾ ಫಲಕ, ಓದುವ ಸ್ಥಳಗಳು, ಯಾವುದೇ ಮಾಹಿತಿ ಕೇಂದ್ರ ಮತ್ತು ತನ್ನ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ ಶಿಕ್ಷಣ ಸಂಸ್ಥೆಯು ಪ್ರಚಾರ ಮಾಡುವುದು.

ಇ. ಶಿಕ್ಷಣ ಸಂಸ್ಥೆಯು ತನ್ನ ಎಲ್ಲಾ ಸಿಬ್ಬಂದಿ, ಗುತ್ತಿಗೆ ನೌಕರರಿಗೆ ಮತ್ತು ಸಂಬಂಧಿಸಿದ ಎಲ್ಲಾ ಇತರೆ ಭಾಗಿದಾರರಿಗೆ ಮಕ್ಕಳ ರಕ್ಷಣಾ ನೀತಿಯ ಪಾಲನೆ ಬಗ್ಗೆ ಅಧಿಸೂಚನೆ ಹೊರಡಿಸುವುದು ಮತ್ತು ಲಭ್ಯವಾಗುವಂತೆ ನೋಡಿಕೊಳ್ಳುವುದು.

ಈ. ಮಕ್ಕಳ ರಕ್ಷಣಾ ನೀತಿಯ ಮಾಹಿತಿ ಮತ್ತು ಅದನ್ನು ಪಾಲಿಸಲು ಬದ್ಧವಾಗಿರುವ ಬಗ್ಗೆ ಶಿಕ್ಷಣ ಸಂಸ್ಥೆಗಳು ಲಿಖಿತವಾಗಿ ಘೋಷಣೆಯನ್ನು ಪಡೆದುಕೊಳ್ಳುವುದು.

ಉ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಮಕ್ಕಳ ರಕ್ಷಣಾ ನೀತಿಯ ಬಗ್ಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ತಿಳುವಳಿಕೆ ನೀಡುವುದು.

ಊ. ಮಕ್ಕಳ ರಕ್ಷಣಾ ನೀತಿಯನ್ನು, ಶಿಕ್ಷಣ ಸಂಸ್ಥೆಗಳ ಆಡಳಿತ (ಸರ್ಕಾರೇತರ ಶಿಕ್ಷಣ ಸಂಸ್ಥೆಗಳಿಗೆ ಆಡಳಿತ ಮಂಡಳಿ ಅಥವಾ ಬೋರ್ಡ್ ಆಫ್ ಟ್ರಸ್ಟೀಸ್, ಸರ್ಕಾರಿ ಶಾಲೆಗಳಿಗೆ ಕ್ಷೇತ್ರಶಿಕ್ಷಣಾಧಿಕಾರಿಗಳು) ಮಂಡಳಿಯು ಆಗಾಗ್ಗೆ ಪರಿಶೀಲಿಸಿ ಮಾರ್ಪಾಟುಗಳನ್ನು ಮಾಡುವುದು.

ಋ. ಪ್ರಸ್ತಾವಿತ ಮಾರ್ಗಸೂಚಿಗಳಲ್ಲಿ ಸ್ವ–ಮೌಲ್ಯಮಾಪನದ ಗಮನಿಕೆ ಪಟ್ಟಿಯನ್ನು ಅಳವಡಿಸುವುದು.

## 3.2 ಸುರಕ್ಷ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳು

ಸುರಕ್ಷ ನೇಮಕಾತಿ ಮತ್ತು ಆಯ್ಕೆಯ ಮಾರ್ಗಸೂಚಿಗಳಿಂದ ಶಿಕ್ಷಣ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆಗೆ ಸೂಕ್ತವಾದ ವ್ಯಕ್ತಿಗಳನ್ನು ಗುರುತಿಸಿ, ಆಯ್ಕೆ ಮಾಡಿಕೊಳ್ಳಲು ಮತ್ತು / ಅಥವಾ ವಿದ್ಯಾರ್ಥಿಗಳ ಸುರಕ್ಷತೆಯನ್ನು ತೊಂದರೆಗೆ ಸಿಲುಕಿಸಬಹುದಾದ ಅನರ್ಹ ವ್ಯಕ್ತಿಗಳನ್ನು ಗುರುತಿಸಿ, ತಡೆಯಲು ನೆರವಾಗುತ್ತದೆ. ಕೆಳಕಂಡ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳುವುದರಿಂದ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿ ನಿಯಮಗಳಲ್ಲಿ ತಿದ್ದುಪಡಿಗಳನ್ನು ಮಾಡುವುದು.

**ತಪಾಸಣೆ**

**ಅ.** ಸಂಸ್ಥೆಯ ಮುಖ್ಯಸ್ಥರಿಂದ ಹಿಡಿದು ಬೋಧಕ, ಬೋಧಕೇತರ ಸಿಬ್ಬಂದಿ, ಗುತ್ತಿಗೆ ಸಿಬ್ಬಂದಿ ಮತ್ತು ಹೊರ ಗುತ್ತಿಗೆಯ ಸಂಸ್ಥೆಗಳನ್ನು ನೇಮಿಸಿಕೊಳ್ಳುವಾಗ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಹಿಂದೆ ಅವರು ಸೇವೆ ಸಲ್ಲಿಸಿದ ಎರಡು ಉದ್ಯೋಗದಾತರಿಂದ ದೃಢೀಕರಣ ಪತ್ರವನ್ನು ಪಡೆದುಕೊಳ್ಳುವುದು ಮತ್ತು ಇದರೊಂದಿಗೆ ಹಿಂದಿನ ಉದ್ಯೋಗದಾತರು ಮತ್ತು ಶಿಫಾರಸ್ಸು ಮಾಡಿರುವವರೊಂದಿಗೆ ಲಿಖಿತ ಮತ್ತು ಮೌಖಿಕವಾಗಿ ಪರಿಶೀಲಿಸುವುದು. ಎಲ್ಲ ರೀತಿಯಿಂದಲೂ ಸೂಕ್ತವಾದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಮಕ್ಕಳೊಂದಿಗೆ ಕಾರ್ಯನಿರ್ವಹಿಸಲು ತೊಡಗಿಸಿಕೊಳ್ಳುವುದು.

**ಆ.** ಆಯ್ಕೆಗಾಗಿ ಲಿಖಿತವಾಗಿ ಅರ್ಜಿಯನ್ನು ಆಹ್ವಾನಿಸುವುದು ಮತ್ತು ವೈಯಕ್ತಿಕ ಸಂದರ್ಶನ ನಡೆಸುವುದು. ಮಕ್ಕಳ ಸುರಕ್ಷತೆ ಮತ್ತು ಹಲ್ಲೆ ಮುಂತಾದವುಗಳ ಕುರಿತು ಅರ್ಜಿದಾರನ ಮನೋಭಾವವನ್ನು ಪರಿಶೀಲಿಸುವುದು.

Kiran Raghupathi

ಇ. ಪೊಲೀಸ್ ಇಲಾಖೆಯಿಂದ ಅರ್ಜಿದಾರನ ಹಿನ್ನೆಲೆ ಮತ್ತು ಆತನ ವಿರುದ್ಧ ಯಾವುದಾದರೂ ಬಾಕಿ ಇರುವ ಅಪರಾಧ ಪ್ರಕರಣಗಳಿರುವುದರ ಬಗ್ಗೆ ಮಾಹಿತಿಯನ್ನು ಪಡೆಯವುದು. ಒಂದುವೇಳೆ ಅಂತಹ ಪ್ರಕರಣವೇನಾದರೂ ನೋಂದಣಿಯಾಗಿದ್ದಲ್ಲಿ, ಅಂತಹ ವ್ಯಕ್ತಿಯನ್ನು ಮಕ್ಕಳೊಂದಿಗೆ ನೇರವಾಗಿ ಸಂಪರ್ಕವಿರುವ ಯಾವುದೇ ಕೆಲಸಕ್ಕೂ ಪರಿಗಣಿಸದಿರುವುದು.

**ಈ.** ಸಿಬ್ಬಂದಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಸಂದರ್ಶನ ವರದಿಗಳು, ಪ್ರಮಾಣಪತ್ರಗಳು ಅವರು ನಿವೃತ್ತರಾಗುವವರೆಗೂ ಶಿಕ್ಷಣ ಸಂಸ್ಥೆ ಮತ್ತು ಆಡಳಿತ ಮಂಡಳಿಯಲ್ಲಿ ಲಭ್ಯವಿರುವುದು.

**3.3 ಹೊರಗುತ್ತಿಗೆ ಸಿಬ್ಬಂದಿಗಳಿಗಾಗಿ**

ಶಿಕ್ಷಣ ಸಂಸ್ಥೆಯು ಸಿಬ್ಬಂದಿಗಳನ್ನು ಹೊರಗುತ್ತಿಗೆ ಸಂಸ್ಥೆಯ ಮೂಲಕ ತೆಗೆದುಕೊಂಡಿದ್ದಲ್ಲಿ, ಆ ಸಂಸ್ಥೆಯು ಸಿಬ್ಬಂದಿಗಳ ನೇಮಕಾತಿ ಮಾರ್ಗಸೂಚಿಗಳನ್ನು ಹೊಂದಿದ್ದು, ಆಯ್ಕೆಯಲ್ಲಿ ಮೇಲ್ಕಂಡ ನಿಯಮಗಳನ್ನು ಪಾಲಿಸಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

**3.4ಮಾನವ ಸಂಪನ್ಮೂಲ ನೀತಿ ಮತ್ತು ಸೇವಾ ನಿಯಮಗಳು**

ಶಿಕ್ಷಣ ಸಂಸ್ಥೆಯಲ್ಲಿನ ಆಡಳಿತ ಮಂಡಳಿಯ ಮಾನವ ಸಂಪನ್ಮೂಲ ನೀತಿಯು ಸಂಸ್ಥೆಯಲ್ಲಿನ ಮಕ್ಕಳ ರಕ್ಷಣಾ ನೀತಿಯನ್ನು ಉಲ್ಲೇಖಿತ, ಅದರಲ್ಲಿರುವ ಮಕ್ಕಳ ರಕ್ಷಣಾತ್ಮಕ ಕ್ರಮಗಳ ಮಾಹಿತಿಯನ್ನು ಅಳವಡಿಸಿಕೊಳ್ಳುವುದು. ಮಕ್ಕಳ ರಕ್ಷಣಾ ನೀತಿಯನ್ನು ಪಾಲಿಸದಿರುವ ಹಾಗೂ ನೀತಿಸಂಹಿತೆಗೆ ಬದ್ಧರಾಗದೇ ಇರುವುದರಿಂದ ಎದುರಾಗುವ ಪರಿಣಾಮಗಳ ಬಗ್ಗೆ ಸಂಸ್ಥೆಯ ಮಾನವ ಸಂಪನ್ಮೂಲ ನೀತಿಯಲ್ಲಿ ಸ್ಪಷ್ಟವಾಗಿ ನಿರ್ದಿಷ್ಟಪಡಿಸುವುದು.

ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯನ್ನು ರಾಜ್ಯದ ಸಿಬ್ಬಂದಿಗಳ ನೀತಿಯ ಸೇವಾ ನಿಯಮಗಳಲ್ಲಿ ಸೇರಿಸುವುದು. ಈ ನಿಯಮಗಳು ಗ್ರ್ಯಾಂಟ್ ಇನ್ ಏಡ್ ಸಂಸ್ಥೆಗಳ ಸೇವಾ ನಿಯಮಗಳು, ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೂ ಅನ್ವಯವಾಗುತ್ತದೆ.

## ನೇಮಕಾತಿ ಮತ್ತು ಸೇವಾ ಅವಧಿಯಲ್ಲಿ ಪಾಲಿಸಬೇಕಾದ ನಿಯಮಗಳು

ಅ. ನೇಮಕಾತಿಗೊಂಡ ಸಿಬ್ಬಂದಿಯು ಪಾಲಿಸಬೇಕಾದ ನೀತಿಸಂಹಿತೆಗೆ (ಮಾದರಿ ನೀತಿ ಸಂಹಿತೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ) ಒಪ್ಪಿಗೆ ಸೂಚಿಸಿ, ಸಹಿ ಮಾಡಿರುವುದನ್ನು ಖಾತರಿಪಡಿಸಿಕೊಳ್ಳುವುದು.

ಆ. ಒಂದುವೇಳೆ ಸಿಬ್ಬಂದಿಗಳನ್ನು ಮಕ್ಕಳ ರಕ್ಷಣಾ ನೀತಿಯ ಅಧಿಸೂಚನೆಗೆ ಮುನ್ನ ನೇಮಕಾತಿ ಮಾಡಿಕೊಂಡಿದ್ದಲ್ಲಿ, ಅವರ ಅಪರಾಧ ಹಿನ್ನೆಲೆಯನ್ನು ಪರಿಶೀಲಿಸುವುದು. ಅಂತಹ ಪ್ರತಿಯೊಬ್ಬ ನೌಕರನು ನೀತಿಸಂಹಿತೆಯನ್ನು ಒಪ್ಪಿಕೊಳ್ಳುವುದು ಮತ್ತು ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯನ್ನು ಪಾಲಿಸುವ ಬಗ್ಗೆ ಒಪ್ಪಿಗೆಯನ್ನು ಲಿಖಿತವಾಗಿ ಪಡೆಯುವುದು. ಒಂದುವೇಳೆ ಯಾವುದೇ ಸಿಬ್ಬಂದಿ ಅನುಸರಣೆಗೆ ಬದ್ಧವಾಗಿರದೇ ಇದ್ದಲ್ಲಿ, ಚಾಲ್ತಿಯಲ್ಲಿರುವ ಕಾನೂನಿನನ್ವಯ ಅಥವಾ ಸಂಸ್ಥೆಯ ಮಾನವ ಸಂಪನ್ಮೂಲ ನೀತಿಯಲ್ಲಿ ವ್ಯಾಖ್ಯಾನಿಸಿರುವಂತೆ ಅಥವಾ ಸರ್ಕಾರಿ ಸೇವಾ ನಿಯಮಗಳಡಿ ಸೂಕ್ತ ಕ್ರಮ ಕೈಗೊಳ್ಳುವುದು.

ಇ. ಶಿಕ್ಷಣ ಸಂಸ್ಥೆಯಲ್ಲಿನ ಯಾವುದೇ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯು, ಮಕ್ಕಳ ಮೇಲೆ ಹಲ್ಲೆ ಮಾಡಿರುವುದಾಗಿ ಅಥವಾ ಹಲ್ಲೆಗೆ ಸಂಬಂಧಿಸಿದ ತನಿಖೆಗೆ ಒಳಪಟ್ಟಿದ್ದಾಗ ಅವರ ವಿಚಾರಣೆಯನ್ನು ಬಾಕಿ ಇರಿಸಿ, ಅಮಾನತ್ತುಗೊಳಿಸುವುದು.

ಈ. ಶಿಕ್ಷಣ ಸಂಸ್ಥೆಯಲ್ಲಿನ ಯಾವುದೇ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯು, ಮಕ್ಕಳ ಮೇಲೆ ಹಲ್ಲೆ ಮಾಡಿರುವುದಾಗಿ ಅಥವಾ ಸುರಕ್ಷತೆಯನ್ನು ಉಲ್ಲಂಘನೆ ಮಾಡಿರುವುದಾಗಿ ನ್ಯಾಯಾಲಯದಲ್ಲಿ ಸಾಬೀತಾದಲ್ಲಿ ಅವನು / ಆಕೆಯನ್ನು ತಕ್ಷಣವೇ ಸೇವೆಯಿಂದ ವಜಾಗೊಳಿಸಿ, ಸೇವೆಯನ್ನು ಮುಕ್ತಾಯಗೊಳಿಸಲು ಕಾರಣವಾದ ಅಂಶಗಳನ್ನು ವಜಾಗೊಳಿಸುವ ಪತ್ರದಲ್ಲಿ ದಾಖಲಿಸುವುದು.

Kiran Raghupathi

ಉ. ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕಾರ್ಯಕ್ಷಮತೆಯಡಿ ಮಕ್ಕಳ ರಕ್ಷಣಾ ನೀತಿಯ ಅನುಸರಣೆಯನ್ನು ಸೇರ್ಪಡೆಗೊಳಿಸುವುದು.

## 3.5 ಹೆಚ್ಚುವರಿ ಸುರಕ್ಷತಾ ಕ್ರಮಗಳು

### ಅ. ಸುರಕ್ಷಿತ ಮೂಲಸೌಕರ್ಯ

ರಾಷ್ಟ್ರೀಯ ಕಟ್ಟಡಗಳ ನೀತಿಸಂಹಿತೆ, 2005ನ್ನು ಶಿಕ್ಷಣ ಸಂಸ್ಥೆಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿರುವ ಎಲ್ಲಾ ಸಂಸ್ಥೆಗಳು ಒಂದು ಮಾದರಿ ನೀತಿಸಂಹಿತೆಯನ್ನಾಗಿ ಅಳವಡಿಸಿಕೊಳ್ಳಲಾಗಿದೆ. ಮಾನವ ಸಂಪನ್ಮೂಲ ಮಂತ್ರಾಲಯದ ದಿನಾಂಕ: 09.10.2014ರ ಶಾಲಾ ಸುರಕ್ಷತೆ ಪ್ರಕಟಣೆಯನ್ವಯ ಎಲ್ಲಾ ಹೊಸ ಕಟ್ಟಡಗಳನ್ನು ವಿನ್ಯಾಸಗೊಳಿಸಬೇಕಿದೆ. ವಯಸ್ಕರು ಮತ್ತು ಮಕ್ಕಳಿಂದ ಮಕ್ಕಳ ಮೇಲಾಗುವ ಅಪಾಯಗಳನ್ನು ತಪ್ಪಿಸುವ ನಿಟ್ಟಿನಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸ್ಥಳಗಳಲ್ಲಿ ಅಂದರೆ, ಶೌಚಾಲಯಗಳು, ಪ್ರಯೋಗಾಲಯಗಳು, ಕ್ರೀಡಾಸಾಮಗ್ರಿಗಳ ಕೊಠಡಿಗಳು, ಸ್ನಾನದ ಕೊಠಡಿಗಳು, ಕಲಾಮಂದಿರಗಳು ಸಮಾಲೋಚನಾ ಕೊಠಡಿಗಳು ಮುಂತಾದವುಗಳಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ, ವಯಸ್ಕ ಸೇವಕರು, ಸಮಬಲದ ಬೆಂಬಲ ಗುಂಪುಗಳು ಮುಂತಾದವುಗಳನ್ನು ಒದಗಿಸುವ ಮೂಲಕ ಸುರಕ್ಷಾ ಅಭ್ಯಾಸಗಳನ್ನು ಖಾತರಿಪಡಿಸುವುದು.

### ಆ. ನಿಯಂತ್ರಣದ ಲಭ್ಯತೆ

ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡುವವರಿಗೆ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ನಿಯಮಗಳನ್ನು ಅಭಿವೃದ್ಧಿಪಡಿಸಿ ಅನುಸರಿಸಲು ತಿಳಿಸುವುದು ಹಾಗೂ ಭೇಟಿ ನೀಡುವವರ ರಿಜಿಸ್ಟರನ್ನು ಸರಿಯಾದ ಸ್ಥಳದಲ್ಲಿ ಇಡುವುದು, ಸೇವೆಗಳ ಸರಬರಾಜುದಾರರು, ಸಮಾಲೋಚಕರು, ಮಾರುಕಟ್ಟೆ ಸಿಬ್ಬಂದಿ ಮುಂತಾದವರ ಆಗಮನ ಮತ್ತು ನಿರ್ಗಮನದ ದ್ವಾರಗಳ ಮೇಲ್ವಿಚಾರಣೆ ಮಾಡುವುದು. ಶಿಕ್ಷಣ ಸಂಸ್ಥೆಯ ಹೊರಗಿನ ವ್ಯಕ್ತಿಗಳು ಯಾವ ಸಂದರ್ಭಗಳಲ್ಲಿ ಸಂಸ್ಥೆಯ ಒಳಗೆ ಬರಲು ಅವಕಾಶ ನೀಡಲಾಗಿತ್ತು ಎಂಬುದನ್ನು ಖಾತರಿಪಡಿಸಿಕೊಳ್ಳುವುದು.

### ಇ. ಶಾಲೆಯ ಹೊರಗಿನ ಚಟುವಟಿಕೆಗಳ ಮಾರ್ಗಸೂಚಿಗಳು:

ಶಿಕ್ಷಣ ಸಂಸ್ಥೆಗಳು ಹೊರಗಿನ ಪ್ರವಾಸಗಳನ್ನು ಕೈಗೊಂಡಾಗ ಅಂದರೆ, ವಿಹಾರಗಳು, ವನಭೋಜನ, ಶೈಕ್ಷಣಿಕ ಪ್ರವಾಸ, ಅರಿವು–ಜಾಗೃತಿ ಶಿಬಿರಗಳು, ಜಾಥಾಗಳು ಮುಂತಾದ ಸಂದರ್ಭಗಳಲ್ಲಿ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು.

- ಪೋಷಕರು/ಪಾಲಕರಿಂದ ಲಿಖಿತವಾಗಿ ಅನುಮೋದನೆ ಪಡೆಯುವುದು.
- ಹೊರಡುವ ಮುನ್ನ ವಿದ್ಯಾರ್ಥಿಗಳಿಗೆ ಸುರಕ್ಷತೆಯ ಬಗ್ಗೆ ಮಾಹಿತಿ ನೀಡುವುದು.
- ತುರ್ತುಪರಿಸ್ಥಿತಿಗಳಲ್ಲಿ ಪೋಷಕರನ್ನು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳನ್ನು ಪಡೆದುಕೊಳ್ಳುವುದು.
- ಪರಿವೀಕ್ಷಣೆಗೆ ವಿದ್ಯಾರ್ಥಿಗಳು ಮತ್ತು ವಯಸ್ಕರ ಅನುಪಾತ ಪಾಲಿಸುವುದು.
- ಮಗುವಿನ ರಕ್ಷಣಾ ನಿಯಮಗಳ ಬಗ್ಗೆ ಕನಿಷ್ಠ ತರಬೇತಿ ಹೊಂದಿರುವ ಒಬ್ಬ ವಯಸ್ಕರು ಇರುವಂತೆ ನೋಡಿಕೊಳ್ಳುವುದು.
- ಪ್ರಥಮ ಚಿಕಿತ್ಸಾ ಪೆಟ್ಟಿಗೆ ಸಿದ್ಧವಿರುವುದು.
- ಸಾರ್ವಜನಿಕ ಸಾರಿಗೆಯ ಬಳಕೆ ಇತ್ಯಾದಿಗಳು.
- ನಿರ್ದಿಷ್ಟ ಘಟನೆ ಅಥವಾ ಕಾರ್ಯಕ್ರಮಗಳಾದ ಶಾಲಾ ಪ್ರವಾಸ, ಸ್ಪರ್ಧೆಗಳು ನಡೆಯುವ ಸಂದರ್ಭಗಳಲ್ಲಿ ಮಗುವಿನ ರಕ್ಷಣೆಗಾಗಿ ನಿಗದಿಪಡಿಸಿದ ವ್ಯಕ್ತಿಯನ್ನು ಜವಾಬ್ದಾರರನ್ನಾಗಿಸಿ, ಹೊಣೆಗಾರಿಕೆಯನ್ನು ನಿಗದಿಪಡಿಸುವುದು.
- ಪ್ರಾಥಮಿಕ ಶಾಲೆಯವರೆಗೆ 1:10 ಮತ್ತು ಪ್ರೌಢಶಾಲೆ ಮತ್ತು ಅದಕ್ಕೆ ಮೇಲ್ಪಟ್ಟ ಶಾಲೆಗಳಿಗೆ 1;20ರ ಅನುಪಾತವನ್ನು ನಿಗದಿಗೊಳಿಸುವುದು. ಈ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ದಿನಾಂಕ:28.07.2014ರ ಮಕ್ಕಳ ಪ್ರವಾಸದ ಮಾರ್ಗಸೂಚಿಗಳನ್ನು ಅವಲೋಕಿಸುವುದು.

Kiran Raghupathi

### ಈ. ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳು

ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಲ್ಲಿ ಮಾರ್ಗದರ್ಶನ ಮತ್ತು ಆಪ್ತಸಮಾಲೋಚನಾ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಅವುಗಳು ಪರಿಣಾಮಕಾರಿ ಹಾಗೂ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ಕ್ರಮವಹಿಸುವುದು. ಸದರಿ ಕೇಂದ್ರಗಳಲ್ಲಿ ತರಬೇತಿ ಹೊಂದಿದ ಆಪ್ತಸಮಾಲೋಚಕರನ್ನು ನೇಮಿಸುವುದು ಅಥವಾ ತರಬೇತಿ ಹೊಂದಿದವರ ಸೇವೆಯನ್ನು ಪಡೆಯುವುದು. ಆಪ್ತ ಸಮಾಲೋಚನಾ ಸೇವೆಗಳನ್ನು ಸಮಯಕ್ಕನುಗುಣವಾಗಿ ಅಧಿವೇಶನಗಳ ಮೂಲಕ ನೀಡುವುದು. ತರಬೇತಿ ಹೊಂದಿದ ಆಪ್ತಸಮಾಲೋಚಕರು ಲಭ್ಯವಿಲ್ಲದಿದ್ದಲ್ಲಿ, ಶಾಲೆಯಲ್ಲಿರುವ ಒಬ್ಬ ಶಿಕ್ಷಕರಿಗೆ ಮಕ್ಕಳ ಆಪ್ತಸಮಾಲೋಚನಾ ಕೌಶಲ್ಯಗಳ ಬಗ್ಗೆ ತರಬೇತಿ ನೀಡಿ ಬಳಸಿಕೊಳ್ಳುವುದು.

## 3.6 ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ವೃತ್ತಿಪರ ನೈತಿಕತೆಯ ನೀತಿ ಸಂಹಿತೆ

**ಉದ್ದೇಶ ಮತ್ತು ವ್ಯಾಪ್ತಿ:** ಶಿಕ್ಷಣ ಸಂಸ್ಥೆಯಲ್ಲಿನ ಬೋಧಕ, ಬೋಧಕೇತರ ಮತ್ತು ಹೊರಗುತ್ತಿಗೆ (ಇನ್ನು ಮುಂದೆ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳೆಂದು ಉಲ್ಲೇಖಿಸಲಾಗುವುದು) ಸಿಬ್ಬಂದಿಗಳಿಗೆ ಅವರ ವರ್ತನೆ ಮತ್ತು ನೈತಿಕತೆಯ ಬಗ್ಗೆ ಮಾರ್ಗದರ್ಶನ ನೀಡಲು ನೀತಿ ಸಂಹಿತೆಯನ್ನು ರೂಪಿಸಿ, ಪಾಲಿಸಲು ಸಂಸ್ಥೆಯು ಬದ್ಧವಾಗಿರಬೇಕೆಂದು ನಿರೀಕ್ಷಿಸಲಾಗಿದೆ.

ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳನ್ನು ವಿಶೇಷ ಹಾಗೂ ಆದರ್ಶಪ್ರಾಯ ಸ್ಥಾನದಲ್ಲಿ ಗುರುತಿಸಲಾಗುತ್ತಿದ್ದು, ವಿದ್ಯಾರ್ಥಿಗಳು ಮತ್ತು ಸಮುದಾಯದ ಸದಸ್ಯರ ವರ್ತನೆ ಮತ್ತು ನಡವಳಿಕೆಯ ಮೇಲೆ ಪ್ರಭಾವ ಬೀರುವ ಮಾದರಿಯ ವ್ಯಕ್ತಿಗಳಾಗಿರುವುದು. ಆದುದರಿಂದ ಸದರಿಯವರ ನಡವಳಿಕೆಯು ಸಮಾಜದಲ್ಲಿನ ಉತ್ತಮ ನಡವಳಿಕೆಗಳಿಗೆ ಉದಾಹರಣೆಯಾಗುವಂತಿರಬೇಕು. ಒಬ್ಬ ನಾಗರೀಕನಾಗಿ ಮತ್ತು ಶಿಕ್ಷಣ ಸಂಸ್ಥೆಯ ಸದಸ್ಯನಾಗಿ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶಾಲೆಯ ಒಳಗೆ ಮತ್ತು ಹೊರಗೆ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದರೊಂದಿಗೆ ಅವರ ಗೌರವ, ಘನತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳುವುದು.

ಈ ಮಾರ್ಗಸೂಚಿಗಳ ಆಧಾರದಲ್ಲಿ ಶಿಕ್ಷಣ ಸಂಸ್ಥೆಯಲ್ಲಿನ ಆಡಳಿತ ಮಂಡಳಿಯು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನೀತಿಸಂಹಿತೆಯನ್ನು ವ್ಯಾಖ್ಯಾನಿಸುವುದು. ಸರ್ಕಾರಿ ಶಾಲೆಗಳಾಗಿದ್ದಲ್ಲಿ, ಶಿಕ್ಷಣ ಇಲಾಖೆಯು ಸಿಬ್ಬಂದಿಗಳಿಗೆ ನೀತಿಸಂಹಿತೆಯನ್ನು ವ್ಯಾಖ್ಯಾನಿಸುವುದು. ಈ ನೀತಿಸಂಹಿತೆಯು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯ ಭಾಗವಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕರಡು ಎನ್‌ಸಿಟಿಇ ಮಾರ್ಗಸೂಚಿ 2010ನ್ನು ಉಲ್ಲೇಖಿಸುವುದು.

ನೀತಿ ಸಂಹಿತೆಯು ಎಲ್ಲಾ ಶಿಕ್ಷಣ ಸಂಸ್ಥೆಗಳ ಬೋಧಕ, ಬೋಧಕೇತರ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳಿಗೆ ಅನ್ವಯವಾಗಲಿದ್ದು, ಅವರು ಅನುಸರಿಸಲು ವಿಫಲರಾದಲ್ಲಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ನೀತಿ ಅಥವಾ ಸಿಬ್ಬಂದಿಗಳ ಸೇವಾ ನಿಯಮಾವಳಿಗಳು ಮತ್ತು / ಅಥವಾ ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾ ನೀತಿಯಡಿ ಶಿಸ್ತುಕ್ರಮಕ್ಕೆ ಒಳಪಡಿಸಲಾಗುವುದು ಎಂಬ ಅಂಶದ ಬಗ್ಗೆ ಎಲ್ಲರೂ ಅರಿವನ್ನು ಹೊಂದಿರತಕ್ಕದ್ದು.

### ಕಾನೂನು ಮತ್ತು ಸಂವಿಧಾನದ ಕಟ್ಟುಪಾಡುಗಳ ಅನುಪಾಲನೆ

ಎಲ್ಲಾ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ಹೊರಗುತ್ತಿಗೆಯ ಸಂಸ್ಥೆಗಳಿಂದ ನೇಮಿಸಲ್ಪಟ್ಟ ಗುತ್ತಿಗೆ ಸಿಬ್ಬಂದಿಗಳು ಭಾರತೀಯ ದಂಡ ಸಂಹಿತೆಯು ಸೇರಿದಂತೆ ಪ್ರಸ್ತುತ ಜಾರಿಯಲ್ಲಿರುವ ಶಾಸನಗಳಡಿ ಒಳಪಟ್ಟಿರುವರು.

### 'ಮಗುವಿನ ರಕ್ಷಣೆ'ಗೆ ಸಕಾರಾತ್ಮಕ ಉದಾಹರಣೆಯನ್ನು ಸ್ಥಾಪಿಸುವುದು

- ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವರ್ತನೆ ಮತ್ತು ನೈತಿಕತೆಯು ಶಾಲೆಯಲ್ಲಿನ ಎಲ್ಲಾ ವಿದ್ಯಾರ್ಥಿಗಳು ಅನುಸರಿಸಲು ಮಾದರಿಯಾಗಿರುವುದು.
- ಮಕ್ಕಳಿಗೆ ಸಂಬಂಧಿಸಿದ ಮೌಖಿಕ ಮತ್ತು ಮೌಖಿಕೇತರ ಸಂವಹನವು ಮಕ್ಕಳ ಸಂವೇದಿ ಮತ್ತು ವಯಸ್ಸಿಗನುಗುಣವಾಗಿರಬೇಕಲ್ಲದೇ, ಯಾವುದೇ ರೀತಿಯಲ್ಲಿಯೂ ಮಗುವಿಗೆ ಹೆದರಿಕೆ, ಭಯ, ಅವಮಾನ ಅಥವಾ ಘನತೆಗೆ ಧಕ್ಕೆ ತರುವಂತಿರಬಾರದು. ಸಂವಹನವು ಮಗುವಿನ ಪೋಷಕರು ಮತ್ತು ಪಾಲಕರನ್ನು ಸಹ ಕೀಳಾಗಿ ಅಥವಾ ಕಡೆಗಣಿಸುವಂತಿರಬಾರದು.

Kiran Raghupathi

- ಶಿಕ್ಷಣ ಸಂಸ್ಥೆಗಳಲ್ಲಿನ ಎಲ್ಲಾ ಸಿಬ್ಬಂದಿಗಳು ತಮ್ಮ ಮೇಲೆ ಯಾವುದೇ ರೀತಿಯ ನಿಂದನೆ ಮತ್ತು ವೃತ್ತಿಪರವಲ್ಲದ ನೈತಿಕತೆಯ ಆಪಾದನೆಗಳು ಬರದಂತೆ ನಡೆದುಕೊಳ್ಳುವುದು.
- ಶಿಕ್ಷಣ ಸಂಸ್ಥೆಗಳಲ್ಲಿ ಎಲ್ಲಾ ಸಿಬ್ಬಂದಿಗಳು ಶಾಲೆಯಲ್ಲಿನ ಯಾವುದೇ ಮಕ್ಕಳು, ವಯಸ್ಕರು ಅಥವಾ ಸಮುದಾಯದಲ್ಲಿನ ಯಾವುದೇ ಮಗುವನ್ನು ವಯಸ್ಸು, ಲಿಂಗತ್ವ, ಜಾತಿ, ವರ್ಗ, ಧರ್ಮ, ವಿಕಲತೆ ಮುಂತಾದವುಗಳ ಆಧಾರದಲ್ಲಿ ತಾರತಮ್ಯ ಸಂಭವಿಸದಿರುವುದನ್ನು ಖಾತರಿಪಡಿಸಿಕೊಳ್ಳುವುದು. ಕೆಲವು ಸನ್ನಿವೇಶಗಳನ್ನು ಹೊರತುಪಡಿಸಿ ಯಾವುದೇ ಮಗುವಿಗೆ ವಿಶೇಷ ಆದ್ಯತೆಯನ್ನು ನೀಡದಿರುವುದನ್ನು ಸಹ ಖಾತರಿಪಡಿಸಿಕೊಳ್ಳುವುದು.
- ಸಹೋದ್ಯೋಗಿ ಅಥವಾ ಹೊರಗುತ್ತಿಗೆ ಸಂಸ್ಥೆಯ ನೌಕರರಿಂದ ನೀತಿಸಂಹಿತೆ ಉಲ್ಲಂಘನೆಯ ಬಗ್ಗೆ ಅನುಮಾನ ಅಥವಾ ಮಾಹಿತಿ ಕಂಡುಬಂದಲ್ಲಿ, ತಕ್ಷಣವೇ ಮಕ್ಕಳ ರಕ್ಷಣಾಧಿಕಾರಿಗೆ ವರದಿ ಮಾಡುವುದು.

## ಮಕ್ಕಳ ರಕ್ಷಣೆ ಹಾಗೂ ಕ್ಷೇಮ

- ಶಿಕ್ಷಣ ಸಂಸ್ಥೆಗಳಲ್ಲಿ ಸಿಬ್ಬಂದಿಗಳೂ ತಮ್ಮ ಪರಿವೀಕ್ಷಣೆಯಡಿ ಬರುವ ವಿದ್ಯಾರ್ಥಿಗಳ ರಕ್ಷಣೆ ಮತ್ತು ಯೋಗಕ್ಷೇಮದ ಗುರಿ ಹೊಂದಿರುವುದನ್ನು ಖಾತರಿಪಡಿಸಿಕೊಳ್ಳುವುದು.
- ಶಿಕ್ಷಣ ಸಂಸ್ಥೆ ಮತ್ತು ಶಾಲೆಯ ಆವರಣದಲ್ಲಿ ಮಗುವಿನ ನಿಂದನೆಯೂ ಸೇರಿದಂತೆ ಸುರಕ್ಷತೆಯ ಉಲ್ಲಂಘನೆಯಾಗದಂತೆ ಮಗುವನ್ನು ರಕ್ಷಿಸುವ ಕರ್ತವ್ಯ ಮತ್ತು ಜವಾಬ್ದಾರಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿಯದಾಗಿರುತ್ತದೆ ಹಾಗೂ ಸದರಿ ಘಟನೆಗಳು ಸಂಭವಿಸಿದಾಗ ಮಾಹಿತಿಯನ್ನು ಶಿಕ್ಷಣ ಸಂಸ್ಥೆಯ ಮಕ್ಕಳ ರಕ್ಷಣಾಧಿಕಾರಿ ಅಥವಾ ಸಂಸ್ಥೆಯ ಮುಖ್ಯಸ್ಥರಿಗೆ ವರದಿ ಮಾಡುವುದನ್ನು ಸಹ ಒಳಗೊಂಡಿರುತ್ತದೆ.
- ಶಾಲೆಯಲ್ಲಿನ ಯಾವುದೇ ಮಗುವಿಗೆ ಭಯ, ಆಘಾತ, ಗಾಯ, ಭೌತಿಕ ದಂಡನೆ, ಲೈಂಗಿಕ ಹಲ್ಲೆ, ಮಾನಸಿಕ ಮತ್ತು ಭಾವನಾತ್ಮಕ ಶೋಷಣೆ ಮುಂತಾದವುಗಳಿಂದ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ದೂರ ಉಳಿಯುವುದು.
- ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಮಗುವು ನೀಡಿರುವ ಮಾಹಿತಿ ಅಥವಾ ಮಗುವಿಗೆ ಸಂಬಂಧಿಸಿದ ಘಟನೆಯ ವಿವರಗಳ ಗೌಪ್ಯತೆಯನ್ನು ಕಾಪಾಡುವುದು.
- ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಎಲ್ಲಾ ವಿಧದ ದೌರ್ಜನ್ಯ (ಭೌತಿಕ, ಭಾವನಾತ್ಮಕ, ಲೈಂಗಿಕ ಮತ್ತು ನಿರ್ಲಕ್ಷ್ಯ), ಶೋಷಣೆ ಮತ್ತು ಅಧಿಕಾರ ದುರುಪಯೋಗವಾಗದಂತೆ ತೀವ್ರ ನಿಗಾವಹಿಸುವುದು ಮತ್ತು ಶೂನ್ಯ ಸಹನೆಯನ್ನು ಹೊಂದಿರುವುದು. ಇದರಲ್ಲಿ ವಿದ್ಯಾರ್ಥಿಗಳು ಅಥವಾ ವಯಸ್ಕರಿಂದ ಬೆದರಿಕೆ ಮತ್ತು ಗೇಲಿ ಮಾಡುವುದು ಸಹ ಸೇರಿರುತ್ತದೆ.
- ರಾಷ್ಟ್ರೀಯ ಮಕ್ಕಳ ಹಕ್ಕುಗಳ ಆಯೋಗ (ಎನ್‌ಸಿಪಿಸಿಆರ್) ಹೊರಡಿಸಿರುವ 'ಶಾಲೆಗಳಲ್ಲಿ ದೈಹಿಕ ಶಿಕ್ಷೆಯನ್ನು ನಿರ್ಮೂಲನೆ ಮಾಡುವ ಮಾರ್ಗಸೂಚಿ'ಗಳಲ್ಲಿ ವ್ಯಾಖ್ಯಾನಿಸಿರುವಂತೆ, ಮಕ್ಕಳನ್ನು ಸಕಾರಾತ್ಮಕವಾಗಿ ತೊಡಗಿಸಿಕೊಳ್ಳುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳು ಯಾವುದೇ ರೀತಿಯ ದೈಹಿಕ ದಂಡನೆಯನ್ನು ವಿಧಿಸುವುದರಿಂದ ದೂರವಿರುವುದು.
- ಶಾಲೆಗಳಲ್ಲಿ ಮಕ್ಕಳೊಂದಿಗೆ ವಯಸ್ಕರು ನಡೆಸುವ ಸಂಭಾಷಣೆಯನ್ನು ಎಲ್ಲರಿಗೂ ಗೋಚರಿಸುವಂತಹ ವ್ಯವಸ್ಥೆ (ತೆರೆದ ಬಾಗಿಲು / ಕಿಟಕಿ ಅಥವಾ ಪಾರದರ್ಶಕ ಬಾಗಿಲುಗಳನ್ನು ಹೊಂದಿರುವ ಕೋಣೆ)ಯಲ್ಲಿ ನಡೆಸುವುದು ಹಾಗೂ ಆ ಸಂದರ್ಭದಲ್ಲಿ ಕನಿಷ್ಠ ಒಬ್ಬ ಇತರೆ ವಯಸ್ಕ ಮಗುವಿನೊಂದಿಗೆ ಹಾಜರಿರುವುದು. ಒಂದು ವೇಳೆ ಬಾಗಿಲು ಮುಚ್ಚಿದ ಕೋಣೆಯಲ್ಲಿ ಮಗುವಿನೊಂದಿಗೆ ಚರ್ಚೆ ಅಥವಾ ಸಭೆ ನಡೆಸಬೇಕಾದಲ್ಲಿ ಅಧಿಕೃತವಾಗಿ ನೇಮಿಸಲಾದ ಸಿಬ್ಬಂದಿ / ಪೋಷಕ / ಪಾಲಕರು ಯಾವಾಗಲೂ ಹಾಜರಿರುವುದನ್ನು ಕಡ್ಡಾಯಗೊಳಿಸಲಾಗಿದೆ.
- ಭೌತಿಕ ಭೇಟಿಯು ಕೇವಲ ಅಗತ್ಯ ಮತ್ತು ಸಂದರ್ಭೋಚಿತವಾಗಿರುವುದು ಮತ್ತು ಪರಿಸ್ಥಿತಿ, ಲಿಂಗತ್ವ, ವಯಸ್ಸು, ಸಾಮರ್ಥ್ಯ, ಬೆಳವಣಿಗೆಯ ಹಂತ, ಮಗುವಿನ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಳ್ಳುವುದು. ಭೇಟಿಯು ಗೌರವಯುತವಾಗಿರಬೇಕು ಮತ್ತು ಮಗುವಿಗೆ ಅಹಿತಕರ, ಬೆದರಿಕೆ, ತನಿಖೆ ಮತ್ತು ಲೈಂಗಿಕತೆಯಂತಹ ಸ್ವಭಾವವೆಂದೆನಿಸಬಾರದು.

Kiran Raghupathi

- ಮಗುವಿನ ವೈಯಕ್ತಿಕ ಮತ್ತು ಖಾಸಗಿ ಚಟುವಟಿಕೆಗಳಾದ ಸ್ನಾನ ಮಾಡುವುದು, ಬಟ್ಟೆ ಬದಲಿಸುವುದು, ಶೌಚಾಲಯ ಬಳಕೆ ಮತ್ತಿತರ ಸಂದರ್ಭಗಳಲ್ಲಿ ಮಗುವಿನ ಏಕಾಂತತೆಯನ್ನು ಖಾತರಿಪಡಿಸುವುದು ಹಾಗೂ ವೈದ್ಯಕೀಯ ತುರ್ತು ಪರಿಸ್ಥಿತಿ ಮತ್ತು ಅವಶ್ಯಕ ಸಂದರ್ಭಗಳಲ್ಲಿ ಮಗುವನ್ನು ಸಂಪರ್ಕಿಸಿ ಸಹಾಯ ಮಾಡುವುದು.
- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಸಂಸ್ಥೆಯ ಆಡಳಿತ ಮಂಡಳಿಯ ಅನುಮತಿ ಇಲ್ಲದೆ ಹಾಗೂ ಪೋಷಕರ ಗಮನಕ್ಕೆ ತಾರದೆ, ಶಾಲಾ ಅವಧಿಯ ನಂತರ ಅಥವಾ ರಜಾದಿನಗಳಲ್ಲಿ ಮಗುವನ್ನು ಹೊರಗಡೆ ಸಂಪರ್ಕಿಸಬಾರದು.
- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಯಾವುದೇ ಸನ್ನಿವೇಶಗಳಲ್ಲಿ ಯಾವುದೇ ಕಾರಣಕ್ಕೂ, ಮಗುವಿನ/ಮಕ್ಕಳ ಅನಧಿಕೃತ ಛಾಯಾಚಿತ್ರ ಮತ್ತು ವಿಡಿಯೋ ಚಿತ್ರೀಕರಣ ಮಾಡುವುದರಿಂದ ದೂರ ಉಳಿಯುವುದು.
- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಮಾಹಿತಿ ತಂತ್ರಜ್ಞಾನವನ್ನು ಬಳಸುವಾಗ ಸೈಬರ್ ರಕ್ಷಣಾ ನಿಯಮಗಳನ್ನು ಅನುಸರಿಸುವುದು ಮತ್ತು ಎಚ್ಚರಿಕೆಯಿಂದ ಅಭ್ಯಾಸ ಮಾಡುವುದು. ಶಿಕ್ಷಣ ಸಂಸ್ಥೆಯ ಸಿಬ್ಬಂದಿಯ ಅಪ್ಪಣೆಯಿಲ್ಲದೆ ಯಾವುದೇ ವ್ಯಕ್ತಿಗೆ, ಯಾವುದೇ ಮಾಹಿತಿ ಅಥವಾ ಸಿಸಿಟಿವಿಯಲ್ಲಿನ ಮಾಹಿತಿಯನ್ನು ನೀಡುವುದರಿಂದ ದೂರವಿರುವುದು. ಮೊಬೈಲ್ ಅಪ್ಲಿಕೇಷನ್‌ನಿಂದ ಮಕ್ಕಳು ಮತ್ತು ಪೋಷಕರು / ಪಾಲಕರ ನಡುವಿನ ಸಂವಾದ ಮತ್ತು ಸಂವಹನವು ಶಿಕ್ಷಣ ಸಂಸ್ಥೆಯ ಆಡಳಿತವು ಅನುಮೋದಿಸಿರುವ ಅಪ್ಲಿಕೇಷನ್ಸ್‌ನ ಮೂಲಕವೇ ನಿರ್ವಹಿಸುವುದು.

## ಗೌಪ್ಯತೆ

ಶಿಕ್ಷಣ ಸಂಸ್ಥೆಗಳ ಎಲ್ಲಾ ಸಿಬ್ಬಂದಿಗಳು ಅಥವಾ ಗುತ್ತಿಗೆ ಸಿಬ್ಬಂದಿಗಳು, ಮಕ್ಕಳ ಅಥವಾ ಅವರ ಪೋಷಕರು / ಪಾಲಕರಿಗೆ ಸಂಬಂಧಿಸಿದ ಗೌಪ್ಯ ಮಾಹಿತಿಯನ್ನು ಹೊಂದಿದ್ದು, ಸದರಿ ಮಾಹಿತಿಯನ್ನು ಅಧಿಕೃತ ಮತ್ತು ಅರ್ಹರೊಂದಿಗೆ ಮಾತ್ರ ಹಂಚಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು.

- ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಇತರೆ ಮಗುವಿನ ಅಸಮರ್ಪಕ ವರ್ತನೆಯನ್ನು ಗಮನಿಸಿದ ಪ್ರಕರಣಗಳಲ್ಲಿ ಉದಾ: ಮಗುವನ್ನು ಇತರೆ ಮಗು ಬೆದರಿಸಿದಲ್ಲಿ, ಶಿಕ್ಷಣ ಸಂಸ್ಥೆಯ ಸಿಬ್ಬಂದಿಯು ಸಮರ್ಪಕ ಕಾರ್ಯವಿಧಾನಗಳಿಗೆ ಅನುಗುಣವಾಗಿ ವರದಿ ಮಾಡುವುದು ಮತ್ತು ಶಿಕ್ಷಣ ಸಂಸ್ಥೆಗಳ ಮಕ್ಕಳ ರಕ್ಷಣಾ ನೀತಿಯಲ್ಲಿ ನಿಗದಿಪಡಿಸಿರುವಂತೆ ಮಕ್ಕಳ ರಕ್ಷಣಾ ಅಧಿಕಾರಿ / ಮಕ್ಕಳ ರಕ್ಷಣಾ ಸಮಿತಿಗಳು ವ್ಯವಹರಿಸುವುದು. ಸದರಿ ವಿಷಯವನ್ನು ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಶಾಲೆಯ ಇತರೆ ಸಿಬ್ಬಂದಿಗಳೊಂದಿಗೆ ಯಾವುದೇ ಕಾರಣಕ್ಕೂ ಹಂಚಿಕೊಳ್ಳಬಾರದು.

## ಮಕ್ಕಳ ಸಹಾಯವಾಣಿ 1098

ಮಕ್ಕಳ ಸಹಾಯವಾಣಿ 1098ಅನ್ನು ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದಡಿ ರಚಿಸಲಾಗಿದ್ದು, ಅಪಘಾತದಲ್ಲಿರುವ ಮತ್ತು ತೊಂದರೆಯ ಪರಿಸ್ಥಿತಿಯಲ್ಲಿರುವ ದೇಶದ ಯಾವುದೇ ಭಾಗದಲ್ಲಿರುವ ಮಕ್ಕಳು ತುರ್ತುಸಂದರ್ಭದಲ್ಲಿ ಸಂಪರ್ಕಿಸಬಹುದಾಗಿದೆ. ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ಮಕ್ಕಳು ಮತ್ತು ಪೋಷಕರಿಗೆ ತಿಳಿಸಲು ಹೆಚ್ಚು ವ್ಯಾಪಕವಾಗಿ ಪ್ರಚಾರ ಮಾಡುವುದು ಮತ್ತು ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತೆ ಪ್ರಕಟಿಸುವುದು.




Kiran Raghupathi

## ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣೆ ಅಧಿನಿಯಮ (POCSO) ಕಾಯಿದೆ – 2012

ಲೈಂಗಿಕ ಅತ್ಯಾಚಾರದ, ಲೈಂಗಿಕ ಕಿರುಕುಳದ ಮತ್ತು ಕಾಮಪ್ರಚೋದಕ ಅಪರಾಧಗಳಿಂದ ಮಕ್ಕಳನ್ನು ಸಂರಕ್ಷಿಸಲು ಮತ್ತು ಅಂತಹ ಅಪರಾಧಗಳ ವಿಚಾರಣೆಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧಗಳನ್ನು ಕಲ್ಪಿಸಲು ಇರುವ ಅಧಿನಿಯಮ.

ಈ ಅಧಿನಿಯಮದನ್ವಯ,

- ಯಾವುದೇ ಕಾನೂನು ಬಾಹಿರ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವಂತೆ ಮಗುವನ್ನು ಪ್ರೇರೇಪಿಸುವುದನ್ನು ಅಥವಾ ಬಲಾತ್ಕಾರ ಮಾಡುವುದನ್ನು ನಿಷೇಧಿಸಿದೆ ಮತ್ತು ಇದು ಶಿಕ್ಷಾರ್ಹ ಅಪರಾಧವಾಗಿದೆ.
- ಮಕ್ಕಳನ್ನು ಶೋಷಣೆ ಮಾಡಿ ಕಾಮಪ್ರಚೋದಕ ಪ್ರದರ್ಶನಗಳಲ್ಲಿ ಮತ್ತು ಸಾಹಿತ್ಯದಲ್ಲಿ ಬಳಸಿಕೊಳ್ಳುವುದನ್ನು ನಿಷೇಧಿಸಿದೆ ಮತ್ತು ಇದು ಶಿಕ್ಷಾರ್ಹ ಅಪರಾಧವಾಗಿದೆ.
- ಮಕ್ಕಳನ್ನು ಶೋಷಣೆ ಮಾಡಿ ವೇಶ್ಯಾವೃತ್ತಿ ಅಥವಾ ಇತರೆ ಕಾನೂನು ಬಾಹಿರ ಲೈಂಗಿಕ ಕ್ರಿಯೆಗಳಲ್ಲಿ ತೊಡಗಿಸುವುದನ್ನು ತಡೆಗಟ್ಟಲು ಸಮುಚಿತವಾದ ಎಲ್ಲಾ ರಾಷ್ಟ್ರೀಯ ದ್ವಿ ಪಕ್ಷೀಯ ಮತ್ತು ಬಹುಪಕ್ಷೀಯ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ.
- ಮಕ್ಕಳನ್ನು ಲೈಂಗಿಕವಾಗಿ ಶೋಷಣೆ ಮಾಡುವುದು ಮತ್ತು ಲೈಂಗಿಕವಾಗಿ ದುರ್ಬಳಕೆ ಮಾಡಿಕೊಳ್ಳುವುದು ಹೇಯ ಅಪರಾಧಗಳಾಗಿರುವುದರಿಂದ ಅವುಗಳ ಬಗ್ಗೆ ಪರಿಣಾಮಕಾರಿ ಕ್ರಮ ಕೈಗೊಳ್ಳುವುದು ಅತ್ಯಗತ್ಯ.

Kiran Raghupathi

# ಅನುಬಂಧ –1

## ದಿನಾಂಕ : 28/04/2001 ರ ಸರ್ಕಾರದ ಆದೇಶ



Kiran Raghupathi

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.) ಗಳನ್ನು ರಚಿಸುವ ಬಗ್ಗೆ.

ಓದಲಾಗಿದೆ :- ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪ್ರಸ್ತಾವನೆ ಸಂಖ್ಯೆ:ನಿ(ಆ.ಸಂ.) ಆ.ಶಾ/ಕ.ಶಿ.ಕಾ.ತಿ-೧/೨೦೦೦-೦೧, ದಿನಾಂಕ/೩೦-೩-೨೦೦೧

೦೦೦೦

**ಪ್ರಸ್ತಾವನೆ:-**

ಮೇಲೆ ಓದಲಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಪ್ರಸ್ತಾವನೆಯಲ್ಲಿ ಡಾ. ರಾಜಾ ರಾಮಣ್ಣರವರ ಅಧ್ಯಕ್ಷತೆಯ ಕಾರ್ಯತಂಡದ ಮಧ್ಯಂತರ ವರದಿಯ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯದ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತ ಪಡಿಸಲು ಹಾಗೂ ತತ್ಸಂಬಂಧಿಯಾದ ವಿಷಯಗಳನ್ನು ಕುರಿತು ಶಿಕ್ಷಣ ಕಾಯ್ದೆಗೆ ತಿದ್ದುಪಡಿಯನ್ನು ಸೂಚಿಸಲಾಗಿದೆ.

**ಈ ಕೆಳಗಿನ ಕಾರಣಗಳಿಗಾಗಿ ಈ ತಿದ್ದುಪಡಿಯು ಅವಶ್ಯಕವಾಗಿದೆ**

೧) ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸಲು-

೨) ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ಖಚಿತಪಡಿಸಿಕೊಳ್ಳಲು-

೩) ತಮ್ಮ ಮಕ್ಕಳ ಏಳಿಗೆಯ ಬಗ್ಗೆ ಸದಾ ಕಾಳಜಿಯುಳ್ಳ ಪೋಷಕರು/ಪಾಲಕರು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು-

೪) ಶಿಕ್ಷಣ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ ಶಾಲಾ ಆಡಳಿತವನ್ನು ಸುಧಾರಿಸಲು-

೫) ಶಿಕ್ಷಕರನ್ನು ಪ್ರೇರೇಪಿಸಿ ಅವರ ಜವಾಬ್ದಾರಿಯನ್ನು ಹೆಚ್ಚಿಸಲು-

೬) ಗ್ರಾಮ ಶಿಕ್ಷಣ ಸಮಿತಿಗಳ ರಚನೆಯಲ್ಲಿ ಉಳಿದುಕೊಂಡ ನ್ಯೂನತೆಗಳನ್ನು ಹೋಗಲಾಡಿಸಲು-

೭) ಶಾಲಾ ಯೋಜನೆ ಹಾಗೂ ಅಭಿವೃದ್ಧಿಗಾಗಿ ಶಾಲೆಯನ್ನೇ ಒಂದು ಘಟಕವನ್ನಾಗಿ ಪರಿಗಣಿಸಿ, ಪ್ರಕಲ್ಪನಾತ್ಮಕ ದಾಖಲೆ (ವಿಜನ್ ಡಾಕ್ಯುಮೆಂಟ್) ತಯಾರಿಸಲು-

೮) ದಾಖಲಾತಿ / ಹಾಜರಾತಿ ಶಿಕ್ಷಣ ಗುಣಮಟ್ಟ ಸುಧಾರಣೆ ಕುರಿತಂತೆ ಇರುವ ಸಮಸ್ಯೆಗಳನ್ನು ಪರಿಹರಿಸಲು-

೯) ತರಗತಿಯ ಚಟುವಟಿಕೆಗಳನ್ನು ಶಿಸ್ತು ಬದ್ಧವಾಗಿ ಸಂಘಟಿಸಲು-

೧೦) ಸಂಪನ್ಮೂಲಗಳನ್ನು ಕ್ರೋಢೀಕರಿಸಲು -

ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಶಾಲಾ ಅಭಿವೃದ್ಧಿ ಸಮಿತಿ ಮತ್ತು ಗ್ರಾಮ ಶಿಕ್ಷಣ ಸಮಿತಿಗಳನ್ನು ರದ್ದುಪಡಿಸಿ, ಶಾಲಾ ಮಟ್ಟದಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ



Kiran Raghupathi

ಗ್ರಾಮ ಪಂಚಾಯತ್ ಶಿಕ್ಷಣ ಸಮಿತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಸಮಿತಿ ಹಾಗೂ ನಗರ ಮಟ್ಟದಲ್ಲಿ ನಗರ ಸಭೆ/ ಕಾರ್ಪೋರೇಷನ್ ಸಮಿತಿಗಳ ರಚನೆಯನ್ನು ಉದ್ದೇಶಿಸಲು ಕರ್ನಾಟಕ ಶಿಕ್ಷಣ ಕಾಯ್ದೆ ೧೯೮೩ ಕ್ಕೆ ತಿದ್ದುಪಡಿ ತರುವ ಪ್ರಕ್ರಿಯೆಯು ಪೂರ್ಣಗೊಳ್ಳಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವುದರಿಂದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್. ಡಿ. ಎಂ. ಸಿ.) ಗಳ ರಚನೆಗೆ ಕಾನೂನು ತಿದ್ದುಪಡಿಗೆ ಪ್ರಕ್ರಿಯೆ ಪ್ರಾರಂಭಿಸುವುದರೊಂದಿಗೆ ಸರ್ಕಾರದ ಕಾರ್ಯಕಾರಿ ಆದೇಶವನ್ನು ಹೊರಡಿಸುವಂತೆ ಪ್ರಸ್ತಾವನೆಯಲ್ಲಿ ಕೋರಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ ೧೯೮೩ ಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸಾಕಷ್ಟು ಕಾಲಾವಕಾಶದ ಅವಶ್ಯಕತೆ ಇರುವುದನ್ನು ಸರ್ಕಾರವು ಮನಗಂಡು ಶಾಲಾ ಅಬಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆ ಕುರಿತಂತೆ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:-ಇಡಿ ೧ ಪಿ ಬಿ ಎಸ್ ೨೦೦೧, ಬೆಂಗಳೂರು, ದಿನಾಂಕ:೨೮.೪.೨೦೦೧.**

ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ(ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು) ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.) ಗಳ ರಚನೆಗೆ ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

**ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ( ಎಸ್. ಡಿ .ಎಂ. ಸಿ.) ಯ ರಚನೆ**

೧) ಎಸ್.ಡಿ.ಎಂ.ಸಿ. ಯು ಈ ಕೆಳಕಂಡ ಸದಸ್ಯರನ್ನೊಳಗೊಂಡಿರುತ್ತದೆ.

(ಅ) ಪೋಷಕ ಸಭೆಯಿಂದ ೯ ಜನ ಪೋಷಕ ಪ್ರತಿನಿಧಿಗಳನ್ನು ಆಯ್ದುಕೊಳ್ಳಬೇಕು. ಈ ಒಂಭತ್ತು ಜನರಲ್ಲಿ ಕನಿಷ್ಠ ಮೂವರು ಮಹಿಳಾ ಪ್ರತಿನಿಧಿಗಳು ಇರಬೇಕು. ಕನಿಷ್ಠ ಇಬ್ಬರು ಪರಿಶಿಷ್ಟ ಜಾತಿ / ಪಂಗಡಗಳಿಗೆ ಸೇರಿದವರಾಗಿರಬೇಕು. ಒಬ್ಬರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು. ಯಾವುದೇ ಪೋಷಕರು ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚು ಎಸ್.ಡಿ.ಎಂ.ಸಿ. ಗಳ ಸದಸ್ಯರಾಗಿರಕೂಡದು. ಒಂದು ವೇಳೆ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ / ಅಲ್ಪಸಂಖ್ಯಾತ ಪ್ರತಿನಿಧಿಗಳು ಲಭ್ಯವಿಲ್ಲದಿದ್ದಲ್ಲಿ ಇತರರಿಂದ ಭರ್ತಿ ಮಾಡುವುದು. ೩ ವರ್ಷದ ಒಳಗೆ ಮುಂದೆ ಈ ವರ್ಗದ ಮಕ್ಕಳು ದಾಖಲಾದಲ್ಲಿ ಅಂತಹ ಪೋಷಕರನ್ನು ಗಮನಿಸಿ ಮುಂದೆ ಉದ್ಭವಿಸುವ ಸ್ಥಾನಗಳಿಗೆ ಆದ್ಯತೆಯ ಮೇರೆಗೆ ಭರ್ತಿ ಮಾಡುವುದು.

(ಆ) ಈ ಕೆಳಗಿನವರು ಪದನಿಮಿತ್ತ ಸದಸ್ಯರಾಗಿರಬೇಕು.

(೧) ಆ ಕ್ಷೇತ್ರವನ್ನು ಪ್ರತಿನಿಧಿಸುವ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರು

(೨) ಅಂಗನವಾಡಿ ಇದ್ದಲ್ಲಿ ಅದರ ಶಿಕ್ಷಕಿಯೊಬ್ಬರು

(೩) ಆ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು.

(೪) ಆ ಶಾಲೆಯ ಮುಖ್ಯ ಗುರುಗಳು.

. Kiran Raghupathi

(೯) ಈ ಕೆಳಗಿನವರು ಎಸ್.ಡಿ.ಎಂ.ಸಿ. ಗೆ ನಾಮನಿರ್ದೇಶಿತ ಸದಸ್ಯರಾಗಿರಬೇಕು

೧) ಶಾಲೆಯನ್ನು ದತ್ತು ತೆಗೆದುಕೊಂಡ ಮಹನೀಯರು.

೨) ಶಾಲೆ ಕಟ್ಟಲು ಭೂಮಿ ದಾನ ಮಾಡಿದ ದಾನಿಗಳು, ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟ ಮಹನೀಯರು ಮತ್ತು ರೂಪಾಯಿ ೧೦,೦೦೦-೦೦ ಅಥವಾ ಅದಕ್ಕಿಂತ ಹೆಚ್ಚಿನ ಮೌಲ್ಯದ ಶೈಕ್ಷಣಿಕ ಉಪಕರಣಗಳನ್ನು ಕೊಡಿಸಿದ ಮಹನೀಯರು ಅಥವಾ ರೂಪಾಯಿ ೧೦,೦೦೦-೦೦ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ದಾನ ಮಾಡಿದ ದಾನಿಗಳು.

೩) ಆ ಕ್ಷೇತ್ರದಲ್ಲಿ ವಾಸಿಸುವ ಒಬ್ಬ ಶಿಕ್ಷಣ ತಜ್ಞರು ಅಥವಾ ಒಬ್ಬ ನಿವೃತ್ತ ಶಿಕ್ಷಕರು.

೪) ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಇಬ್ಬರು ಸದಸ್ಯರು.

೫) ಯುವಕ ಸಂಘ ಅಥವಾ ಯುವತಿ ಸಂಘದ ಒಬ್ಬ ಪದಾಧಿಕಾರಿಗಳು.

೬) ಏಳನೇ ವರ್ಗದ ಅಥವಾ ಹತ್ತನೇ ವರ್ಗದ ಒಬ್ಬ ವಿದ್ಯಾರ್ಥಿ / ವಿದ್ಯಾರ್ಥಿನಿ.

ನಾಮ ನಿರ್ದೇಶನಗೊಂಡ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.

**೨) ಎಸ್. ಡಿ. ಎಂ. ಸಿ .ಯ ಕಾಲಾವಧಿ**

ಎಸ್. ಡಿ. ಎಂ. ಸಿ.ಯ ಕಾಲಾವಧಿಯು ಮೂರು ವರ್ಷಗಳದ್ದಾಗಿರುತ್ತದೆ.

**೩) ಸ್ಥಾಯಿ ಸಮಿತಿಗಳ ರಚನೆ**

ಎಸ್. ಡಿ. ಎಂ. ಸಿ. ಯು ಬೇರೆ ಬೇರೆ ವಿಷಯ ಸಮಿತಿಗಳನ್ನು ಸ್ಥಾಯಿ ಸಮಿತಿಗಳಾಗಿ ರಚಿಸಿಕೊಳ್ಳಬಹುದು. ಅವಶ್ಯಕತೆಗನುಗುಣವಾಗಿ ಅದು ಪ್ರತಿಯೊಂದು ಸ್ಥಾಯಿ ಸಮಿತಿಗೂ ಗೌರವ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು. ಎಸ್. ಡಿ. ಎಂ. ಸಿ. ಯು ಈ ಕೆಳಕಂಡಂತೆ ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಬಹುದು.

ಅ) ಅಭಿವೃದ್ಧಿ ಸಮಿತಿ.

ಆ) ಮೇಲುಸ್ತುವಾರಿ ಸಮಿತಿ.

ಇ) ಎಸ್. ಡಿ. ಎಂ. ಸಿ. ಯು ರಚಿಸಬಯಸುವ ಬೇರೆ ಯಾವುದೇ ಸಮಿತಿ.

**೪). ಎಸ್.ಡಿ.ಎಂ. ಸಿ. ಯ ಅಧಿಕಾರಗಳು**

೧) ಶಾಲೆಯು ಸರಿಯಾಗಿ ಕೆಲಸ ಮಾಡುವುದನ್ನು ಖಾತರಿಪಡಿಸಿಕೊಳ್ಳುವುದು. ಶಿಕ್ಷಕ ಸಿಬ್ಬಂದಿಯ ಸಕಾಲಿಕ ಹಾಗೂ ನಿಯಮಿತ ಹಾಜರಾತಿಯ ಮೇಲೆ ಗಮನವಿಡುವುದು. ಸದಸ್ಯರು ಶಿಕ್ಷಕರ ಹಾಜರಾತಿ ವಹಿಯನ್ನು ಶಾಲೆಯಲ್ಲಿಯೇ ಪರಿವೀಕ್ಷಿಸಬಹುದು.

೨) ಶಿಕ್ಷಕ ಸಿಬ್ಬಂದಿಯ ಸಕಾಲಿಕ ಹಾಗೂ ನಿಯಮಿತ ಹಾಜರಾತಿಯಲ್ಲಿ ಏನಾದರೂ ದೋಷ ಕಂಡುಬಂದರೆ, ಆ ಬಗ್ಗೆ ಮಾಸಿಕ ಸಭೆಯಲ್ಲಿ ಚರ್ಚಿಸಿ, ಗೊತ್ತುವಳಿ ಪಾಸು ಮಾಡಿ ಸೂಕ್ತ ಕ್ರಮಕ್ಕೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವುದು. ಮೇಲಧಿಕಾರಿಗಳು ಈ ಬಗ್ಗೆ ತೆಗೆದುಕೊಂಡ ಕ್ರಮದ ಕುರಿತು ಗೊತ್ತುವಳಿ ಸ್ವೀಕರಿಸಿದ ೩೦ ದಿನಗಳೊಳಗೆ ಎಸ್. ಡಿ. ಎಂ. ಸಿ. ಗೆ ತಿಳಿಸಬೇಕು.

Kiran Raghupathi

೩) ಕಿರಿಯ ಮತ್ತು ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರುಗಳಿಗೆ ಸಾಂದರ್ಭಿಕ ಹಾಗೂ ನಿರ್ಬಂಧಿತ ರಜೆ ಮಂಜೂರು ಮಾಡುವ ಅಧಿಕಾರವು ಎಸ್. ಡಿ. ಎಂ. ಸಿ. ಯ ಅಧ್ಯಕ್ಷರಿಗೆ ಇರುತ್ತದೆ.

೪) ಒಂದು ವರ್ಷದಲ್ಲಿ ನಾಲ್ಕಕ್ಕೆ ಮೀರದಂತೆ ಸ್ಥಳೀಯ ರಜೆಗಳನ್ನು ನಿರ್ಧರಿಸುವುದು.

೫) ನಿರುಪಯುಕ್ತವಾದ ವಿಜ್ಞಾನೋಪಕರಣಗಳು, ಕಲಿಕೆಯ ಸಾಧನಗಳು, ಪೀಠೋಪಕರಣಗಳು, ಆಟದ ಸಾಮಗ್ರಿಗಳು, ನಕಾಶೆಗಳು, ಚಾರ್ಟ್‌ಗಳು, ವಾಚನಾಲಯದ ಪುಸ್ತಕಗಳು ಇತ್ಯಾದಿ ಎಲ್ಲಾ ಸಾಮಗ್ರಿಗಳು ಸೇರಿ ಗರಿಷ್ಠ ಕಿರಿಯ ಪ್ರಾಥಮಿಕ ಶಾಲೆಗಳಿಗೆ ವಾರ್ಷಿಕ ರೂ.೨೦೦೦.೦೦, ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಾರ್ಷಿಕ ರೂ೫೦೦೦.೦೦ ಮತ್ತು ಪೌಢ ಶಾಲೆಗಳಿಗೆ ವಾರ್ಷಿಕ ರೂ.೧೦೦೦೦.೦೦ ದ ಮಿತಿಯಲ್ಲಿ ನಿರುಪಯುಕ್ತವೆಂದು ಘೋಷಿಸುವುದು. ಹೀಗೆ ಘೋಷಿಸಿದ ಪೀಠೋಪಕರಣಗಳನ್ನು ಹರಾಜು ಮಾಡಿ ಬಂದ ಹಣವನ್ನು ಶಾಲೆಯ ಶಿಕ್ಷಣ ನಿಧಿಗೆ ಜಮಾ ಮಾಡುವುದು.

೬) ಸಾಂಸ್ಕೃತಿಕ ಚಟುವಟಿಕೆಗಳು, ಆಟೋಟ ಸ್ಪರ್ಧೆಗಳು, ರಾಜ್ಯದೊಳಗಿನ ಶೈಕ್ಷಣಿಕ ಪ್ರವಾಸಗಳು, ಬೇರೆ ರೀತಿಯ ಸಂದರ್ಶನಗಳು ಇತ್ಯಾದಿಗಳನ್ನು ಸಂಘಟಿಸಲು ಅನುಮತಿ ನೀಡುವುದು.

೭) ಶಾಲೆಯು ದಾನವಾಗಿ ಸ್ವೀಕರಿಸಿದ ಹಾಗೂ ಖರ್ಚು ಮಾಡಿದ ಹಣದ ಲೆಕ್ಕಪತ್ರಗಳನ್ನು ಹಾಗೂ ತತ್ಸಂಬಂಧಿಯಾದ ದಾಖಲೆಗಳನ್ನು ಪರೀಕ್ಷಿಸುವುದು.

೮) ಶಾಲೆಯ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ನಿಯಮಿತವಾಗಿ ಹರಾಜು ಮಾಡಿ ಬಂದ ಹಣವನ್ನು ಶಾಲೆಯ ಶಿಕ್ಷಣ ನಿಧಿಗೆ ಜಮಾ ಮಾಡುವುದು.

೯) ವಾಚನಾಲಯ ನಿಧಿ, ಕ್ರೀಡಾ ನಿಧಿ, ಪ್ರಯೋಗಾಲಯ ನಿಧಿ ಇತ್ಯಾದಿ ಸರ್ಕಾರೇತರ ನಿಧಿಗಳ ಅನುಮೋದನೆಯನ್ನು ನಿಯಮಾನುಸಾರ ನೀಡುವುದು.

೧೦) ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ರಾಜ್ಯ ವಲಯ ಮತ್ತು ಕೇಂದ್ರ ವಲಯದಿಂದ ಬಿಡುಗಡೆಯಾಗುವ ಹಣದಲ್ಲಿ ಆ ಶಾಲೆಗೆ ಬೇಕಾಗುವ ಸಾದನ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಅಧಿಕಾರ ಹೊಂದಿರುತ್ತದೆ.

**) ಎಸ್. ಡಿ. ಎಂ. ಸಿ. ಯ ಕರ್ತವ್ಯಗಳು**

೧) ಶಾಲೆಯ ವ್ಯಾಪ್ತಿಯಲ್ಲಿನ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು ಮಾಡುವಂತೆ ಪೋಷಕರಲ್ಲಿ ಅರಿವು ಮೂಡಿಸುವುದು. ಹಾಗೂ ಆ ರೀತಿ ದಾಖಲಾದ ಮಕ್ಕಳನ್ನು ನಿಯಮಿತವಾಗಿ ಶಾಲೆಗೆ ಕಳುಹಿಸುವಂತೆ ಮಾಡುವುದು.

೨) ಶಾಲೆಯ ವ್ಯಾಪ್ತಿಯಲ್ಲಿರುವ,ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು ದಾಖಲಾತಿ ಆಂದೋಲನ, ಬ್ರಿಜ್ ಕೋರ್ಸ್, ಚಿಣ್ಣರ ಅಂಗಳ ಇತ್ಯಾದಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಶಾಲೆಯಿಂದ ಹೊರಗುಳಿದ ಮಕ್ಕಳ ಯಾದಿಯನ್ನು ತಯಾರಿಸಿ ಸಾರ್ವಜನಿಕ ಸ್ಥಳಗಳಾದ ಶಾಲೆ, ಚಾವಡಿ, ಗ್ರಾಮ ಪಂಚಾಯಿತಿ ಸಮುದಾಯ ಭವನ ಇತ್ಯಾದಿಗಳಲ್ಲಿ

೩) ಶಾಲೆಯಲ್ಲಿ ಓದುವ ಎಲ್ಲಾ ಮಕ್ಕಳು ನಿರ್ದಿಷ್ಟ ಗುಣಮಟ್ಟದ ಕಲಿಕೆ ಪಡೆಯಲು ಬೇಕಾದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

೪) ಶಾಲೆಯ ಆವರಣವನ್ನು ಹಾಗೂ ಕಟ್ಟಡವನ್ನು ಅತಿಕ್ರಮಣ ಹಾಗೂ ವಿನಾಶಗಳಿಂದ ಕಾಪಾಡುವುದು.

೫) ವೇಳಾಪಟ್ಟಿಯಂತೆ ಪ್ರತಿ ವರ್ಷ ೨೨೦ ಕಲಿಕಾ ದಿನಗಳು ಮತ್ತು ಪ್ರತಿ ದಿನ ಐದೂವರೆ ಗಂಟೆಗಳು ಶಾಲೆ ನಡೆಯುವುದನ್ನು ಖಾತರಿ ಪಡಿಸಿಕೊಳ್ಳುವುದು.

೬) ವರ್ಷದಲ್ಲಿ ಮೂರು ಸಲ ಅಂದರೆ ಜುಲೈ, ನವೆಂಬರ್ ಹಾಗೂ ಫೆಬ್ರುವರಿ ಈ ತಿಂಗಳುಗಳಲ್ಲಿ ಪೋಷಕರ ಸಭೆಗಳನ್ನು ಆಯೋಜಿಸುವುದು.

೭) ಶಾಲಾ ಶಿಕ್ಷಣ ನಿಧಿ ಸ್ಥಾಪಿಸುವುದು.

ಶಾಲಾ ಅಭಿವೃದ್ಧಿಗಾಗಿ ಎಸ್. ಡಿ. ಎಂ. ಸಿ. ಯು ಸಾರ್ವಜನಿಕರಿಂದ ವಂತಿಗೆಗಳನ್ನು / ದಾನವನ್ನು ಸ್ವೀಕರಿಸಬಹುದು. ಸಮಿತಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಒಂದು ಖಾತೆ ತೆರೆದು ಛೇರ್‌ಮನ್ ಹಾಗೂ ಕಾರ್ಯದರ್ಶಿಗಳು ಜಂಟಿಯಾಗಿ ಆ ಖಾತೆಯನ್ನು ನಿರ್ವಹಿಸುವುದು. ಈ ಕೆಳಕಾಣಿಸಿದ ಎಲ್ಲಾ ಹಣವನ್ನು ಈ ಖಾತೆಗೆ ಜಮಾ ಮಾಡುವುದು.

ಅ) ಶಾಲೆಯ ಸೌಲಭ್ಯಗಳಿಗಾಗಿ ಸರ್ಕಾರದಿಂದ ಅಥವಾ ಸಂಘ ಸಂಸ್ಥೆಗಳಿಂದ ಕೊಡಲ್ಪಟ್ಟ ಹಣ.

ಆ) ಶಾಲೆಗೆ ಕೊಡಲ್ಪಟ್ಟ ಸಾದಿಲ್ವಾರು ಹಣ.

ಈ) ಶಾಲಾಭಿವೃದ್ಧಿಗಾಗಿ ದಾನಿಗಳು ಕೊಟ್ಟ ಹಣ.

೮) ಗ್ರಾಮ ಪಂಚಾಯತ್ ಅಥವಾ ತಾಲ್ಲೂಕು ಪಂಚಾಯತಿಯ ಇಂಜಿನಿಯರಿಂಗ್ ಸಿಬ್ಬಂದಿಯ ತಾಂತ್ರಿಕ ಸಹಾಯ ಸಲಹೆಗಳೊಂದಿಗೆ ಶಾಲೆಯ ಕಟ್ಟಡ ನಿರ್ಮಾಣ, ಹೆಚ್ಚುವರಿ ಕೋಣೆಗಳ ನಿರ್ಮಾಣ, ದುರಸ್ತಿ ಕಾರ್ಯಗಳನ್ನು ನೇರವಾಗಿ ಎಸ್. ಡಿ. ಎಂ. ಸಿ. ಯೇ ಮಾಡಬೇಕು.

೯) ದಾನಿಗಳನ್ನು ಗುರುತಿಸಿ ಅವರನ್ನು ಸಂಪರ್ಕಿಸಿ, ಶಾಲೆಯನ್ನು ದತ್ತು ತೆಗೆದುಕೊಳ್ಳಲು ಅವರನ್ನು ಪ್ರೇರೇಪಿಸಬೇಕು.

೧೦) ಶಾಲಾ ಸಂಕೀರ್ಣ ಕಾರ್ಯಕ್ರಮದಲ್ಲಿ ಶಿಕ್ಷಕರು ಸಕ್ರಿಯವಾಗಿ ಭಾಗವಹಿಸುವಂತೆ ಅವರನ್ನು ಪ್ರೇರೇಪಿಸುವುದು.

೧೧) ಶಾಲಾ ಮಕ್ಕಳಿಗಾಗಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು ಹಾಗೂ ಅವರಿಗೆ ಆರೋಗ್ಯ ಚೀಟಿಗಳನ್ನು ಕೊಡುವುದು.

೧೨) ಸರ್ಕಾರದಿಂದ ಕೊಡಲ್ಪಡುವ ಪ್ರೋತ್ಸಾಹದಾಯಕ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ತಲುಪುವಂತೆ ನೋಡಿಕೊಳ್ಳುವುದು.

**೬) ಎಸ್. ಡಿ. ಎಂ. ಸಿ. ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು**

(ಅ) ಒಂಭತ್ತು ಜನ ಪೋಷಕ ಪ್ರತಿನಿಧಿಗಳಿಂದ ಒಬ್ಬರನ್ನು ಎಸ್. ಡಿ. ಎಂ.ಸಿ. ಯ ಅಧ್ಯಕ್ಷರೆಂದು ಬಹುಮತದಿಂದ ಆರಿಸುತ್ತದೆ .


Kiran Raghupathi

(ಅ) ಆಯಾ ಎಸ್. ಡಿ. ಎಂ. ಸಿ. ಯ ಪದನಿಮಿತ್ತ ಸದಸ್ಯರಾದ ಆಯಾ ಶಾಲೆಯ ಮುಖ್ಯ ಗುರುಗಳು ಆಯಾ ಎಸ್.ಡಿ. ಎಂ. ಸಿ. ಯ ಸದಸ್ಯ ಕಾರ್ಯದರ್ಶಿ ಹಾಗೂ ಖಜಾಂಚಿಗಳಾಗಿರುತ್ತಾರೆ.

**೭) ಸಭೆ ನಡೆಸುವುದು**

ಸಭೆ ನಡೆಸಲು ಪೋಷಕ ಪ್ರತಿನಿಧಿಗಳಲ್ಲಿ ಮೂರನೇ ಎರಡು ಭಾಗದಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ.

**೮) ಪೋಷಕ ಸಭೆಯ ರಚನೆ**

ಪ್ರತಿಯೊಂದು ಶಾಲೆಗೂ ಒಂದು ಪೋಷಕರ ಸಭೆ ಇರುತ್ತದೆ. ಮುಖ್ಯ ಗುರುಗಳ ಹತ್ತಿರ ನೋಂದಾಯಿತ ಪೋಷಕರ ಪಟ್ಟಿ ಇರುತ್ತದೆ. (ತಂದೆ ಮತ್ತು ತಾಯಿ ಇಬ್ಬರೂ, ತಂದೆ ತಾಯಿ ಇಲ್ಲದಿದ್ದಲ್ಲಿ ಪೋಷಕರು / ವಾರಸುದಾರರು) ಈ ಪಟ್ಟಿಯನ್ನು ಪರಿವೀಕ್ಷಣೆಗೆ ಇಡಬೇಕು ಹಾಗೂ ಪ್ರಕಟಿಸಬೇಕು.

ಪೋಷಕ ಸಭೆಯ ಕುರಿತಾದ ಸೂಚನೆಯನ್ನು ಶಾಲೆಯ ಫಲಕ ಗ್ರಾಮದ ಚಾವಡಿ ಹಾಗು ಸಾರ್ವಜನಿಕ ಸ್ಥಳಗಳಲ್ಲಿ ೧೫ ದಿನಗಳ ಮುಂಚಿತವಾಗಿ ಪ್ರಕಟಿಸತಕ್ಕದ್ದು. ಈ ಸೂಚನೆಯಲ್ಲಿ ಪೋಷಕ ಸಭೆಯು ನಡೆಯುವ ದಿನಾಂಕ ಹಾಗೂ ಸಮಯವನ್ನು ಪ್ರಕಟಿಸತಕ್ಕದ್ದು.

**ಪೋಷಕ ಸಭೆ ನಡೆಸಲು ಗೊತ್ತುಪಡಿಸಿದ ಅಧಿಕಾರಿ** ಆಯಾ ಮುಖ್ಯ ಶಿಕ್ಷಕರ ಸಮ್ಮುಖದಲ್ಲಿ ಪೋಷಕರ ಸಭೆಯ ರಚನೆ, ಗೊತ್ತುವಳಿ ಅಂಗೀಕಾರ, ಅಧ್ಯಕ್ಷರ ಅಧಿಕಾರ ಸ್ವೀಕಾರ ಹಾಗೂ ಪ್ರಥಮ ಸಭೆ ನಡೆಯುತ್ತದೆ.

**ಸಭೆ ನಡೆಯುವಿಕೆ**

ಪ್ರತಿಯೊಂದು ಶಾಲೆಗೂ ಒಂದು ಪೋಷಕರ ಸಭೆ ಇರುತ್ತದೆ. ಮುಖ್ಯ ಗುರುಗಳ ಹತ್ತಿರ ನೋಂದಾಯಿತ ಪೋಷಕರ ಪಟ್ಟಿ ಇರುತ್ತದೆ. ಪ್ರತಿ ವರ್ಷ ಜುಲೈ ತಿಂಗಳಲ್ಲಿ ಆಯಾ ಶಾಲೆಯ ಮುಖ್ಯ ಗುರುಗಳು ಇಂತಹ ನೋಂದಾಯಿತ ಪೋಷಕರ ಸಭೆ ಕೂಡಿಸುತ್ತಾರೆ. ಆ ಸಭೆಯು ಆ ವರ್ಷಕ್ಕೆ ಪೋಷಕ ಸಭೆಯು ರಚಿತವಾಯಿತೆಂಬ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸುತ್ತದೆ. ಪೋಷಕ ಸಭಎಯ ನಂತರ ಇದೇ ಸಬೆಯಲ್ರಲಿ ೯ ಜನ ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗುತ್ತದೆ ಅಗತ್ಯವಿದ್ದಲ್ಲಿ ಕೈ ಎತ್ತುವ ಮೂಲಕ ಆಯ್ಕೆ ಮಾಡಲ್ಪಡುತ್ತದೆ.

**ಅಧ್ಯಕ್ಷರ ಆಯ್ಕೆ**

ಪೋಷಕರ ಸಭೆಯ ತಕ್ಷಣ ಈ ಒಂಭತ್ತು ಜನ ಪೋಷಕ ಪ್ರತಿನಿಧಿಗಳು ತಮ್ಮಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ಆಯ್ಕೆ ಮಾಡುತ್ತಾರೆ. ಆಯಾ ಶಾಲೆಯ ಮುಖ್ಯ ಶಿಕ್ಷಕರು ಎಸ್ ಡಿ ಎಂ ಸಿ ಯ ಸದಸ್ಯ ಕಾರ್ಯದರ್ಶಿ ಗಳಾಗುತ್ತಾರೆ.


Kiran Raghupathi

**ಎಸ್ ಡಿ ಎಂ ಸಿ ಯ ರಚನೆ**

ಅಧ್ಯಕ್ಷರ ಆಯ್ಕೆಯ ನಂತರ ಈ ೯ ಜನ ಪೋಷಕ ಪ್ರತಿನಿಧಿಗಳು ಸೇರಿ ಪದನಿಮಿತ್ತ ಸದಸ್ಯರು ಹಾಗೂ ನಾಮ ನಿರ್ದೇಶನದ ಸದಸ್ಯರನ್ನು ನೇಮಕ ಮಾಡಿ ಎಸ್ ಡಿ ಎಂ ಸಿ ಯನ್ನು ರಚಿಸಲು ನಿರ್ಣಯ ಕೈಗೊಳ್ಳಬೇಕು.

**ಎಸ್ ಡಿ ಎಂ ಸಿ ಯ ಪ್ರಥಮ ಸಭೆ**

ಎಸ್ ಡಿ ಎಂ ಸಿ ಯ ರಚನೆಯಾದ ೭ ದಿನದೊಳಗೆ ಎಸ್ ಡಿ ಎಂ ಸಿ ಯ ಪ್ರಥಮ ಸಭೆಯನ್ನು ಸಭೆಯ ನಿರ್ಣಯ ಹಾಗೂ ಅಧ್ಯಕ್ಷರ ಸೂಚನೆ ಮೇರೆಗೆ ಕರೆಯಬೇಕು. ಈ ಸಭೆಯ ನಂತರ ಪ್ರತೀ ತಿಂಗಳಿಗೂ ಒಮ್ಮೆ ಸಭೆ ಸೇರಿ ಶಾಲೆಯ ಪ್ರಗತಿಯ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಬೇಕು.

ಎಸ್ ಡಿ ಎಂ ಸಿ ಯು ರಚನೆಯಾದ ದಿನದಿಂದ ಮೂರು ವರ್ಷಗಳವರೆಗೆ ಅಸ್ತಿತ್ವದಲ್ಲಿರುತ್ತದೆ. ಮುರು ವರ್ಷದ ನಂತರ ಹೊಸ ಎಸ್ ಡಿ ಎಂ ಸಿ ರಚನೆಗಾಗಿ ಈ ಮೇಲೆ ಹೇಳಿದ ಪ್ರಕ್ರಿಯೆಯಂತೆಯೇ ಕ್ರಮ ಕೈಗೊಳ್ಳತಕ್ಕದ್ದು. ಎಸ್ ಡಿ ಎಂ ಸಿ ಅವಧಿ ಪೂರ್ಣಗೊಳ್ಳುವ ವರ್ಷದ ಜೂನ್ ತಿಂಗಳಲ್ಲಿಯೇ ಮೇಲಿನ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು.

ಪ್ರಗತಿ ಪರಿಶೀಲನೆಗಾಗಿ ಪ್ರತೀ ಶೈಕ್ಷಣಿಕ ವರ್ಷದಲ್ಲಿ ಮೂರು ಬಾರಿ ಅಂದರೆ ಜುಲೈ, ನವೆಂಬರ್ ಹಾಗೂ ಫೆಬ್ರವರಿ ತಿಂಗಳಿನಲ್ಲಿ ಪೋಷಕ ಸಭೆಯು ಸೇರುತ್ತದೆ. ಪೋಷಕ ಪ್ರತಿನಿಧಿಗಳ / ಪೋಷಕರ ಸದಸ್ಯತ್ವವು ಮಗು ಶಾಲೆಯಲ್ಲಿರುವವರೆಗೆ ಮಾತ್ರ ಅಸ್ತಿತ್ವದಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ
(ಎಂ.ಸಿ.ಪೂಣಚ್ಚ)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ

ಗೆ : ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು. – ಮುಂದಿನ ವಾರದ ರಾಜ್ಯಪತ್ರದಲ್ಲಿ ಪ್ರಕಟಿಸಿ ೧೦೦೦ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಕೋರಿದೆ.

ಪ್ರತಿ :

೧) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
೨) ನಿರ್ದೇಶಕರು (ಪ್ರಾಥಮಿಕ / ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ), ಸಾ.ಶಿ.ಇ., ಬೆಂಗಳೂರು.
೩) ಜಿಲ್ಲಾ ಪಂಚಾಯತ್ ನ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
೪) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು.
೫) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
೬) ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಪ್ರಾಥಮಿಕ / ಪ್ರೌಢ / ಸೇವೆಗಳು / ಸಾಮಾನ್ಯ ಶಾಖೆ.
೭) ಹೆಚ್ಚುವರಿ ಪ್ರತಿಗಳು.

C:\My Documents\Samudaava.doc


Kiran Raghupathi

## ಅನುಬಂಧ – 2

**IN THE HIGH COURT OF KARNATAKA**
**CIRCUIT BENCH AT GULBARGA**
**DATED THIS THE 06TH DAY OF FEBRUARY 2009**
**BEFORE**
**THE HON'BLE MR.JUSTICE H.G. RAMESH**
**W.P.NO. 80352/2009(GM-RES)**

BETWEEN:
Shivaraj Nayak
S/o Raja Thimmappa Nayak,
Age: 43 years, Occ: Agril.,
R/o Ganadhal,
Tq. & Dist.Raichur

………..PETITIONER

(BY SRI N.B.DIWANJI, ADV.)

AND:

1. The State of Karntaka,
   Represented by its Secretary,
   Education Department,
   Bangalore.
2. Block Education Officer,
   Raichur,Tq.Raichur,
   Dist. Raichur.
3. The Head Master,
   Panchamukhi Govt.High School,
   Ganadhal Village,Tq. Raichur,
   Dist. Raichur.

……..RESPONDENTS

(BY SRI S.S KUMMAN, GA)

This Writ Petition filed under Articles 226 & 22 of Constitution of India praying to quash the formation of the Ganadhal Vilage, Raichur Taluk, Panchamukhi Govt. High School Writ Petition formation of SDMC.

This petition coming on for preliminary hearing, this day the court made the following:

**ORDER**

Sri. S.S.Kumman, learned Government Advocate takes notice for the respondents.

2. In this petition, the petitioner is challenging the constitution of the School Development & Monitoring Committee (SDMC for short ) to the Panchamukhi Government High School, Ganadhal Vilage, Raichur Taluk, by the Member of the Legislative Assembly, Raichur


Kiran Raghupathi

Raural Constituency as per his letter dated 18.11.2008 addressed to the Block Eduction Officer, a copy of which is produced as Annexure ‘D’.

3. Learned Government Advocate appearing for the respondents fairly and rightly submits that a Member of the Legislative Assembly has no power to constitute School Development & Monitoring Committees under the Karnataka Grama Panchayat’s (School Development & Monitoring Committees) (Model) Bye-Laws, 2006. As the constitution of the SDMC by the Member of Legislavtive Assembly is without the authority of law, it is liable to be quashed. Accordingly, I make the following Order:

The Constitution of the new School Development & Monitoring Committee for the Panchamukhi Government High School, Ganadhal Vilage, Raichur Taluk, as per the impugned communication dated 18.11.2008 (Annexure ‘D’) stands quashed.

Petition allowed.

Sd/-
JUDGE
09/02/2009



Kiran Raghupathi

7th order

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಕಾರ್ಯಗಳ ಬಗ್ಗೆ.

ಓದಲಾಗಿದೆ :
1] ಸರ್ಕಾರದ ಆದೇಶ ಸಂಖ್ಯೆ. ಇಡಿ 01 ಪಿಬಿಎಸ್ 2001,ದಿ:28-04-2001.
2] ಸರ್ಕಾರದ ಆದೇಶ ಸಂಖ್ಯೆ. ಇಡಿ 01 ಪಿಬಿಎಸ್ 2001,ದಿ:16-08-2001.
3] ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ದಿ:21-01-2008ರ ಪತ್ರ ಸಂಖ್ಯೆ. ಎಸ್.ಡಿ.ಎಂ.ಸಿ.ರಚನೆ 06/2006-07.
4] ಸರ್ಕಾರದ ಆದೇಶ ಸಂಖ್ಯೆ. ಇಡಿ 249 ಎಲ್‌ಬಿಪಿ 2007,ದಿ:11-03-2008.

* * * * *

ಪ್ರಸ್ತಾವನೆ :-

ಕರ್ನಾಟಕ ರಾಜ್ಯದಲ್ಲಿ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಖಚಿತಪಡಿಸಲು ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿಯ ಸಮಿತಿಯ ರಚನೆಗೆ ಮೇಲೆ[1] ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮತಿಯನ್ನು ನೀಡಲಾಗಿದೆ. ಈ ಆದೇಶದಲ್ಲಿ ಶಾಲಾ ಅಭಿವೃದ್ಧಿಗಾಗಿ, ಸಮಿತಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಒಂದು ಖಾತೆ ತೆರೆದು, ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಜಂಟಿಯಾಗಿ ಖಾತೆಯನ್ನು ನಿರ್ವಹಿಸತಕ್ಕದ್ದೆಂದು ಹಾಗೂ ಇತರೆ ಕಾರ್ಯನಿರ್ವಹಣೆ ಬಗ್ಗೆ ಸವಿಸ್ತಾರವಾದ ಸೂಚನೆಗಳನ್ನು ಹೊರಡಿಸಲಾಗಿದೆ. ಮೇಲೆ[2] ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಆಯಾ ಶಾಲೆಗಳ ನೋಂದಾಯಿತ ಪೋಷಕರ ಪಟ್ಟಿಯಿಂದ ಸಂಬಂಧಿಸಿದ ವಿಧಾನಸಭಾ ಸದಸ್ಯರು 09 ಜನ ಪೋಷಕ ಪ್ರತಿನಿಧಿಗಳನ್ನು ಹಾಗೂ ಅವರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಲು ಅನುಮತಿ ನೀಡಲಾಗಿದೆ. ಅದರಂತೆ ಪ್ರೌಢ ಶಾಲೆಗಳಲ್ಲಿ ವಿಧಾನಸಭಾ ಸದಸ್ಯರೆ ಅಧ್ಯಕ್ಷರಾಗಿರುತ್ತಾರೆ.

ರಾಜ್ಯದಲ್ಲಿ ವಿಧಾನಸಭೆಯು ವಿಸರ್ಜನೆಗೊಂಡು, ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿದ್ದುದರಿಂದ, ಬ್ಯಾಂಕಿನಿಂದ ಜಂಟಿ ಖಾತೆಯಿಂದ ಹಣ ಪಡೆಯಲು ತೊಂದರೆಯಾಗಿದ್ದನ್ನು ಗಮನಿಸಿ, ಮೇಲೆ[3] ರಲ್ಲಿ


Kiran Raghupathi

ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ತಾತ್ಕಾಲಿಕವಾಗಿ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸಂಬಂಧಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಂಟಿಯಾಗಿ ಬ್ಯಾಂಕಿನಿಂದ ಹಣ ಪಡೆದು ಶಾಲಾಭಿವೃದ್ಧಿ ಕಾರ್ಯ ನಿರ್ವಹಿಸುವಂತೆ ಸೂಕ್ತ ಆದೇಶ ಹೊರಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದರು. ಅದರಂತೆ ಮೇಲೆ [4] ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಂಟಿಯಾಗಿ ಬ್ಯಾಂಕಿನಿಂದ ಹಣ ಪಡೆದು, ಶಾಲಾ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲು ಆದೇಶಿಸಲಾಗಿತ್ತು. ಈಗ ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿದ್ದು, ಚುನಾಯಿತ ಜನಪ್ರತಿನಿಧಿಗಳು ಇರುವುದರಿಂದ, ದಿನಾಂಕ:16-03-2008ರ ಸರ್ಕಾರದ ಆದೇಶದಲ್ಲಿನ ಸೂಚನೆಗಳನ್ನು ಪುನರ್ ಪರಿಶೀಲಿಸಲಾಗಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ 105 ಎನ್‌ಜಿಜೆ 2008, ಬೆಂಗಳೂರು, ದಿನಾಂಕ 28-07-09**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ. ಇಡಿ 249 ಎಲ್‌ಬಿಪಿ 2007, ದಿನಾಂಕ:11-03-2008ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಳ್ಳಲಾಗಿದೆ. ಮುಂದುವರೆದು, ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ದಿನಾಂಕ:11-03-2008ರ ಆದೇಶ ಜಾರಿಗೆ ಬರುವುದಕ್ಕಿಂತ ಮುಂಚೆ, ದಿನಾಂಕ:28-04-2001ರ ಆದೇಶದಲ್ಲಿ ಸೂಚಿಸಿರುವಂತೆ, ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಜಂಟಿಯಾಗಿ ಖಾತೆಯಿಂದ ಹಣ ಪಡೆದು, ಸರ್ಕಾರಿ ಪ್ರೌಢಶಾಲೆ ಶಾಲಾಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

[ ಹೆಚ್.ಟಿ.ಜಯರಾಂ ]
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ. [ಪ್ರೌಢ]

ರವರಿಗೆ:

1) ಮಹಾಲೇಖಪಾಲರು - ಕರ್ನಾಟಕ, (ಎ ಮತ್ತು ಇ) ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.


Kiran Raghupathi